

# ಸತ್ಯವೇದ ಅಧ್ಯಯನ ಮಾರ್ಗದರ್ಶಿ
# ಆತ್ಮನ ಪ್ರವಾದನೆಯ ಸಂಗ್ರಹಣೆ

ವರ್ಣಿಸಲಶಕ್ಯವಾದ ಪ್ರೀತಿ ಸತ್ಯವೇದ ಅಧ್ಯಯನ ಮಾರ್ಗದರ್ಶಿ:
ಗ್ರಂಥಕರ್ತನ ಹಕ್ಕುಗಳು (C) 2017 Revelation Publications.
ಜಗತ್ತಿನಾದ್ಯಂತ ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ

ವಿತರಣೆಗೆ ಅಗತ್ಯವಿರುವ ಶರತ್ತುಗಳು

ಒಂದುವೇಳೆ ನೀವು ಇದರ ನಕಲನ್ನು ಮಾಡಿ ವಿತರಿಸದಿದ್ದರೆ ನೀವು ಕರ್ತನಿಗೆ ಉತ್ತರದಾಯಿಯಾಗಿದ್ದೀರಿ ಎಂಬುದು ನಮ್ಮ ಅಭಿಪ್ರಾಯ. ಈ ಕಾರಣದಿಂದಾಗಿ ಇದನ್ನು ಇತರರಿಗೆ ಯಾವುದೇ ಸಂಭಾವನೆ ಇಲ್ಲದೇ ಕೆಳಗಿನ ಶರತ್ತುಗಳಿಗೆ ಅನುಗುಣವಾಗಿ ವಿತರಿಸಲು ನಾವು ನಿಮ್ಮನ್ನು ಪ್ರೋತ್ಸಾಹಿಸುತ್ತೇವೆ. ಈ ಮಾಹಿತಿಯನ್ನು ಪಿಡಿಎಫ್ ನಲ್ಲಿ ಸಂಗ್ರಹಿಸಿ ಅಥವಾ ನಕಲುಮಾಡುವದರ ಮೂಲಕ ವಿತರಿಸಬಹುದು ಇದನ್ನು ಮಾರಾಟಮಾಡುವದಾಗಲಿ ಯಾವುದೇ ತಿದ್ದುಪಡಿ ಮಾಡುವದಾಗಲಿ ಮಾಡಬಾರದು ಮತ್ತು ನಕಲು ಮಾಡುವ ಪ್ರತಿಯೊಂದು ಪ್ರತಿಯಲ್ಲಿ ಈ ಹಕ್ಕು ಪ್ರತಿಯು ಇರಬೇಕು.

**www.Bible-Lessons.org**
**PublisherForGod@gmail.com**

ಪ್ರಶ್ನೆಗಳು ಮತ್ತು ವಿಷಯ ಸಂಗ್ರಹಣೆ ಮರ್ಲಿನ್ ಬೀರಮನ್ ಅವರಿಂದ
ವ್ಯಾಖ್ಯಾನ ವಿವರಣೆ ಇ.ಜಿ.ವೈಟ್ ಪ್ರಕಾಶನಗಳ ಸಾರ್ವಜನಿಕ ಬರಹಗಳ
ಸ್ವಾಮಿತ್ವದ ಗ್ರಂಥಗಳಿಂದ ಸಂಗ್ರಹಿಸಲಾಗಿದೆ.
,ಮುಖಪುಟಾದ ರೇಖಾಚಿತ್ರಗಳು - (C) Bigstockphoto.com
ಒಳಪುಟಾದ ರೇಖಾಚಿತ್ರಗಳು ಮರ್ಲಿನ್ ಬೀಮ್ಮನ್ ಅವರಿಂದ
ISBN 978-1-934924-14-3

ಪ್ರಶ್ನೆಗಳಿಗೆ ಉತ್ತರಗಳನ್ನು ಭಾರತೀಯ ಸತ್ಯವೇದ ಸಂಸ್ಥೆಯ
ಅವತರಣಿಕೆಯಿಂದ ತೆಗೆದುಕೊಳ್ಳಲಾಗಿದೆ ಗ್ರಂಥಕರ್ತನ ಹಕ್ಕುಗಳನ್ನು
ಭಾರತೀಯ ಸತ್ಯವೇದ ಸಂಸ್ಥೆಯವರ ಅನುಮತಿಯೊಂದಿಗೆ
ಉಪಯೋಗಿಸಲಾಗಿದೆ ಮತ್ತು ಎಲ್ಲಾ ಹಕ್ಕುಗಳನ್ನು ಕಾಯ್ದಿರಿಸಲಾಗಿದೆ.



## ಪಾಠ 1
## ಪ್ರೀತಿ ಎಂದರೇನು?

(1) ಪ್ರೀತಿಯ ಸತ್ಯವಾದ ಮತ್ತು ವಿಶ್ವಾಸಾರ್ಹವಾದ ಮತ್ತು ಆತನ ಮಗನ ಬಹುಮಾನದ ಮೂಲಕ ಪ್ರದರ್ಶಿಸಲ್ಪಟ್ಟ ಏಕೈಕ ವ್ಯಾಖ್ಯಾನ ಯಾವುದು?

ದೇವರು ನಮ್ಮಲ್ಲಿ ಇಟ್ಟಿರುವ ಪ್ರೀತಿಯನ್ನು ನಾವು ತಿಳಿದು ಕೊಂಡಿದ್ದೇವೆ ಅದನ್ನು ನಂಬಿದ್ದೇವೆ. ದೇವರು ಪ್ರೀತಿ ಸ್ವರೂಪಿ, ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ. (1ಯೋಹಾನ 4:16)

ದೇವರ ಸತ್ಯವೇದದ ಅರ್ಥೈಸುವಿಕೆ ಏನು? ದೇವರು "ಪ್ರೀತಿಸ್ವರೂಪಿ" ನಮ್ಮ ಲೋಕಕ್ಕೆ ಕ್ರಿಸ್ತನನ್ನು ಕೊಡುವದರ ಮೂಲಕ ದೇವರು ಮಾನವ ಕುಲಕ್ಕೆ ತನ್ನ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ. "ದೇವರು ಲೋಕದ ಮೇಲೆ

ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು. ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ಹೌದು "ನಿತ್ಯಜೀವ" ಈ ಪ್ರೀತಿಯು ಧರ್ಮಶಾಸ್ತ್ರವನ್ನು ನೆರವೇರಿಸು ವದಾಗಿದೆ. ಬಿದ್ದು ಹೋಗಿರುವ ಮನುಷ್ಯನ ಮೇಲೆ ಯಾರಿಗೆ ಅನುಕಂಪವಿರುತ್ತದೋ. ಯಾರು ಒಂದು ಉದ್ದೇಶದಿಂದ ಪ್ರೀತಿಸುತ್ತಾರೋ, ಅವರು ತಮ್ಮ ಪ್ರೀತಿಯನ್ನು ಕ್ರಿಸ್ತನಂತ ಕಾರ್ಯಗಳಿಂದ ತೋರ್ಪಡಿಸುತ್ತಾರೋ, ಅವರು ಕಣ್ಣಿಗೆ ಕಾಣದಿರುವ ಆತನನ್ನು ನೋಡಲು ಸಹಿಸಿಕೊಳ್ಳುತ್ತಾರೆ. ತನ್ನ ಜೊತೆ ಮಾನವನನ್ನು ದೇವರನ್ನು ತಿಳಿದುಕೊಳ್ಳಬೇಕೆಂಬ ಒಂದೇ ಉದ್ದೇಶದಿಂದ ಪ್ರೀತಿಸುತ್ತಾರೆ. ತಂದೆಯು ಹೆಚ್ಚಾಗಿ ಪ್ರೀತಿಸುವವರನ್ನು ಯಾರು ಪ್ರೀತಿಸುವದಿಲ್ಲವೋ ಅವನು ದೇವರನ್ನು ಅರಿತವನಲ್ಲ ಈ ಕಾರಣದಿಂದಾಗಿ ನಮ್ಮ ಸಭೆಗಳಲ್ಲಿ ಸ್ವಲ್ಪ ಮಟ್ಟಿಗೆ ಶ್ರೇಷ್ಠವಾದ ಜೀವಬಲವಿರುತ್ತದೆ. ದೈವಜ್ಞಾನಶಾಸ್ತ್ರವು ಕ್ರಿಸ್ತನ ಪ್ರೀತಿಯಿಂದ ತುಂಬಿರದಿದ್ದರೆ ಅದು ಬೆಲೆಯಿಲ್ಲದ್ದಾಗಿದೆ.

(2) ನಾವು ದೇವರನ್ನು ಆತನ ಪರಿಪೂರ್ಣ ಪ್ರೀತಿಯನ್ನು ತಿಳಿದುಕೊಳ್ಳುವಾಗ ಆತನ ಕುರಿತು

ನಮ್ಮ ಮನಸ್ಸಿನೊಳಗಿಂದ ಏನು ಹೊರಹಾಕಲ್ಪಡುತ್ತದೆ? ಪ್ರೀತಿಯು ಇರುವಲ್ಲಿ ಹೆದರಿಕೆಯಿಲ್ಲ. ಹೆದರಿಕೆಯು ಯಾತನೆಯನ್ನು ಹೊಂದುತ್ತಾ ಇರುವದು; ಪೂರ್ಣ ಪ್ರೀತಿಯು ಹೆದರಿಕೆಯನ್ನು ಹೊರಡಿಸಿ ಬಿಡುತ್ತದೆ. ಹೆದರುವವನು ಪ್ರೀತಿಯಲ್ಲಿ ಸಿದ್ಧಿಗೆ ಬಂದವನಲ್ಲ. (ಯೋಹಾನ **4:18**)

ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಎಂಬುದು ದಿವ್ಯದರ್ಶನವಾಗಿದೆ, ಇಲ್ಲವಾದಲ್ಲಿ ಮನುಷ್ಯನು ಎಂದಿಗೂ ಈ ಸತ್ಯವನ್ನು ಕಂಡುಕೊಳ್ಳುತ್ತಿರಲಿಲ್ಲ. ಮನುಷ್ಯನ ಶ್ರೇಯೋಭಿವೃದ್ಧಿಗೆ ದಿವ್ಯದರ್ಶನವು ಅತ್ಯಂತ ಮಹತ್ವವುಳ್ಳದ್ದಾಗಿದೆ. ದೇವರು ಆತ್ಮಸ್ವರೂಪನು (ಯೋಹಾನ 4:24) ಇದು ಪ್ರಾಮುಖ್ಯವಾಗಿದೆ, ಆದರೆ ಅದು ಇಂಥ ಜೀವಿಯೊಂದಿಗೆ ಸಂತೋಷದ ಸಂಬಂಧದಲ್ಲಿ ಆನಂದಿಸುವ ಸಾಧ್ಯತೆಯ ಕುರಿತಾಗಿ ಏನನ್ನೂ ಹೇಳುವದಿಲ್ಲ. “ದೇವರು ಬೆಳಕಾಗಿದ್ದಾನೆ.” ಎಂಬುದು ಬೌದ್ಧಿಕವಾಗಿ ತೃಪ್ತಿತರುವಂಥದ್ದಾಗಿದೆ. ಸರ್ವವಿಧದಲ್ಲಿ ಪರಿಶುದ್ಧನು, ಸರ್ವವನ್ನು ನೋಡುವಾತನಾದ ದೇವರು ಎಂಬ ಆಲೋಚನೆಯು ನಮ್ಮದಿಗಿಂತ ಹೆಚ್ಚಾಗಿ ಭಯವನ್ನು ತರಬಹುದು, ಯಾಕಂದರೆ ನಾವು ಏನಾಗಿದ್ದೇವೆ ಎಂಬುದರ ಬೆಳಕಿನಲ್ಲಿ

ಇಂಥಹ ದೇವರು ನಮ್ಮೊಳಗೆ ಏನು ಒಳ್ಳೇದನ್ನು ಕಾಣಬಹುದು? ಆದರೆ ನಾವು ದೇವರು ಪ್ರೀತಿ ಸ್ವರೂಪಿ ಆಗಿದ್ದಾನೆ ಎಂಬುದನ್ನು ಕಲಿಯುವಾಗ ಭಯಕ್ಕೆ ಬದಲಾಗಿ ವಿಶ್ವಾಸ ಹುಟ್ಟುತ್ತದೆ ಮತ್ತು ಆತನು ನಮಗೋಸ್ಕರ ಚಿಂತಿಸುತ್ತಾನೆ ಎಂದು ತಿಳಿದುಕೊಂಡು ನಾವು ನಮ್ಮನ್ನು ಪರಲೋಕದ ತಂದೆಯ ಹಸ್ತದಲ್ಲಿ ಒಪ್ಪಿಸಿಕೊಳ್ಳುತ್ತೇವೆ. (1ಪೇತ್ರ 5:7).

(3) ನಮ್ಮ ಮೇಲಿರುವ ದೇವರ ನಿಶ್ಚಲವಾದ ಪ್ರೀತಿ ಮತ್ತು ಕರುಣೆ ಎಷ್ಟರವರೆಗೆ ಸಹಿಸಿಕೊಳ್ಳುತ್ತದೆ?

ಯೆಹೋವನು ದೂರದಿಂದ ಬಂದು ಅದಕ್ಕೆ ದರ್ಶನಕೊಟ್ಟು ಹೀಗನ್ನುವನು – ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ, ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ. (ಯೆರೆಮೀಯ 31:3).

ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಎಂಬದು. ಆತನು ನಮ್ಮನ್ನು ಪ್ರೀತಿಸದೇ ಇರುವ ಅಥವಾ ಪ್ರೀತಿಸಲಾರದೇ ಇರುವ ಸಮಯವೇ ಇಲ್ಲ ಎಂದು ಸಹ ಸೂಚಿಸುತ್ತದೆ. ಆತನ ಸ್ವಭಾವವು ಎಂದಿಗೂ ಬದಲಾಗುವದಿಲ್ಲ. ಪ್ರೀತಿಯು ಭೂತಕಾಲದಲ್ಲಿ ಆತನ ಪ್ರಧಾನ ಗುಣವಾಗಿದೆ ಮತ್ತು ಭವಿಷ್ಯತ್ತಿನಲ್ಲೂ

ಮುಂದುವರೆಯುತ್ತದೆ. ನಾವು ಚಾರ್ಲ್ಸ್ ವೆಸ್ಲಿ ದೇವರೊಂದಿಗೆ ತನ್ನ ಸಂಬಂಧದ ಕುರಿತು ಮಾತಾಡುವಾಗ ಹೇಳುವಂತೆ, "ನಿನ್ನ ಸ್ವರೂಪ ಮತ್ತು ನಿನ್ನ ಹೆಸರು ಪ್ರೀತಿಯಾಗಿದೆ ಎಂಬದನ್ನು ನಮ್ಮ ಜೀವಿತದುದ್ದಕ್ಕೂ ಸಿದ್ಧಾಂತ ಪಡಿಸಬೇಕಾಗಿದೆ" ನಮ್ಮಷ್ಟಕ್ಕೆ ನಾವು ಸಿದ್ಧಾಂತ ಪಡಿಸಬೇಕಾಗಿದೆ.

(4) ಪ್ರೀತಿಯಲ್ಲಿ ದೇವರು ನಮ್ಮನ್ನು ತನ್ನ ಸ್ವರೂಪದಲ್ಲಿ ಜ್ಞಾನ ಮತ್ತು ಆಯ್ಕೆಯ ಸ್ವಾತಂತ್ರ್ಯದೊಂದಿಗೆ ಸೃಷ್ಟಿಸಿದ್ದಾನೆ. ಈ ಕಾರಣದಿಂದಾಗಿ ನಾವು ಆತನೊಟ್ಟಿಗೆ ಏನು ಮಾಡಬೇಕು ಎಂದು ಕೇಳುತ್ತಾನೆ?

ಬನ್ನಿರಿ ವಾದಿಸುವ ಎಂದು ಯೆಹೋವನು ಅನ್ನುತ್ತಾನೆ; ನಿಮ್ಮ ಪಾಪಗಳು ಕಡುಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು; ಕಿರುಮಂಜಿಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವವು. (ಯೆಶಾಯ 1:18).

ದೇವರು ಪ್ರೀತಿಸ್ವರೂಪಿಯಾಗಿದ್ದಾನೆ ಎಂಬ ಹೇಳಿಕೆಯು ರಕ್ಷಣೆಯ ಯೋಜನೆಯನ್ನು ತಿಳಿದುಕೊಳ್ಳಲು ಅತ್ಯಂತ ಬೆಲೆಯುಳ್ಳದ್ದಾಗಿದೆ. ದೇವತ್ವಕ್ಕೆ ಮತ್ತು ದೇವದೂತರಿಗೆ ಅಲ್ಲದೇ ಬಿದ್ದುಹೋದ ಮನುಷ್ಯನಿಗೆ ಪಾಪವು ತರುವ ಕಷ್ಟಾನುಭವದ

ಅಪಾಯಕ್ಕೆ ಗುರಿಯಾಗಿ ಉಚಿತವಾದ ಮಾರ್ಗವನ್ನು ಎಲ್ಲಾ ಜೀವಿಗಳಿಗೆ ನೀಡುವದು ಕೇವಲ ಪ್ರೀತಿಯಿಂದ ಮಾತ್ರ ಸಾಧ್ಯ. ಕೇವಲ ಪ್ರೀತಿ ಮಾತ್ರ ತಮ್ಮದೇ ಆದ ಮಾರ್ಗದಲ್ಲಿ ನಡೆಯುತ್ತಿದ್ದಾರೋ ಅವರಿಗೆ ಸಂತೋಷದಿಂದ ಮತ್ತು ಸ್ವ-ಇಚ್ಛೆಯಿಂದ ಸೇವೆಯನ್ನು ನೀಡುವದರಲ್ಲಿ ಆಸಕ್ತಿಯನ್ನು ಹೊಂದಿದೆ. ಪಾಪವು ಪ್ರವೇಶಿಸುವಾಗ ಪ್ರೀತಿ ತಾಳ್ಮೆಯಿಂದ ವಿಶ್ವಕ್ಕೆ ಒಳ್ಳೇದರ ಮತ್ತು ಕೆಟ್ಟದರ ಮಧ್ಯದಲ್ಲಿರುವ ದೊಡ್ಡ ವಿವಾದದ ಮೂಲ ಸತ್ಯಗಳ ಸಂಪೂರ್ಣ ತಿಳುವಳಿಕೆಯನ್ನು ಹೊಂದಲು ಒಂದು ಯೋಜನೆಯನ್ನು ರಚಿಸಲು ಶಕ್ತರನ್ನಾಗಿಸುತ್ತದೆ. ಈ ಮೂಲಕ ಸ್ವಾರ್ಥ ಮತ್ತು ಹಗೆತನ ಇನ್ನು ಮುಂದಕ್ಕೆ ಬೆಳೆಯದಂತೆ ನೋಡಿಕೊಳ್ಳುತ್ತದೆ.

ಪಾಪದ ವಿರುದ್ಧ ಹೋರಾಟದಲ್ಲಿ ನಿಜವಾದ ಪ್ರೀತಿಯಾಗಿರುವ ದೇವರು, ಕೇವಲ ಸತ್ಯ ಮತ್ತು ಪ್ರೀತಿಯನ್ನು ಉಪಯೋಗಿಸುತ್ತಾನೆ. ಅದೇ ಸಮಯದಲ್ಲಿ ಸೈತಾನನು ಕಪಟತನದಿಂದ ಕೂಡಿದ ಸುಳ್ಳುಗಳನ್ನು ಮತ್ತು ಕ್ರೂರವಾದ ಬಲವನ್ನು ಉಪಯೋಗಿಸುತ್ತಾನೆ. ಕೇವಲ ಪ್ರೀತಿ ಮಾನವ ಕುಲವನ್ನು ಮೊದಲು ಅಪರಾಧ ಮತ್ತು ಪಾಪದ ಬಲದಿಂದ ತನ್ನ ಇಹಲೋಕದ ಜೀವಿತ, ಮರಣ

ಮತ್ತು ಪುನರುತ್ಥಾನದ ಮೂಲಕವಿಮೋಚಿಸಲು ಮಗನಿಗೆ ಅನುಮತಿಸುವ ಯೋಜನೆಯನ್ನು ಪ್ರೇರೆಪಿಸಲು ಸಾಧ್ಯ. ಆ ನಂತರ ಹೊಸ ಮತ್ತು ಪಾಪರಹಿತ ಜನಾಂಗದ ನಾಯಕನಾಗಲು ಸಾಧ್ಯ (ವ 9). ಆತನ ಸ್ವಭಾವದಿಂದಾಗಿಯೇ ದೇವರು ಅದ್ಭುತವಾದ ಯೋಜನೆಯನ್ನು ಪ್ರೇರಿಸಲು ಸಾಧ್ಯ. (ಯೋಹಾನ 3:16).

(5) ದೇವರು ಪ್ರೀತಿಸ್ವರೂಪಿ ಆಗಿರುವದರಿಂದ, ನಮ್ಮ ಕ್ರಿಸ್ತೀಯ ಅನುಭವದ ಶ್ರೇಷ್ಠವಾದ ಮತ್ತು ಅತ್ಯಂತ ಪ್ರಾಮುಖ್ಯವಾದ ಅಂಶ ಯಾವುದು?

ಹೀಗಿರುವದರಿಂದ ನಂಬಿಕೆ, ನಿರೀಕ್ಷೆ, ಪ್ರೀತಿ ಈ ಮೂರೇ ನಿಲ್ಲುತ್ತವೆ; ಇವುಗಳಲ್ಲಿ ದೊಡ್ಡದು ಪ್ರೀತಿಯೇ. (1ಕೊರಿಂಥ 13:13).

ಪ್ರೀತಿಯು ಮಾತ್ರ ದೇವರ ಸ್ವಭಾವವನ್ನು ವರ್ಣಿಸಲು ಉಪಯೋಗಿಸಲು ದೈವೀಪ್ರೇರಣೆಯನ್ನು ನೀಡುವುದಾಗಿದೆ. ಅಪೋಸ್ತಲನು ಏಕೆ ಆತ್ಮನ ಎಲ್ಲಾ ವರಗಳಲ್ಲಿ ಪ್ರೀತಿಯು ಶ್ರೇಷ್ಠವಾದದ್ದು ಎಂದು ಹೇಳುತ್ತಾನೆ ಎಂಬದು ಸರಳವಾಗಿ ತೋರಿಬರುತ್ತದೆ, (ನೋಡಿರಿ 1ಯೋಹಾನ 4:7, 8, 16) . ಜೀವಿತದ ರೀತಿಯಾಗಿ ಪ್ರೀತಿಯು ಬಹಳ ಪರಿಣಾಮ ಕಾರಿಯಾಗಿದೆ, ಅಧ್ಯಾಯ 12

(ನೋಡಿರಿ 1ಕೊರಿಂಥ 12:31) ರಲ್ಲಿ ವಿವರಿಸಿರುವ ಆತ್ಮನ ವಿವಿಧ ವರಗಳನ್ನು ಹೊಂದಿಕೊಳ್ಳುವದಕ್ಕಿಂತ ಮತ್ತು ಕಾರ್ಯರೂಪದಲ್ಲಿ ತರುವದಕ್ಕಿಂತ ಬಹಳ ತೃಪ್ತಿಕರವಾಗಿದೆ. ದೇವರೊಂದಿಗೆ ಸಾಮರಸ್ಯವನ್ನು ವ್ಯಕ್ತಪಡಿಸಲು ದೇವರನ್ನು ಪ್ರೀತಿಸುವದು ಮತ್ತು ಸಹ ಮಾನವರನ್ನು ಪ್ರೀತಿಸುವದಾಗಿದೆ. (ನೋಡಿರಿ ಮತ್ತಾಯ 22:37-40) ವಿಶ್ವಾಸಿಯು ಪ್ರೀತಿಯಲ್ಲಿ ಜೀವಿಸುವ ಜೀವಿತ ಒಬ್ಬನ ಕ್ರೈಸ್ತತ್ವಕ್ಕೆ ಪ್ರಾಮಾಣಿಕತೆಯ ಶ್ರೇಷ್ಠವಾದ ಪರೀಕ್ಷೆಯಾಗಿದೆ.

ಕ್ರೈಸ್ತರಾಗಿರುವದು ಎಂದರೆ ಕ್ರಿಸ್ತನಂತೆ ಇರುವದು, ಆತನು “ಉಪಕಾರಗಳನ್ನು ಮಾಡುತ್ತಾ ಸಂಚರಿಸಿದನು” (ಅ.ಕೃ. 10:38) ಹಾಗಿದ್ದ ಮೇಲೆ ಕ್ರೈಸ್ತರು ಯೇಸುವಿನ ಆತ್ಮದಲ್ಲಿ ಯಾರಿಗೆ ಅವರ ಸಹಾಯದ ಅಗತ್ಯವಿದೆಯೋ ಅವರಿಗೆ ಉಪಕಾರಗಳನ್ನು ಮಾಡುತ್ತಾ ಸಂಚರಿಸುವದಾಗಿದೆ. ಅವರು ಇದನ್ನು ಸ್ವಾರ್ಥ ಆಸಕ್ತಿಯಿಂದ ಮಾಡುವದಿಲ್ಲ ಬದಲಾಗಿ ಅವರು ಬೇರೆ ಯಾವುದನ್ನೂ ಮಾಡದಂತೆ ದೇವರ ಪ್ರೀತಿ ಅವರ ಹೃದಯಗಳನ್ನು ಒತ್ತಾಯಪಡಿಸುತ್ತದೆ.

ಪ್ರೀತಿಯು ಶ್ರೇಷ್ಠ ಅತ್ಯುತ್ತಮವಾದ ಮಾರ್ಗವಾಗಿದೆ, ಯಾಕಂದರೆ ಇದರ ಪ್ರಾಯೋಗಿಕ ವ್ಯಕ್ತಪಡಿಸುವಿಕೆ ಎಲ್ಲಾ

ಮನುಷ್ಯರ ನಿತ್ಯತ್ವವನ್ನು ನಿರ್ಧರಿಸುವ ಪರೀಕ್ಷೆಯಾಗಿದೆ. ಯಾರ ಧರ್ಮ ಕೇವಲ ಹೊರಗಿನ ತೋರಿಕೆಯ ವಿಧಿಗಳು ಮತ್ತು ಆಚಾರಗಳು ಆಗಿರುತ್ತವೆಯೋ ಅವರು ಇವುಗಳನ್ನು ದೇವರು ಸ್ವೀಕರಿಸುವದಿಲ್ಲ ಎಂಬದನ್ನು ತಿಳಿದುಕೊಳ್ಳುತ್ತಾರೆ.

ಸ್ವಾರ್ಥವನ್ನು ನಿರಾಕರಿಸುವ ಪ್ರೀತಿ, ವಿಶ್ವಾಸಿಗಳ ಮಧ್ಯದಲ್ಲಿ ಐಕ್ಯತೆಯನ್ನು ಉತ್ಪಾದಿಸುತ್ತದೆ, ದೇವರು ಮಾನವ ಕುಲವನ್ನು ರಕ್ಷಿಸುವದಕ್ಕಾಗಿ ದೇವರು ತನ್ನ ಮಗನನ್ನು ಕಳುಹಿಸಿದನು ಎಂಬದನ್ನು ಮನವರಿಕೆ ಮಾಡುತ್ತದೆ. ಇದು ದೇವರು ತನ್ನ ಜನರಿಗೆ ಸುವಾರ್ತೆಯ ಸತ್ಯದ ಸಾಕ್ಷಿಯನ್ನು ನೀಡಲು ಆದುಕೊಂಡ ವಿಧಾನವಾಗಿದೆ (ನೋಡಿರಿ ಯೋಹಾನ 17:21, 23). ಇಂಥ ಪ್ರೀತಿ, ಹೊಗಳಿಕೊಳ್ಳಲು, ಸಮರ್ಥಿಸಿ ಕೊಳ್ಳಲು ಅಥವಾ ಸ್ವ-ತೃಪ್ತಿಹೊಂದಲು ಬಯಸುವದಿಲ್ಲ ಬದಲಾಗಿ ಅವಶ್ಯಕತೆಯಲ್ಲಿರುವವರ ನಿಸ್ವಾರ್ಥವಾದ ಸೇವೆಗೆ ಸಮರ್ಪಿಸಿಕೊಳ್ಳುತ್ತದೆ. ಪರಿವರ್ತನೆ ಹೊಂದಿರದ ಮನುಷ್ಯನು ಪ್ರತಿಹೇಳಲಾರನು ಎಂಬ ವಾದವಿದೆ. ಇದರಲ್ಲಿ ಅವರು ಜೀವಿತದ ನೀತಿಜ್ಞಾನದ ಅಗಮ್ಯವಾದ ಸಂಗತಿಗಳನ್ನು ನೋಡುತ್ತಾರೆ. ಅವರ ಹೃದಯವನ್ನು ಸ್ಪರ್ಶಿಸುತ್ತದೆ ಮತ್ತು ಅವರ ಬುದ್ಧಿ ಪರಿವರ್ತನೆಯನ್ನು ಹೊಂದಿದ ಮನುಷ್ಯರ

ಜೀವಿತದಲ್ಲಿರುವ ದೈವೀಕ ಬಲಕ್ಕೆ ಪ್ರತಿಕ್ರಿಯಿಸುತ್ತದೆ. ಹೀಗೆ ಪ್ರದರ್ಶಿಸುವ ಪ್ರೀತಿಯು ಸುವಾರ್ತೆಯನ್ನು ಸಾರುವ ಮತ್ತು ದೇವರ ರಾಜ್ಯವನ್ನು ವಿಸ್ತರಿಸುವ ಅತ್ಯಂತ ದೊಡ್ಡ ಮಾರ್ಗವಾಗುತ್ತದೆ.

(6) ಈ ವಚನವು ಹೇಗೆ ಆಧ್ಯತೆಯ ಮತ್ತು ಪ್ರೀತಿಯ ವೈಶಿಷ್ಟತೆಯನ್ನು ವರ್ಣಿಸುತ್ತದೆ?

ಇದೆಲ್ಲಾದರ ಮೇಲೆ ಪ್ರೀತಿಯನ್ನು ಧರಿಸಿಕೊಳ್ಳಿರಿ; ಅದು ಸಮಸ್ತವನ್ನು ಸಂಪೂರ್ಣ ಮಾಡುವ ಬಂಧವಾಗಿದೆ (ಕೊಲಸ್ಸೆ *3:14*)

ದೇವರನ್ನು ಪ್ರೀತಿಸುವದು, ನೆರೆಯವರನ್ನು ಪ್ರೀತಿಸುವದು ಮನುಷ್ಯನ ಸಂಪೂರ್ಣ ಕರ್ತವ್ಯವನ್ನು ಒಳಗೊಂಡಿದೆ. ಸಹೋದರ ಪ್ರೀತಿಯಿಲ್ಲದೆ ನಾವು ದೇವರೆಡೆಗೆ ಪ್ರೀತಿಯನ್ನು ಅಥವಾ ನಮ್ಮ ಸಹ ಮಾನವರೆಡೆಗೆ ಪ್ರೀತಿಯನ್ನು ಪ್ರದರ್ಶಿಸಲಾರೆವು.
ಕ್ರಿಸ್ತನು ತಿಳುವಳಿಕೆಯನ್ನು ನೀಡುವ ಪ್ರೀತಿಯನ್ನು ನಮಗೆ ನೀಡುತ್ತಾನೆ. ಈ ಪ್ರೀತಿಯು ನಮ್ಮ ಜೀವಿತದಿಂದ ಪ್ರತ್ಯೇಕಿಸಿ ಇಡುವ ಪ್ರೀತಿಯಲ್ಲ ಬದಲಾಗಿ ಇದು ನಮ್ಮ ಈಡೀ ವ್ಯಕ್ತಿತ್ವವನ್ನು ನಿಯಂತ್ರಣದಲ್ಲಿ ತೆಗೆದುಕೊಳ್ಳುತ್ತದೆ.  ಕ್ರೈಸ್ತರು ಏರಲು ಬಯಸುವ ಪರಲೋಕವನ್ನು ಈ

ಕೃಪೆಯಿಂದ ಹೊದಿಸಲ್ಪಟ್ಟವರು ಮಾತ್ರ ಹೊಂದಿಕೊಳ್ಳಲು ಸಾಧ್ಯ. ಇದು ಆತ್ಮವನ್ನು ವ್ಯಾಪಿಸುವ ಮಮತೆಯಾಗಿದೆ. ಹಳೆಯದು ಹಿಂದೆ ಉಳಿಯಿತು. ಪ್ರೀತಿಯು ನಿಯಂತ್ರಿಸುವ ಶ್ರೇಷ್ಠವಾದ ಬಲವಾಗಿದೆ. ಪ್ರೀತಿಯು ನಡೆಸುವಾಗ, ಮನಸ್ಸು ಮತ್ತು ಆತ್ಮನ ಎಲ್ಲಾ ಸಾಮರ್ಥ್ಯಗಳು ಸಹಕಾರ ನೀಡುತ್ತವೆ. ದೇವರೆಡೆಗ ಪ್ರೀತಿ ಮತ್ತು ಮನುಷ್ಯರೆಡೆಗೆ ಪ್ರೀತಿ ಪರಲೋಕಕ್ಕೆ ನೇರವಾದ ಮಾರ್ಗವನ್ನು ನೀಡುತ್ತವೆ.

(7) ಪ್ರವಾದನೆಗಳು, ಅನ್ಯಭಾಷೆಗಳು ಮತ್ತು ತಿಳುವಳಿಕೆ ನಿಂತು ಹೋಗಬಹುದು. ಆದರೆ ನಾವು ಯಾವುದನ್ನು ಆಧಾರ ಮಾಡಿ ಕೊಂಡಿದ್ದೇವೋ ಅದು ಎಂದಿಗೂ ಬಿದ್ದು ಹೋಗುವದಿಲ್ಲ?

ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ; ಪ್ರವಾದನೆಗಳಾದರೋ ಇಲ್ಲದಂತಾಗುವವು; ವಾಣಿಗಳೋ ನಿಂತು ಹೋಗುವವು; ವಿಧ್ಯೆಯೋ ಇಲ್ಲದಂತಾಗುವದು. (1ಕೊರಿಂಥ 13:8)

ಯಥಾರ್ಥವಾದ ಪ್ರೀತಿಯು ಎಲೆಯಂತೆ ಅಥವಾ ಹೂವಿನಂತೆ ಉದುರಿ ಹೋಗುವದಿಲ್ಲ ( ನೋಡಿರಿ ಯಾಕೋಬ 1:11; 1 ಪೇತ್ರ 1:24) ಹೂ ತನ್ನ ಪರಿಮಳವನ್ನು ಮತ್ತು ಸೌಂದರ್ಯವನ್ನು ಹಗಲಿನ

ಸಮಯದಲ್ಲಿ ನೀಡಿದ ನಂತರ ಅದು ತನ್ನ ಉದ್ದೇಶವನ್ನು ನೆರವೇರಿಸಿದಂತೆ. ತಣ್ಣನೇ ಗಾಳಿ ಮತ್ತು ಹಿಮ ಅದನ್ನು ಬಾಡಿ ಗಿಡದಿಂದ ಉದುರಿ ಹೋಗುವಂತೆ ಮಾಡುತ್ತದೆ. ಪ್ರೀತಿಯಿಂದಾಗಿ ಅಲ್ಲ. ಒತ್ತಡ ಮತ್ತು ನೋವಿನ ದಿನಗಳಲ್ಲಿ ಅಲ್ಲದೇ  ಎಲ್ಲವೂ ಉತ್ತಮವಾಗಿರುವ ಸಮಯದಲ್ಲಿ, ಪ್ರೀತಿಯು ಒಂದೇ ತೆರನಾಗಿರುತ್ತದೆ, ತನ್ನ ಸುತ್ತಲೂ ವಿಶ್ವಾಸ ಮತ್ತು ನಿರೀಕ್ಷೆ ಮತ್ತು ನಂಬಿಕೆ ಎಂಬ ಪರಿಮಳವನ್ನು ಬೀರುತ್ತದೆ. ಇದು ಹಾಗೆಯೇ ಇರಬೇಕು, ಯಾಕೆಂದರೆ ಪ್ರೀತಿ ಧರ್ಮಶಾಸ್ತ್ರದ ಅಸ್ತಿವಾರವಾಗಿದೆ. ಮತ್ತು ದೇವರ ಧರ್ಮಶಾಸ್ತ್ರವು ಶಾಶ್ವತವಾದದ್ದು. (ನೋಡಿರಿ ಕೀರ್ತನೆ 119:160; ಮತ್ತಾಯ 5:17, 18; ಲೂಕ 16:17).

ಪ್ರತಿಯೊಬ್ಬ ವಿಶ್ವಾಸಿಯು ಆತ್ಮ ಈ ಫಲವನ್ನು ಅಭ್ಯಾಸಮಾಡಿಕೊಂಡು ಆನಂದಿಸಬೇಕು ಮತ್ತು ಪ್ರತಿಯೊಬ್ಬ ವಿಶ್ವಾಸಿಯು ಜೀವಿತದಲ್ಲಿ ಪ್ರೀತಿಯು ಒದಗಿಸಲಾರದ ಯಾವ ಅನುಭವವೂ ಇಲ್ಲ ಎಂಬ ಭರವಸದಿಂದ ಇರಬೇಕು. ಎಲ್ಲಾ ಸಮಯದಲ್ಲಿ ಸಮಸ್ಯೆಗಳನ್ನು ಪರಿಹರಿಸಲು ಪ್ರೀತಿಯನ್ನು ಅವಲಂಬಿಸಬಹುದು.

(8) ದೇವರ ಗುಣಲಕ್ಷಣ ಪ್ರೀತಿಯಾಗಿರುವದರಿಂದ, ಆತನ ರಾಜ್ಯಾಡಳಿತದ ನಾಲ್ಕು ಗುಣಲಕ್ಷಣಗಳು ಯಾವವು?

ನೀತಿನ್ಯಾಯಗಳು ನಿನ್ನ ಸಿಂಹಾಸನದ ಅಸ್ತಿವಾರಗಳೇ ನಿನ್ನ ಸಾನಿಧ್ಯ ದೂತರು ಪ್ರೀತಿಸತ್ಯತೆಗಳೇ (ಕೀರ್ತನೆ 89:14)

ದೇವರ ಪ್ರೀತಿಯು ಆತನ ಕರುಣೆಗೆ ಕಡಿಮೆಯಿಲ್ಲದಂತೆ ಆತನ ನ್ಯಾಯದಲ್ಲಿ ವ್ಯಕ್ತವಾಗುತ್ತದೆ. ನ್ಯಾಯವು ಆತನ ಸಿಂಹಾಸನದ ಅಸ್ತಿವಾರ ಮತ್ತು ಆತನ ಪ್ರೀತಿಯ ಫಲವಾಗಿದೆ. ಕರುಣೆಯನ್ನು ಸತ್ಯ ಮತ್ತು ನ್ಯಾಯದಿಂದ ಬೇರ್ಪಡಿಸುವದು ಸೈತಾನನ ಉದ್ದೇಶವಾಗಿದೆ. ಅವನು ದೇವರ ನೀತಿವಂತಿಕೆ ಸಮಾಧಾನದ ವೈರಿಯಾಗಿದೆ ಎಂದು ಸಿದ್ಧಾಂತ ಪಡಿಸಲು ಯೋಜಿಸಿದ್ದಾನೆ. ಆದರೆ ಕ್ರಿಸ್ತನು ದೇವರ ಯೋಜನೆಯಲ್ಲಿ ಅವು ಕರಗಿಹೋಗದಂತೆ ಒಟ್ಟಾಗಿ ಜೋಡಣೆಯಾಗಿವೆ ಎಂಬುದನ್ನು ತೋರಿಸುತ್ತಾನೆ. ಒಂದನ್ನು ಬಿಟ್ಟು ಇನ್ನೊಂದು ಅಸ್ತಿತ್ವದಲ್ಲಿ ಇರಲಾರದು, "ಕೃಪೆಯೂ ಸತ್ಯವೂ ಒಂದನ್ನೊಂದು ಕೂಡಿರುವವು; ನೀತಿಯೂ ಸಮಾಧಾನವೂ ಮುದ್ದಿಟ್ಟುಕೊಳ್ಳುವವು. (ಕೀರ್ತನೆ 85:10).

ಆತನ ಜೀವಿತ ಮತ್ತು ಆತನ ಮರಣದಿಂದ, ದೇವರ ನ್ಯಾಯ ಆತನ ಕೃಪೆಯನ್ನು ನಾಶಮಾಡಲಿಲ್ಲ ಬದಲಾಗಿ ಪಾಪಗಳು ಕ್ಷಮಿಸಲ್ಪಡಬೇಕು ಮತ್ತು ಧರ್ಮಶಾಸ್ತ್ರವು

ನ್ಯಾಯಯುತವಾದದ್ದು ಮತ್ತು ಸಂಪೂರ್ಣವಾಗಿ ವಿಧೇಯರಾಗಬೇಕು ಎಂದು ಕ್ರಿಸ್ತನು ಸಿದ್ಧಾಂತಪಡಿಸಿದ್ದಾನೆ. ಸೈತಾನ ಅಪಾದನೆಗಳು ಖಂಡಿಸಲ್ಪಟ್ಟವು ಕ್ರಿಸ್ತನ ಕೃಪೆಯು ಮತ್ತು ದೇವರ ಧರ್ಮಶಾಸ್ತ್ರವು ಬೇರ್ಪಡಿಸಲಾರದ್ದಾಗಿದೆ. ಕ್ರಿಸ್ತನಲ್ಲಿ ಕೃಪೆ ಮತ್ತು ಸತ್ಯ ಒಟ್ಟಾಗಿ ಕೂಡಿಕೊಂಡಿವೆ.

(9) ದೇವರು ಪ್ರೀತಿಸ್ವರೂಪಿ ಯಾಗಿರುವದರಿಂದ  ಮತ್ತು ಆತನ ರಾಜ್ಯಾಡಳಿತ ಪ್ರೀತಿಯನ್ನು ಆದರಿಸಿರುವದರಿಂದ, ಈ ಪರ್ಯವು ಪ್ರೀತಿ ಮತ್ತು ಆತನ ಧರ್ಮಶಾಸ್ತ್ರವನ್ನು ಹೇಗೆ ಸಮವೆಂದು ಪರಿಗಣಿಸುತ್ತದೆ?

ಪ್ರೀತಿಯು ಮತ್ತೊಬ್ಬರಿಗೆ ಯಾವ ಕೇಡನ್ನೂ ಮಾಡುವದಲ್ಲ  ಆದಕಾರಣ ಧರ್ಮಪ್ರಮಾಣವನ್ನು ನೆರವೇರುತ್ತದೆ. (ರೋಮ 13:10)

ದೇವರ ಧರ್ಮಶಾಸ್ತ್ರ, ತನ್ನ ಸ್ವರೂಪದಲ್ಲಿಯೇ ಮಾರ್ಪಡದ್ದಾಗಿದೆ. ಇದು ಅದರ ಗ್ರಂಥಕರ್ತನ ಸಂಕಲ್ಪ ಮತ್ತು ಗುಣಲಕ್ಷಣದ ಪ್ರಕಟನೆಯಾಗಿದೆ. ದೇವರ ಪ್ರೀತಿ ಮತ್ತು ಆತನ ಧರ್ಮಶಾಸ್ತ್ರ, ಪ್ರೀತಿಯಾಗಿದೆ. ಅದರ ಎರಡು ಶ್ರೇಷ್ಠ ತತ್ವಗಳು ದೇವರನ್ನು

ಪ್ರೀತಿಸು ಮತ್ತು ನೆರೆಯವರನ್ನು ಪ್ರೀತಿಸು. ಪ್ರೀತಿ ಧರ್ಮಪ್ರಮಾಣವನ್ನು ನೆರವೇರಿಸುತ್ತದೆ. ರೋಮ 13:10. ದೇವರ ಗುಣಲಕ್ಷಣ ನೀತಿವಂತಿಕೆ ಮತ್ತು ಸತ್ಯವಾಗಿದೆ; ಆತನ ಧರ್ಮಶಾಸ್ತ್ರದ ಸ್ವರೂಪವೂ ಇದೇ ಆಗಿದೆ ಎಂದು ಕೀರ್ತನೆಗಾರನು ಹೇಳುತ್ತಾನೆ: "ಧರ್ಮಶಾಸ್ತ್ರವು ಸತ್ಯವಾಗಿದೆ;" "ನಿನ್ನ ಆಜ್ಞೆಗಳು ನೀತಿಯೇ" ಕೀರ್ತನೆ 119:142, 172. ಮತ್ತು ಅಪೋಸ್ತಲನಾದ ಪೌಲನು ಪ್ರಕಟಿಸುತ್ತಾನೆ, "ಧರ್ಮಶಾಸ್ತ್ರವು ಪರಿಶುದ್ಧವಾದದ್ದು ಮತ್ತು ಆಜ್ಞೆಯು ಪರಿಶುದ್ಧವೂ ನ್ಯಾಯವೂ ಹಿತವೂ ಆಗಿರುವಂಥದ್ದು ಸರಿ. ರೋಮ 7:12. ಇಂಥಹ ಧರ್ಮಶಾಸ್ತ್ರವು ಮನಸ್ಸಿನ ಮತ್ತು ದೇವರ ಸಂಕಲ್ಪದ ವ್ಯಕ್ತಪಡಿಸುವಿಕೆಯಾಗಿರುವಾಗ ಅದು ಗ್ರಂಥ ಕರ್ತನಂತೆ ಕೊನೆಯ ವರೆಗೆ ಉಳಿಯುವಂತದ್ದಾಗಿದೆ.

(10) ದೇವರು ಕ್ರೂಜೆಯ ಮೇಲೆ ನಮಗಾಗಿ ಅಪರಿಮಿತವಾಗಿ ತೋರಿಸಿದ ಅದ್ಭುತವಾದ ಪ್ರೀತಿಯನ್ನು ಈ ವಚನವು ಹೇಗೆ ವರ್ಣಿಸುತ್ತದೆ?

ಪ್ರಾಣವನ್ನೇ ಸ್ನೇಹಿತರಿಗೋಸ್ಕರ ಕೊಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿಯೂ ಯಾವುದೂ ಇಲ್ಲ. (ಯೋಹಾನ 15:13)

ಪ್ರೀತಿ. ಗ್ರೀಕ್ ನಲ್ಲಿ ಅಗಾಪೆ (agapaō) ಇಂಗ್ಲೀಷನಲ್ಲಿ ಇದರ ಅರ್ಥಅಷ್ಟು

ನಿಖರವಾಗಿಲ್ಲ. ನಮ್ಮ ಪದ “ಪ್ರೀತಿ” ಅಂದರೆ ಅನೇಕ ಬೇರೆಬೇರೆ ಸಂಗತಿಗಳು ಮತ್ತು ಅನೇಕ ವೈವಿಧ್ಯಮಯವಾದ ವಿಚಾರಗಳನ್ನು ತಿಳಿಸುತ್ತದೆ., ಅಗಾಪೆ ಪದದ ನಿಜವಾದ ಅರ್ಥ ಈ ಅನುವಾದದಲ್ಲಿ ಕಣ್ಮರೆಯಾಗಿದೆ. ನಮ್ಮ ಒಂದು ಪದದಲ್ಲಿ ವ್ಯಕ್ತಪಡಿಸಲು ಪ್ರಯತ್ನಿಸುವ “ಪ್ರೀತಿ” ಯ ವಿಚಾರವನ್ನು ತಿಳಿಸಲು ಗ್ರೀಕ್ ರಲ್ಲಿ ಮೂರು ಪದಗಳಿವೆ: ಅಗಾಪೆ, ಫಿಲಿಯೋ ಮತ್ತು ಇರೋಸ್

ಪಿಲಿಯನ್ ಸಾಮಾನ್ಯವಾಗಿ ಮಮತೆಯನ್ನು ಮತ್ತು ಭಾವನೆ ಗಳನ್ನೊಳಗೊಂಡ ಭಾವನಾತ್ಮಕ ಪ್ರೀತಿಯನ್ನು ವರ್ಣಿಸುತ್ತದೆ. ಅದು ಭಾವನೆಗಳನ್ನು ಆಧರಿಸಿರುವದರಿಂದ ಭಾವನೆಗಳು ಬದಲಾದ ಹಾಗೆ ಬದಲಾಗುತ್ತದೆ. ಇರೋಸ್ ಸಂಯಮಹೀನ, ಭೋಗಾಸಕ್ತ “ಪ್ರೀತಿ” ಮುಖ್ಯವಾಗಿ ದೈಹೀಕ ಸಂಬಂಧದಲ್ಲಿ ಕಂಡುಬರುತ್ತದೆ. ಈ ವಿಧದಲ್ಲಿ ಪ್ರೀತಿಯಲ್ಲಿ ಒಂದು ವಿಧದ ಮೋಹಪರವಶತೆ ಕಂಡುಬರಬಹುದು. ಇರೋಸ್ ಈ ಪದವನ್ನು ಹೊಸ ಒಡಂಬಡಿಕೆಯಲ್ಲಿ ಉಪಯೋಗಿ ಸಲಾಗಿಲ್ಲ. ಹೊಸ ಒಡಂಬಡಿಕೆಯಲ್ಲಿ ಫಿಲಿಯೋದೊಂದಿಗೆ ವ್ಯತ್ಯಾಸವನ್ನು ತೋರಿಸುವಾಗ ಅಗಾಪೆ ಮರ್ಯಾದೆ ಮತ್ತು ಗೌರವ ಎಂಬ ಅರ್ಥದಲ್ಲಿ ಪ್ರೀತಿಯನ್ನು ವರ್ಣಿಸುತ್ತದೆ. ಅದು

ಭಾವನೆಗಳಿಗೆ ಯಾವ ವಿಧದಲ್ಲಿ ಸಾಮಾನ್ಯ ನಿಯಮವನ್ನು ಸೇರಿಸುತ್ತದೆಂದರೆ ಸಾಮಾನ್ಯ ನಿಯಮವು ಭಾವನೆಗಳನ್ನು ನಿಯಂತ್ರಣದಲ್ಲಿ ಇರಿಸುತ್ತದೆ. ಇದು ನಾಟಕದಲ್ಲಿ ಮನಸ್ಸಿನ ಮತ್ತು ಬುದ್ಧಿಯ ಉನ್ನತ ಬಲವನ್ನು ತರುತ್ತದೆ. ಅದೇ ಸಮಯದಲ್ಲಿ ಫಿಲಿಯೋ ನಮ್ಮನ್ನು ಯಾರು ಪ್ರೀತಿಸುತ್ತಾರೋ ಅವರನ್ನು "ಪ್ರೀತಿ" ಸಲು ಪ್ರೇರೆಪಣೆ ನೀಡುತ್ತದೆ. ಅಗಾಪೆ ತನ್ನನ್ನು ಪ್ರೀತಿಸದವರನ್ನು ಸಹ ಪ್ರೀತಿಸಲು ತನ್ನ ಹಸ್ತವನ್ನು ವಿಸ್ತರಿಸುತ್ತದೆ. ಅಗಾಪೆ ನಿಸ್ವಾರ್ಥ ಪ್ರೀತಿಯಾಗಿದೆ ಅದೇ ಸಮಯದಲ್ಲಿ ಇರೋಸ್ ಸಂಪೂರ್ಣವಾಗಿ ಸ್ವಾರ್ಥವಾಗಿದೆ, ಫಿಲಿಯೋ ಸಹ ಕೆಲವೊಂದು ಸಮಯದಲ್ಲಿ ಸ್ವಾರ್ಥಕ್ಕೆ ಬಲಿಯಾಗುತ್ತದೆ.

ಅಗಾಪೆ ಇದರ ನಾಮಪದ ಹೆಚ್ಚು ಕಡಿಮೆ ವಿಶೇಷವಾಗಿ ಸತ್ಯವೇದಕ್ಕೆ ಸೀಮಿತವಾಗಿದೆ. ಹೊಸ ಒಡಂಬಡಿಕೆಯ ಅಗಾಪೆ ಪ್ರೀತಿಯ ಶ್ರೇಷ್ಠವಾದ ಮತ್ತು ಸತ್ಯವಾದ ವಿಧವಾಗಿದೆ. ಇದಕ್ಕಿಂತ ಹೆಚ್ಚಿನ ಪ್ರೀತಿ ಯಾವೂದು ಇಲ್ಲ - ಇತರರಿಗಾಗಿ ತನ್ನನ್ನೇ ಬಲಿಯಾಗಿ ಅರ್ಪಿಸಲು ಒಬ್ಬ ಮನುಷ್ಯನನ್ನು ಒತ್ತಾಯ ಪಡಿಸುವ ಪ್ರೀತಿ (ಯೋಹಾನ ೧೫: ೧೩). ಇದು ದೇವರ ಮೇಲೆ ಗೌರವ ಮತ್ತು ತನ್ನ ಜೊತೆ ಮಾನವನ ಕುರಿತು

ಮರ್ಯಾದೆಯನ್ನು ತೋರಿಸುತ್ತದೆ. ಇದು ಆಲೋಚನೆ ಮತ್ತು ಕ್ರಿಯೆಯ ದೈವೀಕ ತತ್ವವಾಗಿದೆ ಅದು ನಮ್ಮ ನಡತೆಯನ್ನು ನವೀಕರಿಸುತ್ತದೆ, ನಮ್ಮ ಮನಸ್ಸಿನ ಅವೇಗವನ್ನು ನಿಯಂತ್ರಿಸುತ್ತದೆ, ನಮ್ಮ ಭಾವೋದ್ರೇಕಗಳನ್ನು ನಿಯಂತ್ರಿಸುತ್ತದೆ. ಮತ್ತು ನಮ್ಮ ಮಮತೆಯನ್ನು ಉದಾತ್ತಗೊಳಿಸುತ್ತದೆ.

(11) ವಿಮೋಚಿಸುವ ದೇವರ ಪ್ರೀತಿ ಮತ್ತು ಸ್ವ-ತ್ಯಾಗ ಮಾಡುವ ದೇವರ ಪ್ರೀತಿ ಸುವಾರ್ತೆಯ ಮೂಲಕ ಪ್ರಕಟವಾಗುವಾಗ ಯಾರ ಆಸಕ್ತಿಯು  ಕೆರಳುತ್ತದೆ?

ಈ ಸಂಗತಿಗಳನ್ನು ಮುಂತಿಳಿಸುವದ ರಲ್ಲಿ ತಮಗೋಸ್ಕರವಲ್ಲ ನಿಮಗೋಸ್ಕರವೇ ಸೇವೆ ಮಾಡುವವ ರಾಗಿದ್ದರೆಂಬದು ಅವರಿಗೆ ಪ್ರಕಟ ವಾಯಿತು. ಅವರು ಮುಂದಾಗಿ ಹೇಳಿದ ಸಂಗತಿಗಳೇ ಈಗ ಸಂಭವಿಸಿದವು ಎಂಬ ವರ್ತಮಾನವು ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿ ಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ಲಕ್ಷವಿಟ್ಟು ನೋಡ ಬೇಕೆಂಬ ಅಪೇಕ್ಷೆ ಉಂಟು (1ಪೇತ್ರ 1:12).

ನಮ್ಮಲ್ಲಿ ವಾಸಿಸುವದಕ್ಕೆ ಬರುವದರ ಮೂಲಕ ಯೇಸು ಮನುಷ್ಯರಿಗೂ

ಮತ್ತು ದೇವದೂತರಿಗೂ ದೇವರನ್ನು ಪ್ರಕಟಿಸಬೇಕಾಯಿತು. ಆತನು ದೇವರ ವಾಕ್ಯವಾಗಿದ್ದನು – ದೇವರ ಆಲೋಚನೆಗಳು ಕಿವಿಗಳಿಗೆ ಕೇಳಿಸುವಂತವುಗಳಾದವು, ಆತನು ತನ್ನ ಶಿಷ್ಯರಿಗಾಗಿ ಮಾಡಿದ ಪ್ರಾರ್ಥನೆಯಲ್ಲಿ ಆತನು ಹೀಗೆ ಹೇಳುತ್ತಾನೆ, "ನಾನು ಅವರಿಗೆ ನಿನ್ನ ನಾಮವನ್ನು ಪ್ರಕಟಿಸಿದ್ದೇನೆ." – "ನೀನು ದಯೆಯೂ ಕನಿಕರವೂ ಧೀರ್ಘಶಾಂತಿಯೂ ಮಹಾಕೃಪೆಯೂಉಳ್ಳ ದೇವರು" – "ನೀನು ನನ್ನ ಮೇಲೆ ಇಟ್ಟಂಥ ಪ್ರೀತಿಯು ಅವರಲ್ಲಿ ಇರಬೇಕೆಂದು ನಾನೂ ಅವರಲ್ಲಿ ಇರಬೇಕೆಂದೂ ಪ್ರಾರ್ಥಿಸುತ್ತೇನೆ"

ಈ ದಿವ್ಯದರ್ಶನವು ಕೇವಲ ಭೂಲೋಕದಲ್ಲಿ ಜನಿಸಿದ ಆತನ ಮಕ್ಕಳಿಗೆ ದೊರೆಯಲಿಲ್ಲ. ನಮ್ಮ ಚಿಕ್ಕ ಲೋಕವು ವಿಶ್ವವು ಕಲಿಯುವ ಪಾಠದ ಪುಸ್ತಕವಾಗಿದೆ. ದೇವರು ಆಶ್ಚರ್ಯಕರವಾದ ಕೃಪೆಯ ಉದ್ದೇಶ, ವಿಮೋಚಿಸುವ ಪ್ರೀತಿಯ ರಹಸ್ಯ ಈ ಮುಖ್ಯ ವಿಷಯದ ಒಳಗೆ "ದೇವದೂತರು ನೋಡಲು ಬಯಸುತ್ತಾರೆ"  ಇದು ಕೊನೆಯಿಲ್ಲದ ಕಾಲದುದ್ದಕ್ಕೂ ಅವರ ಅಧ್ಯಯನವಾಗಿದೆ. ವಿಮೋಚಿಸಲ್ಪಟ್ಟ ಮತ್ತು ಬಿದ್ದು ಹೋಗದ ಜೀವಿಗಳು ಕ್ರಿಸ್ತನ ಕ್ರೂಜೆಯಲ್ಲಿ ತಮ್ಮ ಜ್ಞಾನವನ್ನು ಮತ್ತು ತಮ್ಮ ಸಂತೋಷವನ್ನು

ಕಂಡುಕೊಳ್ಳುತ್ತಾರೆ. ಯೇಸುವಿನ ಮೇಲೆ ಪ್ರಕಾಶಿಸುತ್ತಿರುವ ಮಹಿಮೆ ಸ್ವ-ಬಲಿದಾನದ ಪ್ರೀತಿಯ ಮಹಿಮೆಯಾಗಿ ತೋರಿಬರುತ್ತದೆ. ಕಲ್ವಾರಿಯ ಬೆಳಕಿನ ಅಡಿಯಲ್ಲಿ ಅದು ಸ್ವ-ನಿರಾಕರಣೆಯ ಪ್ರೀತಿಯು  ಅದು ಭೂಮಿ ಮತ್ತು ಆಕಾಶದಲ್ಲಿ ಜೀವಿತದ ನಿಯಮವಾಗಿ ತೋರಿಬರುತ್ತದೆ  "ತನ್ನ ಸ್ವಾರ್ಥವನ್ನು ಹುಡುಕುವದಲ್ಲ" ತನ್ನ ಮೂಲವನ್ನು ದೇವರ ಹೃದಯದಲ್ಲಿ ಹೊಂದಿರುತ್ತದೆ. ಅದು ಸಾತ್ವಿಕರು ಮತ್ತು ದೀನರಲ್ಲಿ ಬೆಳಕಿನಲ್ಲಿ ವಾಸಮಾಡುವಾತನಾದ ಯಾವ ಮನುಷ್ಯನು ಸಂಧಿಸಲಾರದ ಆತನ ಗುಣಲಕ್ಷಣವನ್ನು ಸ್ಪಷ್ಟವಾಗಿ ತೋರಿಸುತ್ತದೆ.

(12) ನಾವು ಕ್ರಿಸ್ತನನ್ನು ಕುಡಿದ ಮೇಲೆ "ಜೀವಕರವಾದ ನೀರು" ಮತ್ತು ಆತನ ಪ್ರೀತಿಯನ್ನು ಅನುಭವಿಸಿದ ಮೇಲೆ ಯಾವ ಎರಡು ಸಂಗತಿಗಳು ಸಂಭವಿಸುತ್ತವೆ?

ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ; ನಾನು ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ಅವನಿಗೆ ನಿತ್ಯಜೀವವನ್ನು ಉಂಟುಮಾಡುವದು ಎಂದು ಹೇಳಿದನು (ಯೋಹಾನ 4:14).

"ಕೊಡಿರಿ ನಿಮಗೆ ಕೊಡಲ್ಪಡುವದು" (ಲೂಕ 6:38); ದೇವರ ವಾಕ್ಯವು

“ಉದ್ಯಾನಗಳಿಗೆ ಹಾಯುವ ಬುಗ್ಗೆ, ಉಕ್ಕುತ್ತಿರುವ ಬಾವಿ, ಲೆಬನೋನಿನಿಂದ ಹರಿಯುವ ಪ್ರವಾಹ, ಇವೆಲ್ಲವೂ ನಿನ್ನಲ್ಲಿವೆ. (ಪರಮ ಗೀತ 4:15). ಕ್ರಿಸ್ತನ ಪ್ರೀತಿಯನ್ನು ಒಮ್ಮೆ ರುಚಿನೋಡಿದ ಹೃದಯ ನಿರಂತರವಾಗಿ ಆಳವಾದ ಅನುಭವಕ್ಕಾಗಿ ಮೊರೆಯಿಡುತ್ತದೆ ಮತ್ತು ನೀವು ತಿಳಿಸುವಾಗ ನೀವು ಇನ್ನೂ ಹೆಚ್ಚಾಗಿ ಸಮೃದ್ಧಿಯಾದ ಅಳತೆಯಲ್ಲಿ ಹೊಂದಿಕೊಳ್ಳುವಿರಿ. ದೇವರ ಪ್ರತಿಯೊಂದು ದಿವ್ಯದರ್ಶನ ತಿಳಿದುಕೊಳ್ಳಲು ಮತ್ತು ಪ್ರೀತಿಸಲು ಆತ್ಮನ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹೃದಯದ ನಿರಂತರವಾದ ಕೂಗು “ನೀನು ಇನ್ನೂ ಹೆಚ್ಚಾಗಿ ಬೇಕು” ಮತ್ತು ಯಾವಾಗಲೂ ಆತ್ಮನ ಉತ್ತರ “ಬಹಳ ಹೆಚ್ಚಾಗಿ” ರೋಮಾ 5:9, 10). ಯಾಕಂದರೆ ನಮ್ಮ ದೇವರು “ನಾವು ಬೇಡುವದಕ್ಕಿಂತಲೂ ಯೋಚಿಸುವ ದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು ಶಕ್ತನಾಗಿದ್ದಾನೆ” ಎಫೆಸ 3:20.

ಯೇಸು, ನಾಶವಾಗುತ್ತಿರುವ ಮಾನವ ಕುಲಕ್ಕೆ ರಕ್ಷಣೆ ನೀಡಲು ತನ್ನನ್ನು ಬರಿದು ಮಾಡಿಕೊಂಡನು, ಪವಿತ್ರಾತ್ಮನು ಅಳತೆಗೆ ಮೀರಿ ನೀಡಿದ್ದಾನೆ. ಆದುದರಿಂದ ಕ್ರಿಸ್ತನ ಹಿಂಬಾಲಕರಾದ ಪ್ರತಿಯೊಬ್ಬರೂ ಆತನು ವಾಸಿಸುವದಕ್ಕೆ ಸಂಪೂರ್ಣ ಹೃದಯವನ್ನು ಅಧೀನ ಪಡಿಸುತ್ತಾರೋ ಅದು ಕೊಡಲ್ಪಡುತ್ತದೆ. ನಮ್ಮ ಕರ್ತನು

ತಾನೇ ಆಜ್ಞಾಪಿಸಿದ್ದಾನೆ
"ಪವಿತ್ರಾತ್ಮಭರಿತರಾಗಿರಿ" (ಎಫೆಸ 5:18)
ಈ ಆಜ್ಞೆಯು ಅದರ ನೆರವೇರಿಕೆಯ
ವಾಗ್ದಾನವಾಗಿದೆ. ಕ್ರಿಸ್ತನಲ್ಲಿ
"ಸರ್ವಸಂಪೂರ್ಣತೆಯು ವಾಸಿಸಬೇಕು"
ಮತ್ತು "ಆತನಲ್ಲಿ ನೀವು
ಪರಿಪೂರ್ಣರಾಗಿದ್ದೀರಿ" ಎಂಬುದು
ತಂದೆಗೆ ಆನಂದವನ್ನು
ಉಂಟುಮಾಡುತ್ತದೆ.
(13) ಕ್ರಿಸ್ತನು ನಮ್ಮೊಳಗೆ ಏನನ್ನು
ಇರಿಸಬೇಕೆಂದು ತಂದೆಯನ್ನು
ಕೇಳಿಕೊಂಡನು ಇದರಿಂದಾಗಿ ನಾವು
ತಂದೆಯ ಪ್ರೀತಿಯ ಎಲ್ಲಾ
ಆಯಾಮಗಳನ್ನು ಮತ್ತು ಅದು ತರುವ
ನಡತೆಯ ಬದಲಾವಣೆಯನ್ನು
ಅನುಭವಿಸಬಹುದು?

ನಾನು ಅವರಿಗೆ ನಿನ್ನ ಹೆಸರನ್ನು
ತಿಳಿಸಿದ್ದೇನೆ ಇನ್ನೂ ತಿಳಿಸುವೆನು, ನೀನು
ನನ್ನ ಮೇಲೆ ಇಟ್ಟಂಥ ಪ್ರೀತಿಯು
ಅವರಲ್ಲಿ ಇರಬೇಕೆಂದು ನಾನೂ
ಅವರಲ್ಲಿ ಇರಬೇಕೆಂದೂ
ಪ್ರಾರ್ಥಿಸುತ್ತೇನೆ ಅಂದನು (ಯೋಹಾನ
17:26).

ಓ! ಇದು ಎಂಥಹ ಭರವಸೆ. ಆತನಲ್ಲಿ
ನಂಬಿಕೆಯಿಡುವ ಪ್ರತಿಯೊಬ್ಬರ
ಹೃದಯದಲ್ಲಿ ದೇವರ ಪ್ರೀತಿಯು
ನೆಲೆಯಾಗಿರುತ್ತದೆ! ಓ ಎಂಥಹ ರಕ್ಷಣೆ
ಒದಗಿಸಲ್ಪಟ್ಟಿದೆ; ಆತನ ಮೂಲಕ
ದೇವರ ಬಳಿಗೆ ಬರುವ ಲೋಕದ

ಕಟ್ಟಕಡೆಯವರನ್ನು ರಕ್ಷಿಸಲಿಕ್ಕೆ ಆತನು ಶಕ್ತನಾಗಿದ್ದಾನೆ. ಆಶ್ಚರ್ಯದಿಂದ ನಾವು ಉದ್ಗರಿಸುತ್ತೇವೆ. ಈ ಸಂಗತಿಗಳು ಹೇಗೆ ಸಾಧ್ಯ? ಆದರೆ ಯೇಸು ಇದಕ್ಕಿಂತ ಕಡಿಮೆ ಯಾವುದರಿಂದಲೂ ತೃಪ್ತಿಹೊಂದಲಾರನು.
ಯಾರು ಆತನ ಕಷ್ಟಾನುಭವದಲ್ಲಿ, ಆತನ ಅಪಮಾನದಲ್ಲಿ ಆತನ ನಾಮಕ್ಕಾಗಿ ಸಹಿಸಿಕೊಳ್ಳುವದರಲ್ಲಿ ಇಲ್ಲಿ ಪಾಲುಗಾರರಾಗಿದ್ದಾರೋ, ಅವರು ದೇವರ ಪ್ರೀತಿ ಆತನ ಮಗನ ಮೇಲೆ ಸುರಿಸಲ್ಪಟ್ಟಂತೆ ಅವರ ಮೇಲೆ ಸುರಿಸಲ್ಪಡುತ್ತದೆ. ಇದನ್ನು ತಿಳಿದಿರುವ ಒಬ್ಬರು ಹೀಗೆ ಹೇಳಿದ್ದಾರೆ "ತಂದೆಯು ತಾನೇ ನಿಮ್ಮನ್ನು ಪ್ರೀತಿಸುತ್ತಾನೆ. ಆ ಪ್ರೀತಿಯ ಉದ್ದ ಮತ್ತು ಅಗಲ ಮತ್ತು ಎತ್ತರ ಮತ್ತು ಆಳದ ಅನುಭವದ ತಿಳುವಳಿಕೆಯನ್ನು ಹೊಂದಿರುತ್ತಾರೋ ಅವರು ನಮಗೆ ಈ ಅದ್ಭುತವಾದ ಸತ್ಯವನ್ನು ಪ್ರಕಟಿಸಿದ್ದಾರೆ.

ಈ ಪ್ರೀತಿಯು ದೇವರ ಮಗನಲ್ಲಿ ನಂಬಿಕೆಯನ್ನು ಇಡುವದರ ಮೂಲಕ ನಮ್ಮದಾಗಿದೆ, ಆದುದರಿಂದ ಕ್ರಿಸ್ತನೊಂದಿಗೆ ಸಂಬಂಧ ಎಂದರೆ ನಮಗೆ ಎಲ್ಲವೂ ಆಗಿದೆ. ನಾವು ಆತನೊಂದಿಗೆ ಒಂದಾಗಿರಬೇಕು ಆತನು ತಂದೆಯೊಂದಿಗೆ ಒಂದಾಗಿರುವ ಪ್ರಕಾರ, ಆಗ ನಾವು ಕ್ರಿಸ್ತನ ದೇಹದ ಸದಸ್ಯರಾಗಿ, ದ್ರಾಕ್ಷೇ ಬಳ್ಳಿಯ ಕೊಂಬೆಗಳಾಗಿ ಅನಂತನಾದಾತನ ಪ್ರಿಯತಮೆ

ಯಾಗಿದ್ದೇವೆ, ನಾವು ಪೋಷಕರ ಸಂಗ್ರಹಣೆಗೆ ಹೊಂದಿಕೊಂಡಿರಬೇಕು ಮತ್ತು ದ್ರಾಕ್ಷೇ ಬಳ್ಳಿಯಿಂದ ಪೋಷಣೆಯನ್ನು ಹೊಂದಿಕೊಳ್ಳಬೇಕು. ದೇವರು ನಮ್ಮ ಮಹಿಮೆಯ ಶಿರಸ್ಸಾಗಿದ್ದಾನೆ ಮತ್ತು ದೇವರ ಹೃದಯದಿಂದ ಹರಿಯುವ ದೈವೀಕ ಪ್ರೀತಿಯು ಕ್ರಿಸ್ತನಲ್ಲಿ ನೆಲೆಯಾಗಿರುತ್ತದೆ ಮತ್ತು ಅದು ಆತನೊಂದಿಗೆ ಐಕ್ಯತೆಯಲ್ಲಿ ಇರುವವರಿಗೆ ನಿವೇದಿಸಲ್ಪಡುತ್ತದೆ. ಆತ್ಮವನ್ನು ಪ್ರವೇಶಿಸುವ ಈ ದೈವೀಕ ಪ್ರೀತಿಯು ಕೃತಜ್ಞತೆಯಿಂದ ಇರಲು ಪ್ರೇರೆಪಿಸುತ್ತದೆ, ಆತ್ಮೀಕ ಬಲಹೀನತೆಯಿಂದ, ಹೆಮ್ಮೆ, ಒಣಹೆಮ್ಮೆ ಮತ್ತು ಸ್ವಾರ್ಥ ಮತ್ತು ಕ್ರಿಸ್ತಿಯ ನಡತೆಯನ್ನು ಕುರೂಪಗೊಳಿಸುವ ಎಲ್ಲಾದರಿಂದ ನಮ್ಮನ್ನು ಸ್ವತಂತ್ರರನ್ನಾಗಿಸುತ್ತದೆ.

(14) ದೇವರ ಪ್ರೀತಿಯು ಹೃದಯದಲ್ಲಿ ಹೇಗೆ ಸ್ವೀಕರಿಸಲ್ಪಡುತ್ತದೆ ಮತ್ತು ನಂತರ ಹೇಗೆ ಹಂಚಲ್ಪಡುತ್ತದೆ?

ಈ ನಿರೀಕ್ಷೆಯು ನಮ್ಮ ಆಶೆಯನ್ನು ಭಂಗಪಡುಸುವದಿಲ್ಲ; ನಮಗೆ ಕೊಟ್ಟಿರುವ ಪವಿತ್ರಾತ್ಮನ ಮೂಲಕವಾಗಿ ದೇವರ ಪ್ರೀತಿರಸವು ನಮ್ಮ ಹೃದಯಗಳಲ್ಲಿ ಧಾರಾಳವಾಗಿ ಸುರಿದಿದೆಯಲ್ಲಾ (ರೋಮ 5:5)

ಆತ್ಮವು ಕ್ರಿಸ್ತನ ಹೃದಯದಿಂದ ಹರಿಯುವ ಪರಿಶುದ್ಧವಾದ ಪ್ರೀತಿಯ ತೊರೆಗಳಿಂದ ಮೇಯಿಸಲ್ಪಡುತ್ತದೆ, ಎಂದಿಗೂ ಬತ್ತದ ಉತ್ತಮವಾದ ಬುಗ್ಗೆಯಂತೆ, ಓ ಹೃದಯವು ಜೀವತುಂಬಿತು, ಅದರ ಉದ್ದೇಶಗಳು ಹೇಗೆ ಉದಾತ್ತಗೊಂಡವು, ಅದರ ಮಮತೆಯು ಆಳವಾಯಿತು, ಈ ಐಕ್ಯತೆಯಿಂದ! ಪವಿತ್ರಾತ್ಮನ ಶಿಕ್ಷಣ ಮತ್ತು ಶಿಸ್ತಿನಿಂದ ದೇವರ ಮಕ್ಕಳು ಒಬ್ಬರನ್ನೊಬ್ಬರು ಪ್ರೀತಿಸತೊಡಗಿದರು, ನಿಜವಾಗಿಯೂ, ಪ್ರಾಮಾಣಿಕತೆಯಿಂದ, ಪರಿಣಾಮಕಾರಿಯಾಗಿ – ಯಾವುದೇ ಪಕ್ಷಪಾತವಿಲ್ಲದೆ ಮತ್ತು ಕಪಟತನವಿಲ್ಲದೆ.” ಇದು ಯಾಕಂದರೆ ಹೃದಯವು ಯೇಸುವನ್ನು ಪ್ರೀತಿಸುತಿತ್ತು. ಒಬ್ಬರ ಮೇಲೆ ಒಬ್ಬರಿಗೆ ಇರುವ ಪ್ರೀತಿ ದೇವರೊಂದಿಗೆ ನಮಗಿರುವ ಸಾಮಾನ್ಯ ಸಂಬಂಧದಿಂದ ಉಕ್ಕುತ್ತದೆ.

ಪರಲೋಕದಲ್ಲಿರುವ ನಮ್ಮ ತಂದೆಯ ಪ್ರೀತಿಯು ಲೋಕಕ್ಕೆ ಆತನ ಒಬ್ಬನೇ ಮಗನ ಕೊಡುಗೆ ಪ್ರತಿಯೊಂದು ಆತ್ಮವನ್ನು ಪ್ರೇರೆಪಿಸಲು, ಪ್ರತಿಯೊಂದು ಕಠಿಣ, ಪ್ರೀತಿಯಿಲ್ಲದ ಹೃದಯವನ್ನು ಪಶ್ಚಾತ್ತಾಪ ಮತ್ತು ಮೃದು ಹೃದಯವನ್ನಾಗಿ ಕರಗಿಸಲು ಸಾಕಷ್ಟಾಗಿದೆ; ಆದಾಗ್ಯೂ ಕ್ರಿಸ್ತನು ಯಾರಿಗಾಗಿ ಸತ್ತನೋ ಅವರಲ್ಲಿ ಪರಲೋಕದ ತಿಳುವಳಿಕೆ

ತೋರಿಬರುತ್ತದೆ, ಆತನ ಪ್ರೀತಿಗೆ ಭಾವಶೂನ್ಯತೆ, ಹೃದಯ ಕಠಿಣಪಡಿಸಿಕೊಳ್ಳುವದು ಮತ್ತು ಉತ್ತಮ ಸಂಗತಿಗಳನ್ನು ನೀಡುವಾತನೆಡೆಗೆ  ಕೃತಜ್ಞತೆ ಮತ್ತು ಮಮತೆಯ ಪ್ರತಿಕ್ರಿಯೆಯಿಲ್ಲ ದಿರುವದಾಗಿದೆಯೋ? ಸ್ವಲ್ಪ ಮಹತ್ವವುಳ್ಳ ಸಂಗತಿಗಳು ಜೀವಿಯ ಸಂಪೂರ್ಣ ಬಲವನ್ನು ಹೀರಿಕೊಳ್ಳುತ್ತದೋ ಮತ್ತು ದೇವರ ಪ್ರೀತಿಗೆ ಯಾವುದೇ ಪ್ರತಿಫಲ ದೊರೆಯುವದಿಲ್ಲವೋ? ನೀತಿವಂತಿಕೆಯ ಸೂರ್ಯನ ಪ್ರಕಾಶ ವ್ಯರ್ಥವಾಗಿ ಹೋಗುತ್ತದೋ? ದೇವರು ಏನನ್ನು ಮಾಡಿದ್ದಾನೋ ಅದರ ಬೆಳಕಿನಲ್ಲಿ ಆತನ ಬೇಡಿಕೆಗಳು ನಿಮ್ಮ ಮೇಲೆ ಕಡಿಮೆಯಾಗಿವೆಯೋ? ನಾವು ಸ್ಪರ್ಶಿಸಬಹುದಾದ. ದೈವೀಕ ಪ್ರೀತಿಯಿಂದ ಪ್ರಭಾವ ಬೀರುವ ಹೃದಯವನ್ನು ಹೊಂದಿದ್ದೇವೋ? ನಾವು ಆಯ್ದ ಪಾತ್ರೆಗಳಾಗುವದಕ್ಕೆ ಸಿದ್ಧರಾಗಿದ್ದೇವೋ? ದೇವರು ನಮ್ಮ ಮೇಲೆ ತನ್ನ ದೃಷ್ಟಿಯನ್ನು ಇರಿಸಿಲ್ಲವೋ? ಆತನು ಬೆಳಕಿನ ಸಂದೇಶವನ್ನು ತಿಳಿಸುವದಕ್ಕೆ ನಮ್ಮನ್ನು ಕೊಂಡುಕೊಂಡಿಲ್ಲವೋ?

ನಮಗೆ ನಂಬಿಕೆಯನ್ನು ಹೆಚ್ಚಿಸುವ ಅಗತ್ಯತೆಯಿದೆ. ನಾವು ಕಾದಿರಬೇಕು, ನಾವು ವೀಕ್ಷಿಸಬೇಕು, ನಾವು ಪ್ರಾರ್ಥಿಸಬೇಕು, ನಾವು ಕೆಲಸ

ಮಾಡಬೇಕು, ನಮ್ಮ ಮೇಲೆ ಪವಿತ್ರಾತ್ಮನು ಸಮೃದ್ಧಿಯಾಗಿ ಸುರಿಸಲ್ಪಡಲಿ ನಾವು ಲೋಕಕ್ಕೆ ಬೆಳಕಾಗಿರಲಿ ಎಂದು ಬೇಡಿಕೊಳ್ಳಬೇಕು. ಈಗ ನಾನು ಏಕ್ಯೆಕ ವ್ಯಾಖ್ಯಾನವನ್ನು ತಿಳಿದುಕೊಂಡಿದ್ದೇನೆ ಮತ್ತು ಪ್ರೀತಿಯ ಮೂಲ ದೇವರಾಗಿದ್ದಾನೆ ಮತ್ತು ಆತನ ಪ್ರೀತಿಯು ಶಾಶ್ವತವಾದದ್ದು.

ದುಂಡುಸುತ್ತಿರಿ: ಹೌದು     ನಿರ್ಧರಿಸಿಲ್ಲ

ನಾನು ಆಶ್ಚರ್ಯಚಕಿತನಾಗಿದ್ದೇನೆ ಮತ್ತು ದೇವರು ನನ್ನನ್ನು ಬಹಳವಾಗಿ ಪ್ರೀತಿಸಿ  ಆತನು ನನಗೆ ಆಯ್ಕೆಯ ಸ್ವಾತಂತ್ರವನ್ನು ಕೊಟ್ಟಿದ್ದಾನೆ, ನನ್ನ ಆಯ್ಕೆ ನನ್ನ ಪೂರ್ಣ ಹೃದಯದಿಂದ ಆತನನ್ನು ತಿರುಗಿ ಪ್ರೀತಿಸುವದಾಗಿದೆ.

ದುಂಡುಸುತ್ತಿರಿ:  ಹೌದು     ನಿರ್ಧರಿಸಿಲ್ಲ

ದೇವರ ಪ್ರೀತಿ ನನ್ನಲ್ಲಿ ತುಂಬದಿದ್ದರೆ ಮತ್ತು ಇತರರೆಡೆಗೆ ಹರಿಯದಿದ್ದರೆ ನಾನು ಕ್ರೈಸ್ತನಾಗಿರುವದು ಅಸಾಧ್ಯವಾಗಿದೆ ಎಂಬ ಅರಿವು ನನಗಾಗಿದೆ. ನಾನು ನನ್ನನ್ನು ಆತನಿಗೆ ಅಧೀನಪಡಿಸುತ್ತೇನೆ ಆತನು ನನ್ನಲ್ಲಿ ವಾಸಿಸಲಿ ಮತ್ತು ನನ್ನ ಮೂಲಕ ಇತರರ ಜೀವಿತವನ್ನು ಸ್ಪರ್ಶಿಸಲಿ.

ದುಂಡುಸುತ್ತಿರಿ:  ಹೌದು    ನಿರ್ಧರಿಸಿಲ್ಲ

ದೇವರು ಮತ್ತು ಆತನ ಧರ್ಮಶಾಸ್ತ್ರ
ಪ್ರೀತಿಯಾಗಿದೆ ಎಂಬ ಸತ್ಯವನ್ನು ನಾನು
ಒಪ್ಪಿಕೊಳ್ಳುತ್ತೇನೆ, ನಾನು ನನ್ನೊಳಗೆ
ಕಾರ್ಯ ಮಾಡುತ್ತಿರುವ ಪವಿತ್ರಾತ್ಮನ
ಬಲದಿಂದ  ಆತನನ್ನು ನನ್ನ ಪೂರ್ಣ
ಹೃದಯದಿಂದ ಪ್ರೀತಿಸುವದನ್ನು ಮತ್ತು
ಇತರರನ್ನು ನನಗಿಂತ ಹೆಚ್ಚಾಗಿ
ಪ್ರೀತಿಸುವದನ್ನು ಆಯ್ಕೆ
ಮಾಡಿಕೊಳ್ಳುತ್ತೇನೆ.

ದುಂಡುಸುತ್ತಿರಿ:  ಹೌದು    ನಿರ್ಧರಿಸಿಲ್ಲ

ದೇವರ ರಾಜ್ಯಾಡಳಿತವು ನೀತಿವಂತಿಕೆ,
ನ್ಯಾಯ, ಕರುಣೆ ಮತ್ತು ಸತ್ಯವನ್ನು
ಆಧರಿಸಿದೆ ಎಂಬುದನ್ನು ನಾನು
ತಿಳಿದುಕೊಂಡಿದ್ದೇನೆ. ಎಲ್ಲಾ
ದೇವದೂತರೊಂದಿಗೆ ನಾನು ಈ
ಲೋಕದ ಎಲ್ಲಾ ಆಡಳಿತವು
ಕೊನೆಗೊಳ್ಳುವದನ್ನು ಮತ್ತು ದೇವರ
ರಾಜ್ಯಾಡಾಳಿತವು ಸಂಪೂರ್ಣ
ವಿಶ್ವದಲ್ಲಿ ಶ್ರೇಷ್ಠವಾದ ಆಡಳಿತವಾಗಿ
ಆಳುವದನ್ನು ನಾನು
ಎದುರುನೋಡುತ್ತಿದ್ದೇನೆ.

ದುಂಡುಸುತ್ತಿರಿ: ಹೌದು      ನಿರ್ಧರಿಸಿಲ್ಲ

ಕ್ರಿಸ್ತನು ಆತನ ಪ್ರೀತಿಯನ್ನು ನಮ್ಮೊಳಗೆ
ಇರಿಸಲು ತಂದೆಯನ್ನು
ಬೇಡಿಕೊಂಡದಕ್ಕಾಗಿ
ಆಭಾರಿಯಾಗಿದ್ದೇನೆ. ನಾನು ನನ್ನ
ಹೃದಯದಲ್ಲಿ ತಂದೆಯ ಪ್ರೀತಿಯ

ಎಲ್ಲಾ ಆಯಾಮಗಳನ್ನು ಮತ್ತು ಅದು ತರುವ ನಡತೆಯ ಬದಲಾವಣೆಯನ್ನು ಹೊಂದಿಕೊಳ್ಳಬೇಕೆಂಬುದು ನನ್ನ ಪ್ರಾಮಾಣಿಕ ಪ್ರಾರ್ಥನೆಯಾಗಿದೆ.

ದುಂಡುಸುತ್ತಿರಿ: ಹೌದು ನಿರ್ಧರಿಸಿಲ್ಲ

______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________
______________________________



## ಪಾಠ 2

## ದೇವರ ಪ್ರೀತಿ ಆತನ ಒದಗಿಸುವಿಕೆಯಲ್ಲಿ ಪ್ರಕಟವಾಗಿದೆ

(1) ಅಂತಿಮ ಕೊಡುಗೆಯಾದ –ಯೇಸು ಕ್ರಿಸ್ತನನ್ನು ಒಳಗೊಂಡು ನಾವು ಅನುಭವಿಸುವ ಪ್ರತಿಯೊಂದು ಆಶೀರ್ವಾದ ಯಾರಿಂದ ಬರುತ್ತದೆ.?

ಎಲ್ಲಾ ಒಳ್ಳೇ ದಾನಗಳು ಕುಂದಿಲ್ಲದ ಎಲ್ಲಾ ವರಗಳೂ ಮೇಲಣಿಂದ ಸಕಲವಿಧವಾದ ಬೆಳಕಿಗೂ ಮೂಲ ಕಾರಣವಾದವನಿಂದ ಇಳಿದು ಬರುತ್ತವೆ. ಆತನಲ್ಲಿ ಚಂಚಲತ್ವವೇನೂ ಇಲ್ಲ, ವ್ಯತ್ಯಾಸದ ಸೂಚನೆಯೂ ಇಲ್ಲ (ಯಾಕೋಬ 1:17).

ಪ್ರತಿಯೊಂದು ಸೃಜನಾತ್ಮಕ ಶಕ್ತಿಯ ಪ್ರಕಟನೆಯು ಅನಂತವಾದ ಪ್ರೀತಿಯ ವ್ಯಕ್ತಪಡಿಸುವಿಕೆಯಾಗಿದೆ.

ದೇವರ ಸಾರ್ವಭೌಮತ್ವವು ಸೃಷ್ಟಿಯ ಎಲ್ಲಾ ಜೀವಿಗಳಿಗೆ ಸಂಪೂರ್ಣವಾದ ಆಶೀರ್ವಾದವನ್ನು ಒಳಗೊಂಡಿವೆ.

ಅದು ಕ್ರಿಸ್ತನ ವರದ ಮೂಲಕ ನಾವು ಪ್ರತಿಯೊಂದು ಆಶೀರ್ವಾದವನ್ನು ಹೊಂದಿಕೊಳ್ಳುತ್ತೇವೆ. ಆ ವರದ ಮೂಲಕ ನಮಗೆ ದಿನದಿಂದ ದಿನಕ್ಕೆ ಬಿದ್ದು ಹೋಗದ ಯೆಹೋವನ ಒಳ್ಳೇತನ ಹರಿದುಬರುತ್ತದೆ. ಪ್ರತಿಯೊಂದು ಹೂ, ತನ್ನ ಸೂಕ್ಷ್ಮವಾದ ಛಾಯೆ ಮತ್ತು ಪರಿಮಳದೊಂದಿಗೆ  ಆ ಒಂದು ವರದ ಮೂಲಕ ನಮ್ಮ ಆನಂದಕ್ಕಾಗಿ ಕೊಡಲ್ಪಟ್ಟಿವೆ. ಸೂರ್ಯ ಮತ್ತು ಚಂದ್ರ ಆತನಿಂದ ಸೃಷ್ಟಿಸಲ್ಪಟ್ಟಿದ್ದಾರೆ. ಆತನಿಂದ ಸೃಷ್ಟಿಸಲ್ಪಡದಿರುವ ಆಕಾಶದ ಸೌಂದರ್ಯವನ್ನು ಹೆಚ್ಚಿಸುವ ಒಂದು ನಕ್ಷತ್ರವೂ ಕೂಡಾ ಇಲ್ಲ. ಮಳೆಯಿಂದ ಬೀಳುವ ಪ್ರತಿಯೊಂದು ಹನಿಯೂ, ಕೃತಜ್ಞತೆಯಿಲ್ಲದ ಲೋಕದ ಮೇಲೆ ಬೆಳಕನ್ನು ಚೆಲ್ಲುವ ಪ್ರತಿಯೊಂದು ಬೆಳಕಿನ ಕಿರಣವು ಕ್ರಿಸ್ತನಲ್ಲಿ ದೇವರ ಪ್ರೀತಿಯನ್ನು ಸಾಕ್ಷೀಕರಿಸುತ್ತದೆ. ಪ್ರತಿಯೊಂದು ನಮಗೆ ಮಾತಿನಲ್ಲಿ ಹೇಳಲಾರದ ದೇವರ ಒಬ್ಬನೇ ಮಗನನ್ನು ನೀಡಿದ ಆ ಒಂದು ವರದಲ್ಲಿ ನೀಡಲಾಗಿದೆ. ಈ ಎಲ್ಲಾ ಔದಾರ್ಯಗಳು ದೇವರ ಹಸ್ತಕೌಶಲ್ಯದೆಡೆಗೆ ಹರಿದು

ಬರಲೆಂದು ಆತನು ಕ್ರೂಜೆಯ ಮೇಲೆ ಮೊಳೆ ಜಡಿಸಿಕೊಂಡನು.

(2) ಈ ಶ್ರೇಷ್ಠ ಪ್ರೀತಿಯಿಂದಾಗಿ ದೇವರು ನಮ್ಮ ಮೇಲೆ ಏನನ್ನು ಸಮೃದ್ಧಿಯಾಗಿ ಸುರಿಸಿದ್ದಾನೆ?

ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ನಮ್ಮನ್ನು ಪ್ರೀತಿಸಿದ್ದಾನೆ. (ಎಫೆಸ 2:4).

ದೇವರು ಕೇವಲ ಕರುಣಾಮಯನಲ್ಲ; ಆತನು ತನ್ನನ್ನು ಕೂಗುವವರೆಲ್ಲರಿಗೂ ಕರುಣೆಯಲ್ಲಿ ಸಮೃದ್ಧಿಯುಳ್ಳವನಾಗಿದ್ದಾನೆ. ಅವರು ಅದಕ್ಕೆ ಅರ್ಹರಾಗಿದ್ದಾರೆ ಎಂದಲ್ಲ, ಬದಲಾಗಿ ಕರುಣೆಯನ್ನು ಸುರಿಸುವದರಲ್ಲಿ ಆತನಿಗೆ ಇರುವ ಆನಂದದಿಂದಾಗಿ (ತೀತ 3:5;  1ಪೇತ್ರ 1:3).

ದೇವರ ಪ್ರೀತಿಯು ಅನುಕಂಪಕ್ಕಿಂತ ಹೆಚ್ಚಿನದಾಗಿದೆ;  ಇದು ಪ್ರಯೋಜನ ಯುತವಾದ ಕ್ರಿಯೆಗೆ ನಡೆಸುತ್ತದೆ. “ನಾವು ಇನ್ನೂ ಪಾಪಿಗಳಾಗಿದ್ದಾಗಲೇ” ದೇವರು ನಮ್ಮನ್ನು ಪ್ರೀತಿಸಿದ್ದಾನೆ (ರೋಮ 5:8 ನೋಡಿರಿ) ಮತ್ತು ನಮ್ಮನ್ನು ಪ್ರೀತಿಸುವದನ್ನು ಆತನು ಎಂದಿಗೂ ನಿಲ್ಲಿಸಿ ಬಿಡುವದಿಲ್ಲ. ಈ ಪ್ರೀತಿಯೇ ಆತನನ್ನು ರಕ್ಷಣೆಯನ್ನು ನೀಡಲು ಪ್ರೇರೆಪಿಸಿತು (ಯೋಹಾನ 3: 16). ಪ್ರೀತಿಯು ಆತನ ನಡತೆಯ ಪ್ರಾಮುಖ್ಯ ಬಿರುದಾಗಿದೆ (1ಯೋಹಾನ 4:8)

ಅದರ ಅತ್ಯುನ್ನತವಾದ ವ್ಯಕ್ತಪಡಿಸುವಿಕೆಯನ್ನು ಕ್ರಿಸ್ತನ ವ್ಯಕ್ತಿತ್ವದಲ್ಲಿ ಕಾಣಬಹುದು. ದೇವರು ನಮ್ಮ ಮೇಲೆ ಕರುಣೆಯುಳ್ಳವನಾಗಿದ್ದಾನೆ ಯಾಕಂದರೆ ನಾವು ಪಾಪಿಗಳಾಗಿದ್ದೇವೆ, ಆತನು ನಮ್ಮನ್ನು ಪ್ರೀತಿಸುತ್ತಾನೆ ಯಾಕಂದರೆ ನಾವು ಆತನ ಸೃಷ್ಟಿಯಾಗಿದ್ದಾನೆ. ಮನುಷ್ಯರಿಗಾಗಿ ಆತನ ಶ್ರೇಷ್ಠ ಕಾರ್ಯ ಕೇವಲ ಆತನ ಪರೋಪಕಾರಗುಣ ಅಥವಾ ಉದಾರತೆಯಿಂದ ಕೂಡಿದ ನಮ್ರತೆಯಲ್ಲ; ಇದು ಮಮತೆಯ, ಪ್ರೀತಿಯ ಕ್ರಿಯೆಯಾಗಿದೆ.

(3) ಆತನ ಪ್ರಭಾವ, ಪರಿಪೂರ್ಣವಾದ ಕಾರ್ಯ ಮತ್ತು ಶ್ರೇಷ್ಠ ಪರಿಣಿತ ಕಲಾಕಾರನಾದ ಸೃಷ್ಠಿ ಕರ್ತನ ಪ್ರೀತಿಯ ಪೋಷಣೆ ನೋಡಬೇಕಾದರೆ ನಾವು ಎಲ್ಲಿ ನೋಡಬೇಕು?

ಆಕಾಶವು ದೇವರ ಪ್ರಭಾವವನ್ನು ಪ್ರಚುರಪಡಿಸುತ್ತದೆ; ಗನವು ಆತನ ಕೈಕೆಲಸವನ್ನು ತಿಳಿಸುತ್ತದೆ. (ಕೀರ್ತನೆ 19:1).

ಎಷ್ಟು ಅದ್ಭುತವಾಗಿ. ಎಂಥಹ ಆಶ್ಚರ್ಯಕರವಾದ ಸೌಂದರ್ಯದೊಂದಿಗೆ ನಿಸರ್ಗದಲ್ಲಿ ಪ್ರತಿಯೊಂದು ಸೃಷ್ಟಿಸಲ್ಪಟ್ಟಿದೆ. ಎಲ್ಲಾ ಕಡೆಯಲ್ಲಿ ನಾವು ಪರಿಣಿತ ಕಲಾಕಾರನ ಪರಿಪೂರ್ಣವಾದ ಕೈಕೆಲಸವನ್ನು ನೋಡುತ್ತೇವೆ. ಆಕಾಶವು ಆತನ

ಪ್ರಭಾವವನ್ನು ಪ್ರಚುರಪಡಿಸುತ್ತದೆ;
ಮತ್ತು ಮನುಷ್ಯನ ಸಂತೋಷಕ್ಕಾಗಿ
ಸೃಷ್ಟಿಸಲ್ಪಟ್ಟ ಭೂಮಿ  ಆತನ
ಅಪ್ರತಿಮ ಪ್ರೀತಿಯ ಕುರಿತು
ಮಾತಾಡುತ್ತದೆ. ಆತನ ಬಾಹ್ಯರೂಪ
ವೈವಿಧ್ಯವಿಲ್ಲದಲ್ಲ: ಬದಲಾಗಿ
ಭವ್ಯವಾದ ಪುರಾತನ ಬೆಟ್ಟಗಳು
ರಮ್ಯನೋಟವನ್ನು ವೈವಿಧ್ಯ
ಮಯವಾಗಿ ಮಾಡುವದಕ್ಕಾಗಿ ತಲೆ ಎತ್ತಿ
ನಿಂತಿವೆ. ಅಲ್ಲಿ ಹೊಳೆಯುವ
ತೊರೆಗಳಿವೆ ಮತ್ತು ಫಲವತ್ತಾದ
ಕಣಿವೆಗಳಿವೆ, ಸುಂದರವಾದ ಸೋತ್ರ
ವರಗಳು, ವಿಶಾಲವಾದ ನದಿಗಳು, ಮತ್ತು
ಮೇರೆಯಿಲ್ಲದ ಸಮುದ್ರಗಳಿವೆ. ದೇವರು
ಮಂಜನ್ನು ಮತ್ತು ಮಳೆಯನ್ನು
ಬಾಯಾರಿದ ಭೂಮಿಯನ್ನು
ತಣಿಸುವದಕ್ಕಾಗಿ ಕಳುಹಿಸುತ್ತಾನೆ.
ತಂಗಾಳಿ ವಾತಾವರಣವನ್ನು
ಶುದ್ಧೀಕರಿಸುವದರ ಮತ್ತು
ತಂಪಾಗಿಸುವದರ ಮೂಲಕ
ಆರೋಗ್ಯವನ್ನು ನೀಡುತ್ತದೆ, ಅದು
ಆತನ ಜ್ಞಾನದಿಂದ
ನಿಯಂತ್ರಿಸಲ್ಪಟ್ಟಿದೆ. ಆತನು
ಸೂರ್ಯನನ್ನು ಆಕಾಶದಲ್ಲಿ ರಾತ್ರಿ
ಮತ್ತು ಹಗಲನ್ನು ಆಳುವದಕ್ಕೆ
ಇಟ್ಟಿದ್ದಾನೆ, ಮತ್ತು ಅದರ
ಹಿತಕರವಾದ ಕಿರಣಗಳ ಮೂಲಕ
ಬೆಳಕನ್ನು ಮತ್ತು ಹಿತೋಷ್ಣತೆಯನ್ನು
ಭೂಮಿಗೆ ನೀಡುತ್ತಾನೆ, ಇದು
ಸಸ್ಯವರ್ಗದ ಅಭಿವೃದ್ಧಿಗೆ
ಕಾರಣವಾಗುತ್ತದೆ.

ಈ ಆಶೀರ್ವಾದಗಳೆಡೆಗೆ ನಾನು ನಿಮ್ಮ ಗಮನವನ್ನು ಸೆಳೆಯುತ್ತೇನೆ ದೇವರ ಉದಾರವಾದ ಹಸ್ತದ ಮೂಲಕ ಪ್ರತಿ ಹೊಸ ಮುಂಜಾವಿನ ಹೊಸ ಪ್ರಭಾವಗಳು ನಿಮ್ಮ ಹೃದಯದಲ್ಲಿ ಆತನ ಈ ಪ್ರೀತಿಯ ಪೋಷಣೆಯ ಕೊಡುಗೆಗಳಿಗಾಗಿ ಸ್ತುತಿಯನ್ನು ಎಬ್ಬಿಸಲಿ. ಕರುಣೆಯುಳ್ಳ ನಮ್ಮ ಪರಲೋಕದ ತಂದೆಯು ನಮಗೆ ಇಷ್ಟೊಂದು ಸಂಗತಿಗಳನ್ನು ನಮ್ಮ ಸಂತೋಷಕ್ಕಾಗಿ ಒದಗಿಸಿರುವಾಗ, ಈ ಎಲ್ಲಾ ಆಶೀರ್ವಾದಗಳನ್ನು ಆತನು ನಮಗೆ ಮರೆಯಾಗಿ ಒದಗಿಸಿದ್ದಾನೆ. ಆತನು ಬಿದ್ದು ಹೋಗಿರುವ ಮನುಷ್ಯನ ಅಗತ್ಯತೆಗಳನ್ನು ಬಲ್ಲಾತನಾಗಿದ್ದಾನೆ; ಒಂದು ಕೈಯಲ್ಲಿ ಆತನು ನಮಗೆ ಪ್ರಯೋಜನಗಳನ್ನು ನೀಡಿರುವಾಗ ಇನ್ನೊಂದು ಕೈಯಲ್ಲಿ ಅನಾನುಕೂಲತೆಗಳಿವೆ ಇವುಗಳನ್ನು ಆತನು ನಮಗೆ ಕೊಟ್ಟಿರುವ ಸಾಮರ್ಥ್ಯವನ್ನು ಉಪಯೋಗಿಸುವಂತೆ ಪ್ರಚೋದಿಸಲು ರಚಿಸಿದ್ದಾನೆ. ಇವು ನಮ್ಮಲ್ಲಿ ಕಾರ್ಯಮಾಡುವದರಲ್ಲಿ ತಾಳ್ಮೆಯನ್ನು, ದೃಢನಿಶ್ಚಯವನ್ನು ಮತ್ತು ಧೈರ್ಯವನ್ನು ಬೆಳೆಸುತ್ತವೆ.

(4) ದೇವರು ತನ್ನ ಪ್ರೀತಿಯಲ್ಲಿ ಉಚಿತವಾಗಿ ನಮಗೆ ಒದಗಿಸಿದ ಅನೇಕ ಪ್ರಯೋಜನಗಳಲ್ಲಿ ಯಾವ ಐದನ್ನು ನಾವು ಮರೆಯಬಾರದೆಂದು ನಮಗೆ ಜ್ಞಾಪಿಸಲಾಗಿದೆ?

ನನ್ನ ಮನವೇ ಯೆಹೋವನನ್ನು ಕೊಂಡಾಡು; ಆತನ ಉಪಕಾರಗಳಲ್ಲಿ ಒಂದನ್ನೂ ಮರೆಯಬೇಡ. ಆತನು ನಿನ್ನ ಎಲ್ಲಾ ಅಪರಾಧಗಳನ್ನು ಕ್ಷಮಿಸುವವನೂ ಸಮಸ್ತ ರೋಗಗಳನ್ನು ವಾಸಿ ಮಾಡುವವನೂ ಪ್ರೀತಿ ಕೃಪೆಗಳೆಂಬ ಕಿರೀಟದಿಂದ ನಿನ್ನನ್ನು ಶೃಂಗರಿಸುವವನೂ ಆಗಿದ್ದಾನೆ. ಶ್ರೇಷ್ಠ ವರಗಳಿಂದ ನಿನ್ನ ಆಶೆಯನ್ನು ಪೂರ್ತಿಗೊಳಿಸುತ್ತಾನೆ; ಹದ್ದಿಗೆ ಬರುವಂತೆಯೇ ನಿನಗೆ ಯೌವನವನ್ನು ತಿರುಗಿ ಬರಮಾಡುತ್ತಾನೆ. (ಕೀರ್ತನೆ 103:2-5).

ದೇವರ ಶಕ್ತಿಯು ಹೃದಯದ ಬಡಿತದಲ್ಲಿ. ಪುಪ್ಪುಸಗಳ ಕಾರ್ಯದಲ್ಲಿ, ಮತ್ತು ದೇಹದ ಸಾವಿರಾರು ವಿವಿಧ ವಾಹಿನಿಗಳಲ್ಲಿ ಸುತ್ತುತ್ತಿರುವ ಗತಿಯಲ್ಲಿ ಪ್ರಕಟವಾಗಿದೆ. ಪ್ರತಿ ನಿಮಿಷದ ನಮ್ಮ ಅಸ್ತಿತ್ವಕ್ಕೆ ಮತ್ತು ಜೀವಿತದ ಎಲ್ಲಾ ಸುಖಾನುಭೋಗಗಳಿಗೆ ನಾವು ಆತನಿಗೆ ಋಣಿಯಾಗಿದ್ದೇವೆ. ಬಲಗಳು ಮತ್ತು ಸಾಮರ್ಥ್ಯಗಳು ಕೆಳ ವರ್ಗದ ಸೃಷ್ಟಿಗಿಂತ ಮನುಷ್ಯನನ್ನು ಉನ್ನತಿಗೇರಿಸುತ್ತವೆ, ಇವು ಸೃಷ್ಟಿ ಕರ್ತನ ಬಳುವಳಿಯಾಗಿವೆ.

ನಾವು ಉಣ್ಣುವ ಆಹಾರ, ನಾವು ಕುಡಿಯುವ ನೀರು, ನಾವು ಧರಿಸುವ ಬಟ್ಟೆ, ನಾವು ಉಸಿರಾಡುವ ಗಾಳಿಗಾಗಿ ನಾವು ಆತನಿಗೆ ಋಣಿಯಾಗಿದ್ದೇವೆ. ಆತನ ವಿಶೇಷ ಒದಗಿಸುವಿಕೆಯಿಲ್ಲದೇ

ಗಾಳಿಯು ಅಂಟು ರೋಗ ಮತ್ತು ವಿಷದಿಂದ ತುಂಬಿರುತಿತ್ತು. ಆತನು ಉದಾತ್ತವಾದ ದಾನಿ ಮತ್ತು ಸಂರಕ್ಷಿಸುವಾತನು ಆಗಿದ್ದಾನೆ. ಭೂಮಿಯ ಮೇಲೆ ಪ್ರಕಾಶಿಸುವ ಸೂರ್ಯ ಮತ್ತು ಎಲ್ಲಾ ನಿಸರ್ಗವನ್ನು ವೈಭವೀಕರಿಸುತ್ತಾನೆ, ವಿಲಕ್ಷಣವಾದ ಆಶಂಬರದಿಂದ ಕೂಡಿದ ಚಂದ್ರನ ಉಜ್ವಲ ಪ್ರಕಾಶ,  ಅಂತರಿಕ್ಷದ ವೈಭವಗಳು, ಪ್ರಕಾಶಾಮಾನವಾದ ನಕ್ಷತ್ರಗಳಿಂದ ಮಿಂಚುತ್ತಿವೆ.
ಭೂಮಿಯನ್ನು ತಣಿಸುವ ಕಾರಂಜಿಗಳು ಸಸ್ಯವರ್ಗವನ್ನು ಅಭಿವೃದ್ಧಿಪಡಿಸುತ್ತವೆ, ನಿಸರ್ಗದ ಅಮೂಲ್ಯ ಸಂಗತಿಗಳು ತಮ್ಮ ಎಲ್ಲಾ ಸಮೃದ್ಧಿಯಲ್ಲಿ, ಎತ್ತರವಾದ ಮರಗಳು, ಕುರುಚಲು ಮತ್ತು ಗಿಡಗಳು, ತೂಗಾಡುವ ತೆನೆಗಳು, ನೀಲಿ ಆಕಾಶ, ಹಸಿರು ನೆಲ, ಹಗಲು ಮತ್ತು ರಾತ್ರಿ ಬದಲಾಗುವದು, ಹೊಸದಾಗುವ ಕಾಲಗಳು ಇವೆಲ್ಲವೂ ಮನುಷ್ಯನಿಗೆ ಸೃಷ್ಟಿ ಕರ್ತನ ಪ್ರೀತಿಯ ಕುರಿತು ಮಾತಾಡುತ್ತವೆ.
ಆತನು ಆಕಾಶ ಮತ್ತು ಭೂಮಿಯಲ್ಲಿರುವ ಈ ಎಲ್ಲಾ ಗುರುತುಗಳ ಮೂಲಕ ನಮ್ಮನ್ನು ತನ್ನೊಂದಿಗೆ ಜೋಡಿಸಿಕೊಂಡಿದ್ದಾನೆ. ತಾಯಿ ವೇದನೆಗೆ ಒಳಗಾಗಿರುವ ತನ್ನ ಮಗುವನ್ನು ನೋಡುವಂತೆ ಹೆಚ್ಚು ಸೂಕ್ಷ್ಮವಾಗಿ ನಮ್ಮನ್ನು ವೀಕ್ಷಿಸುತ್ತಾನೆ. "ತಂದೆಯು ತನ್ನ ಮಕ್ಕಳ ಮೇಲೆ ಕರುಣೆ

ತೋರಿಸುವಂತೆ ಕರ್ತನು ತನಗೆ ಭಯ ಪಡುವವರನ್ನು ಕರುಣಿಸುತ್ತಾನೆ.

(5) ನಮ್ಮ ಮೇಲೆ ಆತನಿಗಿರುವ ಪ್ರೀತಿಯಿಂದಾಗಿ ದೇವರು ಯಾವ ಐದು ವಿಶಿಷ್ಟವಾದ ಕಾರ್ಯಗಳನ್ನು ಮಾಡಲು ಯೇಸುವನ್ನು ಆಭಿಷೇಕಿಸಿ ಈ ಲೋಕಕ್ಕೆ ಕಳುಹಿಸಿದ್ದಾನೆ?

ಕರ್ತನ ಆತ್ಮವು ನನ್ನ ಮೇಲೆ ಅದೆ, ಆತನು ನನ್ನನ್ನು ಬಡವರಿಗೆ ಶುಭವರ್ತಮಾನವನ್ನು ಸಾರುವದಕ್ಕೆ ಅಭಿಷೇಕಿಸಿದನು, ಸೆರೆಯವರಿಗೆ ಬಿಡುಗಡೆಯಾಗುವದನ್ನು ಮತ್ತು ಕುರುಡರಿಗೆ ಕಣ್ಣು ಬರುವದನ್ನು ಪ್ರಸಿದ್ಧಿ ಪಡಿಸುವದಕ್ಕೂ ಮನಮುರಿದವರನ್ನು ಬಿಡಿಸಿ ಕಳುಹಿಸುವದಕ್ಕೂ. (ಲೂಕ 4:18).

ಇದು ಆತನ ಕಾರ್ಯ. ಆತನು ಒಳ್ಳೇಯ ಕಾರ್ಯಗಳನ್ನು ಮಾಡುತ್ತಾ ಮತ್ತು ಸೈತಾನನಿಂದ ತುಳಿತಕ್ಕೆ ಒಳಗಾದವರನ್ನು ಸ್ವಸ್ಥಪಡಿಸುತ್ತಾ ಸಂಚರಿಸಿದನು. ಸಂಪೂರ್ಣ ಗ್ರಾಮಗಳಲ್ಲಿ ಯಾವುದೇ ಮನೆಯಲ್ಲಿ ಅಸ್ವಸ್ಥನಾಗಿರುವ ಒಬ್ಬನೂ ಇರಲಿಲ್ಲ. ಯಾಕಂದರೆ ಆತನು ಅವರ ಮೂಲಕ ಹಾದುಹೋದನು ಮತ್ತು ಅವರಲ್ಲಿ ಅಸ್ವಸ್ಥರಾಗಿರುವವರನ್ನು ಸ್ವಸ್ಥಮಾಡಿದನು. ಆತನ ಕಾರ್ಯಗಳು ಆತನು ದೈವೀಕ ಅಭಿಷೇಕವನ್ನು

ಹೊಂದಿದವನು ಎಂಬುದಕ್ಕೆ ಸಾಕ್ಷಿಯಾಗಿದ್ದವು. ಪ್ರೀತಿ, ಕರುಣೆ ಮತ್ತು ಅನುಕಂಪ ಆತನ ಜೀವಿತದ ಪ್ರತಿಯೊಂದು ಕಾರ್ಯಗಳಲ್ಲಿ ಪ್ರಕಟವಾಗುತಿತ್ತು. ಮನುಷ್ಯರ ಮಕ್ಕಳೆಡೆಗೆ ಆತನ ಹೃದಯವು ಸಹಾನುಭೂತಿ ಯಿಂದಿರುತ್ತದೆ. ಅವರ ಬಯಕೆಗಳನ್ನು ತಿಳಿಯುವದದ್ದಾಗಿ ಆತನು ಮನುಷ್ಯರ ಸ್ವರೂಪವನ್ನು ತೆಗೆದುಕೊಂಡನು ಅತೀ ಬಡವರು ಮತ್ತು ಅತೀ ದೀನರು ಆತನನ್ನು ಸಂಧಿಸಲು ಭಯ ಪಡುವದಿಲ್ಲ. ಚಿಕ್ಕ ಮಕ್ಕಳೂ ಸಹ ಅತನಿಂದ ಆಕರ್ಷಿತರಾಗುತ್ತಾರೆ. ಅವರು ತಮ್ಮ ಕಾಲಿನ ಮೇಲೆ ನಿಂತುಕೊಳ್ಳಲು ಮತ್ತು ಆತನ ಚಿಂತಾಕ್ರಾಂತವಾದ, ಕರುಣೆಯ ಪ್ರೀತಿಯಿಂದ ತುಂಬಿದ ಮುಖವನ್ನು ದೃಷ್ಟಿಸುವದನ್ನು ಪ್ರೀತಿಸುತ್ತಾರೆ.

ದೇವಕುಮಾರನು ಈ ಲೋಕಕ್ಕೆ ಪುನರುಜ್ಜೀವನಪಡಿಸುವವನಾಗಿ ಬಂದನು. ಆತನೇ ಮಾರ್ಗ, ಸತ್ಯ ಮತ್ತು ಜೀವವಾಗಿದ್ದಾನೆ. ಆತನು ನುಡಿದ ಪ್ರತಿಯೊಂದೂ ಮಾತು ಆತ್ಮ ಮತ್ತು ಜೀವವಾಗಿದೆ. ಆತನು ಅಧಿಕಾರ ಪುಳ್ಳವನಂತೆ ಮಾತಾಡಿದನು, ಮಾನವ ಕುಲವನ್ನು ಆಶೀರ್ವದಿಸಲು ತನಗಿರುವ ಅಧಿಕಾರದ ಕುರಿತು ಅರಿತವನಾಗಿದ್ದನು, ಮತ್ತು ಸೈತಾನನ ಬಂಧನದಲ್ಲಿ ಇದ್ದವರನ್ನು ವಿಮೋಚಿಸಿದನು, ತನ್ನ

ಉಪಸ್ಥಿತಿಯಲ್ಲಿ ಲೋಕಕ್ಕೆ ಪರಿಪೂರ್ಣ ಸಂತೋಷವನ್ನು ತರುವವನಾಗಿದ್ದಾನೆ ಎಂದು ಅರಿತಿದ್ದನು. ಆತನು ದಬ್ಬಾಳಿಕೆ ಮತ್ತು ಕಷ್ಟಾನುಭವಕ್ಕೆ ಒಳಗಾದ ಮಾನವ ಕುಲದ ಸದಸ್ಯರಾದ ಪ್ರತಿಯೊಬ್ಬರಿಗೆ ಸಹಾಯ ಮಾಡಲು ತವಕ ಪಡುತ್ತಿದ್ದನು ಮತ್ತು ಖಂಡಿಸುವದಲ್ಲ, ಆಶೀರ್ವದಿಸುವದು ಆತನ ವಿಶೇಷ ಅಧಿಕಾರ ಎಂಬುದನ್ನು ತೋರಿಸಿದನು.

(6) ದೇವರ ಮಕ್ಕಳು ದೇವರ ಹಸ್ತದಿಂದ ಏನನ್ನು ಅಪೇಕ್ಷಿಸಬೇಕು ಮತ್ತು ಅವಲಂಬಿಸಬೇಕು ಮತ್ತು ಅದು ಪ್ರೀತಿಯ ಸಾಕ್ಷಿಯಾಗಿರಬೇಕು?

ಎಲ್ಲಾ ಜೀವಿಗಳ ಕಣ್ಣುಗಳು ನಿನ್ನನ್ನೇ ನೋಡುತ್ತವೆ; ನೀನು ಅವುಗಳಿಗೆ ಹೊತ್ತುಹೊತ್ತಿಗೆ ಆಹಾರ ಕೊಡುತ್ತೀ; ನೀನು ಕೈದೆರೆದು ಎಲ್ಲಾ ಜೀವಿಗಳ ಇಷ್ಟವನ್ನು ನೆರವೇರಿಸುತ್ತೀ (ಕೀರ್ತನೆ 145:15-16).

“ದೇವರು ಪ್ರೀತಿ ಸ್ವರೂಪಿಯಾಗಿದ್ದಾನೆ” ಇದು ಪ್ರತಿಯೊಂದು ಅರಳುವ ಮೊಗ್ಗಿನ ಮೇಲೆ ಚಿಗುರುತ್ತಿರುವ ಪ್ರತಿಯೊಂದು ಹುಲ್ಲಿನ ಗರಿಯ ಮೇಲೆ ಬರೆದಿದೆ. ಸುಂದರವಾದ ಪಕ್ಷಿಗಳು ತಮ್ಮ ಸಂತೋಷದ ಹಾಡಿನ ಮೂಲಕ ಗಾಳಿಯಲ್ಲಿ ಸ್ವರವನ್ನು ಹರಡುತ್ತಿವೆ. ಸೂಕ್ಷ್ಮವಾಗಿರುವ ಬಣ್ಣದ ಹೂಗಳು

ತಮ್ಮ ಪರಿಪೂರ್ಣತೆಯ ವಾತಾವರಣದಲ್ಲಿ ಪರಿಮಳವನ್ನು ತುಂಬುತ್ತಿವೆ, ಅರಣ್ಯದಲ್ಲಿರುವ ದೊಡ್ಡ ಮರಗಳು ತಮ್ಮ ಸಮೃದ್ಧಿಯಾದ ಜೀವದಿಂದ ತುಂಬಿರುವ ಹಸಿರು ಎಲೆಗಳಿಂದ ಇವೆಲ್ಲವೂ ನಮ್ಮ ದೇವರ ತಂದೆಯಂತ ಮೃದುವಾದ ಪೋಷಣೆಯನ್ನು ಮತ್ತು ಆತನಿಗೆ ತನ್ನ ಮಕ್ಕಳನ್ನು ಸಂತೋಷದಲ್ಲಿ ಇರಿಸಬೇಕೆಂಬ ಬಯಕೆಯನ್ನು ಸಾಕ್ಷೀಕರಿಸುತ್ತಿವೆ.

ಕಾಲಬದ್ಧವಾದ ಮತ್ತು ಆತ್ಮೀಕವಾದ, ರಕ್ಷಣೆಯ ಆಶೀರ್ವಾದ, ಇವೆಲ್ಲವೂ ಈಡೀ ಮಾನಕುಲಕ್ಕಾಗಿ. ಅನೇಕರು ದೇವರನ್ನು ದೂರುತ್ತಾರೆ ಯಾಕಂದರೆ ಲೋಕವು ಬಯಕೆ ಮತ್ತು ಕಷ್ಟಾನುಭವಗಳಿಂದ ತುಂಬಿದೆ; ಆದರೆ ದೇವರು ಎಂದಿಗೂ ಈ ಸಂಕಟ ಇರಬೇಕೆಂದು ಇಚ್ಛಿಸಲಿಲ್ಲ. ಅವನು ಒಬ್ಬ ಮನುಷ್ಯನು ಸಮೃದ್ಧಿಯಾಗಿ ಜೀವಿತದ ಸುಖಾನುಭೋ ಗಗಳನ್ನು ಹೊಂದಲಿ, ಅದೇ ಸಮಯದಲ್ಲಿ ಇತರ ಮಕ್ಕಳು ರೊಟ್ಟಿಗಾಗಿ ಕೂಗಿಕೊಳ್ಳಲಿ ಎಂದು ಅಪೇಕ್ಷಿಸಲಿಲ್ಲ. ದೇವರು ದಯಾಳುವಾದ ದೇವರಾಗಿದ್ದಾನೆ. ಆತನು ಎಲ್ಲರ ಬಯಕೆಗಳಿಗಾಗಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದ್ದಾನೆ ಮತ್ತು ತಾನು ಯಾರಿಗೆ ತನ್ನ ವಸ್ತುಗಳನ್ನು ಒಪ್ಪಿಸಿದ್ದಾನೋ ಅಂಥ ತನ್ನ ಪ್ರತಿನಿಧಿಗಳ ಮೂಲಕ

ಆತನು ತನ್ನ ಎಲ್ಲಾ ಜೀವಿಗಳ ಅಗತ್ಯತೆಗಳನ್ನು ಒದಗಿಸುವಂತೆ ರಚಿಸಿದ್ದಾನೆ.

(7) ಆತನ ಮಹಾ ಪ್ರೀತಿಯಿಂದಾಗಿ ಮತ್ತು ಸಂರಕ್ಷಣೆ ಮತ್ತು ಒದಗಿಸುವಿಕೆಯ ವಾಗ್ದಾನದಿಂದಾಗಿ, ನಮ್ಮ ಭವಿಷ್ಯತ್ತಿನ ಕುರಿತು ದೇವರು ನಮಗೆ ಯಾವ ಎರಡು ಸಂಗತಿಗಳನ್ನು ಮಾಡಬೇಕೆಂದು ಹೇಳಿದ್ದಾನೆ?

ನೀವು ಮೊದಲು ದೇವರ ರಾಜ್ಯಕ್ಕಾಗಿಯೂ ನೀತಿಗಾಗಿಯೂ ತವಕ ಪಡಿರಿ. ಇವುಗಳ ಕೂಡ ಅವೆಲ್ಲವೂ ನಿಮಗೆ ದೊರಕುವವು. ಆದದರಿಂದ ನಾಳಿನ ವಿಷಯವಾಗಿ ಚಿಂತೆ ಮಾಡಬೇಡಿರಿ; ನಾಳಿನ ದಿನವು ತನ್ನದನ್ನು ತಾನೇ ಚಿಂತಿಸಿಕೊಳ್ಳುವದು ಆ ಹೊತ್ತಿನ ಕಾಟ ಆ ಹೊತ್ತಿಗೆ ಸಾಕು. (ಮತ್ತಾಯ 6:33-34).

ನಾವು ಭವಿಷ್ಯತ್ತನ್ನು ನೋಡಲು ಸಮರ್ಥರಲ್ಲ, ಅದು ಅನೇಕ ಸಾರಿ ನಮಗೆ ಅಸಮಾಧಾನ ಮತ್ತು ಅಸಂತೋಷಕ್ಕೆ ಕಾರಣವಾಗುತ್ತದೆ. ದೇವರು ಪ್ರೀತಿಯ ಕರುಣೆಗೆ ಒಂದು ಶ್ರೇಷ್ಠ ಉದಾಹರಣೆ ಎಂದರೆ ಆತನು ಮರುದಿನದ ಘಟನೆಗಳನ್ನು ನಮಗೆ ಮರೆಮಾಡುತ್ತಾನೆ. ನಾಳೆಯ ಕುರಿತು ನಮಗಿರುವ ಅಜ್ಞಾನ ನಮ್ಮನ್ನು ಇಂದು ಹೆಚ್ಚು ಎಚ್ಚರಿಕೆಯಿಂದ ಮತ್ತು

ಆಸಕ್ತಿಯಿಂದ ಇರುವಂತೆ ಮಾಡುತ್ತದೆ. ನಮ್ಮ ಮುಂದೆ ಏನಿದೆ ಎಂದು ನಾವು ನೋಡಲಾರೆವು. ನಮ್ಮ ಉತ್ತಮವಾದ ಯೋಜನೆಗಳು ಕೆಲವೊಮ್ಮೆ ಮೂರ್ಖತನ ಮತ್ತು ತಪ್ಪಾದ ಯೋಜನೆಗಳಾಗಿರುತ್ತವೆ. "ಒಂದುವೇಳೆ ನಾವು ಭವಿಷ್ಯವನ್ನು ತಿಳಿದಿದ್ದಲ್ಲಿ" ಎಂದು ನಾವು ಯೋಚಿಸುತ್ತೇವೆ. ಆದರೆ ದೇವರು ತನ್ನ ಮಕ್ಕಳು ತನ್ನ ಮೇಲೆ ವಿಶ್ವಾಸವನ್ನು ಇಡಬೇಕೆಂದು ಮತ್ತು ಆತನು ಎಲ್ಲಿಗೆ ನಡೆಸುತ್ತಾನೋ ಅಲ್ಲಿಗೆ ಹೋಗಲು ಸಿದ್ಧರಾಗಿರಬೇಕೆಂದು ಬಯಸುತ್ತಾನೆ.

ಮಧ್ಯಾಕಾಶದಲ್ಲಿ ನಮ್ಮ ಕರ್ತನು ಯಾವಾಗ ಪ್ರಕಟವಾಗುತ್ತಾನೋ ಅದರ ನಿಖರವಾದ ಸಮಯ ನಮಗೆ ತಿಳಿದಿಲ್ಲ ಆದರೆ ನಮ್ಮ ಒಂದೇ ಸುರಕ್ಷಿತತೆ ಎಂದರೆ ನಾವು ಯಾವಾಗಲೂ ಸಿದ್ಧರಾಗಿರಬೇಕು. ವೀಕ್ಷಿಸುತ್ತಾ ಮತ್ತು ಕಾಯುತ್ತಾ ನಮ್ಮ ಸ್ಥಾನದಲ್ಲಿ ಇರಬೇಕು. ನಮ್ಮ ಮುಂದೆ ಒಂದು ವರ್ಷ ಇರಬಹುದು ಅಥವಾ ಐದು ಅಥವಾ ಹತ್ತು ನಾವು ನಮ್ಮ ವಿಶ್ವಾಸಕ್ಕೆ ಇಂದು ನಂಬಿಗಸ್ತರಾಗಿರಬೇಕು. ನಾವು ಪ್ರತಿನಿತ್ಯದ ಕರ್ತವ್ಯಗಳನ್ನು ನಂಬಿಗಸ್ತಿಕೆಯಿಂದ ಅದು ನಮ್ಮ ಕೊನೆಯ ದಿನವಾಗಿದೆ ಎಂಬಂತೆ ಮಾಡುತ್ತಿರಬೇಕು.

(8) ದೇವರು ತನ್ನ ವಿಶೇಷ ಗುಣಲಕ್ಷಣದ ಯಾವ ಎರಡನ್ನು ನಮ್ಮ ನಾಶನವನ್ನು ತಡೆಯುವದಕ್ಕಾಗಿ ಪ್ರತಿದಿನ ಬೆಳಗಿನ ಜಾವದಲ್ಲಿ ನವೀಕರಿಸುತ್ತಾನೆ?

ನಾವು ಉಳಿದಿರುವದು ಯೆಹೋವನ ಕರುಣೆಯೇ ಆತನ ಕೃಪಾವರಗಳು ನಿಂತುಹೋಗವು. ದಿನದಿನವು ಹೊಸಹೊಸದಾಗಿ ಒದಗುತ್ತವೆ; ನಿನ್ನ ಸತ್ಯಸಂಧತೆಯು ದೊಡ್ಡದು (ಪ್ರಲಾಪಗಳು 3:22-23)

ನಾವು ಎಷ್ಟು ಕೃತಜ್ಞರಾಗಿರಬೇಕು ಎಂದು ಪರಿಗಣಿಸುತ್ತೇವೆ? ದಿನದಿನವು ಕರ್ತನ ಕೃಪೆ ಹೊಸ ಹೊಸದಾಗಿ ದೊರೆಯುತ್ತದೆ ಮತ್ತು ಆತನ ಕೃಪಾವರಗಳು ನಿಂತುಹೋಗುವದಿಲ್ಲ ಎಂಬುದನ್ನು ನಾವು ಜ್ಞಾಪಕದಲ್ಲಿ ಇಟ್ಟುಕೊಳ್ಳುತ್ತೇವೋ? ಆತನ ಮೇಲಿನ ನಮ್ಮ ಅವಲಂಬನೆಯನ್ನು ನಾವು ಒಪ್ಪಿಕೊಳ್ಳುತ್ತೇವೋ ಮತ್ತು ಆತನ ಉಪಕಾರಗಳಿಗೆ ಕೃತಜ್ಞತೆಯನ್ನು ವ್ಯಕ್ತಪಡಿಸಿದ್ದೇವೋ? ಇದಕ್ಕೆ ವ್ಯತ್ಯಾಸವಾಗಿ; ನಾವು ಸಹ ಅನೇಕಾವರ್ತಿ "ಪ್ರತಿಯೊಂದು ಒಳ್ಳೇಯ ಮತ್ತು ಪರಿಪೂರ್ಣವಾದ ವರಗಳು ಮೇಲಿಂದ ದೊರೆಯುತ್ತವೆ ಮತ್ತು ಬೆಳಕಿನ ತಂದೆಯಾದಾತನಿಂದ ಇಳಿದು ಬರುತ್ತವೆ" ಎಂಬುದನ್ನು ಮರೆತುಬಿಡುತ್ತೇವೆ.

ಎಷ್ಟೋ ಸಾರಿ ನಾವು ಆರೋಗ್ಯದಿಂದ ಇರುವಾಗ ಆತನ ಅದ್ಭುತವಾದ ಕೃಪೆಗಳು ದಿನೇ ದಿನೇ ವರ್ಷದಿಂದ ವರ್ಷಕ್ಕೆ ಮುಂದುವರೆದಿರುವದನ್ನು ಮರೆತುಬಿಡುತ್ತೇವೆ. ಅವರು ಆತನ ಎಲ್ಲಾ ಉಪಕಾರಗಳಿಗೆ ಉಪಕಾರ ಸ್ತುತಿಯನ್ನು ಸಲ್ಲಿಸುವದಿಲ್ಲ. ಆದರೆ ಅನಾರೋಗ್ಯ ಬರುವಾಗ, ದೇವರನ್ನು ನೆನಪುಮಾಡಿಕೊಳ್ಳುತ್ತೇವೆ.

ಸ್ವಸ್ಥತೆಯನ್ನು ಹೊಂದುವ ಬಲವಾದ ಹಂಬಲ ಆಸಕ್ತಿಯಿಂದ ಪ್ರಾರ್ಥಿಸುವತ್ತ ನಡೆಸುತ್ತದೆ, ಇದು ಸರಿಯಾದದ್ದೇ. ದೇವರು ಆರೋಗ್ಯದಲ್ಲಿರುವಾಗ ಇದ್ದಂತೆ ಅನಾರೋಗ್ಯದಲ್ಲಿ ನಮ್ಮ ಆಶ್ರಯವಾಗಿದ್ದಾನೆ. ಆದರೆ ಅನೇಕರು ತಮ್ಮ ವಿಷಯವನ್ನು ಆತನೊಂದಿಗೆ ಬಿಡುವದಿಲ್ಲ; ಅವರು ತಮ್ಮ ಕುರಿತು ತಾವೇ ಚಿಂತೆ ಮಾಡುವದರ ಮೂಲಕ ಬಲಹೀನತೆ ಮತ್ತು ರೋಗಕ್ಕೆ ನಡೆಸಿಕೊಳ್ಳುತ್ತಾರೆ. ಅವರು ಅಸಮಾಧಾನಪಡುವದನ್ನು ನಿಲ್ಲಿಸಿ ಖಿನ್ನತೆ ಮತ್ತು ಉದಾಸೀನತೆಯಿಂದ ಮೇಲಕ್ಕೆ ಏಳುವುದಾದರೆ, ಅವರ ಸ್ವಸ್ಥತೆ ಹೆಚ್ಚು ಖಚಿತವಾಗುತ್ತದೆ. ಅವರು ಕೃತಜ್ಞತೆಯಿಂದ ಅವರು ಎಷ್ಟು ಕಾಲ ಆರೋಗ್ಯದ ಆಶೀರ್ವಾದವನ್ನು ಹೊಂದಿಕೊಂಡಿದ್ದರು ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಂಡು ; ಮತ್ತು ಈ ಅಮೂಲ್ಯವಾದ ಸಂತೋಷವನ್ನು ಅವರು ಉಜ್ಜೀವನಪಡಿಸಿ

ಕೊಳ್ಳಬಹುದು, ಅವರು ತಾವು ತಮ್ಮ ಸೃಷ್ಟಿಕರ್ತನೊಂದಿಗೆ ನವೀಕರಿಸಲ್ಪಟ್ಟ ಹಂಗಿನಲ್ಲಿ ಇದ್ದೇವೆ ಎಂಬುದನ್ನು ಮರೆಯಬಾರದು.

ಹತ್ತು ಜನ ಕುಷ್ಠರೋಗಿಗಳು ಸ್ವಸ್ಥರಾದಾಗ, ಒಬ್ಬನು ಮಾತ್ರ ಯೇಸುವನ್ನು ಹುಡುಕಿಕೊಂಡು ಹಿಂದಕ್ಕೆ ಬಂದನು ಮತ್ತು ಆತನಿಗೆ ಮಹಿಮೆಯನ್ನು ಸಲ್ಲಿಸಿದನು. ನಾವು ಯೋಚಿಸದೇ ಇರುವ ಒಂಬತ್ತು ಮಂದಿಯಂತೆ ಇರುವದು ಬೇಡ ಅವರ ಹೃದಯಗಳನ್ನು ದೇವರ ಕರುಣೆಯು ಸ್ಪರ್ಶಿಸಲಿಲ್ಲ.

(9) ಪೌಲನ ಎಲ್ಲವನ್ನೂ ಒಳಗೊಂಡ ಪಟ್ಟಿಯಲ್ಲಿ ನಮ್ಮನ್ನು ದೇವರ ಪ್ರೀತಿಯಿಂದ ಅಗಲಿಸಲಾರದ ಹತ್ತು ಸಂಗತಿಗಳು ಯಾವವು?

ಹೇಗಂದರೆ ಮರಣವಾಗಲಿ ಜೀವವಾಗಲಿ, ದೇವದೂತರಾಗಲಿ ದುರಾತ್ಮಗಳಾಗಲಿ ಈಗಿನ ಸಂಗತಿಗಳಾಗಲಿ ಮುಂದಿನ ಸಂಗತಿಗಳಾಗಲಿ ಮಹತ್ವಗಳಾಗಲಿ ಮೇಲಣ ಲೋಕವಾಗಲಿ ಕೆಳಗಣ ಲೋಕವಾಗಲಿ ಬೇರೆ ಯಾವ ಸೃಷ್ಟಿಯಾಗಲಿ ನಮ್ಮನ್ನು ನಮ್ಮ ಕರ್ತನಾದ ಯೇಸು ಕ್ರಿಸ್ತನಲ್ಲಿ ತೋರಿಬಂದ ದೇವರ ಪ್ರೀತಿಯಿಂದ ಅಗಲಿಸಲಾರವೆಂದು ನನಗೆ ನಿಶ್ಚಯ ಉಂಟು (ರೋಮಾ 8:38-39).

ಜೀವಿಸುವ ಕ್ರಿಸ್ತನ ಸಂಪರ್ಕದಲ್ಲಿ ಜೀವಿಸಿರಿ ಮತ್ತು ಆತನು ತನ್ನ ಹಸ್ತದ ಮೂಲಕ ನಿಮ್ಮನ್ನು ಗಟ್ಟಿಯಾಗಿ ಹಿಡಿದುಕೊಳ್ಳುವನು ಅದು ನಿಮ್ಮನ್ನು ಎಂದಿಗೂ ಬಿಡುವದಿಲ್ಲ. ದೇವರಿಗೆ ನಮ್ಮ ಮೇಲೆ ಇರುವ ಪ್ರೀತಿಯನ್ನು ತಿಳಿದುಕೊಳ್ಳಿರಿ ಮತ್ತು ನಂಬಿರಿ, ಮತ್ತು ನೀವು ಸುರಕ್ಷಿತರಾಗಿರುವಿರಿ; ಆ ಪ್ರೀತಿ ಅದು ಸೈತಾನ ಎಲ್ಲಾ ಭ್ರಮೆ ಮತ್ತು ದಾಳಿಗಳಿಗೆ ಅಭೇದ್ಯವಾದ ಆಶ್ರಯದುರ್ಗವಾಗಿದೆ. "ಯೆಹೋವನ ನಾಮವು ಬಲವಾದ ಬುರುಜು; ಶಿಷ್ಟನು ಅದರೊಳಕ್ಕೆ ಓಡಿಹೋಗಿ ಭದ್ರವಾಗಿರುವನು. ಜ್ಞಾನೋಕ್ತಿ 18: 10,

ಪೌಲನು ದೇವರ ಪ್ರೀತಿಯಿಂದ ನಮ್ಮನ್ನು ಅಗಲಿಸಲಾರದ ಹತ್ತು ಸಂಗತಿಗಳನ್ನು ಪಟ್ಟಿ ಮಾಡಿದ್ದಾನೆ. ಹತ್ತನೆಯದು ಯಾವುದನ್ನಾದರೂ ಬಿಟ್ಟಿದ್ದಲ್ಲಿ ಅದನ್ನು ಸೇರಿಸಿಕೊಳ್ಳುವಷ್ಟು ವಿಶಾಲವಾಗಿದೆ. ಎಲ್ಲಾ ಪದಗಳನ್ನು ಬಹುಶಃ ಅವುಗಳ ಅತೀ ಸಾಮಾನ್ಯ ಅರ್ಥದಲ್ಲಿ ತೆಗೆದುಕೊಳ್ಳಬೇಕು. ಅವುಗಳ ಅಖಚಿತತೆ ಪೌಲನ ಅಂಶವಾದ ಬೇರೆ ಯಾವುದೇ ಆಗಲಿ ಯಾವ ಸೃಷ್ಟಿಯಾಗಲಿ ಕ್ರೈಸ್ತನು ಮತ್ತು ಅವನ ಪ್ರೀತಿಯ ರಕ್ಷಕನಿಂದ ಅವನನ್ನು ಪ್ರತ್ಯೇಕಿಸಲಾರದು ಎಂದು ಒತ್ತುನೀಡುತ್ತದೆ.

(10) ಅಂತಿಮ ವರವಾದ ಆತನ ಮಗನನ್ನು ನೀಡಿರುವದು , ಒಂದುವೇಳೆ ನಾವು ದೇವರ ಚಿತ್ತಕ್ಕೆ ಅನುಗುಣವಾಗಿ ವಿಶ್ವಾಸದಿಂದ ಬೇಡಿಕೊಂಡರೆ ನಾವು ಯಾವ ವಾಗ್ದಾನವನ್ನು ಹೊಂದಿ ಕೊಳ್ಳಬಹುದು?

ಸ್ವಂತ ಮಗನನ್ನು ಉಳಿಸಿಕೊಳ್ಳದೆ ಆತನನ್ನು ನಮ್ಮೆಲ್ಲರಿಗೋಸ್ಕರ ಒಪ್ಪಿಸಿಕೊಟ್ಟನಲ್ಲಾ; ಮಗನನ್ನು ಕೊಟ್ಟಮೇಲೆ ಸಮಸ್ತವನ್ನೂ ನಮಗೆ ದಯಪಾಲಿಸದೇ ಇರುವನೇ? (ರೋಮ 8:32)

ಕ್ರಿಸ್ತನು ಮಾಡಿದ ಕಾರ್ಯಗಳಿಂದಾಗಿ ಅನಂತ ಬಲದ ಸಿಂಹಾಸನಕ್ಕೆ ನಮಗೆ ಮಾರ್ಗವಾಗಿದೆ.. "ತನ್ನ ಸ್ವಂತ ಮಗನನ್ನು ಉಳಿಸಿಕೊಳ್ಳದೇ, ಆತನನ್ನು ನಮ್ಮೆಲ್ಲರಿಗಾಗಿ ಕಳುಹಿಸಿಕೊಟ್ಟಾತನು, ಆತನೊಂದಿಗೆ ಎಲ್ಲವನ್ನೂ ಉಚಿತವಾಗಿ ನಮಗೆ ಕೊಡಲಾರನೋ? ರೋಮ 8:32. ತಂದೆಯು ತನ್ನ ಆತ್ಮವನ್ನು ತನ್ನ ಮಗನಿಗೆ ಯಾವುದೇ ಮಿತಿಯಿಲ್ಲದೇ ನೀಡಿದ್ದಾನೆ ನಾವು ಸಹ ಆ ಪರಿಪೂರ್ಣತೆಯಲ್ಲಿ ಪಾಲನ್ನು ತೆಗೆದುಕೊಳ್ಳಬಹುದು. ಯೇಸು ಹೇಳಿದ್ದು"ಹಾಗಾದರೆ ಕೆಟ್ಟವರಾದ ನೀವು ನಿಮ್ಮ ಮಕ್ಕಳಿಗೆ ಒಳ್ಳೇ ಪದಾರ್ಥಗಳನ್ನು ಕೊಡಬಲ್ಲವರಾದರೆ ಪರಲೋಕದಲ್ಲಿರುವ ನಿಮ್ಮ ತಂದೆಯು ತನ್ನನ್ನು ಬೇಡಿಕೊಳ್ಳುವವರಿಗೆ ಎಷ್ಟೋ

ಹೆಚ್ಚಾಗಿ ಪವಿತ್ರಾತ್ಮನ ವರವನ್ನು ಕೊಡುವವನಲ್ಲವೇ?" ಲೂಕ 11: 13"ನೀವು ನನ್ನ ಹೆಸರಿನಲ್ಲಿ ಏನೇನು ಬಾಡಿಕೊಳ್ಳುವಿರೋ, ಅದನ್ನು ನೆರವೇರಿಸುವೆನು" "ಬೇಡಿಕೊಳ್ಳಿರಿ, ನಿಮಗೆ ಸಿಕ್ಕುವದು, ಆಗ ನಿಮ್ಮ ಆನಂದವು ಪರಿಪೂರ್ಣವಾಗುವದು." ಯೋಹಾನ 14:14; 16:24;

(11) ಈ ವಚನದಲ್ಲಿ ಎಂಥಹ ಆಶ್ಚರ್ಯಕರವಾದ ಸೌಭಾಗ್ಯ ವರ್ಣಿಸಲಾಗಿದೆ. ದೇವರು ಆತನನ್ನು ತಿಳಿದುಕೊಳ್ಳಲು ಮತ್ತು ಸ್ವೀಕರಿಸಿ ಕೊಳ್ಳಲು ಆಯ್ಕೆ ಮಾಡಿಕೊಂಡವರ ಮೇಲೆ ಇದನ್ನು ಸುರಿಸಿದ್ದಾನೋ?

ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳಿದು ಕೊಳ್ಳುವದಿಲ್ಲ, ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ (1ಯೋಹಾನ 3:1).

ನಮ್ಮ ವಿಮೋಚನೆಗೆ ನೀಡಿದ ಬೆಲೆ, ತನ್ನ ಮಗನನ್ನು ನಮಗೋಸ್ಕರ ಸಾಯುವದಕ್ಕೆ ಪರಲೋಕದಲ್ಲಿರುವ ನಮ್ಮ ತಂದೆಯು ನೀಡಿದ

ಅಪರಿಮಿತವಾದ ತ್ಯಾಗ. ಕ್ರಿಸ್ತನ ಮೂಲಕ, ನಾವು ಏನಾಗುತ್ತೇವೆ ಎಂಬ ಉನ್ನತವಾದ ಕಲ್ಪನೆಯನ್ನು ನೀಡಬೇಕು. ದೈವೀಪ್ರೇರೆಪಣೆಯನ್ನು ಹೊಂದಿದ ಅಪೋಸ್ತಲನಾದ ಯೋಹಾನನು ನಶಿಸಿಹೋಗುತ್ತಿರುವ ಜನಾಂಗದೆಡೆಗೆ  ತಂದೆಯ ಪ್ರೀತಿಯ ಎತ್ತರ ಆಳ, ಅಗಲವನ್ನು ದೃಷ್ಟಿಸಿದ್ದನು ಆತನು ಆರಾಧನೆ ಮತ್ತು ಗೌರವದಿಂದ ತುಂಬಿದನು ಮತ್ತು ಆತನ ಪ್ರೀತಿಯ ಶ್ರೇಷ್ಠತೆಯನ್ನು ಮತ್ತು ಮೃದುತ್ವವನ್ನು ವ್ಯಕ್ತಪಡಿಸಲು ಸರಿಯಾದ ಭಾಷೆಯನ್ನು ಕಂಡುಕೊಳ್ಳುವದರಲ್ಲಿ ವಿಫಲನಾದನು, ಆತನನ್ನು ದೃಷ್ಟಿಸಿ ನೋಡುವದಕ್ಕೆ ಲೋಕಕ್ಕೆ ಕರೆಕೊಟ್ಟನು. "ನಾವು ದೇವರ ಮಕ್ಕಳೆಂದು ಕರೆಯಲ್ಪಡುವಂತೆ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ 1ಯೋಹಾನ 3:1.

ಇದು ಮನುಷ್ಯನ ಮೇಲೆ ಎಂಥ ಬೆಲೆಯನ್ನು ಹೇರುತ್ತದೆ! ಪಾಪಿಯಾಗಿ ಮಾಡಿಕೊಳ್ಳುವದರ ಮೂಲಕ ಮನುಷ್ಯಕುಮಾರನು ಸೈತಾನನಿಗೆ ಬಲಿಯಾದನು. ಕ್ರಿಸ್ತನ ಪ್ರಾಯಶ್ಚಿತ್ತ ಯಜ್ಞದಲ್ಲಿ ನಂಬಿಕೆಯನ್ನು ಇಡುವದರ ಮೂಲಕ ಆದಾಮನ ಮಕ್ಕಳು ದೇವರ ಮಕ್ಕಳಾಗಬಹುದು. ಮಾನವ ಸ್ವರೂಪವನ್ನು ಕಲ್ಪಿಸಿಕೊಳ್ಳುವದರ ಮೂಲಕ ಕ್ರಿಸ್ತನು

ಮಾನವೀಯತೆಯನ್ನು ಮೇಲಕ್ಕೆ ಎತ್ತರದಲ್ಲಿಟ್ಟನು. ಬಿದ್ದು ಹೋದ ಮನುಷ್ಯನು ಕ್ರಿಸ್ತನೊಂದಿಗೆ ಸಂಬಂಧದಿಂದಾಗಿ ಅವರು “ದೇವರ ಮಕ್ಕಳು” ಎಂಬ ಹೆಸರಿಗೆ ಬಹುಶಃ ಅರ್ಹರಾಗುತ್ತಾರೆ. ಇಂಥ ಪ್ರೀತಿಗೆ ಸಮಾನವಾದದ್ದು ಬೇರೊಂದಿಲ್ಲ. ರಾಜಾಧಿರಾಜನ ಮಕ್ಕಳು! ಅಮೂಲ್ಯವಾದ ವಾಗ್ದಾನ! ಅಗಾದವಾದ ಧ್ಯಾನದ ಮುಖ್ಯ ವಿಷಯ! ತನ್ನನ್ನು ಪ್ರೀತಿಸದೇ ಇರುವ ಲೋಕದ ಮೇಲೆ ದೇವರಿಗೆ ಇರುವ ಅಸಾಮಾನ್ಯವಾದ ಪ್ರೀತಿ! ವಿಚಾರವು ಆತ್ಮನ ಮೇಲೆ ವಶಪಡಿಸಿಕೊಳ್ಳ ಬಹುದಾದ ಬಲ ಮತ್ತು ಅದು ಮನಸ್ಸನ್ನು ದೇವರ ಚಿತ್ತಕ್ಕೆ ಅಧೀನಪಡಿಸುತ್ತದೆ.

ನಾವು ಕ್ರೂಜೆಯ ಬೆಳಕಿನಲ್ಲಿ ಹೆಚ್ಚಾಗಿ ದೈವೀಕ ಗುಣಲಕ್ಷಣವನ್ನು ಅಧ್ಯಯನ ಮಾಡುವಾಗ ನಾವು ಹೆಚ್ಚಾಗಿ ಕೃಪೆ, ಸಾತ್ವಿಕತ್ವ ಮತ್ತು ಕ್ಷಮಾಪಣೆ ಸಮಾನತೆ ಮತ್ತು ನ್ಯಾಯದೊಂದಿಗೆ ಬೆರೆತಿರುವದನ್ನು ನಾವು ಕಾಣುತ್ತೇವೆ, ಮತ್ತು ನಾವು ಹೆಚ್ಚು ಸ್ಪಷ್ಟವಾಗಿ ಪ್ರೀತಿಯ ಅಸಂಖ್ಯಾತವಾದ ಸಾಕ್ಷಿಗಳನ್ನು ಅರಿತುಕೊಳ್ಳುತ್ತೇವೆ. ಅದು ಅನಂತವಾದ ಮತ್ತು ಸಾತ್ವಿಕವಾದ ಕರುಣೆ ಹಟಮಾರಿಯಾದ ತನ್ನ

ಮಗುವಿಗೆ ತಾಯಿ ಅನುಕಂಪವನ್ನು ತೋರಿಸಲು ಹಂಬಲಿಸುವದನ್ನು ಮೀರಿಸುವಂಥದ್ದಾಗಿದೆ. ಎಣಿಸಲಶಕ್ಯವಾದ ಆಶೀರ್ವಾದಗಳಿಗಾಗಿ ನಾನು ಕರ್ತನಿಗೆ ಕೃತಜ್ಞನಾಗಿದ್ದೇನೆ ಇವೆಲ್ಲವುಗಳು ಆತನ ಹಸ್ತದಿಂದ ನನ್ನ ಮೇಲೆ ಆತನಿಗಿರುವ ಶ್ರೇಷ್ಠವಾದ ಪ್ರೀತಿಯ ಸಾಕ್ಷಿಯ ರೂಪದಲ್ಲಿ ಬರುತ್ತವೆ!

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ನಾನು ನಂಬಿಕೆ ಮತ್ತು ಜ್ಞಾನಕ್ಕಾಗಿ ಪ್ರಾರ್ಥಿಸುತ್ತೇನೆ ಇದರಿಂದಾಗಿ ನಾನು ಮೊದಲು ದೇವರ ರಾಜ್ಯಕ್ಕಾಗಿ ತವಕಪಡುವಂತೆ ಮತ್ತು ನಂತರ ನನ್ನ ಅಗತ್ಯತೆಗಳನ್ನು ಒದಗಿಸಲು ಆತನನ್ನು ಅವಲಂಬಿಸುವಂತಾಗುತ್ತದೆ.

ದುಂಡು ಸುತ್ತಿರಿ:  ಹೌದು   ನಿರ್ಧರಿಸಿಲ್ಲ

ಆಕಾಶದಲ್ಲಿ ಮತ್ತು ಭೂಮಿಯಲ್ಲಿ ಪ್ರಕಟವಾದ ದೇವರ ಪ್ರೀತಿಗೆ ಉತ್ತಮವಾದ ಪ್ರಶಂಶೆ ಈಗ ನನಗಿದೆ

ದುಂಡು ಸುತ್ತಿರಿ:  ಹೌದು  ನಿರ್ಧರಿಸಿಲ್ಲ

ನಮ್ಮನ್ನು ಸ್ವಸ್ಥಪಡಿಸಲು ಮತ್ತು ನನ್ನನ್ನು ನನ್ನ ಪಾಪದ ಬಂಧನದಿಂದ ಮತ್ತು ನನ್ನನ್ನು ನಾಶಮಾಡುವ ಅದರ ಪರಿಣಾಮದಿಂದ  ಸ್ವತಂತ್ರನನ್ನಾಗಿಸಲು

ಬಂದ ಯೇಸುವಿಗೆ ನಾನು ಕೃತಜ್ಞನಾಗಿದ್ದೇನೆ. ಆತನು ಬರುವವರೆಗೆ ಆತನ ಕಾರ್ಯವನ್ನು ಹೊತ್ತುಕೊಂಡು ಮುನ್ನಡೆಯುಲು ಆತನು ಉಪಯೋಗಿಸಬಹುದಾದ ಪಾತ್ರೆ ನಾನಾಗಲು ಬಯಸುತ್ತೇನೆ.

ದುಂಡು ಸುತ್ತಿರಿ:  ಹೌದು   ನಿರ್ಧರಿಸಿಲ್ಲ

ನಾನು ಆಶ್ಚರ್ಯಕರವಾದ ಕೃಪೆ, ಅನುಕಂಪ ಮತ್ತು ನನ್ನೆಡೆಗೆ ಕರ್ತನಿಗೆ ಇರುವ ನಂಬಿಗಸ್ತಿಕೆಯನ್ನು ಅದು ಪ್ರತಿ ದಿನವೂ ಹೊಸದಾಗುತ್ತದೆ ಮತ್ತು ಆತನ ಪ್ರೀತಿಯಿಂದ ಯಾವುದು ನನ್ನನ್ನು ಅಗಲಿಸಲಾರದು ಎಂದು ಅರಿತುಕೊಂಡು ಆತನ ಪ್ರೀತಿಯೊಂದಿಗೆ ನಾನು ಅತೀವ ಆನಂದಪಡುತ್ತೇನೆ,

ದುಂಡು ಸುತ್ತಿರಿ:  ಹೌದು   ನಿರ್ಧರಿಸಿಲ್ಲ

ನನ್ನನ್ನು ತನ್ನ ಮಗುವೆಂದು ಕರೆಯುವಲ್ಲಿ ದೇವರು ಪ್ರದರ್ಶಿಸಿದ ಶ್ರೇಷ್ಠವಾದ ಪ್ರೀತಿಯನ್ನು ನಾನು ದೃಷ್ಟಿಸುವಾಗ. ನಾನು ಆತನ ಆತ್ಮವು ನನ್ನೊಳಗೆ ನೆಲೆಸಬೇಕೆಂದು ಮತ್ತು ನಾನು ಆತನ ನಾಮಕ್ಕೆ ಮಹಿಮೆ ತರುವಂತಾಗಲಿ ಎಂದು ಪ್ರಾರ್ಥಿಸುತ್ತೇನೆ.

ದುಂಡು ಸುತ್ತಿರಿ:  ಹೌದು   ನಿರ್ಧರಿಸಿಲ್ಲ



## ಪಾಠ 3
## ತಪ್ಪಿಹೋದವರನ್ನು ಹುಡುಕುವದರಲ್ಲಿ ದೇವರ ಪ್ರೀತಿ

(1) ದೇವರ ಶ್ರೇಷ್ಟ ಪ್ರೀತಿ ಮತ್ತು ದತ್ತು ತೆಗೆದುಕೊಳ್ಳುವ ಆಸಕ್ತಿಯಿಂದಾಗಿ ನಾವು ಆತನನ್ನು ಪ್ರೀತಿಯಿಂದ ಏನೆಂದು ಕರೆಯಬಹುದು?

ನೀವು ತಿರುಗಿ ಭಯದಲ್ಲಿ ಬೀಳುವ ಹಾಗೆ ದಾಸನ ಭಾವವನ್ನು ಹೊಂದಿದವರಲ್ಲ, ಮಗನ ಭಾವವನ್ನು ಹೊಂದಿದ ವರಾಗಿದ್ದೀರಿ. ಈ ಭಾವದಿಂದಲೇ ನಾವು ದೇವರನ್ನು 'ಅಪ್ಪಾ ತಂದೆಯ" ಎಂದು ಕೂಗುತ್ತೇವೆ (ರೋಮಾ 8:15)

ಅನಂತನಾದ ದೇವರು, ಯೇಸುವಿಗೆ ಹೇಳಿದನು, ತಂದೆಯ ಹೆಸರಿನಲ್ಲಿ ಆತನನ್ನು ಸಂಧಿಸಲು ಇದನ್ನು ನಿನ್ನ ಸೌಭಾಗ್ಯವಾಗಿ ಮಾಡಿಕೋ. ಇದು ಸೂಚಿಸುವದೆಲ್ಲವನ್ನೂ ತಿಳಿದುಕೋ. ನಿನ್ನನ್ನು ಸೃಷ್ಟಿಸಿದಾತನು

ತಪ್ಪುಮಾಡಿದವನನ್ನು ಈ ರೀತಿ ಬೇಡಿಕೊಳ್ಳುವಂತೆ ತಪ್ಪುಮಾಡುವ ಮಗುವನ್ನು ಇಹ ಲೋಕದ ಯಾವ ತಂದೆಯು ಈ ರೀತಿಯಾಗಿ ಬೇಡಿಕೊಂಡಿಲ್ಲ. ಮಾನವನಾದ ಯಾವನೂ ಪಶ್ಚಾತ್ತಾಪಪಡದವನಿಗೆ ಇಂಥ ಮೃದುವಾದ ಆಮಂತ್ರಣವನ್ನು ನೀಡಿಲ್ಲ.

ದೇವರು ಪ್ರತಿಯೊಂದು ಮನೆಯಲ್ಲಿ ವಾಸಿಸುತ್ತಾನೆ; ಆತನು ಮಾತಾಡಿದ ಪ್ರತಿಯೊಂದು ಪದವನ್ನು ಆಲಿಸುತ್ತಾನೆ, ಮಾಡಿದ ಪ್ರತಿಯೊಂದು ಪ್ರಾರ್ಥನೆಯನ್ನು ಕೇಳುತ್ತಾನೆ, ಪ್ರತಿಯೊಂದು ಆತ್ಮದ ದುಃಖಗಳನ್ನು ಮತ್ತು ನಿರಾಶೆಗಳನ್ನು ರುಚಿನೋಡುತ್ತಾನೆ, ತಂದೆ, ತಾಯಿ, ಸಹೋದರಿ, ಸ್ನೇಹಿತ ಮತ್ತು ನೆರೆಹೊರೆಯವರಿಗೆ ನೀಡುವ ಉಪಚಾರವನ್ನು ಗೌರವಿಸುತ್ತಾನೆ. ಆತನು ನಮ್ಮ ಅವಶ್ಯಕತೆಗಳಿಗಾಗಿ ಚಿಂತಿಸುತ್ತಾನೆ ಮತ್ತು ಆತನ ಪ್ರೀತಿ ಮತ್ತು ಕರುಣೆ ಮತ್ತು ಕೃಪೆ ನಮ್ಮ ಅಗತ್ಯತೆಗಳನ್ನು ತೃಪ್ತಿಪಡಿಸಲು ನಿರಂತರವಾಗಿ ಹರಿದು ಬರುತ್ತವೆ. ಒಂದುವೇಳೆ ನೀವು ದೇವರನ್ನು ತಂದೆ ಎಂದು ಕರೆಯುವುದಾದರೆ  ನಾವು ಆತನ ಮಕ್ಕಳು ಎಂದು ನಾವೇ ಒಪ್ಪಿಕೊಳ್ಳುತ್ತೇವೆ, ಆತನ ಜ್ಞಾನದಿಂದ ಮಾರ್ಗದರ್ಶನ ಹೊಂದುವವರು ಮತ್ತು ಆತನು ಬದಲಾಗದವನು ಎಂದು

ತಿಳಿದು ಎಲ್ಲಾ ಸಂಗತಿಗಳಲ್ಲಿ ವಿಧೇಯರಾಗುತ್ತೀರಿ. ದೇವರ ಮಕ್ಕಳಾಗಿ ನಿಮ್ಮ ಜೀವಿತಕ್ಕೆ ಆತನ ಯೋಜನೆಯನ್ನು ಒಪ್ಪಿಕೊಳ್ಳುತ್ತೀರಿ, ನೀವು ಆತನ ಗೌರವವನ್ನು, ಆತನ ಗುಣಲಕ್ಷಣವನ್ನು, ಆತನ ಕುಟುಂಬವನ್ನು, ಆತನ ಕಾರ್ಯವನ್ನು ನಿಮ್ಮ ಅತ್ಯಂತ ದೊಡ್ಡ ಆಸಕ್ತಿಯ ವಿಷಯವಾಗಿ ಹಿಡಿದುಕೊಳ್ಳುತ್ತೀರಿ. ನಿಮ್ಮ ತಂದೆಯೊಂದಿಗೆ ನಿಮಗಿರುವ ಸಂಬಂಧ ಮತ್ತು ಆತನ ಕುಟುಂಬದ ಪ್ರತಿಯೊಂದು ಸದಸ್ಯರೊಂದಿಗೆ ಇರುವ ಸಂಬಂಧವನ್ನು ಗುರುತಿಸುವದು ನಿಮ್ಮ ಆನಂದವಾಗುತ್ತದೆ. ನೀವು ಎಷ್ಟೇ ದೀನರಾಗಿರಲು, ಆತನಿಗೆ ಮಹಿಮೆ ತರುವಂತ ಅಥವಾ ನಿಮ್ಮ ಆಪ್ತನ ಯೋಗಕ್ಷೇಮಕ್ಕಾಗಿ ಯಾವುದೇ ಕಾರ್ಯವನ್ನು ಮಾಡುವದರಲ್ಲಿ,ನೀವು ಸಂತೋಷಪಡುತ್ತೀರಿ.

(2) ತಂದೆಯಾದ ದೇವರು ಒಬ್ಬ ಪಾಪಿಯು ತಿರುಗಿಬೀಳುವದರಿಂದ ದೂರವಾಗಿ ಮತ್ತು ತನ್ನ ಪ್ರೀತಿಯೆಡೆಗೆ ತಿರುಗಿಕೊಳ್ಳುವಾಗ ದೇವರು ಯಾವ ನಾಲ್ಕು ಸಂಗತಿಗಳನ್ನು ಮಾಡುತ್ತಾನೆ?

ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ, ನಿನ್ನನ್ನು ರಕ್ಷಿಸುವನು; ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವನು; ತನ್ನ ಪ್ರೀತಿಯಲ್ಲಿ ಮುಣುಗಿ ಮೌನವಾಗಿರುವನು; ನಿನ್ನಲ್ಲಿ

ಆನಂದಿಸಿ ಹರ್ಷಧ್ವನಿಗೈಯುವನು ಎಂದು ಹೇಳೋಣವಾಗುವದು (ಚೆಫನ್ಯ 3:17).

ತಪ್ಪಿಹೋದವರನ್ನು ತಿರುಗಿಪಡೆದು ಕೊಳ್ಳುವಾಗ ಕುರುಬನಲ್ಲಿ ಕಂಡು ಬರುವ ದೊಡ್ಡ ಆನಂದವನ್ನು ನೀವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ಆತನು ತನ್ನ ನೆರೆಹೊರೆಯವರನ್ನು ಕರೆದು: "ಕಳೆದು ಹೋಗಿದ್ದ ಕುರಿ ಸಿಕ್ಕಿತು, ನನ್ನ ಕೂಡಾ ಸಂತೋಷಿಸಿರಿ." ಎಂದು ಹೇಳುವನು. ಮತ್ತು ಈ ಸಂತೋಷವು ಪರಲೋಕದಲ್ಲೆಲ್ಲಾ ಪ್ರತಿಧ್ವನಿಸುವದು, ತಂದೆಯು ತಾನೇ ಕಾಪಾಡಿದ ಒಂದಕ್ಕಾಗಿ ಸಂತೋಷ ಗಾನ ಮಾಡುವನು. ಎಂಥ ಸ್ವರ್ಗಾನಂದವನ್ನು ಈ ಸಾಮ್ಯದಲ್ಲಿ ವ್ಯಕ್ತಪಡಿಸಲಾಗಿದೆ! ಆ ಸಂತೋಷವನ್ನು ಹಂಚಿಕೊಳ್ಳುವದು ನಮ್ಮ ಸೌಭಾಗ್ಯವಾಗಿದೆ.

(3) ತಪ್ಪಿ ಹೋದ ಕುರಿಯಂತೆ, ದಂಗೆ ಏಳುವ ತಪ್ಪಿ ಹೋದಂತ ಒಬ್ಬ ಪಾಪಿಯನ್ನು  ಪ್ರೀತಿಯಿಂದ ಹುಡುಕುವ ಕಾರ್ಯವನ್ನು ಯಾರು ಮಾಡುತ್ತಾರೆ?

ಕರ್ತನಾದ ಯೆಹೋವನು ಇಂತೆನ್ನುತ್ತಾನೆ – ಆಹಾ ನಾನೇ ನನ್ನ ಕುರಿಗಳನ್ನು ಹಿಂಬಾಲಿಸಿ ಹುಡುಕುವೆನು..." ಓಡಿಸಿದ್ದನ್ನು ಮಂದೆಗೆ ಸೇರಿಸುವೆನು, ದುರ್ಬಲ

ವಾದದ್ದನ್ನು ಬಲಗೊಳಿಸುವೆನು,
ಮುರಿದ ಅಂಗವನ್ನು ಕಟ್ಟುವೆನು;
ಬಲಿತ ಕೊಬ್ಬಿದ ಕುರಿಗಳನ್ನೋ ಧ್ವಂಸ
ಮಾಡುವೆನು; ಅವುಗಳಿಗೆ ನ್ಯಾಯ
ದಂಡನೆ ಎಂಬ ಮೇವನ್ನು
ತಿನ್ನಿಸುವೆನು (ಯೆಹೆಜ್ಕೇಲ 34:11, 16)

ನಿರಾಶೆಗೊಂಡ ಆತ್ಮವು ನೀವು ದುಷ್ಟ
ಕಾರ್ಯವನ್ನು ಮಾಡಿದ್ದಾಗ್ಯೂ ಧೈರ್ಯ
ತೆಗೆದುಕೊಳ್ಳುವದು. ದೇವರು ನಿಮ್ಮ
ಉಲ್ಲಂಘನೆಯನ್ನು ಕ್ಷಮಿಸಬಹುದು
ಮತ್ತು ನಮ್ಮನ್ನು ತನ್ನ ಸಾನಿಧ್ಯಕ್ಕೆ
ಬರಲು ಅನುಮತಿಸಬಹುದು ಎಂದು
ಯೋಚಿಸಬೇಡಿರಿ, ದೇವರು ಮೊದಲ
ಕಾರ್ಯವನ್ನು ಮಾಡಿದ್ದಾನೆ. ನೀವು
ಆತನ ವಿರೋಧವಾಗಿ ದಂಗೆ ಎದ್ದ
ಸಮಯದಲ್ಲಿ, ಆತನು ನಿಮ್ಮನ್ನು
ಹುಡುಕಲು ಮುಂದಾಗಿ ಹೋಗಿದ್ದಾನೆ.
ಕುರುಬನು ಮೃದುವಾದ ಹೃದಯ
ದೊಂದಿಗೆ ತೊಂಬತ್ತೊಂಬತ್ತು ಬಿಟ್ಟು
ಅಡವಿಯಲ್ಲಿ ತಪ್ಪಿಹೋದ ಒಂದನ್ನು
ಹುಡುಕಲು ಹೋದನು. ಅವನ ಆತ್ಮವು
ಜಜ್ಜಿಹೋಗಿತ್ತು ಮತ್ತು ಗಾಯ
ಗೊಂಡಿತ್ತು ಮತ್ತು ನಾಶಹೊಂದಲು
ಸಿದ್ಧವಾಗಿತ್ತು. ಆತನು ತನ್ನ ಪ್ರೀತಿಯ
ತೋಳುಗಳಿಂದ ಆವರಿಸಿಕೊಂಡು
ಸುರಕ್ಷಿತತೆ ಎಂಬ ಹಿಂಡಿಗೆ
ಸಂತೋಷದಿಂದ ತರುತ್ತಾನೆ.

ಪಾಪಿಗೆ ದೇವರ ಪ್ರೀತಿಯನ್ನು
ವಿಸ್ತರಿಸುವ ಪೂರ್ವದಲ್ಲಿ ಮೊದಲು

ಆತನು ಪಶ್ಚಾತ್ತಾಪ ಪಡಬೇಕು ಎಂದು ಯೆಹೂದ್ಯರಿಂದ ಬೋಧಿಸಲ್ಪಡುತ್ತದೆ;. ಅವರ ದೃಷ್ಟಿಕೋನದಲ್ಲಿ ಪಶ್ಚಾತ್ತಾಪದ ಮೂಲಕ ಮನುಷ್ಯರು ಪರಲೋಕದ ಮೆಚ್ಚುಗೆಗೆ ಪಾತ್ರರು ಆಗುತ್ತಾರೆ. ಈ ವಿಚಾರವೇ ಫರಿಸಾಯರನ್ನು "ಈ ಮನುಷ್ಯನು ಪಾಪಿಗಳನ್ನು ಸೇರಿಸಿಕೊಳ್ಳುತ್ತಾನೆ" ಎಂದು ಆಶ್ಚರ್ಯ ಮತ್ತು ಕೋಪದಿಂದ ಉದ್ಗರಿಸುವತ್ತ ನಡೆಸಿತು. ಅವರ ವಿಚಾರಗಳ ಪ್ರಕಾರ ಪಶ್ಚಾತ್ತಾಪ ಹೊಂದಿದವನ್ನು ಬಿಟ್ಟು, ಆತನು ತನ್ನ ಬಳಿಗೆ ಬರಲು ಯಾರನ್ನೂ ಅನುಮತಿಸಬಾರದು. ಆದರೆ ತಪ್ಪಿಹೋದ ಕುರಿಯ ಸಾಮ್ಯದಲ್ಲಿ ಕ್ರಿಸ್ತನ ರಕ್ಷಣೆ ನಾವು ದೇವರನ್ನು ಹುಡುಕುವದರ ಮೂಲಕ ಬರುವದಿಲ್ಲ ಎಂದು ಬೋಧಿಸುತ್ತಾನೆ. "ತಿಳುವಳಿಕೆಯುಳ್ಳವನು ಇಲ್ಲ, ದೇವರನ್ನು ಹುಡುಕುವವನು ಇಲ್ಲ, ಎಲ್ಲರೂ ದಾರಿತಪ್ಪಿ ನಡೆಯುತ್ತಾರೆ." ರೋಮ 3:11-12) ದೇವರು ನಮ್ಮನ್ನು ಪ್ರೀತಿಸಬೇಕೆಂದು  ನಾವು ಪಶ್ಚಾತ್ತಾಪ ಪಡುವದಿಲ್ಲ, ಆದರೆ ನಾವು ಪಶ್ಚಾತ್ತಾಪ ಪಡಬೇಕೆಂದು ಆತನು ತನ್ನ ಪ್ರೀತಿಯನ್ನು ನಮಗೆ ತೋರಿಸುತ್ತಾನೆ.

ಮಾರ್ಗ ತಪ್ಪಿದ ಕುರಿ ಕೊನೆಗೆ ಸಿಕ್ಕಿದಾಗ ಕುರುಬನ ಕೃತಜ್ಞತೆ, ಸಂತೋಷಿಸುವ ಮಧುರವಾದ ಸಂಗೀತದಲ್ಲಿ ವ್ಯಕ್ತವಾಗುತ್ತದೆ. ಆತನು ತನ್ನ ಸ್ನೇಹಿತರನ್ನು ಮತ್ತು ನೆರೆಹೊರೆಯ

ವರನ್ನು "ನನ್ನೊಂದಿಗೆ ಸಂತೋಷಿಸಿರಿ ಯಾಕಂದರೆ ಕಳೆದು ಹೋಗಿದ್ದ ನನ್ನ ಕುರಿ ನನಗೆ ಸಿಕ್ಕಿದೆ" ಎಂದು ಅವರಿಗೆ ಹೇಳಿ ಅವರನ್ನು ಆಮಂತ್ರಿಸುತ್ತಾನೆ. ಹಿರಿಯ ಕುರುಬನಿಗೆ ಅಲೆದಾಡುತ್ತಿರುವ ಕುರಿ ಸಿಕ್ಕುವಾಗ ಪರಲೋಕ ಮತ್ತು ಭೂಲೋಕ ಕೃತಜ್ಞತೆಯನ್ನು ಸಲ್ಲಿಸಲು ಮತ್ತು ಸಂತೋಷಿಸಲು ಒಂದಾಗಬೇಕು. "ಪರಲೋಕ, ಪಶ್ಚಾತ್ತಾಪ ಪಡದಿರುವ ತೊಂಬತ್ತೊಂಬತ್ತರಲ್ಲಿ ಪಶ್ಚಾತ್ತಾಪ ಪಡುವ ಒಬ್ಬ ಪಾಪಿಯ ವಿಷಯದಲ್ಲಿ ಸಂತೋಷವಾಗುತ್ತದೆ.

(4) ಈ ವಚನದಲ್ಲಿರುವ ಯಾವ ಪದ ಪಾಪಿಗಳಿಗೆ ತಿರುಗಿ ಮನೆಗೆ ಬರಲು ಪರಲೋಕದ ತಂದೆಯ ಆಮಂತ್ರಣದ ತೀವ್ರತೆಯನ್ನು ವರ್ಣಿಸುತ್ತದೆ?

ಆಗ ಆ ಯಜಮಾನನು ತನ್ನ ಆಳಿಗೆ ಹೇಳಿದ್ದು- ನೀನು ಹಾದಿಗಳಿಗೂ ಬೇಲಿಗಳ ಬಳಿಗೂ ಹೋಗಿ ಅಲ್ಲಿ ಸಿಕ್ಕಿದವರನ್ನು ಬಲವಂತ ಮಾಡಿ ಒಳಕ್ಕೆ ಕರಕೊಂಡು ಬಾ, ನನ್ನ ಮನೆ ತುಂಬಲಿ (ಲೂಕ 14:23)

ಕೃಪೆಯ ಕೊನೆಯ ಸಂದೇಶದ ಸಮಯದಲ್ಲಿ ಜೀವಿಸುತ್ತಿದ್ದೇವೆ ಮನುಷ್ಯರ ಮಕ್ಕಳಿಗೆ ಕೊನೆಯ ಆಮಂತ್ರಣ ಕೇಳಿ ಬರುತ್ತಿದೆ. "ನೀನು ಹಾದಿಗಳಿಗೂ ಬೇಲಿಗಳ ಬಳಿಗೂ ಹೋಗು" ಎಂಬ ಆಜ್ಞೆ ತನ್ನ ಕೊನೆಯ

ನೆರವೇರಿಕೆಯನ್ನು ತಲುಪುತ್ತಿದೆ. ಪ್ರತಿಯೊಂದು ಆತ್ಮಕ್ಕೂ ಕ್ರಿಸ್ತನ ಆಮಂತ್ರಣ ಕೊಡಲ್ಪಡುತ್ತವೆ, ಎಂದು ಸಂದೇಶವಾಹಕನು ಹೇಳುತ್ತಿದ್ದಾನೆ, "ಬನ್ನಿರಿ, ಎಲ್ಲಾ ವಸ್ತುಗಳು ಈಗ ಸಿದ್ಧವಾಗಿವೆ" ಪರಲೋಕದ ದೇವದೂತರು ಇನ್ನೂ ಮಾನವ ಸಂಸ್ಥೆಗಳ ಮೂಲಕ ಇನ್ನೂ ಕಾರ್ಯ ನಿರತರಾಗಿದ್ದಾರೆ. ಪವಿತ್ರಾತ್ಮನು ಬರಲು ಅಡ್ಡಿಯಾಗಿರುವ ಪ್ರತಿಯೊಂದು ಪ್ರಚೋದನೆಯನ್ನು ನಿರ್ಭಂಧ ಪಡಿಸುತ್ತಿದ್ದಾನೆ. ಕೊಂಡಿಗಳನ್ನು ತೆಗೆದು ಆತನ ಪ್ರವೇಶಕ್ಕೆ  ನಿಮ್ಮ ಹೃದಯದ ಬಾಗಿಲನ್ನು ತೆರೆಯುವ ಸೂಚನೆಯ ಗುರುತನ್ನು ವೀಕ್ಷಿಸುತ್ತಿದ್ದಾನೆ. ತಪ್ಪಿ ಹೋದ ಇನ್ನೊಬ್ಬ ಪಾಪಿ ಸಿಕ್ಕಿದನು ಎಂಬ ಸಂತೋಷವನ್ನು ಪರಲೋಕಕ್ಕೆ ಒಯ್ಯಲು ದೇವದೂತರು ಕಾಯುತ್ತಿದ್ದಾರೆ. ಪರಲೋಕದ ದೇವದೂತರು ಸುವಾರ್ತೆಯ ಔತಣದ ಆಮಂತ್ರಣವನ್ನು ಇನ್ನೊಂದು ಆತ್ಮ ಸ್ವೀಕರಿಸಿರುವದಕ್ಕಾಗಿ ಪರಲೋಕದ ದೂತಗಣಗಳು ತಮ್ಮ ವೀಣೆಯನ್ನು ಬಾರಿಸುತ್ತಾ ಸಂತೋಷದ ಹಾಡನ್ನು ಹಾಡುವದಕ್ಕೆ ಸಿದ್ಧರಾಗಿ ನಿಂತಿದ್ದಾರೆ.

(5) ತಪ್ಪಿಹೋದಮಗನ ಸಾಮ್ಯದಲ್ಲಿ ತೋರಿಸಿದಂತೆ ಪರಲೋಕದಲ್ಲಿರುವ ನಮ್ಮ ತಂದೆಯು ಇಹಲೋಕದಲ್ಲಿ ಮಾರ್ಗತಪ್ಪಿರುವ ತನ್ನ ಮಕ್ಕಳನ್ನು ಹೇಗೆ ಸ್ವಾಗತಿಸುತ್ತಾನೆ?

ಅವನು ಇನ್ನೂ ದೂರದಲ್ಲಿರುವಾಗ ಅವನ ತಂದೆಯು ಅವನನ್ನು ಕಂಡು ಕನಿಕರಪಟ್ಟು ಓಡಿಬಂದು ಅವನ ಕೊರಳನ್ನು ಅಪ್ಪಿಕೊಂಡು ಅವನಿಗೆ ಬಹಳವಾಗಿ ಮುದ್ದಿಟ್ಟನು. (ಲೂಕ 15-20)

ತಪ್ಪಿಹೋದ ಮಗನ ತಂದೆಯನ್ನು ಕ್ರಿಸ್ತನು ದೇವರನ್ನು ಪ್ರತಿನಿಧಿಸುವ ತಂದೆಯನ್ನಾಗಿ ಆಯ್ದುಕೊಂಡಿದ್ದಾನೆ. ತನ್ನನ್ನು ಬಿಟ್ಟು ಹೋದ ಮಗನನ್ನು ಮತ್ತೊಮ್ಮೆ ನೋಡಲು ಮತ್ತು ಸ್ವೀಕರಿಸಲು ಈ ತಂದೆಯು ಹಂಬಲಿಸುತ್ತಿದ್ದನು. ಆತನು ಅವನಿಗಾಗಿ ಕಾಯುತ್ತಿದ್ದನು, ಅವನನ್ನು ನೋಡಲು ಹಂಬಲಿಸುತ್ತಿದ್ದನು, ಅವನು ಬರಬಹುದು ಎಂದು ನಿರೀಕ್ಷಿಸುತ್ತಿದ್ದನು. ಬಡವ ಮತ್ತು ಹರಿದ ಬಟ್ಟೆಯನ್ನು ಹಾಕಿಕೊಂಡಿದ್ದ ಅಪರಿಚಿತನು ಬರುವದನ್ನು ಆತನು ನೋಡುವಾಗ. ಅವನನ್ನು ಬೆಟ್ಟಿಯಾಗಲು ಹೋಗುತ್ತಾನೆ, ಒಂದುವೇಳೆ ಅವನು ತನ್ನ ಮಗನಾಗಿರಬಹುದೋ ಏನೋ ಎಂದು. ಮತ್ತು ಅವನಿಗೆ ಆಹಾರವನ್ನು ಮತ್ತು ಬಟ್ಟೆಯನ್ನು ಅವನು ನಿಜವಾಗಿಯೂ ತನ್ನ ಮಗನಾಗಿರ ಬಹುದು ಎಂದು ಭಾವಿಸಿ ನೀಡುತ್ತಾನೆ. ಹಾಗೇಯೇ ಅವನು ತನ್ನ ಬಹುಮಾನವನ್ನು ಹೊಂದುತ್ತಾನೆ. ಅವನ ಮಗನು ಮನೆಗೆ ಬರುತ್ತಾನೆ. ಅವನ ತುಟಿಗಳು ಅರಿಕೆ ಮಾಡುತ್ತಿವೆ “ಅಪ್ಪಾ, ಪರಲೋಕಕ್ಕೆ ವಿರೋಧ

ವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳಲು ತಂದೆಯು ತನ್ನ ಆಳುಗಳಿಗೆ – ಶ್ರೇಷ್ಟವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ ಕೈಗೆ ಉಂಗುರವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ ಹಬ್ಬ ಮಾಡೋಣ, ಉಲ್ಲಾಸ ಪಡೋಣ" (ಲೂಕ 15:21-23)

ತಪ್ಪಿಹೋದ ಮಗನ ಕೆಟ್ಟ ನಡತೆಗಾಗಿ ಅವನನ್ನು ಕೆಣಕಲಿಲ್ಲ, ಹೊರಗೆ ತಳ್ಳಲಿಲ್ಲ. ತನ್ನ ಹಿಂದಿನ ಜೀವಿತವನ್ನು ಕ್ಷಮಿಸಲಾಗಿದೆ ಮತ್ತು ಮರೆಯಲಾಗಿದೆ ಎಂದೆಂದಿಗೂ ಅಳಿಸಿಹಾಕಲಾಗಿದೆ ಎಂದು ಮಗನು ಭಾವಿಸುತ್ತಾನೆ. ಆದುದರಿಂದ ದೇವರು ಪಾಪಿಗೆ ಹೇಳುತ್ತಾನೆ, "ನಿನ್ನ ದ್ರೋಹಗಳನ್ನು ಮಂಜಿನಂತೆ ಪರಿಹರಿಸಿದ್ದೇನೆ, ನಿನ್ನ ಪಾಪಗಳನ್ನು ಮೋಡದಂತೆ ಹಾರಿಸಿದ್ದೇನೆ. (ಯೆಶಾಯ 44:22), ನಾನು ಅವರ ಅಪರಾಧವನ್ನು ಕ್ಷಮಿಸಿ ಅವರ ಪಾಪವನ್ನು ನನ್ನ ನೆನಪಿಗೆ ಎಂದಿಗೂ ತರುವದಿಲ್ಲ, ಇದು ಯೆಹೋವನ ನುಡಿ (ಯೆರೆಮೀಯ 31:34). ಹಿಂಡಿನಿಂದ ತಪ್ಪಿಸಿಕೊಂಡು ದೂರ ಹೋಗಿರುವ ತಪ್ಪಿ ಹೋದವರಿಗಾಗಿ ಪರಲೋಕವು ಕಾಯುತ್ತಿದೆ ಮತ್ತು ಹಂಬಲಿಸುತ್ತಿದೆ. ಮಾರ್ಗ ಬಿಟ್ಟು ಅಲೆದಾಡುತ್ತಿರುವ

ಅನೇಕರನ್ನು ದೇವರ ಮಕ್ಕಳ ಪ್ರೀತಿಯ ಸೇವೆಯ ಮೂಲಕ ಹಿಂದಕ್ಕೆ ತರಬೇಕು. ತಂದೆಯ ಕುರಿತು ಯೋಚಿಸಿರಿ ತನ್ನನ್ನೇ ತಾನು ದುಃಖಕ್ಕೆ ಈಡು ಮಾಡಿಕೊಂಡು ತನ್ನ ಒಬ್ಬನೇ ಮಗನನ್ನು ಉಳಿಸಿಕೊಳ್ಳದೇ ನಮ್ಮೆಲ್ಲರಿಗಾಗಿ ಆತನನ್ನು ಉಚಿತವಾಗಿ ಕೊಟ್ಟನು . ಓ ನಮಗೆ ಆತನ ಪ್ರೀತಿಯ ಉತ್ತಮವಾದ ತಿಳುವಳಿಕೆ ಇರಬೇಕು!

(6) ತನ್ನ "ತಪ್ಪಿಹೋದ ಮಕ್ಕಳಾದ ನಮ್ಮನ್ನು ಮನೆಗೆ ಕರೆದುಕೊಂಡು ಹೋಗುವದರ" ಹಿಂದೆ ತಂದೆಗೆ ಇರುವ ಉದ್ದೇಶವೇನು?

ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ; ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ. (ಯೆರೆಮೀಯ 31:3)

ವಿಚಾರಹೀನನಾದ ಯೌವನಸ್ಥನು ತನ್ನ ತಂದೆಯ ಮನೆಯಿಂದ ಹೊರಗೆ ಹೋಗುವಾಗ ತನ್ನ ತಂದೆಯ ಹೃದಯದಲ್ಲಿ ನೋವು ಮತ್ತು ಹಂಬಲವನ್ನು ಬಿಟ್ಟು ಹೋದನು. ತನ್ನ ದುಷ್ಟ ಸಂಗಾತಿಗಳೊಂದಿಗೆ ನಾಟ್ಯಮಾಡಿ ಮತ್ತು ಔತಣವನ್ನು ಮಾಡುವಾಗ ಅವನು ತನ್ನ ಮನೆಯ ಮೇಲೆ ಕವಿದಿರುವ ನೆರಳಿನ ಕುರಿತು ಆತನು ಸ್ವಲ್ಪವೂ ಯೋಚಿಸಲಿಲ್ಲ.

ಆದರೆ ಈಗ ಆಯಾಸ ಮತ್ತು ನೋವಿನಿಂದ ಕೂಡಿದ ಹೆಜ್ಜೆಗಳನ್ನು ಇಡುತ್ತಾ ಆತನು ಮನೆಯ ದಾರಿಯನ್ನು ಹಿಡಿಯುತ್ತಿದ್ದಾನೆ, ತಾನು ತಿರುಗಿ ಬರುವದನ್ನು ಒಬ್ಬರು ಕಾಯುತ್ತಿದ್ದಾರೆ ಎಂಬುದು ಆತನಿಗೆ ತಿಳಿದಿಲ್ಲ. ಆದರೆ ಅವನು "ಇನ್ನೂ ದೂರದಲ್ಲಿರುವಾಗ" ತಂದೆಯು ಅವನ ಗುರುತನ್ನು ಹಿಡಿಯುತ್ತಾನೆ. ಪ್ರೀತಿಗೆ ತೀವ್ರ ದೃಷ್ಟಿಯಿದೆ. ಅನೇಕ ವರ್ಷಗಳಿಂದ ಮಾಡಿದ ಪಾಪದ ಅವಮಾನ ತಂದೆಯ ಕಣ್ಣುಗಳಿಗೆ ಮಗನು ಮರೆಯಾಗಲಿಲ್ಲ. ಆತನಲ್ಲಿ "ಅನುಕಂಪವಿತ್ತು ಮತ್ತು ಓಡಿ ಹೋಗಿ ಅವನ ಕೊರಳನ್ನು ಅಪ್ಪಿಕೊಂಡನು" ಆ ಕ್ಷಣದಲ್ಲಿ ಮೃದುವಾದ ಅಪ್ಪುಗೆಯಲ್ಲಿ ಅಂಟಿ ಕೊಂಡನು.

ಮಗನ ಸಂಕಟ ಮತ್ತು ದೀನಸ್ಥಿತಿಯಲ್ಲಿ ತಂದೆಯು ಅವನನ್ನು ಕೆಣಕಲು ಕಣ್ಣಿನಲ್ಲಿ ತಿರಸ್ಕಾರವನ್ನು ತೋರಿಸಲಿಲ್ಲ. ಅವನು ತನ್ನ ಸ್ವಂತ ತೋಳುಗಳಿಂದ ವಿಶಾಲವಾದ, ತನ್ನ ಮಗನ ಹೊಲಸಾದ ಅಂಗಿಯ ಮೇಲೆ ತನ್ನ ಶ್ರೀಮಂತ ಮೇಲಂಗಿಯನ್ನು ಕೊರಳ ಸುತ್ತ ಹಾಕಿ ಅಪ್ಪಿಕೊಂಡನು ಯೌವನಸ್ಥನು ಅಳುತ್ತಾ ಪಶ್ಚಾತ್ತಾಪದಿಂದ "ಅಪ್ಪಾ ಪರಲೋಕಕ್ಕೆ ವಿರೋಧವಾಗಿಯೂ ನಿನ್ನ ಮುಂದೆಯೂ ಪಾಪಮಾಡಿದ್ದೇನೆ; ಇನ್ನು ನಾನು ನಿನ್ನ ಮಗನೆನಿಸಿ

ಕೊಳ್ಳುವದಕ್ಕೆ ಯೋಗ್ಯನಲ್ಲ ಎಂದು ಹೇಳಿದನು". ತಂದೆಯು ಅವನನ್ನು ಗಟ್ಟಿಯಾಗಿ ತನ್ನ ಹತ್ತಿರ ಹಿಡಿದುಕೊಂಡು ಅವನನ್ನು ಮನೆಗೆ ಕರೆದುಕೊಂಡು ಬಂದನು. ಅವನಿಗೆ ಸೇವಕನ ಸ್ಥಾನವನ್ನು ಕೇಳುವ ಅವಕಾಶ ಸಿಗಲಿಲ್ಲ. ಅವನು ಮಗನು, ಮನೆಯಲ್ಲಿ ದೊರೆಯುವ ಉತ್ತಮವಾದವುಗಳಿಂದ ಅವನಿಗೆ ಗೌರವ ದೊರೆಯಬೇಕು ಮತ್ತು ಅವನನ್ನು ಕಾಯುತ್ತಿರುವ ಪುರುಷರು ಮತ್ತು ಸ್ತ್ರೀಯರು ಗೌರವ ತೋರಿಸಬೇಕು ಮತ್ತು ಸೇವೆಮಾಡಬೇಕು.

ತಂದೆಯು ತನ್ನ ಸೇವಕರಿಗೆ ಹೇಳುತ್ತಾನೆ, "ಶ್ರೇಷ್ಠವಾದ ನಿಲುವಂಗಿಯನ್ನು ತಟ್ಟನೆ ತಂದು ಇವನಿಗೆ ತೊಡಿಸಿರಿ; ಇವನ ಕೈಗೆ ಉಂಗುರವನ್ನು ಇಡಿರಿ; ಕಾಲಿಗೆ ಜೋಡು ಮೆಡಿಸಿರಿ; ಕೊಬ್ಬಿಸಿದ ಆ ಕರುವನ್ನು ತಂದು ಕೊಯ್ಯಿರಿ; ಹಬ್ಬ ಮಾಡೋಣ, ಉಲ್ಲಾಸಪಡೋಣ, ಈ ನನ್ನ ಮಗನು ಸತ್ತವನಾಗಿದ್ದನು, ತಿರಿಗಿ ಬದುಕಿ ಬಂದನು. ಆಗ ಅವರು ಉಲ್ಲಾಸ ಪಡುವದಕ್ಕೆ ತೊಡಗಿದರು.

(7) ತಪ್ಪಿಹೋದ ಮಗನು ಹಿಂತಿರುಗಿ ಬಂದ ಸಮಾಚಾರಕ್ಕೆ ಈಡೀ ಪರಲೋಕ ಹೇಗೆ ಪ್ರತಿಕ್ರಿಯಿಸುತ್ತದೆ?

ಅದರಂತೆ ಒಬ್ಬ ಪಾಪಿಯು ದೇವರ ಕಡೆಗೆ ತಿರುಗಿಕೊಳ್ಳುವ ವಿಷಯದಲ್ಲಿ ದೇವದೂತರ ಮುಂದೆ ಸಂತೋಷ

ವಾಗುವದೆಂದು ನಿಮಗೆ ಹೇಳುತ್ತೇನೆ ಅಂದನು (ಲೂಕ 15:10)

ಅವನ ತಂದೆ ಅವನನ್ನು ನೋಡಿದನು. ತಂದೆಯು ತನ್ನ ಮಗನು ಹಿಂತಿರುಗಿ ಬರುವದನ್ನು ಎದುರುನೋಡುತ್ತಿದ್ದನು, ಅಪೇಕ್ಷಿಸುತ್ತಿದ್ದನು ಸಹ ಎಂದು ಸೂಚಿಸುತ್ತಾನೆ. ತಂದೆಗೆ ಹುಡುಗನ ಗುಣ ಮತ್ತು ಪ್ರವೃತ್ತಿ  ತಿಳಿದಿರಬಹುದು ಯೌವನಸ್ಥನಿಗೆ ಕುಟುಂಬದ ಆಸ್ತಿಯಲ್ಲಿ ಮತ್ತು ಅವನು ಬೀಳ್ಕೊಡುವಾಗಲೂ ಪಾಲನ್ನು ಕೊಡುವಾಗಲೂ ತಂದೆಗೆ ಅವನಲ್ಲಿ ತನ್ನ ಸಾಹಸದಲ್ಲಿ ಜಯವನ್ನು ಹೊಂದಲು ಅಗತ್ಯವಿರುವ ವಿಶೇಷ ಗುಣಲಕ್ಷಣದ ಕೊರತೆ ಇದೆ ಎಂದು ತಂದೆಗೆ ತಿಳಿದಿತ್ತು. ಇದರಿಂದಾಗಿ ಬೇಗನೇ ಅಥವಾ ತಡವಾಗಿ ಹುಡುಗನು ತನ್ನ ಬಳಿಗೇ ಬರುತ್ತಾನೆ ಎಂದು ತಿಳಿದುಕೊಂಡಿದ್ದನು. ಅವನ ಹರಿದು ಹೋದ ವಸ್ತ್ರಗಳಲ್ಲಿ ಮತ್ತು ದೂರದಿಂದಲೇ ಅವನು ತನ್ನ ಮಗನ ಗುರುತು ಹಿಡಿದನು,
ವಚನ 20-24 ಯೇಸು ತನ್ನ ಶ್ರೋತೃಗಳಿಗೆ ತಂದೆಯ ಗುಣಲಕ್ಷಣವನ್ನು ತೆರೆದಿಡುತ್ತಾನೆ., 11-19 ನೇ ವಚನದಲ್ಲಿ ಸಹ ಆತನು ಚಿಕ್ಕಮಗನ ಮೆಲೆ ನೆಲೆಗೊಳಿಸುತ್ತಾನೆ. ಅವನು ನಿಂತಿರುವ ಸ್ಥಳದಿಂದಲೇ  ಹುಡುಗನು ಬರುವದನ್ನು ಕಾಯುತ್ತಿರ ಬಹುದಾಗಿತ್ತು. ಬದಲಾಗಿ, ಅವನನ್ನು ಬೆಟ್ಟಿಯಾಗಲು ಮುಂದಕ್ಕೆ

ಹೋಗುವದರ ಮೂಲಕ ಆತನು ತನ್ನ ಹೃದಯದಲ್ಲಿರುವ ಕೂತೂಹಲ ಮತ್ತು ಸಂತೋಷವನ್ನು ಸಾಕ್ಷೀಕರಿಸುತ್ತಾನೆ. ಆತನ ಕೊರಳಿನ ಮೇಲೆ ಬಿದ್ದು. ಅದು ಒಂದು ಅಪ್ಪುಗೆ. ಮಗನು ಇನ್ನೂ ಮಾತಾಡಿರಲಿಲ್ಲ ಆದರೆ ಅವನ ಹಿಂತಿರುಗುವಿಕೆ ಅವನು ಎಷ್ಟು ಪಶ್ಚಾತ್ತಾಪದಿಂದ ಬಂದಿದ್ದಾನೆ ಎಂದು ಅವನು ಹೇಳಬೇಕು ಎಂದು ಸಿದ್ಧಪಡಿಸಿಕೊಂಡ ಪದಗಳಿಗಿಂತ ಹೆಚ್ಚಾಗಿ ತೋರಿಸಿತು. ತಂದೆಯು ಮಗನಿಗೆ ಏನು ಹೇಳಿದನು ಎಂಬುದರ ದಾಖಲೆ ಸಹ ಇಲ್ಲ. ಅದರಂತೆ ಸೇವಕರಿಗೆ ಆತನ ಅಪ್ಪಣೆ, ಅದರೊಟ್ಟಿಗೆ ಪ್ರಕಟಿಸಿದ ತಂದೆಯ ಪ್ರೀತಿ ಅವು ಪದಗಳಿಗಿಂತ ಹೆಚ್ಚಾಗಿ ಅವು ವಾಕ್ಚಾತುರ್ಯದಿಂದ ಕೂಡಿದ್ದವು.

(8)ನಮ್ಮ ಪಾಪಗಳನ್ನು ತೆಗೆದು ಹಾಕುವದು ಮತ್ತು ದೇವರು ಅದನ್ನು ತನ್ನ ನೀತಿವಂತಿಕೆಯ ಮೂಲಕ ಸ್ಥಾನ ಪಲ್ಲಟಗೊಳಿಸುವದನ್ನು ವರ್ಣಿಸಲು ಪರ್ವದಲ್ಲಿ ಯಾವ ಸಂಕೇತವನ್ನು ಉಪಯೋಗಿಸಲಾಗಿದೆ?

ಇವನ ಕೊಳೆ ಬಟ್ಟೆಗಳನ್ನು ತೆಗೆದು ಬಿಡಿರಿ ಎಂದು ಅಪ್ಪಣೆ ಕೊಟ್ಟು ಅವನಿಗೆ – ಇಗೋ ನಿನ್ನ ದೋಷವನ್ನು ನಿನ್ನಿಂದ ತೊಲಗಿಸಿದ್ದೇನೆ, ನಿನಗೆ ಶ್ರೇಷ್ಠವಸ್ತ್ರವನ್ನು ತೊಡಿಸುವೆನು ಎಂದು ಹೇಳಿದನು (ಜಕರ್ಯ 3:4).

ನಿಮ್ಮ ಪರಲೋಕದ ತಂದೆಯು ಪಾಪದಿಂದ ಹೊಲಸಾದ ವಸ್ತ್ರಗಳನ್ನು ತೆಗೆದು ಹಾಕುತ್ತಾನೆ. ಜಕರ್ಯನ ಸುಂದರವಾದ ಸಾಮ್ಯರೂಪದ ಪ್ರವಾದನೆಯಲ್ಲಿ ಮಹಾಯಾಜಕನಾದ ಯೆಹೋಶುವನು ಹೊಲಸಾದ ಬಟ್ಟೆಗಳನ್ನು ಧರಿಸಿ ಕರ್ತನ ದೂತನ ಎದುರಿನಲ್ಲಿ ನಿಂತಿರುವದು ಪಾಪಿಯನ್ನು ಪ್ರತಿನಿಧಿಸುತ್ತದೆ. ಮತ್ತು ಕರ್ತನು ಮಾತಾಡಿದ ಮಾತು “ಇವನ ಕೊಳೆ ಬಟ್ಟೆಗಳನ್ನು ತೆಗೆದು ಬಿಡಿರಿ. ಮತ್ತು ಅವನಿಗೆ ಹೇಳಿದನು, ಇಗೋ ನಿನ್ನ ದೋಷವನ್ನು ನಿನ್ನಿಂದ ತೊಲಗಿಸಿದ್ದೇನೆ, ನಿನಗೆ ಶ್ರೇಷ್ಠ ವಸ್ತ್ರವನ್ನು ತೊಡಿಸುವೆನು . ಅವರು ಅವನ ತಲೆಗೆ ಶುಭ್ರವಾದ ಮುಂಡಾಸವನ್ನು ಸುತ್ತಿ ಅವನಿಗೆ ವಸ್ತ್ರಗಳನ್ನು ಹಾಕಿದರು (ಜಕರ್ಯ 3:4. 5).

ಅದರಂತೆ ದೇವರು ನಿಮಗೆ “ರಕ್ಷಣೆಯ ವಸ್ತ್ರವನ್ನು ಹೊದಿಸುವನು ಮತ್ತು ನಿಮ್ಮನ್ನು “ನೀತಿವಂತಿಕೆ ಎಂಬ ವಸ್ತ್ರವನ್ನು” ತೊಡಿಸುವನು (ಯೆಶಾಯ 61:10) ನೀವು ಕುರಿಹಟ್ಟಿಗಳಲ್ಲಿ ಮಲಗಿಕೊಂಡಿರುವದೇನು? ಪಾರಿವಾಳದ ರೆಕ್ಕೆಗಳು ಬೆಳ್ಳಿಯಿಂದಲೂ ಅದರ ಗರಿಗಳು ಬಂಗಾರದಿಂದಲೂ ಥಳಥಳಿಸುತ್ತವೆ.” (ಕೀರ್ತನೆ 68:13)

ಅವನು ನನ್ನನ್ನು ಔತಣಶಾಲೆಗೆ ಬರಮಾಡಿಕೊಂಡನು, ನನ್ನ ಮೇಲೆ ಅವನು ಎತ್ತಿದ ಧ್ವಜವು ಪ್ರೀತಿಯೇ (ಪರಮಗೀತ 2:4) ಸೇನಾಧೀಶ್ವರನಾದ ಯೆಹೋವನು ಇಂತೆನ್ನುತ್ತಾನೆ – ನೀನು ನನ್ನ ಮಾರ್ಗಗಳಲ್ಲಿ ನಡೆದು ನಾನು ನಿನಗೆ ವಹಿಸಿದ ಪಾರುಪತ್ಯವನ್ನು ನೆರವೇರಿಸಿದರೆ ನನ್ನ ಆಲಯದ ಮುಖ್ಯಾಧಿಕಾರಿಯಾಗಿ ನನ್ನ ಪ್ರಾಕಾರವನ್ನು ನೋಡಿಕೊಳ್ಳುವಿ. ಈ ಸನ್ನಿಧಾನದ ದೂತರ ನಡುವೆ ಪ್ರವೇಶಿಸುವ ಹಕ್ಕನ್ನು ನಿನಗೆ ಕೊಡುವೆನು (ಜಕರ್ಯ 3:7).

(9) ಆತನ ಗುಣಲಕ್ಷಣದ ಯಾವ ಮೂರು ವಿಶೇಷಗುಣಗಳಿಂದ ತಂದೆಯು ನಮ್ಮನ್ನು ಮನೆಗೆ ಸೆಳೆದು ಕೊಳ್ಳುವದನ್ನು ಮುಂದುವರೆಸುತ್ತಾನೆ?

ಆತನ ಅಪಾರವಾದ ದಯಾ ಸಹನ ದೀರ್ಘಶಾಂತಿಗಳನ್ನು ಅಸಡ್ಡೆ ಮಾಡುತ್ತೀಯಾ? ಮನಸ್ಸನ್ನು ಬೇರೆ ಮಾಡಿಕೊಳ್ಳುವದಕ್ಕೆ ದೇವರ ಉಪಕಾರವು ನಿನ್ನನ್ನು ಪ್ರೇರಿಸು ತ್ತದೆಂಬದು ನಿನಗೆ ಗೊತ್ತಿಲ್ಲವೇ? (ರೋಮ 2:4).

ಆತನಿಂದ ಬೇರ್ಪಡಿಸುವದಕ್ಕಾಗಿ ಆಯಲ್ಪಟ್ಟವನ ಮೇಲೆ ದೇವರ ಪ್ರೀತಿ ಇನ್ನೂ ಹಂಬಲಿಸುತ್ತದೆ. ಅವನನ್ನು ತಂದೆಯ ಮನೆಗೆ ಹಿಂದಕ್ಕೆ ತರುವದಕ್ಕೆ

ಅವನು ಪ್ರಭಾವಗಳನ್ನು ಉಪಯೋಗಿಸುತ್ತಾನೆ. ತಪ್ಪಿಹೋದ ಮಗನ ದುಷ್ಟತನ 'ಅವನ ಮೇಲೆ ಬಂತು. ಅವನ ಮೇಲೆ ಸೈತಾನನು ಉಪಯೋಗಿಸಿದ ಮೋಸತನದ ಶಕ್ತಿ ಮುರಿದು ಹೋಯಿತು, ಅವನ ಕಷ್ಟಾನುಭವವು ತನ್ನ ಮೂರ್ಖತನದ ಫಲವೇ ಎಂದು ಅವನು ಕಂಡುಕೊಂಡನು ಮತ್ತು ಅವನು ಹೇಳಿದನು, "ನನ್ನ ತಂದೆಯ ಬಳಿಯಲ್ಲಿ ಎಷ್ಟೋ ಮಂದಿ ಕೂಲಿಯಾಳುಗಳಿಗೆ ಬೇಕಾದಷ್ಟು ಆಹಾರವದೇ; ನಾನಾದರೋ ಇಲ್ಲಿ ಹಸಿವಿನಿಂದ ಸಾಯುತ್ತೇನೆ. ನಾನು ಎದ್ದು ನನ್ನ ತಂದೆಯ ಬಳಿಗೆ ಹೋಗುತ್ತೇನೆ."

ತಪ್ಪಿಹೋದ ಮಗನು ಸಂಕಟದಲ್ಲಿ ದ್ದಾಗಲೂ ತಂದೆಯ ಪ್ರೀತಿಯ ಮನವರಿಕೆಯಾದಾಗ ನಿರೀಕ್ಷೆಯನ್ನು ಹೊಂದಿಕೊಂಡನು. ಈ ಪ್ರೀತಿಯೇ ಅವನನ್ನು ಮನೆಗೆ ನಡೆಸಿತು. ಆದುದರಿಂದ ಪಾಪಿಯನ್ನು ದೇವರ ಬಳಿಗೆ ಹಿಂತಿರುಗಲು ನಿರ್ಭಂದ ಪಡಿಸುವದು ಈ ಪ್ರೀತಿಯೇ. "ದೇವರ ಉಪಕಾರವು ನಮ್ಮನ್ನು ಪಶ್ಚಾತ್ತಾಪಕ್ಕೆ ನಡೆಸುತ್ತದೆ." ರೋಮ 2:4 ಒಂದು ಬಂಗಾರದ ಸರಪಣಿ, ದೈವೀಕ ಪ್ರೀತಿ ಮತ್ತು ಅನುಕಂಪವಾಗಿದೆ, ಅದು ಗಂಡಾತರಕ್ಕೆ ಈಡಾದ ಪ್ರತಿಯೊಂದು ಆತ್ಮದ ಸುತ್ತಲೂ ಹಾದುಹೋಗುತ್ತದೆ.

(10) ಈ ಅದ್ಭುತವಾದ ಪ್ರೀತಿಯಲ್ಲಿ, ದೇವರು ನಮ್ಮನ್ನು ಎಂಥ ಶ್ರೇಷ್ಠವಾದ ಸೌಭಾಗ್ಯಕ್ಕೆ ಕರೆಯಲ್ಪಡುವದಕ್ಕೆ ಅನುಮತಿಸುತ್ತಾನೆ?

ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ; ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನ್ನು ತಿಳಿದು ಕೊಳ್ಳುವದಿಲ್ಲ, ಅದು ಆತನನ್ನು ತಿಳಿದುಕೊಳ್ಳಲಿಲ್ಲವಲ್ಲಾ (1ಯೋಹಾನ 3:1)

ಭೂಲೋಕದಲ್ಲಿ ಮತ್ತು ಪರಲೋಕದಲ್ಲಿ ಎಲ್ಲಾ ಜ್ಞಾನವನ್ನು ದೇವರು ನಾವು ದೇವರ ಮಕ್ಕಳೆಂದು ಕರೆಯಲ್ಪಡುವಂತೆ ಆತನು ನಮ್ಮ ಮೇಲೆ ಯಾವ ವಿಧದ ಪ್ರೀತಿಯನ್ನು ಸುರಿಸಿದ್ದಾನೆ ಎಂಬುದನ್ನು ದೃಷ್ಟಿಸಲು ಕರೆಯಲಾಗಿದೆ. ಪ್ರತಿಯೊಬ್ಬ ಪಾಪಿಯು ನೋಡಬೇಕು ಮತ್ತು ಜೀವಿಸಬೇಕು.

ಕಲ್ವಾರಿಯ ದೃಶ್ಯದ ಸಮೀಕ್ಷೆಯನ್ನು ಬೇಜವಾಬ್ದಾರಿತನದಿಂದ, ವಿವೇಕ ಶೂನ್ಯತೆಯಿಂದ ಮಾಡಬೇಡಿರಿ. ದೇವರ ಪ್ರೀತಿಯನ್ನು ಹೊಂದಿದವರು ಎಂದು ಮತ್ತು ನಾವು ತಣ್ಣಗಾಗಿರುವವರು, ಉದಾಸೀನರು ಪ್ರಭಾವ ಬೀರದವರು

ಆಗಿರುವದು ದೇವದೂತರ ತಮಗಿಂತ ಕೀಳಾಗೆಣಿಸಿ ನೋಡುವುದಕ್ಕಾಗಿಯೋ, ಪರಲೋಕವು ಕಲ್ವಾರಿಯ ಪ್ರೀತಿಯ ಮತ್ತು ಶೋಕದ ರಹಸ್ಯವನ್ನು ನೋಡಲು ಬಯಸುವ ಸಮಯದಲ್ಲಿ ಬಿದ್ದು ಹೋದ ಲೋಕವನ್ನು ರಕ್ಷಿಸುವ, ಮೂರ್ಖಕಾರ್ಯವನ್ನು ದೃಷ್ಟಿಸುವಾಗ ದೇವದೂತರು ಆಶ್ಚರ್ಯದೊಂದಿಗೆ ಮತ್ತು ವಿಸ್ಮಯದಿಂದ ಇಂಥ ಒಂದು ಶ್ರೇಷ್ಟ ರಕ್ಷಣೆ ಒದಗಿಸಲ್ಪಟ್ಟವರನ್ನು ಕೀಳಾಗೆಣಿಸುತ್ತಾರೆ, ಮತ್ತು ದೇವರ ಪ್ರೀತಿ ಅವರನ್ನು ಎಬ್ಬಿಸಲಿಲ್ಲ ಎಂದು ಆಶ್ಚರ್ಯಪಡುತ್ತಾರೆ  ಮತ್ತು ಅವರನ್ನು ಕೃತಜ್ಞತೆ ಮತ್ತು ಆರಾಧನೆಯ ಸುಮಧುರವಾದ ಪ್ರಯತ್ನವನ್ನು ಹೊಯ್ಯದು ಬಿಡುವತ್ತ ನಡೆಸುತ್ತದೆ.

ಆದರೆ ಈಡೀ ಪರಲೋಕವು ದೃಷ್ಟಿಸಲು ಬಯಸುವ ಫಲಿತಾಂಶವನ್ನು ಕ್ರಿಸ್ತನ ಹಿಂಬಾಲಕರು ಎಂದು ಸಾರುವವರ ಮದ್ಯದಲ್ಲಿ ಕಂಡು ಬರುವದಿಲ್ಲ. ನಾವು ನಮ್ಮ ಸ್ನೇಹಿತರ ಮತ್ತು ಸಂಬಂಧಿಕರ ವಿಷಯದಲ್ಲಿ ವಾತ್ಸಲ್ಯ ತೋರಿಸುವ ಮಾತುಗಳನ್ನು ಆಡಲು ಹೇಗೆ ಸಿದ್ದರಾಗಿರುತ್ತೇವೆ ಆದಾಗ್ಯೂ ಆತನ ಕುರಿತು ಮಾತಾಡುವದರಲ್ಲಿ ನಾವು ಎಷ್ಟು ನಿಧಾನವಾಗಿದ್ದೇವೆ, ಆತನ ಪ್ರೀತಿಗೆ ಸಮಾನವಾದದ್ದು ಬೇರೊಂದಿಲ್ಲ, ನಿಮ್ಮ ಮದ್ಯದಲ್ಲಿ ಕ್ರೂಜಿತನಾದ ಕ್ರಿಸ್ತನನ್ನು ಪ್ರಕಟಿಸಿರಿ.

(11) ಮನೆಗೆ ಹಿಂತಿರುಗಲು ತಂದೆಯು ಪ್ರೀತಿಯು ಪವಿತ್ರಾತ್ಮನ ಮೂಲಕ ನಮ್ಮನ್ನು ಒತ್ತಾಯಪಡಿಸುವಾಗ ನಾವು ಏನನ್ನು ಮಾಡದಂತೆ ಎಚ್ಚರಿಕೆ ವಹಿಸಬೇಕು?

ದೇವರ ಪವಿತ್ರಾತ್ಮನನ್ನು ದುಃಖಿಸ ಬೇಡಿರಿ; ಆತನಲ್ಲಿಯೇ ವಿಮೋಚನೆಯ ದಿನಕ್ಕಾಗಿ ಮುದ್ರೆ ಹೊಂದಿ ದ್ದೀರಲ್ಲಾ(ಎಫೆಸ 4:30).

ಆದರೆ "ನೀವು ಮಾತಾಡುತ್ತಿರುವಾತನ ಮಾತನ್ನು ಕೇಳಲೊಲ್ಲೆವೆಂದು ಹೇಳಬಾರದು." ಇಬ್ರಿಯ 12:25 , ಯೇಸು ಹೇಳಿದ್ದು, ಆಮಂತ್ರಿಸಿದವರಲ್ಲಿ ಒಬ್ಬನೂ  ನನ್ನ ಔತಣದ ರುಚಿ ನೋಡಬಾರದು" ಅವರು ಆಮಂತ್ರಣವನ್ನು ತಿರಸ್ಕರಿಸಿದರು, ಆದುದರಿಂದ ಅವರಲ್ಲಿ ಒಬ್ಬರೂ ತಿರುಗಿ ಆಮಂತ್ರಿಸಲ್ಪಡುವದಿಲ್ಲ.  ಕ್ರಿಸ್ತನನ್ನು ತಿರಸ್ಕರಿಸುವದರ ಮೂಲಕ ಯೆಹೂದ್ಯರು ತಮ್ಮ ಹೃದಯಗಳನ್ನು ಕಠಿಣ ಪಡಿಸಿಕೊಂಡರು ಮತ್ತು ತಮ್ಮನ್ನು ತಾವೇ ಸೈತಾನನ ಬಲಕ್ಕೆ ಒಪ್ಪಿಸಿದರು ಹೀಗಾಗಿ ಅವರಿಗೆ ದೇವರ ಕೃಪೆಯನ್ನು ಸ್ವೀಕರಿಸುವದು ಅವರಿಗೆ ಅಸಾಧ್ಯವಾಯಿತು.  ಅದು ಈಗ ಸಹ ಹಾಗೇ ಇರುತ್ತದೆ. ದೇವರ ಪ್ರೀತಿಯನ್ನು ಮೆಚ್ಚಿಕೊಂಡು ಅದನ್ನು  ಆತ್ಮವನ್ನು ಮೃದುಗೊಳಿಸಿ ಮತ್ತು ನಿಗ್ರಹಿಸಿಕೊಂಡು ಅದನ್ನು ನೆಲೆಗೊಳ್ಳುವ ತತ್ವವನ್ನಾಗಿ

ಮಾಡಿಕೊಳ್ಳದಿದ್ದರೆ ನಾವು ಸಂಪೂರ್ಣವಾಗಿ ನಾಶವಾಗುತ್ತೇವೆ. ದೇವರು ಈಗಾಗಲೇ ನೀಡಿರುವಂತ ತನ್ನ ಪ್ರೀತಿಯ ಪ್ರಕಟನೆಗಿಂತ ಇನ್ನೂ ಹೆಚ್ಚಿನ ಪ್ರಕಟನೆಯನ್ನು ನೀಡಲಾರನು. ಯೇಸುವಿನ ಪ್ರೀತಿ ನಮ್ಮ ಹೃದಯವನ್ನು ನಿಯಂತ್ರಣದಲ್ಲಿ ಇರಿಸದಿದ್ದಲ್ಲಿ, ಅದನ್ನು ಮಾಡಲು ಬೇರೆ ಯಾವ ಮಾರ್ಗವಿಲ್ಲ.

ಪ್ರತಿಸಾರಿ ಕೃಪೆಯ ಸಂದೇಶವನ್ನು ಕೇಳಲು ನಿರಾಕರಿಸಿದ್ದಲ್ಲಿ, ನೀವು ನಿಮ್ಮ ಅಪನಂಬಿಕೆಯನ್ನು ಇನ್ನೂ ಬಲಪಡಿಸುತ್ತೀರಿ. ಪ್ರತಿಸಾರಿ ನೀವು ಕ್ರಿಸ್ತನಿಗೆ ನಿಮ್ಮ ಹೃದಯವನ್ನು ತೆರೆಯಲು ವಿಫಲರಾಗುವಾಗ ನೀವು ಹೆಚ್ಚು ಹೆಚ್ಚಾಗಿ ಮಾತಾಡುವಾತನ ಮಾತನ್ನು ಆಲಿಸದೇ ಇರುವದಕ್ಕೆ ಮನಸ್ಸು ಮಾಡುವಿರಿ. ನೀವು ಕೃಪೆಯ ಕೊನೆಯ ವಿನಂತಿಗೆ ಪ್ರತಿಕ್ರಿಯಿಸುವ ನಿಮ್ಮ ಆಯ್ಕೆಯನ್ನು ಕಡಿತ ಗೊಳಿಸುವಿರಿ. ಪ್ರಾಚೀನ ಇಸ್ರಾಯೇಲ್ಯರ ಕುರಿತು ಬರೆದಿರುವ ಪ್ರಕಾರ ನಿಮ್ಮ ಕುರಿತು ಬರೆಯದೇ ಇರಲಿ. "ಎಫ್ರಾಯೀಮು ವಿಗ್ರಹಗಳಲ್ಲಿ ಬೆರೆತುಹೋಗಿದೆ; ಅದನ್ನು ಬಿಟ್ಟು ಬಿಡಿರಿ." ಹೋಶೇಯ 4:17; ಯೆರೂಸಲೇಮಿನ ಕುರಿತು ಕ್ರಿಸ್ತನು ಅತ್ತ ಹಾಗೆ ನಿಮ್ಮ ಕುರಿತು ಅಳದಿರಲಿ, "ಕೋಳಿ ತನ್ನ ಮರಿಗಳನ್ನು ರೆಕ್ಕೆಗಳ ಕೆಳಗೆ ಕೂಡಿಸಿಕೊಳ್ಳುವಂತೆ ನಿನ್ನ

ಮಕ್ಕಳನ್ನು ಕೂಡಿಸಿಕೊಳ್ಳುವದಕ್ಕೆ ನನಗೆ ಎಷ್ಟೋ ಸಾರಿ ಮನಸ್ಸಿತ್ತು; ಆದರೆ ನಿಮಗೆ ಮನಸ್ಸಿಲ್ಲದೆ ಹೋಯಿತು. ನೋಡಿರಿ ನಿಮ್ಮ ಅಲಯವು ನಿಮಗೆ ಬರೀದಾಗಿ ಬಿಟ್ಟಿದೆ.” ಲೂಕ 13:34, 35.

(12) ಒಬ್ಬ ಪಾಪಿ ಸಹ ಪಶ್ಚಾತ್ತಾಪ ಪಡುವಾಗ ಪರಲೋಕದಲ್ಲಿ ಏನು ಸಂಭವಿಸುತ್ತದೆ?

ಅದರಂತೆ ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ ಅವಶ್ಯವಿಲ್ಲದ ತೊಂಭತ್ತೊಂಬತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುವದೆಂದು ನಿಮಗೆ ಹೇಳುತ್ತಾನೆ (ಲೂಕ 15:7)

ತಾಪತ್ರಯ, ಕಷ್ಟಾನುಭವಕ್ಕೆ, ಶೋಧನೆಗೆ ಒಳಗಾದವರ ಸಮೀಪಕ್ಕೆ ಬರುವದು ದೇವದೂತರ ಕಾರ್ಯವಾಗಿದೆ . ಅವರು ಕ್ರಿಸ್ತನು ಯಾರಿಗಾಗಿ ಸತ್ತನೋ ಅವರ ಪರವಾಗಿ ನಿರಂತರವಾಗಿ ಶ್ರಮಿಸುತ್ತಾರೆ ಪಾಪಿಗಳು ತಮ್ಮನ್ನು ರಕ್ಷಕನಿಗೆ ಒಪ್ಪಿಸಿಕೊಡುವಾಗ, ದೇವದೂತರು ಸಂತೋಷವನ್ನು ಪರಲೋಕದೆಡೆಗೆ ಕೊಂಡೊಯ್ಯುತ್ತಾರೆ ಅಲ್ಲಿ ದೇವದೂತಗಣಗಳ ಮಧ್ಯದಲ್ಲಿ ದೊಡ್ಡ ಸಂತೋಷ ಉಂಟಾಗುತ್ತದೆ. ದೇವರ ಕಡೆಗೆ ತಿರುಗಿಕೊಳ್ಳುವದಕ್ಕೆ

ಅವಶ್ಯವಿಲ್ಲದ ತೊಂಭತ್ತೊಂಬತ್ತು ಮಂದಿ ನೀತಿವಂತರಿಗಿಂತ ದೇವರ ಕಡೆಗೆ ತಿರುಗಿಕೊಳ್ಳುವ ಒಬ್ಬ ಪಾಪಿಯ ವಿಷಯವಾಗಿ ಪರಲೋಕದಲ್ಲಿ ಸಂತೋಷವುಂಟಾಗುತ್ತದೆ. (ಲೂಕ 15:7)

ಕತ್ತಲೆಯನ್ನು ಹೊಡೆದೋಡಿಸಿ ವಿಶಾಲವಾದ ಜ್ಞಾನವನ್ನು ಪ್ರಸರಿಸುವ ನಮ್ಮ ಪ್ರತಿಯೊಂದು ಯಶಸ್ವಿ ಪ್ರಯತ್ನದ ವಿವರಣೆ ಪರಲೋಕಕ್ಕೆ ಕೊಡಾಯ್ಯಲಾಗುತ್ತದೆ.  ಕಾರ್ಯವನ್ನು ತಂದೆಯ ಮುಂದೆ ಮತ್ತೊಮ್ಮೆ ಹೇಳುವಾಗ ದೂತಗಣಗಳಲ್ಲೆಲ್ಲಾ ಸಂತೋಷದಿಂದ ರೋಮಾಂಚನ ಗೊಳ್ಳುತ್ತವೆ .

(13) ಗ್ರಹಿಸಲಾರದ ಪ್ರೀತಿಯಿಂದ ತಂದೆಯು ನಮ್ಮನ್ನು ಕ್ಷಮಿಸಿದ್ದಾನೆ ಮತ್ತು ವಿಮೋಚಿಸಿದ್ದಾನೆ ಆತನ ಆಮಂತ್ರಣ ಏನಾಗಿದೆ ಮತ್ತು ನಾವು ಮಾಡಬೇಕಾದದ್ದು ಏನು?

ನಿನ್ನ ದ್ರೋಹಗಳನ್ನು ಮಂಜಿನಂತೆ ಪರಿಹರಿಸಿದ್ದೇನೆ; ನಿನ್ನ ಪಾಪಗಳನ್ನು ಮೋಡದಂತೆ ಪರಿಹರಿಸಿದ್ದೇನೆ. ನಿನ್ನನ್ನು ವಿಮೋಚಿಸಿದ್ದೇನೆ, ನನ್ನ ಕಡೆಗೆ ತಿರುಗಿಕೋ (ಯೆಶಾಯ 44:22)

ನೀವು ನಿಮ್ಮ ಸ್ವಂತ ಮಾರ್ಗವನ್ನು ಆದುಕೊಂಡಿದ್ದೀರೋ?ನೀವು ದೇವರಿಂದ ದೂರ

ಅಲೆದಾಡಿದ್ದೀರೋ?ನೀವು ಪಶ್ಚಾತ್ತಾಪದ ಫಲವಾದ ಔತಣ ಮಾಡಲು ಅಥವಾ ಕೇವಲ ಅವು ನಿಮ್ಮ ತುಟಿಗಳ ಮೇಲೆ ಬೂದಿಯಾಗುವದನ್ನು ಕಾಣಲು ಬಯಸಿದ್ದೀರೋ? ಈಗ ನಿಮ್ಮ ಜೀವಿತದ ಯೋಜನೆಗಳು ನಿಷ್ಫಲವಾಗಿ ಮತ್ತು ನಿಮ್ಮ ನಿರೀಕ್ಷೆ ಸತ್ತುಹೋಗಿದೆಯೋ, ನೀವು ಒಬ್ಬರೇ ಏಕಾಂಗಿಯಾಗಿ ಕುಳಿತಿರುತ್ತೀರೋ? ಬಹಳ ಹಿಂದೆ ನಿಮ್ಮ ಹೃದಯದೊಂದಿಗೆ ಮಾತಾಡುತ್ತಿದ್ದ ಧ್ವನಿ, ಅದನ್ನು ನೀವು ಆಲಿಸಲಿಲ್ಲ, ಅದು ನಿಮ್ಮ ಬಳಿಗೆ ವಿಶಿಷ್ಟವಾಗಿ ಮತ್ತು ಸ್ಪಷ್ಟವಾಗಿ ಬರುತ್ತಿದೆ. “ಏಳಿರಿ, ತೊಲಗಿರಿ! ಈ ದೇಶವು ನಿಮಗೆ ಸುಖ ವಸತಿಯಾಗದು; ನಾಶನವನ್ನು, ವಿಪರೀತನಾಶನವನ್ನು ಉಂಟು ಮಾಡುವ ಹೊಲಸು ಇದಕ್ಕೆ ಅಂಟಿಕೊಂಡಿದೆ.” ಮೀಕ 2:10

ನಿಮ್ಮ ತಂದೆಯ ಮನೆಗೆ ಹಿಂತಿರುಗಿರಿ “ನನ್ನ ಬಳಿಗೆ ಹಿಂತಿರುಗಿರಿ ಯಾಕಂದರೆ ನಾನು ನಿಮ್ಮನ್ನು ವಿಮೋಚಿಸಿದ್ದೇನೆ” ಎಂದು ಹೇಳುವದರ ಮೂಲಕ ಆತನು ನಿಮಗೆ ಆಮಂತ್ರಣವನ್ನು ನೀಡುತ್ತಿದ್ದಾನೆ. “ನನ್ನ ಬಳಿಗೆ ಬಾ, ನಿನ್ನ ಆತ್ಮವು ಜೀವಿಸುತ್ತದೆ; ಮತ್ತು ನಾನು ನಿನ್ನೊಂದಿಗೆ ಶಾಶ್ವತವಾದ ಒಡಂಬಡಿಕೆಯನ್ನು ಮಾಡಿಕೊಳ್ಳುತ್ತೇನೆ, ದಾವೀದನಿಗೆ ಖಂಡಿತವಾಗಿ ವಾಗ್ದಾನ ಮಾಡಿದ

ಕೃಪಾವರಗಳನ್ನು ಸಹ ಯೆಶಾಯ 44:22; 55:3

ನಿಮ್ಮನ್ನು ನೀವು ಉತ್ತಮ ಗೊಳಿಸುವವರೆಗೆ ನೀವು ದೇವರ ಬಳಿಗೆ ಬರಲು ಯೋಗ್ಯರಾಗುವವರೆಗೆ ಕ್ರಿಸ್ತನಿಂದ ದೂರವಾಗಿರಿ ಎಂಬ ವೈರಿಯ ಸಲಹೆಗಳಿಗೆ ಕಿವಿಗೊಡಬೇಡಿರಿ. ನೀವು ಅಲ್ಲಿಯವರೆಗೆ ಕಾದಿರುವದಾದರೆ ನೀವು ಬರುವದೇ ಇಲ್ಲ. ಸೈತಾನನು ನಿನ್ನ ಹೊಲಸು ಬಟ್ಟೆಗಳನ್ನು ತೋರಿಸಿದರೆ, ರಕ್ಷಕನ ವಾಗ್ದಾನವನ್ನು ಪುನರಾವರ್ತಿಸಿರಿ. “ನನ್ನ ಬಳಿಗೆ ಬರುವವರನ್ನು ನಾನು ತಳ್ಳಿಬಿಡುವದೇ ಇಲ್ಲ” ಯೋಹಾನ 6:37. ವೈರಿಗೆ ಯೇಸು ಕ್ರಿಸ್ತನ ರಕ್ತ ನಮ್ಮ ಎಲ್ಲಾ ಪಾಪವನ್ನು ಶುದ್ಧಗೊಳಿಸುತ್ತದೆ ಎಂದು ಹೇಳಿರಿ. ಹಿಸ್ಸೋಪ್ ಗಿಡದ ಬರಲಿನಿಂದ ನೀರನ್ನು ಚಿಮುಕಿಸಿಯೋ ಎಂಬಂತೆ ನನ್ನ ಅಶುದ್ಧತ್ವವನ್ನು ತೆಗೆದುಬಿಡು, ಆಗ ಶುದ್ಧನಾಗುವೆನು ನನ್ನನ್ನು ತೊಳೆ ಆಗ ಹಿಮಕ್ಕಿಂತಲೂ ಬೆಳ್ಳಗಾಗುವೆನು.” ಕೀರ್ತನೆ 51:7

ವಿಶ್ವದ ಸೃಷ್ಟಿಕರ್ತನಾದ ದೇವರನ್ನು ಅಪ್ಪಾ ತಂದೆಯೇ ಎಂಬ ಹೆಸರಿನಲ್ಲಿ ಸಂಧಿಸಲು ಶಕ್ತನಾಗಿರುವದು ಮತ್ತು

ನನ್ನ ಜೀವಿತದಲ್ಲಿ ಆತನ
ಯೋಜನೆಯನ್ನು ಸ್ವೀಕರಿಸುವದು
ನನ್ನ ಸೌಭಾಗ್ಯವಾಗಿದೆ

ದುಂಡು ಸುತ್ತಿರಿ: ಹೌದು  ನಿರ್ಧರಿಸಿಲ್ಲ

ನಾನು ತಪ್ಪಿಹೋದ ಮಗನ
ಸಾಮ್ಯವನ್ನು  ಮತ್ತು ಪ್ರೀತಿಯ ತಂದೆ
ನನ್ನ ತಂದೆಯಾದ ದೇವರನ್ನು
ಪ್ರತಿನಿಧಿಸಿರುವದನ್ನು ಕಲಿಯುತ್ತಿರುವ
ಹಾಗೆ ಅದು ನನ್ನ ಹೃದಯವನ್ನು
ಸ್ಪರ್ಶಿಸಿತು, ಮಗನು ಇನ್ನೂ ದಂಗೆ
ಎದ್ದಿರುವಾಗಲೇ, ತಂದೆಯು ಆತನು
ನನ್ನನ್ನು ಮತ್ತು ನಿನ್ನನ್ನು ಹುಡುಕುವ
ಹಾಗೆ ಹೇಗೆ ಹುಡುಕಿದನು.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ನಾನು ದಂಗೆ ಎದ್ದಿರುವ ನನ್ನ
ಸ್ವಭಾವದಿಂದ ತಿರುಗಿಕೊಳ್ಳಲು ಆಯ್ಕೆ
ಮಾಡಿಕೊಳ್ಳುತ್ತೇನೆ ಮತ್ತು ಅಲ್ಲಿ
ಕೆಣುಕುವಿಕೆ ಅಥವಾ ನನ್ನ ದುಷ್ಟ
ಮಾರ್ಗಗಳನ್ನು ಎತ್ತಿ ಹೇಳುವದು ಇಲ್ಲ
ಅದಕ್ಕಾಗಿ ನಾನು ಬಹಳವಾಗಿ
ಕೃತಜ್ಞನಾಗಿದ್ದೇನೆ. ಆತನು ನನ್ನ
ಪಾಪಗಳನ್ನು ಕ್ಷಮಿಸಿದ್ದಾನೆ ಮತ್ತು
ವೇದವಾಕ್ಯಕ್ಕೆ ಅನುಗುಣವಾಗಿ ಇನ್ನು
ಮುಂದೆ ನನ್ನ ಪಾಪಗಳನ್ನು
ಜ್ಞಾಪಕದಲ್ಲಿ ಇಟ್ಟುಕೊಳ್ಳುವದಿಲ್ಲ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ತಂದೆಯ ಪ್ರೀತಿಯಿಂದಾಗಿ ಮನೆಗೆ ಹಿಂತಿರುಗಿ ಬರುವ ಪಾಪಿಯ ವಿಷಯದಲ್ಲಿ ಈಡೀ ಪರಲೋಕವು ಸಂತೋಷಿಸುತ್ತದೆ ಇದು ಎಷ್ಟು ಅದ್ಭುತವಲ್ಲವೇ! ಅವರು ಇದನ್ನು ನನಗಾಗಿ ಮಾಡಿದರು ಎಂದು ನನಗೆ ಆಶ್ಚರ್ಯವಾಗುತ್ತದೆ!

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ನಾನು ತಿರುಗಿ ಪಾಪದಲ್ಲಿ ಬೀಳುವಾಗ ತಂದೆಯು ನನ್ನ ಬಿಟ್ಟು ಬಿಡುವದಿಲ್ಲ ಬದಲಾಗಿ ಆತನು ನನ್ನ ಹುಡುಕಿ ತಿರುಗಿ ತನ್ನ ಬಳಿಗೆ ಎಳೆದುಕೊಳ್ಳುತ್ತಾನೆ ಅದಕ್ಕಾಗಿ ನಾನು ಯಾವಾಗಲೂ ಕೃತಜ್ಞನಾಗಿದ್ದೇನೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ನಾನು ಆತನ ಪವಿತ್ರಾತ್ಮನನ್ನು ದುಃಖಪಡಿಸುವದಿಲ್ಲ ಮತ್ತು ನನಗಾಗಿ ಇಷ್ಟಾಗಿ ಮಾಡಿದಾತನಿಗೆ ಬೆನ್ನು ತೋರಿಸುವದಿಲ್ಲ ಎಂಬುದು ನನ್ನ ಹೃದಯದಂತರಾಳದ ಪ್ರಾರ್ಥನೆ ಆಗಿದೆ. ನಾನು ಆತನ ಹೆಸರಿಗೆ ಮಹಿಮೆಯನ್ನು ತರುವಂತೆ ನನ್ನ ಜೀವಿತವನ್ನು ಜೀವಿಸಲು ಮತ್ತು ನಿರಂತರವಾಗಿ ಆತನ ಮಗುವಾಗಿ ಜೀವಿಸಲು ಬಯಸುತ್ತೇನೆ.

ದುಂಡು ಸುತ್ತಿರಿ:ಹೌದು    ನಿರ್ಧರಿಸಿಲ್ಲ



# ಪಾಠ 4
# ನಮ್ಮ ನಡತೆಯನ್ನು ಶುದ್ಧೀಕರಿಸುವದರಲ್ಲಿ ದೇವರ ಪ್ರೀತಿಯು ಪ್ರಕಟವಾಗಿದೆ.

(1) ದೇವರ ಗುಣಲಕ್ಷಣದ ಯಾವ ನಾಲ್ಕು ವಿಶೇಷಗುಣಗಳನ್ನು ಆತನು ನಮ್ಮಲ್ಲಿ ಸೇರಿಸಲು ಹಂಬಲಿಸುತ್ತಾನೆ, ಮತ್ತು ಅವು ನಾವು ಹೊಂದಿ ಕೊಳ್ಳಬಹುದಾದ ವಾಗ್ದಾನಗಳಾಗಿವೆ?

ಯೆಹೋವನು ಮೋಶೆಯ ಎದುರಾಗಿ ಹೋಗುತ್ತಾ ಪ್ರಕಟವಾಗಿ ಹೇಳಿದ್ದೇ ನಂದರೆ: "ಯೆಹೋವ, ಯೆಹೋವ ಕನಿಕರವೂ ದಯೆಯೂ ಉಳ್ಳ ದೇವರು; ದೀರ್ಘಶಾಂತನೂ ಪ್ರೀತಿಯೂ ನಂಬಿಕೆಯೂ ಉಳ್ಳವನು; (ವಿಮೋಚನಕಾಂಡ 34:6)

ನಂಬಿಗಸ್ತನಾದ ಸೃಷ್ಟಿಕರ್ತನಿಗೆ ನಿನ್ನ ಆತ್ಮವನ್ನು ಸಮರ್ಪಿಸು, ಆತನ ಕೃಪೆಯು

ಖಚಿತವಾದದ್ದು. ಆತನ
ಒಡಂಬಡಿಕೆಯು ಶಾಶ್ವತವಾದದ್ದು.
ಯಾವನ ನಿರೀಕ್ಷೆಯು ಯಾವಾಗಲೂ
ಸತ್ಯವಂತನಾಗಿರುವ ತನ್ನ ಕರ್ತನಾದ
ದೇವರಲ್ಲಿ ಇದೆಯೋ  ಅವನು ಧನ್ಯನು.
ನಿಮ್ಮ ಮನಸ್ಸು ವಾಗ್ದಾನವನ್ನು
ಮನವರಿಕೆ ಮಾಡಿಕೊಳ್ಳಲಿ ಮತ್ತು
ಅವುಗಳನ್ನು ಹಿಡಿದುಕೊಳ್ಳಲಿ.
ಅಮೂಲ್ಯವಾದ ವಾಗ್ದಾನದಲ್ಲಿ
ಒಳಗೊಂಡ ಹೇರಳವಾದ
ಭರವಸೆಗಳನ್ನು ಮನಸ್ಸಿಗೆ
ತೆಗೆದುಕೊಳ್ಳದಿದ್ದಲ್ಲಿ, ಇನ್ನೊಬ್ಬರ
ಬಾಯಿಂದ ಅವುಗಳನ್ನು ಕೇಳಿಸಿಕೊಳ್ಳಿರಿ.
ದೇವರಿಂದಲೇ ಬಂದಂತ ಈ
ಮಾತುಗಳಲ್ಲಿ ಎಂಥ  ಪರಿಪೂರ್ಣತೆ,
ಎಂಥ ಪ್ರೀತಿ ಮತ್ತು ಎಂಥ ಭರವಸೆ
ಕಂಡುಬರುತ್ತವೆ, ಆತನ ಪ್ರೀತಿಯನ್ನು,
ಆತನ ಕರುಣೆಯನ್ನು ತನ್ನ
ಪೋಷಣೆಯಲ್ಲಿರುವ ಮಕ್ಕಳ ಕುರಿತು
ಆಸಕ್ತಿಯನ್ನು ಪ್ರಕಟಿಸುತ್ತವೆ.

ಕಷ್ಟದಲ್ಲಿರುವ ತನ್ನವರ ಕುರಿತು
ಕರ್ತನು ಪೂರ್ಣ ಅನುಕಂಪವುಳ್ಳ
ವನಾಗಿದ್ದಾನೆ. ಯಾವ ಪಾಪವಾದರೂ
ಅವನು ಕ್ಷಮಿಸಲಾರದಷ್ಟು
ದೊಡ್ಡವಾಗಿವೆಯೋ? ಆತನು
ಕರುಣಾಮಯನಾಗಿದ್ದಾನೆ ಹೀಗಿರುವಾಗ
ದಂಡಿಸುವದಕ್ಕಿಂತ ಆತನು
ಅಪರಿಮಿತವಾಗಿ ಮತ್ತು ಕ್ಷಮಿಸಲು
ಹೆಚ್ಚು ಸಿದ್ಧನಾಗಿ ಮತ್ತು
ಇಷ್ಟವುಳ್ಳವನಾಗಿದ್ದಾನೆ. ಆತನು

ಕೃಪಾಪೂರ್ಣನು, ನಮ್ಮಲ್ಲಿ ತಪ್ಪು ಹುಡುಕುವವನಲ್ಲ. ಆತನು ನಮ್ಮ ಪ್ರಕೃತಿಯನ್ನು ಬಲ್ಲನು, ನಾವು ಧೂಳಿಯಾಗಿದ್ದೇವೆ ಎಂದು ನೆನಪು ಮಾಡಿಕೊಳ್ಳುತ್ತಾನೆ, ತನ್ನ ಮಿತಿಯಿಲ್ಲದ ಅನುಕಂಪ ಮತ್ತು ಕರುಣೆಯಲ್ಲಿ ಆತನು ನಮ್ಮ ಎಲ್ಲಾ ಧರ್ಮಭ್ರಷ್ಟತೆಯನ್ನು ಸ್ವಸ್ಥಪಡಿಸುವಾತನಾಗಿದ್ದಾನೆ, ನಾವು ಇನ್ನೂ ಪಾಪಿಗಳಾಗಿದ್ದಾಗಲೇ ನಮ್ಮನ್ನು ಪ್ರೀತಿಸಿದ್ದಾನೆ. ತನ್ನ ಬೆಳಕನ್ನು ಹಿಂತೆಗೆಯದೆ, ಕ್ರಿಸ್ತನಿಗಾಗಿ ನಮ್ಮ ಮೇಲೆ ಪ್ರಕಾಶಿಸುತ್ತಲೇ ಇದ್ದಾನೆ.

(2) ತಂದೆಗೆ ಅವನು ಮಾಡಿದ ಪ್ರಾರ್ಥನೆಯಲ್ಲಿ ಯೇಸು ದೇವರಿಗೆ ನಮ್ಮ ಮೇಲೆ ಇರುವ ಪ್ರೀತಿಯನ್ನು ಹೇಗೆ ವರ್ಣಿಸಿದ್ದಾನೆ?

ನಾನು ಅವರಲ್ಲಿಯೂ ನೀನು ನನ್ನಲ್ಲಿಯೂ ಇರಲಾಗಿ ಅವರ ಐಕ್ಯವು ಪೂರ್ಣಸಿದ್ಧಿಗೆ ಬರುವದರಿಂದ ನೀನು ನನ್ನನ್ನು ಕಳುಹಿಸಿಕೊಟ್ಟಿದ್ದೀ ಎಂದೂ ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ ಎಂದೂ ಲೋಕಕ್ಕೆ ತಿಳಿದುಬರುವದು. (ಯೋಹಾನ 17:23).

ಇಲ್ಲಿ  ಆ ಅದ್ಭುತವಾದ ಪ್ರೀತಿಯ ಒಂದು ಪ್ರಕಟನೆ ಇದೆ, ಬಹಳಷ್ಟು ಪ್ರೋತ್ಸಾಹ ಮತ್ತು ಸಂತೈಸುವಿಕೆಯಿಂದ ಕೂಡಿದೆ, ದೇವರು ತನ್ನ ಮಗನನ್ನು ಪ್ರೀತಿಸಿದ

ಹಾಗೆಯೇ ನಮ್ಮನ್ನು ಪ್ರೀತಿಸುತ್ತಾನೆ. ಇದನ್ನೇ ಯೇಸು ತನ್ನ ಶಿಷ್ಯರಿಗೆ ತನ್ನ ಪ್ರಾರ್ಥನೆಯಲ್ಲಿ ಹೇಳಿದನು. "ನೀನು ನನ್ನನ್ನು ಪ್ರೀತಿಸಿದಂತೆ ಅವರನ್ನೂ ಪ್ರೀತಿಸಿದ್ದೀ." (ಯೋಹಾನ 17:23).

ಮೊಟ್ಟ ಮೊದಲನೆಯ ಹಂತ ದೇವರನ್ನು ತಿಳಿದುಕೊಳ್ಳುವದು ಮತ್ತು ಆತನು ನಮ್ಮ ಮೇಲೆ ಇಟ್ಟಿರುವ ಪ್ರೀತಿಯನ್ನು ನಂಬುವದು. (1ಯೋಹಾನ 4:1), ಯಾಕಂದರೆ ಆತನ ಪ್ರೀತಿ ನಮ್ಮನ್ನು ಸೆಳೆಯುವದರಿಂದ ನಾವು ಆತನ ಬಳಿಗೆ ನಡೆಸಲ್ಪಡುತ್ತೇವೆ.

ತಂದೆಯು ತನ್ನ ಮಗನನ್ನು ಪ್ರೀತಿಸಿದಂತೆಯೇ ಮಾನವ ಕುಟುಂಬದ ಯಾವುದೇ ಸದಸ್ಯನನ್ನು ಪ್ರೀತಿಸಿಯೇ ಪ್ರೀತಿಸುತ್ತಾನೆ. ಆತನು ಮಾಡುತ್ತಾನೆ ಎಂಬ ಭರವಸೆ ನಮಗಿದೆ ಈ ಭರವಸೆ ಪ್ರತಿಯೊಂದು ಹೃದಯಕ್ಕೆ ಸಂತೋಷವನ್ನು ತರಬೇಕು, ಮತ್ತು ಉನ್ನತವಾದ ಗೌರವನ್ನು ಜಾಗ್ರತಗೊಳಿಸಬೇಕು ಮತ್ತು ಹೇಳಲಶಕ್ಯವಾದ ಕೃತಜ್ಞತೆಯನ್ನು ಸಲ್ಲಿಸಲು ಕರೆ ನೀಡಬೇಕು. ದೇವರ ಪ್ರೀತಿ ಅಖಚಿತವಾದದ್ದಲ್ಲ ಮತ್ತು ಅಸತ್ಯವಾದದ್ದಲ್ಲ, ಅದು ಜೀವಂತ ಸತ್ಯವಾಗಿದೆ.

(3) ತನ್ನ ಮಕ್ಕಳನ್ನು ಪ್ರೀತಿಸುವ ಯಾವುದೇ ಉತ್ತಮ ತಂದೆಯಂತೆ

ಕೆಲವೊಂದು ಸಮಯದಲ್ಲಿ  ನಮ್ಮ ಗುಣಲಕ್ಷಣಗಳಿಂದ ನಮ್ಮನ್ನು ಘನವಂತರನ್ನಾಗಿ ಮತ್ತು ಪರಿಪೂರ್ಣರನ್ನಾಗಿ ಮಾಡಲು ಕರ್ತನು **ಏನು ಮಾಡುತ್ತಾನೆ?**

**ಕರ್ತನು ತಾನು ಪ್ರೀತಿಸುವವನನ್ನೇ ಶಿಕ್ಷಿಸುತ್ತಾನೆ ತಾನು ಸೇರಿಸಿಕೊಳ್ಳುವ ಪ್ರತಿಯೊಬ್ಬ ಮಗನನ್ನು ಹೊಡೆಯುತ್ತಾನೆ (ಇಬ್ರಿಯ 12:6)**

**ತಾಳ್ಮೆ, ಸತತವಾಗಿ ಶಿಸ್ತಿಗೆ ಒಳಪಡಿಸುವದು ಆತಂಕದಿಂದ ಕೂಡಿದ ಮಮತೆಯಾಗಿದೆ.**
ಘನವಂತರನ್ನಾಗಿ ಮತ್ತು ಪರಿಪೂರ್ಣರನ್ನಾಗಿ ಮಾಡಲು ರಚಿಸಿದ ಅನುಭವಗಳು ಕರ್ತನು ನಮ್ಮನ್ನು ಪ್ರೀತಿಸುತ್ತಾನೆ ಎಂಬುದಕ್ಕೆ ಉತ್ತಮವಾದ ಉದಾಹರಣೆಗಳಾಗಿವೆ. ಅದು ಮಗು ವಾಗಿರಲಿ ಅಥವಾ ಯೌವನಸ್ಥ ಕ್ರೈಸ್ತನಾಗಿರಲಿ, ನಡತೆಗೆ  ಶಿಸ್ತು ಅಗತ್ಯವಾಗಿದೆ.

ದೇವರು ನಡತೆಯನ್ನು ರಚಿಸಲು ಅಗತ್ಯವಿರುವ ಯಾವುದೇ ಶಿಸ್ತನ್ನು ಪ್ರಯೋಗಿಸುತ್ತಾನೆ ಅಥವಾ ಈ ವಿಷಯವನ್ನು ನೆರವೇರಿಸುವ ಅನುಭವಗಳನ್ನು ಅನುಮತಿಸುತ್ತಾನೆ. ಹ್ಯಾಗೂ ಹೇಳಿಕೆಗೆ ಹೆಚ್ಚು ವಾಸ್ತವವಾಗಿ ಒತ್ತು ನೀಡಬಾರದು , ಜೀವಿತದಲ್ಲಿ ಬರುವ ಶಿಸ್ತಿನ ಕೆಲವೊಂದು

ಅನುಭವಗಳನ್ನು ವೈಯಕ್ತಿಕವಾಗಿ ಅಥವಾ ನೇರವಾಗಿ ಅಧಿಕಾರ ನೀಡಿ ಮತ್ತು ಅಪ್ಪಣೆ ಕೊಟ್ಟು ಕಷ್ಟಾನುಭವವನ್ನು ಮತ್ತು ದುಃಖವನ್ನು ದೇವರೇ, ಅನುಮತಿಸುತ್ತಾನೆಂದಲ್ಲ.

(4) ದೇವರು ನಮ್ಮನ್ನು ಪ್ರೀತಿಸುವದರಿಂದ ಮತ್ತು ನಮ್ಮ ಒಳ್ಳೇಯದಕ್ಕಾಗಿ ಕಾರ್ಯ ಮಾಡುವದರಿಂದ ಅನೇಕಾವರ್ತಿ ಆತನು ಸೈತಾನನು ಶಾಪವಾಗಲಿ ಎಂದು ಉದ್ದೇಶಿಸಿರುವದನ್ನು ಏನು ಮಾಡುತ್ತಾನೆ?

ಆದರೂ ನಿಮ್ಮ ದೇವರಾದ ಯೆಹೋವನು ನಿಮ್ಮನ್ನು ಪ್ರೀತಿಸಿದ್ದರಿಂದ ಬಿಳಾಮನ ಮಾತಿಗೆ ಸಮ್ಮತಿಸದೆ ಅವನಿಂದ ಶಾಪವನ್ನು ನುಡಿಯದೆ ಆಶೀರ್ವಾದವನ್ನೇ ಹೇಳಿಸಿದನು. (ಧರ್ಮೋಪದೇಶಕಾಂಡ 23:5)

ಕರ್ತನು ಆಶಾಭಂಗವಾದ  ಹಾಗೆ ಮತ್ತು ಸೋಲಿನ ಹಾಗೆ ತೋರಿಬರುವ ಸನ್ನಿವೇಶದಲ್ಲಿ ಜಯವನ್ನು ತರುತ್ತಾನೆ. ನಾವು ದೇವರನ್ನು ಮರೆತು ಬಿಡುವ ಅಪಾಯದಲ್ಲಿದ್ದೇವೆ.  ಕಣ್ಣಿಗೆ ಕಾಣದ ಸಂಗತಿಗಳನ್ನು ನಂಬಿಕೆಯ ಕಣ್ಣುಗಳಿಂದ ನೋಡುವದಕ್ಕೆ ಬದಲಾಗಿ ಕಣ್ಣಿಗೆ ಕಾಣುವ ಸಂಗತಿಗಳನ್ನು

ನೋಡುತ್ತೇವೆ. ಯಾವಾಗ ದುರ್ದೈವ ಅಥವಾ ಪ್ರಕೋಪಗಳು ಬರುವಾಗ ನಾವು ದೇವರನ್ನು ನಿರ್ಲಕ್ಷ ಮತ್ತು ಕ್ರೂರತನದಿಂದ ದೂರಲು ಸಾಧ್ಯ. ಕೆಲವು ನಿಟ್ಟಿನಲ್ಲಿ ಆತನು ಒಂದುವೇಳೆ ನಮ್ಮ ಪ್ರಯೋಜನೀಯತೆಯನ್ನು ತುಂಡರಿಸಿ ಬಿಡಲು ನೋಡುವುದಾದರೆ, ಹೀಗೆ ದೇವರು ನಮ್ಮ ಒಳ್ಳೆಯದಕ್ಕಾಗಿ ಕಾರ್ಯಮಾಡುತ್ತಿದ್ದಾನೆ ಎಂದು ಯೋಚಿಸುವದನ್ನು ಬಿಟ್ಟು ನಾವು ಶೋಕಿಸುತ್ತೇವೆ. ಶಿಕ್ಷಿಸುವದು ಆತನ ಯೋಜನೆಯ ಒಂದು ಭಾಗವಾಗಿದೆ ಮತ್ತು ಅದು ವೇದನೆಯ ಬೆತ್ತದ ಅಡಿಯಲ್ಲಿ ಕ್ರೈಸ್ತರು ಕೆಲವೊಮ್ಮೆ ಯಜಮಾನನಿಗೆ ಕ್ರಿಯಾಶೀಲವಾದ ಸೇವೆಯಲ್ಲಿ ತೊಡಗಿಕೊಂಡಿರುವಾಗ ಮಾಡುವ ದಕ್ಕಿಂತ ಹೆಚ್ಚು ಮಾಡಬಹುದು ಎಂದು ಕಲಿಯುವದು ಅಗತ್ಯವಾಗಿದೆ.

ಪೌಲನು ಈ ವಿಚಾರದ ಮೇಲೆ ತನ್ನ ವಿವರಣೆಯಲ್ಲಿ ಸೂಚಿಸುತ್ತಾನೆ (ಇಬ್ರಿಯ 12:5-11) ನಾವು ನಮ್ಮನ್ನು ಶಿಸ್ತಿಗೆ ಒಳಪಡಿಸುವ ಲೋಕದ ತಂದೆಗಳನ್ನು ಗೌರವನ್ನು ನೀಡಿದ್ದೇವೆ. ಬಹುಶಃ ಮಕ್ಕಳಾಗಿ ನಾವು ಅವರು ನಮ್ಮನ್ನು ಪ್ರೀತಿಸಿದ್ದರಿಂದ ಹೀಗೆ ಮಾಡಿದ್ದಾರೆ ಎಂದು ಮನವರಿಕೆ ಮಾಡಿಕೊಂಡಿದ್ದೇವೆ. ದೇವರ ಮಕ್ಕಳು ಎಲ್ಲಾ ಸಂಗತಿಗಳು ಪರಲೋಕದಲ್ಲಿರುವ ತಂದೆಯ ನಿಯಂತ್ರಣದಲ್ಲಿವೇ ಆತನು ಅವುಗಳಲ್ಲಿ

ಆನಂದಿಸುತ್ತಾನೆ ಮತ್ತು ಒಂದುವೇಳೆ ನಾವು ಸಂತೋಷದಿಂದ ಶಿಸ್ತಿಗೆ ಸಮರ್ಪಿಸಬೇಕು ಮತ್ತು ಅದು ಉದ್ದೇಶಿಸಿದ ಪಾಠವನ್ನು ನಾವು ಕಲಿಯಬೇಕು.

(5) ಕರ್ತನು ಯಾರನ್ನು ಗದರಿಸುತ್ತಾನೆ ಮತ್ತು ಶಿಕ್ಷಿಸುತ್ತಾನೆ?

ನಾನು ಯಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ. ಆದುದರಿಂದ ನೀನು ಆಸಕ್ತನಾಗಿರು; ದೇವರ ಕಡೆಗೆ ತಿರುಗಿಕೋ. (ಪ್ರಕಟನೆ 3:19)

ಯೇಸು ಹೇಳಿದ್ದು: “ತಂದೆಯೇ ತಾನೇ ನಿಮ್ಮನ್ನು ಪ್ರೀತಿಸುತ್ತಾನೆ.” ಒಂದುವೇಳೆ ನಮ್ಮ ನಂಬಿಕೆ  ಆತನ ಮೇಲೆ ನೆಲೆಗೊಳ್ಳುವಾಗ ಕ್ರಿಸ್ತನ ಮೂಲಕ ಅದು ಧೃಢಪಡುತ್ತದೆ “ಆತ್ಮನ ಪ್ರಕಟಿಸುವಿಕೆ ಖಚಿತವಾದದ್ದು ಮತ್ತು ಧೃಢವಾದದ್ದು ಮತ್ತು ಅದು ನಮ್ಮ ಮುಂದೂತನು ಪ್ರವೇಶಿಸಿದ ತೆರೆಯ ಒಳಗಡೆ ಪ್ರವೇಶಿಸುವಂತದ್ದು. ನಿರಾಶೆಗಳು ಬರುವದು ನಿಜವಾಗಿದೆ; ಹಿಂಸೆಯನ್ನು ನಾವು ನಿರೀಕ್ಷಿಸಬೇಕು; ಆದರೆ ನಾವು ದೊಡ್ಡ ಮತ್ತು ಸಣ್ಣ ಎಲ್ಲವನ್ನೂ, ದೇವರಿಗೆ ಸರ್ಮಪಿಸಬೇಕು. ನಮ್ಮ ಅಧಿಕವಾದ ವೇದನೆಯಿಂದ ಅಥವಾ ನಮ್ಮ ಹೊರೆಗಳ ಭಾರದಿಂದ ಆತನು ಗಾಬರಿಗೊಳಗಾಗಿಲ್ಲ.

ಆತನ ಕಾಯುವಿಕೆ ಪ್ರತಿಯೊಂದು ಮನೆಗೂ ವಿಸ್ತರಿಸುತ್ತದೆ ಮತ್ತು ಪ್ರತಿಯೊಬ್ಬ ವ್ಯಕ್ತಿಯನ್ನು ಸುತ್ತುವರೆದಿರುತ್ತದೆ. ಆತನು ನಮ್ಮ ಎಲ್ಲಾ ವ್ಯವಹಾರ ಮತ್ತು ನಮ್ಮ ದುಃಖಗಳ ಕುರಿತು ಕಳಕಳಿಯುಳ್ಳವನಾಗಿದ್ದಾನೆ. ಆತನು ಪ್ರತಿಯೊಂದು ಕಣ್ಣೀರನ್ನು ಗಮನಿಸುತ್ತಾನೆ; ಆತನು ನಮ್ಮ ದೌರ್ಬಲ್ಯಗಳನ್ನು ಬಲ್ಲಾತನಾಗಿದ್ದಾನೆ. ಇಲ್ಲಿ ನಮ್ಮ ಮೇಲೆ ಬೀಳುವ ಎಲ್ಲಾ ವೇದನೆ ಮತ್ತು ಶೋಧನೆಗಳು ಅನುಮತಿಸಲ್ಪಟ್ಟಿವೆ, ಆತನ ಪ್ರೀತಿಯ ಉದ್ದೇಶ ನಮ್ಮಲ್ಲಿ ನೆರವೇರುವದಕ್ಕಾಗಿ, ನಾವು ಆತನ ಪರಿಶುದ್ಧತೆಯಲ್ಲಿ ಪಾಲುಗಾರರಾಗುವದಕ್ಕಾಗಿ" ಮತ್ತು ಈ ಮೂಲಕ ಆತನ ಸಾನಿಧ್ಯದಲ್ಲಿ ದೊರೆಯುವ ಪರಿಪೂರ್ಣ ಸಂತೋಷದಲ್ಲಿ ಭಾಗಿಗಳಾಗುತ್ತೇವೆ.

ಶೋಧನೆ ಮತ್ತು ಹಿಂಸೆಗೆ ಒಳಗಾದ ಆತ್ಮ ಅವರ ಮೇಲೆ ಶಿಕ್ಷೆ ಬರುವಾಗ ಜ್ಞಾಪಕದಲ್ಲಿಟ್ಟುಕೊಳ್ಳಲಿ, ಕರ್ತನು ಅವರನ್ನು ಮರಣದಿಂದ ರಕ್ಷಿಸುವಾತನಾಗಿದ್ದಾನೆ. ಯಾವ ಆತ್ಮಕ್ಕೆ ದಂಡನೆ ಬರುತ್ತದೋ ಜ್ಞಾಪಕದಲ್ಲಿಟ್ಟುಕೊಳ್ಳಲಿ, "ನಾನು ಯಾರನ್ನು ಪ್ರೀತಿಸುತ್ತೇನೋ, ಅವರನ್ನು ನಾನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ (ಪ್ರಕಟನೆ 3:19)

(6) ಕರ್ತನು ಗದರಿಸುವಾಗ ಮತ್ತು ಶಿಕ್ಷಿಸುವಾಗ ನಾವು ಮಾಡಬೇಕಾದದ್ದೇನು?
ನಾನು ಯಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ. ಆದುದರಿಂದ ನೀನು ಆಸಕ್ತನಾಗಿರು; ದೇವರ ಕಡೆಗೆ ತಿರುಗಿಕೋ. (ಪ್ರಕಟನೆ 3:19)

ಕರ್ತನು ಹೇಳುತ್ತಾನೆ, “ನಾನು ಯಾರನ್ನು ಪ್ರೀತಿಸುತ್ತೇನೋ ಅವರನ್ನು ಗದರಿಸುತ್ತೇನೆ ಮತ್ತು ಶಿಕ್ಷಿಸುತ್ತೇನೆ. ಆದುದರಿಂದ ನೀನು ಆಸಕ್ತನಾಗಿರು; ದೇವರ ಕಡೆಗೆ ತಿರುಗಿಕೋ.” ಕ್ರಿಸ್ತನು ಮುರಿದ ಹೃದಯವನ್ನು ಎತ್ತುತ್ತಾನೆ ಮತ್ತು ದುಃಖಪಡುವ ಆತ್ಮವನ್ನು ಅದು ಆತನ ನಿವಾಸಸ್ಥಾನವಾಗುವರೆಗೆ ಶುದ್ಧೀ ಕರಿಸುತ್ತಾನೆ.

ಆದರೆ ಹಿಂಸೆಗಳು ನಮ್ಮ ಮೇಲೆ ಬರುವಾಗ, ನಮ್ಮಲ್ಲಿ ಎಷ್ಟು ಜನ ಯಾಕೋಬನಂತೆ ಇದ್ದೇವೆ! ನಾವು ಇದು ವೈರಿಯ ಕೈವಾಡ ಎಂದು ಯೋಚಿಸುತ್ತೇವೆ; ಮತ್ತು ನಾವು ನಮ್ಮ ಶಕ್ತಿಯು ಕುಂದಿ ಹೋಗುವವರೆಗೆ ಕತ್ತಲೆಯಲ್ಲಿ ಹೋರಾಡುತ್ತೇವೆ ಮತ್ತು ನಾವು ಸಂತೈಸುವಿಕೆಯನ್ನು ಮತ್ತು ಬಿಡುಗಡೆಯನ್ನು ಹೊಂದುವದಿಲ್ಲ. ಯಾಕೋಬನಿಗೆ ರಾತ್ರಿ ಕಳೆದು ಹೋಗುವಾಗ ದೈವೀಕ ಸ್ಪರ್ಶ ತಾನು ಯಾರೊಂದಿಗೆ ಹೋರಾಡುತ್ತಿದ್ದೇನೋ

ಆತನು ಒಡಂಬಡಿಕೆಯ ದೂತನು ಎಂಬ ಸತ್ಯ ಪ್ರಕಟವಾಗುತ್ತದೆ; ಮತ್ತು ಅಳುತ್ತಾ ಮತ್ತು ಅಸಹಾಯಕನಾಗಿ, ಆತನು ಶಾಶ್ವತವಾದ ಪ್ರೀತಿಯ ಎದೆಯ ಮೇಲೆ ಆತನ ಆತ್ಮವು ಹಂಬಲಿಸುತ್ತಿದ್ದ ಆಶೀರ್ವಾದವನ್ನು ಹೊಂದಿಕೊಳ್ಳಲು ಬಿದ್ದನು, ನಾವು ಸಹ ಶೋಧನೆಗಳು ಎಂದರೆ ಲಾಭ ಎಂದು ಅರಿತುಕೊಳ್ಳಬೇಕು ಮತ್ತು ಕರ್ತನ ಶಿಕ್ಷೆಯನ್ನು ತಾತ್ಸಾರ ಮಾಡಬಾರದು ಅಥವಾ ನಮ್ಮನ್ನು ಗದರಿಸುವಾಗ ಬಲಹೀನರಾಗಬಾರದು.

ನಿಜವಾಗಿ ಪರಿಹಾರದ ಶಿಸ್ತಿನ ಗುರಿ ತಪ್ಪುಮಾಡುವವನಲ್ಲಿ ಮನವರಿಕೆಯನ್ನು ತರುವದು ಮತ್ತು ಹೊಸ ಕ್ರಿಯೆಯಲ್ಲಿ ತೊಡಗಲು ಪ್ರೋತ್ಸಾಹ ನೀಡುವದಾಗಿದೆ. ಶಿಕ್ಷಿಸು ಈ ಪದ (paideuō,) ಎಂಬ ಪದದಿಂದ ಬಂದಿದೆ  ಅದರ ಅರ್ಥ "ತರಬೇತಿಗೊಳಿಸು"  "ಶಿಕ್ಷಿಸು" ನಿರ್ಧಿಷ್ಟವಾಗಿ ತಂದೆತಾಯಿಗಳಾಗಿ ಮಕ್ಕಳನ್ನು ಸುಧಾರಿಸುವದಕ್ಕಾಗಿ ಮತ್ತು ತರಬೇತಿ ನೀಡುವದಕ್ಕಾಗಿ ಶಿಕ್ಷಿಸುತ್ತಾರೆ. ಕ್ರೈಸ್ತರಿಗೆ ಶಿಕ್ಷೆ, ಅವರು ಕ್ರಿಸ್ತನ ಗದರಿಸುವಿಕೆಯನ್ನು ಗೌರವಿಸದೇ ಹೋಗುವಾಗ ಬರುತ್ತದೆ. ಆತನ ಗದರಿಸುವಿಕೆ  ಅಥವಾ  ಶಿಕ್ಷೆ ಆತನ ಕೋಪದ ವ್ಯಕ್ತಪಡಿಸುವಿಕೆಯಾಗಿದೆ ಮನುಷ್ಯನು ತನ್ನ ಕೋಪವನ್ನು ನಿಯಂತ್ರಿಸದೇ ಹೋಗುವಾಗ –

ಬಲವಾದ ಪ್ರೀತಿಯ ಉದ್ದೇಶ ಪಾಪಿಯನ್ನು ಪಶ್ಚಾತ್ತಾಪಕ್ಕೆ ನಡೆಸುವದಾಗಿದೆ.

(7) ಗದರಿಸುವಿಕೆ ಮತ್ತು ಶಿಕ್ಷೆಯೊಟ್ಟಿಗೆ ದೇವರು ತನ್ನ ಕರುಣೆಯುಳ್ಳ ಪ್ರೀತಿಯ ಕುರಿತು ತನ್ನ ಜನರಿಗೆ ಯಾವ ವಾಗ್ದಾನವನ್ನು ಮಾಡಿದ್ದಾನೆ?

ಆದರೂ ನಾನು ಅವನಲ್ಲಿಟ್ಟಿರುವ ಕೃಪೆಯನ್ನು ತಪ್ಪಿಸುವದಿಲ್ಲ; ನನ್ನ ನಂಬಿಗಸ್ತಿಕೆಯಿಂದ ಜಾರುವದಿಲ್ಲ (ಕೀರ್ತನೆ 89:33)

ಆತನ ಮಾತು ವಾಗ್ದಾನವಾಗಿದೆ. ಬೆಟ್ಟಗಳು ಕದಲಬಹುದು ಗುಡ್ಡಗಳು ಇಲ್ಲದಂತಾಗಬಹುದು. ಆದರೆ ಆತನ ಕರುಣೆ  ಆತನ ಜನರನ್ನು ಬಿಟ್ಟುಹೋಗುವದಿಲ್ಲ, ಅಲ್ಲದೇ ಸಮಾಧಾನದ ಆತನ ಒಡಂಬಡಿಕೆ ತೆಗೆದುಹಾಕಲ್ಪಡುವದಿಲ್ಲ. ಆತನ ಧ್ವನಿ ಕೇಳಿಸಿತು, “ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ” (ಯೆರೆಮೀಯ 3:13) “ಶಾಶ್ವತವಾದ ಕೃಪೆಯಿಂದ ನಿನ್ನನ್ನು ಕರುಣಿಸುವೆನು ” (ಯೆಶಾಯ 54:8).

ಈ ಪ್ರೀತಿ ಎಷ್ಟು ಆಶ್ಚರ್ಯಕರವಾಗಿದೆ, ದೇವರು ನಮ್ರತೆಯಿಂದ ಸಂದೇಹ ಮತ್ತು ಪ್ರಶ್ನೆಗಳಿಗೆ ಕಾರಣವಾಗಿರುವ ಮಾನವನಲ್ಲಿರುವ  ಭಯ  ಮತ್ತು

ಬಲಹೀನತೆಗಳನ್ನು ತೆಗೆದು ಹಾಕಿ, ನಂಬಿಕೆಯಿಂದ ತನ್ನ ಕಡೆಗೆ ಎತ್ತಿದ ನಡುಗುವ ಕೈಗಳನ್ನು ಹಿಡಿದುಕೊಂಡು; ಆತನಲ್ಲಿ ವಿಶ್ವಾಸವನ್ನು ಇಡಲು ದ್ವಿಗುಣಗೊಳಿಸಿದ ಭರವಸೆ ಮತ್ತು ಸುರಕ್ಷಿತೆಯೊಂದಿಗೆ ನಮಗೆ ಸಹಾಯ ಮಾಡುತ್ತಾನೆ. ಆತನ ನಮ್ಮ ವಿಧೇಯತೆಯ ಶರತ್ತಿನ ಮೇಲೆ ನಮ್ಮೊಂದಿಗೆ ಒಂದು ಮುರಿದುಹೋಗದ ಒಡಂಬಡಿಕೆಯನ್ನು ಮಾಡಿಕೊಂಡಿದ್ದಾನೆ ಮತ್ತು ಆತನು ಸಂಗತಿಗಳ ಕುರಿತು ನಮ್ಮ ಸ್ವಂತ ತಿಳುವಳಿಕೆಯ ಮೇಲೆ ನಮ್ಮನ್ನು ಸಂಧಿಸಲು ಬರುತ್ತಾನೆ.

ನಾವು ಯೋಚಿಸುತ್ತೇವೆ ಒಂದು ವಾಗ್ದಾನ ಅಥವಾ ನಮ್ಮ ಸಹ ಮಾನವರಿಂದ ಒಂದು ವಚನ, ದಾಖಲಿಸಲ್ಪಟ್ಟಿದ್ದರು ಅದಕ್ಕೆ ಆಧಾರಬೇಕು. ಯೇಸು ಈ ಎಲ್ಲಾ ವಿಚಿತ್ರವಾದ ಭಯಗಳನ್ನು ಪರಿಹರಿಸಿ ಆತನು ತನ್ನ ವಾಗ್ದಾನವನ್ನು ಒಂದು ಪ್ರತಿಜ್ಞೆಯೊಂದಿಗೆ ಧೃಢಪಡಿಸಿದ್ದಾನೆ, "ಅದರಲ್ಲಿ ದೇವರು ಸ್ವ-ಇಚ್ಛೆಯಿಂದ ಹೆಚ್ಚಿ ಸಮೃದ್ಧಿಯಾಗಿ ವಾಗ್ದಾನದ ಹಕ್ಕುದಾರರಿಗೆ ತನ್ನ ಸಮಾಲೋಚನೆಯ ಸ್ಥಿರತೆಯನ್ನು ತನ್ನ ಪ್ರತಿಜ್ಞೆಯ ಮೂಲಕ ಧೃಢಪಡಿಸುತ್ತಾನೆ. ತನ್ನ ವಾಗ್ದಾನದಲ್ಲಿ ನಮ್ಮ ನಂಬಿಕೆಯನ್ನು ಬಲಪಡಿಸಲು ಕರ್ತನು ಇನ್ನೂ ಹೆಚ್ಚಾಗಿ ಏನನ್ನು ಮಾಡಲು ಸಾಧ್ಯ?

ನಿಮ್ಮ ಮನಸ್ಸು ದೇವರ ಒಳ್ಳೇತನದ ಮೇಲೆ ನೆಲೆಗೊಳ್ಳಲಿ ಆತನು ನಮ್ಮನ್ನು ಪ್ರೀತಿಸಿದ ಆ ಶ್ರೇಷ್ಠವಾದ ಪ್ರೀತಿಯ ಮೇಲೆ, ವಿಮೋಚನೆಯ ಕಾರ್ಯದಲ್ಲಿ ಸ್ಪಷ್ಟೀಕರಿಸಿದ್ದಂತೆ ನೆಲೆಗೊಳ್ಳಲಿ. ಒಂದುವೇಳೆ ಆತನು ನಮ್ಮನ್ನು ಪ್ರೀತಿಸದಿದ್ದಲ್ಲಿ, ನಮ್ಮನ್ನು ಅಮೂಲ್ಯರು ಎಂದು ಎಣಿಸದಿದ್ದಲ್ಲಿ ಆತನು ಶ್ರೇಷ್ಠ ಬಲಿದಾನವನ್ನು ಮಾಡುತ್ತಿರಲಿಲ್ಲ. ಆತನ ಉದಾರವಾದ ಕರುಣೆ ಮತ್ತು ಕೃಪೆಯಲ್ಲಿ ನಿಮ್ಮ ಹೃದಯ ಮತ್ತು ಮನಸ್ಸು ಆಯಾಸಗೊಂಡ ಮಗುವು ತನ್ನ ತಾಯಿಯ ತೋಳುಗಳಲ್ಲಿ ವಿಶ್ರಮಿಸುವಂತೆ ವಿಶ್ರಮಿಸಲಿ, ಆತನ ಶಾಶ್ವತವಾದ ಹಸ್ತಗಳು ನಿಮ್ಮ ಅಡಿಯಲ್ಲಿವೆ.

(8) ಕೆಲವೊಂದು ಸಮಯದಲ್ಲಿ ದೇವರು ಅನುಮತಿಸುವ  ಯಾವ ವೇದನೆಗಳು ನಮಗಾಗಿ ಕಾರ್ಯ ಮಾಡುತ್ತವೆ?

ಹೇಗಂದರೆ ಕ್ಷಣಮಾತ್ರವಿರುವ ನಮ್ಮ ಹಗುರವಾದ ಸಂಕಟವು ಅತ್ಯಂತಾ ಧಿಕವಾದ ಪ್ರತಿಫಲವನ್ನು ಉಂಟು ಮಾಡಿ ನಮಗೆ ನಿರಂತರವಾಗಿರುವ ಗೌರವವಾದ ಪ್ರಭಾವವನ್ನು ದೊರಕಿಸುತ್ತದೆ. ನಾವು ಕಾಣುವಂಥದನ್ನು ಲಕ್ಷಿಸದೆ ಕಾಣದಿರುವಂಥದನ್ನು ಲಕ್ಷಿಸುವವರು ಆಗಿದ್ದೇವೆ ಕಾಣುವಂಥದು ಸ್ವಲ್ಪ ಕಾಲ ಮಾತ್ರ ಇರುವದು; ಕಾಣದಿರುವಂಥದು

ಸದಾಕಾಲವೂ ಇರುವದು (2ಕೊರಿಂಥ 4:17-18)

ಒಂದುವೇಳೆ ಪೌಲನು ಪ್ರತಿಯೊಂದು ಬದಿಯಲ್ಲಿ ಸಮಸ್ಯೆಗೆ ಗಾಬರಿಗೆ, ಹಿಂಸೆಗೆ ಒಳಗಾಗಿದ್ದಲ್ಲಿ, ತನ್ನಶೋಧನೆಗಳನ್ನು ಹಗುರವಾದವುಗಳು ಎಂದು ಕರೆಯುವಾಗ, ಇಂದಿನ ಕ್ರೈಸ್ತರಿಗೆ ದೂರುವದಕ್ಕೆ ಏನಿದೆ? ಪೌಲನ ಅನೇಕ ವೇದಗಳಿಗೆ ಹೋಲಿಸುವಾಗ ನಮ್ಮ ಶೋಧನೆಗಳು ತುಚ್ಛವಾಗಿವೆ! ಅವು ಜಯಿಸುವವನಿಗಾಗಿ ಕಾಯುತ್ತಿರುವ ನಿತ್ಯತ್ವದ ಮಹಿಮೆಯ ಲೋಕಕ್ಕೆ ಹೋಲಿಸುವುದಾದರೆ ಅವು ಯೋಗ್ಯವಲ್ಲ. ಅವರು ದೇವರು ನಡತೆಯ ಪರಿಪೂರ್ಣತೆಗಾಗಿ ಅಭಿಷೇಕಿಸಿದ ಕೆಲಸಗಾರರು, ಕ್ರೈಸ್ತರಿಂದ ಅಪಹರಿಸಿಕೊಂಡಿರುವದು ಮತ್ತು ಕಷ್ಟಾನುಭವ ಎಷ್ಟೇ ದೊಡ್ಡದಾಗಿರಲಿ, ಒದಗಿಸುವಿಕೆಯ ಮಾರ್ಗ ಎಷ್ಟೇ ಕತ್ತಲಾಗಿರಲಿ ಮತ್ತು ರಹಸ್ಯವಾಗಿರಲಿ, ಎಲ್ಲವೂ ಆತನ ಒಳ್ಳೇದಕ್ಕಾಗಿಯೆ ನಡೆಯುತ್ತಿದೆ ಎಂದು ತಿಳಿದು ಅವನು ಕರ್ತನಲ್ಲಿ ಆನಂದಿಸಬೇಕು.

(9) ನಡತೆಯ ಅಭಿವೃದ್ಧಿಗೆ ಯಾವ ವರವು ಜಟಿಲವಾಗಿದೆ, ಯಾರು

ಸ್ವೀಕರಿಸುತ್ತಾರೋ ಅವರೆಲ್ಲರಿಗೂ ಕರ್ತನು ಕೊಡುತ್ತಾನೋ?

ದೇವರು ಆತನನ್ನೇ ಇಸ್ರಾಯೇಲ ಜನರಿಗೆ ಮಾನಸಾಂತರವನ್ನೂ ಪಾಪ ಪರಿಹಾರವನ್ನೂ ದಯಪಾಲಿಸು ವದಕ್ಕಾಗಿ ನಾಯಕನೆಂತಲೂ ರಕ್ಷಕನೆಂತಲೂ  ತನ್ನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಿದನು. (ಅ.ಕೃ.5:31).

ಪಾಪಿ ತಪ್ಪಿಹೋದ ಕುರಿಯನ್ನು ಪ್ರತಿನಿಧಿಸುತ್ತಾನೆ ಮತ್ತು ತಪ್ಪಿಹೋದ ಕುರಿಯನ್ನು ಆತನು ಹುಡುಕಿ ಹಿಂಡಿಗೆ ಹಿಂದಕ್ಕೆ ಕರೆತರದಿದ್ದಲ್ಲಿ ಎಂದಿಗೂ ಹಿಂಡಿಗೆ ಮರಳುವದಿಲ್ಲ. ಯಾವ ಮನುಷ್ಯನು ತನ್ನಷ್ಟಕ್ಕೆ ತಾನೇ ಪಶ್ಚಾತ್ತಾಪ ಪಡುವದಿಲ್ಲ ಮತ್ತು ತನ್ನನ್ನು ತಾನು ನೀತಿವಂತಿಕೆಯ ಆಶೀರ್ವಾದಕ್ಕೆ ಅರ್ಹನನ್ನಾಗಿ ಮಾಡಿಕೊಳ್ಳುವದಿಲ್ಲ. ಕರ್ತನಾದ ಯೇಸು ನಿರಂತರವಾಗಿ ಪಾಪಿಯ ಮನಸ್ಸಿನ ಮೇಲೆ ಪ್ರಭಾವ ಬೀರಲು ಪ್ರಯತ್ನಿಸುತ್ತಿರುತ್ತಾನೆ ಮತ್ತು ಲೋಕದ ಪಾಪವನ್ನು ಕೊಂಡೊಯ್ಯುವ ಯಜ್ಞನದ ಕುರಿಯಾದಾತನನ್ನು ದೃಷ್ಟಿಸಲು ಆಕರ್ಷಿಸುತ್ತಿರುತ್ತಾನೆ. ನಾವು ಯೇಸು ನಮ್ಮನ್ನು ಸೆಳೆದುಕೊಂಡು ನಮ್ಮ ಆತ್ಮವನ್ನು ಬಲಪಡಿಸಿ ಮತ್ತು ನಮ್ಮನ್ನು ಪಶ್ಚಾತ್ತಾಪದ ಅನುಭವಕ್ಕೆ ನಡೆಸಿದ ಹೊರತು ನಾವು ನಮ್ಮ ಆತ್ಮೀಕ

ಜೀವಿತಕ್ಕೆ ಒಂದು ಹೆಜ್ಜೆಯನ್ನು ಮುಂದಿಡಲಾರೆವು.

ಮಹಾಯಾಜಕರ ಮತ್ತು ಸದ್ದುಕಾಯರ ಮುಂದೆ, ಪೇತ್ರನು ಪಶ್ಚಾತ್ತಾಪವು ದೇವರ ವರ ಎಂದು ಸ್ಪಷ್ಟವಾಗಿ ಮಂಡಿಸಿದನು. ಕ್ರಿಸ್ತನ ಕುರಿತು ಮಾತಾಡುತ್ತಾ ಅವನು ಹೇಳಿದನು, "ದೇವರು ಆತನನ್ನೇ ಇಸ್ರಾಯೇಲ ಜನರಿಗೆ ಮಾನಸಾಂತರ ವನ್ನೂ ಪಾಪಪರಿಹಾರವನ್ನೂ ದಯಪಾಲಿಸುವದಕ್ಕಾಗಿ ನಾಯಕ ನೆಂತಲೂ ರಕ್ಷಕನೆಂತಲೂ ತನ್ನ ಬಲಗೈಯಿಂದ ಉನ್ನತ ಸ್ಥಾನಕ್ಕೆ ಏರಿಸಿದನು. (ಅ.ಕೃ.5:31). ಪಶ್ಚಾತ್ತಾಪ ಕ್ಷಮಾಪಣೆ ಮತ್ತು ನೀತಿವಂತರೆಂಬ ನಿರ್ಧಾರ ದೇವರ ವರಕ್ಕಿಂತ ಯಾವುದರಲ್ಲಿ ಕಡಿಮೆ ಇಲ್ಲ. ಮತ್ತು ಅದು ಕ್ರಿಸ್ತನ ಮೂಲಕ ಆತ್ಮಕ್ಕೆ ಕೊಡಲ್ಪಡದಿದ್ದರೆ ಅದನ್ನು ನಾವು ಅನುಭವಿಸಲಿಕ್ಕೆ ಸಾಧ್ಯವಿಲ್ಲ. ಒಂದುವೇಳೆ ನಾವು ಕ್ರಿಸ್ತನೆಡೆಗೆ ಸೆಳೆಯಲ್ಪಟ್ಟಿದ್ದರೆ ಅದು ಆತನ ಬಲ ಮತ್ತು ಮೌಲ್ಯದಲ್ಲಿದೆ. ಅನುತಾಪದ ಕೃಪೆ ಆತನ ಮೂಲಕವಾಗಿ ಬರುತ್ತದೆ ಮತ್ತು ಆತನ ಮೂಲಕ ನೀತಿವಂತರೆಂಬ ನಿರ್ಣಯ ದೊರಕುತ್ತದೆ.

ನಿಮ್ಮ ಮುಂದಿರುವ ಸತ್ಯವೇದದ ಈ ಶ್ರೇಷ್ಟವಾದ ವಾಗ್ದಾನದೊಂದಿಗೆ ನಿಮ್ಮ ಮುಂದೆ ಇದೆ, ಇನ್ನೂ ನೀವು ಸಂದೇಹಕ್ಕೆ ಸ್ಥಳವನ್ನು ಕೊಡಬಹುದೋ? ಒಬ್ಬ

ಬಡ ಪಾಪಿ ಹಿಂದಕ್ಕೆ ಬರಲು ಹಂಬಲಿಸುವುದಾದರೆ, ತನ್ನ ಪಾಪಗಳನ್ನು ಬಿಟ್ಟು ಬಿಡಲು ಹಂಬಲಿಸುವುದಾದರೆ, ಕರ್ತನು ಅವನನ್ನು ಪಶ್ಚಾತ್ತಾಪದೊಂದಿಗೆ ತನ್ನ ಪಾದಕ್ಕೆ ಬರುವದನ್ನು ಕಠಿಣವಾಗಿ ತಡೆಹಿಡಿಯುತ್ತಾನೋ? ಇಂಥ ವಿಚಾರಗಳಿಂದ ದೂರವಾಗಿ ಈ ವಿಚಾರಗಳಿಗಿಂತ ಹೆಚ್ಚು ಅಗೌರವವನ್ನು ತರುವ ವಿಚಾರವಿಲ್ಲ. ನಮ್ಮ ಪರಲೋಕದ ತಂದೆಯ ಕುರಿತು ಇಂಥ ವಿಚಾರಗಳಲ್ಲಿ ಆನಂದಿಸುವದಕ್ಕಿಂತ ಬೇರೆ ಯಾವುದು ನಿಮ್ಮ ಸ್ವಂತ ಆತ್ಮಕ್ಕೆ ನೋವನ್ನು ತರುವದಿಲ್ಲ. ನಮ್ಮ ಸಂಪೂರ್ಣ ಆತ್ಮೀಕ ಜೀವಿತ ದೇವರ ಕುರಿತು ಇಂಥ  ಗ್ರಹಿಸುವಿಕೆಯ ಮೂಲಕ ಟನ್ನಗಟ್ಟಲೆ ಅಪ್ರಯೋಜನೀಯತೆ ಯಿಂದ ತುಂಬುತ್ತವೆ. ಅವು ದೇವರನ್ನು ಹುಡುಕುವ ಅಥವಾ ಸೇವೆಮಾಡುವ ಪ್ರತಿಯೊಂದು ಪ್ರಯತ್ನವನ್ನು ನಿರುತ್ಸಾಹಪಡಿಸುತ್ತವೆ. ನಾವು ದೇವರನ್ನು ಕೇವಲ ನಮ್ಮ ವಿರೋಧವಾಗಿ ತೀರ್ಪನ್ನು ಪ್ರಕಟಿಸುವ ನ್ಯಾಯಾಧಿಪತಿಯಾಗಿ ನೋಡಬಾರದು. ಆತನು ಪಾಪವನ್ನು ಹಗೆಮಾಡುತ್ತಾನೆ; ಆದರೆ ಪಾಪಿಗಳ ಮೇಲಿರುವ ಪ್ರೀತಿಯಿಂದಾಗಿ ಕ್ರಿಸ್ತನ ರೂಪದಲ್ಲಿ ತನ್ನನ್ನೇ ತಾನು ಕೊಟ್ಟನು ಎಲ್ಲರೂ ರಕ್ಷಣೆ ಹೊಂದಬೇಕೆಂದು ಮತ್ತು ಮಹಿಮೆಯ ರಾಜ್ಯದಲ್ಲಿ

ಶಾಶ್ವತವಾದ ಆಶೀರ್ವಾದವನ್ನು ಹೊಂದಬೇಕೆಂದು ಕೊಟ್ಟನು.

(10) ದೇವರು ದಯೆಯುಳ್ಳವನು, ಪ್ರೀತಿಸ್ವರೂಪನು ಮತ್ತು ಕರುಣೆಯುಳ್ಳವನೂ ಆಗಿರುವದರಿಂದ, ಪಶ್ಚಾತ್ತಾಪಪಟ್ಟ  ಪ್ರತಿಯೊಬ್ಬ ಪಾಪಿಗೆ ಏನು ಮಾಡಿದ್ದಾನೆ?

ಆದರೆ ನಮ್ಮ ರಕ್ಷಕನಾದ ದೇವರ ದಯೆಯೂ ಜನೋಪಕಾರವೂ ಪ್ರತ್ಯಕ್ಷವಾದಾಗ ನಾವು ಮಾಡಿದ ಪುಣ್ಯಕಾರ್ಯಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು (ತೀತ 3:4-5).

ಅದೇರೀತಿಯಲ್ಲಿ ಪ್ರತಿಯೊಬ್ಬ ಮಾನವ ಜೀವಿಯೂ ಸಹ ಕ್ರಿಸ್ತನ ಬಳಿಗೆ ಬರಬಹುದು “ನಾವು ಮಾಡಿದ ಪುಣ್ಯಕಾರ್ಯಗಳ ನಿಮಿತ್ತದಿಂದಲ್ಲ ಆತನ ಕರುಣೆಯಿಂದಲೇ ನಮ್ಮನ್ನು ರಕ್ಷಿಸಿದನು,” ತೀತ 3:5. ನೀವು ಪಾಪಿಯಾಗಿರುವದರಿಂದ ದೇವರಿಂದ ಆಶೀರ್ವಾದವನ್ನು ಹೊಂದಿ ಕೊಳ್ಳಲಾರಿರಿ ಎಂದು ನೀವು ಭಾವಿಸುತ್ತೀರೋ? ಜ್ಞಾಪಕ

ದಲ್ಲಿಟ್ಟುಕೊಳ್ಳಿರಿ ಕ್ರಿಸ್ತನು ಪಾಪಗಳನ್ನು ರಕ್ಷಿಸುವದಕ್ಕಾಗಿ ಈ ಲೋಕಕ್ಕೆ ಬಂದನು. ದೇವರಿಗೆ ಶಿಫಾರಸ್ಸು ಮಾಡಿಕೊಳ್ಳಲು ನಮ್ಮಲ್ಲಿ ಏನೂ ಇಲ್ಲ. ನಾವು ಈಗ ಮತ್ತು ಎಂದೆಂದಿಗೂ ಬೇಡಿಕೊಳ್ಳ ಬಹುದಾದ್ದೇನಂದರೆ ನಮ್ಮ ಅತ್ಯಂತ ಅಸಾಹಾಯಕ ಸ್ಥಿತಿ, ಆತನ ವಿಮೋಚನೆಯ ಬಲವನ್ನು ಅಗತ್ಯತೆಯಾಗಿ ಮಾಡುತ್ತದೆ. ಎಲ್ಲಾ ಸ್ವ-ಅವಲಂಬನೆಯನ್ನು ತ್ಯಜಿಸಿ ನಾವು ಕಲ್ವಾರಿ ಕ್ರೂಜೆಯನ್ನು ದೃಷ್ಟಿಸಿ ಹೀಗೆ ಹೇಳೋಣ: ನನ್ನ ಕೈಯಲ್ಲಿ ಯಾವ ಬೆಲೆಯನ್ನೂ ನಾನು ತರಲಿಲ್ಲ, ಕೇವಲ ನಿನ್ನ ಕ್ರೂಜೆಗೆ ನಾನು ಅಂಟಿಕೊಳ್ಳುತ್ತೇನೆ."

ದೇವರು ನನ್ನನ್ನು ಅಷ್ಟಾಗಿ ಪ್ರೀತಿಸುವದಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ, ಆತನು ನನ್ನ ಒಳ್ಳೇಯದಕ್ಕಾಗಿ ಗದರಿಸುವದಕ್ಕೂ ಮತ್ತು ಶಿಸ್ತಿಗೆ ಒಳಪಡಿಸುವದಕ್ಕೂ ಸಾಕಾಗುವಷ್ಟು ನನ್ನನ್ನು ಪ್ರೀತಿಸುತ್ತಾನೆ.

ದುಂಡುಸ್ತುತ್ತಿರಿ: ಹೌದು ನಿರ್ಧರಿಸಿಲ್ಲ

ದೇವರಿಗೆ ನಾನು ಬಹಳವಾಗಿ ಕೃತಜ್ಞಳಾಗಿದ್ದೇನೆ ಆತನ ಕರುಣೆ, ದೀರ್ಘಶಾಂತಿ ಮತ್ತು ವಿಪುಲವಾದ ಉಪಕಾರ ಮತ್ತು ಜೀವವನ್ನು ಉಳಿಸುವ ಈ ವಿಶೇಷಗುಣಗಳನ್ನು ನನ್ನ

ನಡತೆಯಲ್ಲಿ ಸೇರಿಸುವ ಆತನು ಬಯಸುತ್ತಾನೆ.

ದುಂಡುಸ್ತುತ್ತಿರಿ: ಹೌದು ನಿರ್ಧರಿಸಿಲ್ಲ

ಆತನು ಕೆಟ್ಟತನ ಸಂಭವಿಸುವದಕ್ಕೆ ಕಾರಣೀಕರ್ತನಲ್ಲ ಎಂದು ನಾನು ಅರಿತುಕೊಂಡಿದ್ದೇನೆ ಮತ್ತು ಆತನು ಅದನ್ನು ನನ್ನ ಒಳ್ಳೇಯದಕ್ಕೇ ಕಾರ್ಯ ಮಾಡುತ್ತಾನೆಂದು ಸಂತೋಷಪಡುತ್ತೇನೆ ಮತ್ತು ಕೊನೆಯದಾಗಿ ನನ್ನ ನಡತೆಯನ್ನು ಪರಿಪೂರ್ಣ ಗೊಳಿಸುವದಕ್ಕಾಗಿ.

ದುಂಡುಸ್ತುತ್ತಿರಿ: ಹೌದು ನಿರ್ಧರಿಸಿಲ್ಲ

ದೇವರು ನನ್ನನ್ನು ಶಿಕ್ಷಿಸುವಾಗ ಅದರೊಂದಿಗೆ ಬರುವ ಪಶ್ಚಾತ್ತಾಪ ಪಡುವ ವರವನ್ನು ನಾನು ಸ್ವೀಕರಿಸಬೇಕು ಇದರಿಂದಾಗಿ ಆತನು ನನ್ನೊಳಗೆ ಜೀವಿಸಬಹುದು ಮತ್ತು ನಾನು ಆತನ ನಡತೆಯನ್ನು ಪ್ರತಿಫಲಿಸಬಹುದು.

ದುಂಡುಸ್ತುತ್ತಿರಿ: ಹೌದು ನಿರ್ಧರಿಸಿಲ್ಲ

ನಾನು ದೇವರು ಪ್ರೀತಿಯ ಕರುಣೆ ಎಂದಿಗೂ ಬಿದ್ದು ಹೋಗುವದಿಲ್ಲ ಅದಕ್ಕಾಗಿ ವಂದನೆ ಸಲ್ಲಿಸುತ್ತೇನೆ ಯಾಕಂದರೆ ಆತನ್ನು ನನ್ನನ್ನು ಅಷ್ಟಾಗಿ ಪ್ರೀತಿಸುತ್ತಾನೆ ಆತನು ಉಚಿತವಾಗಿ

ಆತನಿಗೆ ಮಹಿಮೆ ತರುವ ಎಲ್ಲಾ ಸಂಗತಿಗಳನ್ನು ನನಗೆ ಕೊಡುತ್ತಾನೆ,

ದುಂಡುಸುತ್ತಿರಿ: ಹೌದು ನಿರ್ಧರಿಸಿಲ್ಲ



# ಪಾಠ 5
# ಕೃಪೆಯ ಮೂಲಕ ಪ್ರಕಟಗೊಂಡ ದೇವರ ಪ್ರೀತಿ

(1) ನಮ್ಮ ಅಪರಾಧಿ ಮತ್ತು ನಾಶಗೊಂಡ ಜನಾಂಗವನ್ನು ರಕ್ಷಿಸುವ ಅದ್ಭುತವಾದ ಸೇವೆಗೆ ದೇವರು ತನ್ನ ದೊಡ್ಡ ಪ್ರೀತಿಯನ್ನು ಪ್ರಕಟಿಸಿರುವದಕ್ಕೆ ಅಪೋಸ್ತಲನು ಯಾವ ಹೆಸರಿನಿಂದ ಉಲ್ಲೇಖಿಸಿದ್ದಾನೆ?

ಇದೆಲ್ಲ ದೇವರಿಂದಲೇ ಉಂಟಾದದ್ದು ಆತನು ಕ್ರಿಸ್ತನ ಮೂಲಕ ನಮ್ಮನ್ನು ತನಗೆ ಸಮಾಧಾನಪಡಿಸಿಕೊಂಡು ಸಮಾಧಾನದ ವಿಷಯವಾದ ಸೇವೆಯನ್ನು ನಮಗೆ ಅನುಗ್ರಹಿಸಿದ್ದಾನೆ. (2ಕೊರಿಂಥ 5:18).

ಅಪೋಸ್ತಲನು ಹೇಳುತ್ತಾನೆ: “ದೇವರು ಕ್ರಿಸ್ತನ ಮೂಲಕ ಲೋಕವನ್ನು

ತನ್ನೊಂದಿಗೆ ಸಂಧಾನ ಮಾಡಿಕೊಳ್ಳುತ್ತಿದ್ದಾನೆ.” ಕೇವಲ ನಾವು ವಿಮೋಚನೆಯ ಮಹತ್ತರ ಯೋಜನೆಯನ್ನು ಅವಲೋಕಿ ಸುತ್ತಿರುವಾಗ ನಾವು ದೇವರ ಗುಣಲಕ್ಷಣದ ಪ್ರಶಂಶೆಯನ್ನು ಹೊಂದೋಣವೇ. ಸೃಷ್ಟಿಯ ಕಾರ್ಯ ಆತನ ಪ್ರೀತಿಯ ಪ್ರಕಟನೆಯಾಗಿದೆ; ಆದರೆ ಅಪರಾಧಿ ಮತ್ತು ನಾಶವಾದ ಜನಾಂಗವನ್ನು ರಕ್ಷಿಸುವ ದೇವರ ವರ ಮಾತ್ರ ದೈವೀಕ ಹೃದಯದ ಕೋಮಲತೆ ಮತ್ತು ಅನುಕಂಪದ ಅಪರಿಮಿತವಾದ ಆಳವನ್ನು ಪ್ರಕಟಿಸುತ್ತದೆ. “ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗಬಾರದು ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು. ”ದೇವರ ಧರ್ಮಶಾಸ್ತ್ರವನ್ನು ಕಾಪಾಡಿಕೊಂಡು ಅದರ ನ್ಯಾಯವನ್ನು ಎತ್ತಿ ಹಿಡಿಯುತ್ತಿರುವಾಗ ಪಾಪಿಯನ್ನು ಕ್ಷಮಿಸಬಹುದಿತ್ತು. ಪರಲೋಕವು ತಾನೇ ಬಂದು ನೀಡಬೇಕಾದ ಒಂದು ಪ್ರಿಯ ಬಹುಮಾನವನ್ನು ದೇವರ ಮೂಲಕ ಸುರಿಯಲ್ಪಡುತಿತ್ತು. “ಯಾರು ಯೇಸುವಿನಲ್ಲಿ ನಂಬಿಕೆಯಿಡುತ್ತಾರೋ ಅವರು ಆ ಬಹುಮಾನದ ಮೂಲಕ ಮನುಷ್ಯರು ದೇವರ ಮಕ್ಕಳು ಎನಿಸಿಕೊಳ್ಳುವದಕ್ಕಾಗಿ ತಮ್ಮ ನಾಶನ

ಮತ್ತು ಪಾಪದ ಹೀನ ಸ್ಥಿತಿಯಿಂದ ಮೇಲಕ್ಕೆ ಎತ್ತಲ್ಪಡುತ್ತಿದ್ದರು.ಪೌಲನು ಹೇಳುತ್ತಾನೆ: “ನೀವು ಮಕ್ಕಳ ಆತ್ಮವನ್ನು ಹೊಂದಿರುವದರಿಂದ ನಾವು ಅಪ್ಪಾ ತಂದೆಯೇ ಎಂದು ಕೂಗುತ್ತೇವೆ.”

(2) ಗ್ರಹಿಸಿಕೊಳ್ಳಲಾರದ ಪ್ರೀತಿಯ ಕ್ರಿಯೆಯಲ್ಲಿ ಪ್ರತಿಯೊಬ್ಬ ವಿಶ್ವಾಸಿಯು ರಕ್ಷಣೆ ಹೊಂದುವಂತೆ ಯಾವ ಶ್ರೇಷ್ಠವಾದ ಬಹುಮಾನ ನೀಡಲಾಗಿದೆ?

ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು (ಯೋಹಾನ 3:16)

ಈ ಸಂದೇಶವು ಲೋಕಕ್ಕಾಗಿ, “ಒಬ್ಬನಾದರೂ” ಇದರ ಅರ್ಥ ಯಾರಾದರೂ ಅಥವಾ ಎಲ್ಲರೂ ಈ ಶರತ್ತಿಗೆ ಒಳಪಡುತ್ತಾರೋ ಅವರು ಈ ಆಶೀರ್ವಾದದಲ್ಲಿ ಹಂಚಿಕೊಳ್ಳಬಹುದು. ಯೇಸುವಿನ ಕಡೆಗೆ ದೃಷ್ಟಿಸುವ ಆತನನ್ನು ಸ್ವಂತ ರಕ್ಷನೆಂದು  ನಂಬುವ ಎಲ್ಲರೂ , “ನಾಶವಾಗುವದಿಲ್ಲ ಬದಲಾಗಿ ನಿತ್ಯಜೀವವನ್ನು ಹೊಂದುತ್ತಾರೆ.” ನಾವು ನಿತ್ಯಜೀವದ

ಬಹುಮಾನವನ್ನು ಹೊಂದಬೇಕೆಂದು ಎಲ್ಲಾ ಸೌಲಭ್ಯಗಳನ್ನು ಒದಗಿಸಲಾಗಿದೆ.

ಮನುಷ್ಯರ ಮೇಲೆ ದೇವರ ಪ್ರೀತಿಯ ಪ್ರಕಟನೆ ಕ್ರೂಜೆಯಲ್ಲಿ ಪ್ರಕಟಿಸಲಾಗಿದೆ. ಅದರ ಸಂಪೂರ್ಣ ವೈಶಿಷ್ಟತೆಯನ್ನು ನಾಲಿಗೆ ಉಚ್ಚರಿಸಲಾರದು, ಮಸಿ ಚಿತ್ರಿಸಲಾರದು; ಮನುಷ್ಯನ ಮನಸ್ಸು ಗ್ರಹಿಸಲಾರದು. ಕಲ್ವಾರಿ ಕ್ರೂಜೆಯನ್ನು ದೃಷ್ಟಿಸುತ್ತಾ  ನಾವು ಕೇವಲ ಹೀಗೆ ಹೇಳಬಹುದು,  "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು" ಯೋಹಾನ 3:16

ಕ್ರಿಸ್ತನು ನಮ್ಮ ಪಾಪಗಳಿಗಾಗಿ ಕ್ರೂಜಿತನಾದನು, ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದನು, ಕ್ರಿಸ್ತನು ಪರಲೋಕಕ್ಕೆ ಏರಿಹೋದನು. ಇದು ರಕ್ಷಣೆಯ ತಿಳುವಳಿಕೆಯಾಗಿದೆ ಇದನ್ನು ನಾವು ಕಲಿಯಬೇಕು ಮತ್ತು ಬೋಧಿಸಬೇಕು.

(3) ನಮ್ಮ ಮೇಲೆ ಆತನಿಗಿರುವ ಮಹಾ ಪ್ರೀತಿಯಿಂದಾಗಿ, ದೇವರು ಯಾವ ವಿಶಿಷ್ಟ ಉದ್ದೇಶಕ್ಕಾಗಿ ತನ್ನ ಮಗನನ್ನು ಕಳುಹಿಸಲಿಲ್ಲ?

ದೇವರು ತನ್ನ ಮಗನ ಮುಖಾಂತರ ಲೋಕಕ್ಕೆ ರಕ್ಷಣೆಯಾಗಬೇಕೆಂದು ಆತನನ್ನು ಕಳುಹಿಸಿಕೊಟ್ಟನೇ ಹೊರತು ತೀರ್ಪು ಮಾಡುವದಕ್ಕಾಗಿ ಕಳುಹಿಸಿಕೊಡಲಿಲ್ಲ (ಯೋಹಾನ 3:17)

ದೇವರು ತನ್ನ ಮಗನನ್ನು ಲೋಕಕ್ಕೆ ತೀರ್ಪು ಮಾಡುವದಕ್ಕಾಗಿ ಕಳುಹಿಸಿ ಕೊಡಬಹುದಿತ್ತು. ಆದರೆ ಆದ್ಭುತವಾದ ಕೃಪೆ! ಕ್ರಿಸ್ತನು ರಕ್ಷಿಸುವದಕ್ಕಾಗಿ ಬಂದನು, ನಾಶಮಾಡುವದಕ್ಕಾಗಿ ಅಲ್ಲ. ಅಪೋಸ್ತಲರು ಈ ಮುಖ್ಯವಿಷಯವನ್ನು ಅವರ ಹೃದಯಗಳಲ್ಲಿ ರಕ್ಷಕನ ಅಪರಿಮಿತವಾದ ಪ್ರೀತಿಯ ಪ್ರೇರಣೆಯಿಲ್ಲದೇ ಎಂದಿಗೂ ಹೇಳಲಿಲ್ಲ.
ದೇವರು ಎಲ್ಲಾ ಮನುಷ್ಯರು ರಕ್ಷಣೆ ಹೊಂದಬೇಕು ಎಂದು ಬಯಸಿದ್ದನು, ಮತ್ತು ರಕ್ಷಣೆಗಾಗಿ ತನ್ನ ಮಗನ ಶ್ರೇಷ್ಠ ಬಹುಮಾನವನ್ನು ಒದಗಿಸಿದನು. ಆದರೆ ದೇವರ ಸಂಕಲ್ಪವು ಆತನಿಗೆ ಪರಿಣಾಮಕಾರಿಯಾಗ ಬೇಕಾಗಿದ್ದಲ್ಲಿ ಪ್ರತಿಯೊಬ್ಬ ವ್ಯಕ್ತಿಯು ಸಂಕಲ್ಪದ ಮೂಲಕ ಧೃಢಪಡಬೇಕು. ರಕ್ಷಣೆ ಕೇವಲ ಯಾರು ನಂಬುತ್ತಾರೆ ಮತ್ತು ಸ್ವೀಕರಿಸುತ್ತಾರೆ ಅವರಿಗೆ ಮಾತ್ರ (1ಯೋಹಾನ 1:12; 3:16).

(4) ತಪ್ಪಿಹೋದವರಿಗೆ ತೀರ್ಪನ್ನು ನೀಡಲು ಕಾರಣವೇನು?

ಆ ತೀರ್ಪು ಏನಂದರೆ – ಬೆಳಕು ಲೋಕಕ್ಕೆ ಬಂದಿದ್ದರೂ ಮನುಷ್ಯರ ಕೃತ್ಯಗಳು ಕೆಟ್ಟವುಗಳಾಗಿರುವದರಿಂದ ಅವರು ಬೆಳಕಿಗಿಂತ ಕತ್ತಲೆಯನ್ನೇ ಹೆಚ್ಚಾಗಿ ಪ್ರೀತಿಸಿದರು (ಯೋಹಾನ 3:19).

ಯೋಹಾನನು ಯಾರು ಮಗನಲ್ಲಿ ನಂಬಿಕೆಯಿಡುವದಿಲ್ಲವೋ ಅವರಿಗೆ "ಆಗಲೇ ತೀರ್ಪು ಆಗಿಹೋಯಿತು" ಎಂದು ವಿವರಿಸಲು ತ್ವರೆಪಡುತ್ತಾನೆ, ಯಾಕಂದರೆ ಅವರು ನಂಬುವದಕ್ಕೆ ನಿರಾಕರಿಸಿದರು. ತನ್ನ ಮಗನನ್ನು ಈ ಲೋಕಕ್ಕೆ ಕಳುಹಿಸುವದರ ದೇವರ ಉದ್ದೇಶ ಲೋಕವನ್ನು ರಕ್ಷಿಸಲು, ಒಂದುವೇಳೆ ರಕ್ಷಕನ ಬರುವಿಕೆ, ಕೆಲವು ಜನರು ತೀರ್ಪು ಹೊಂದುತ್ತಾರೆ ಎಂದಾದರೆ ದೇವರ ಮೇಲೆ ದೋಷ ಹೊರಿಸುವದಲ್ಲ. ತೀರ್ಪು ನಿಜವಾದ ಬೆಳಕು ಬರುವದರಿಂದ ಅಲ್ಲ ಬದಲಾಗಿ ಉದ್ದೇಶಪೂರ್ವಕವಾಗಿ ಕತ್ತಲೆಗೆ ಆದ್ಯತೆಯನ್ನು ನೀಡಿ ಬೆಳಕಿನಿಂದ ತಿರುಗಿಕೊಂಡಿರುವದಾಗಿದೆ.

(5) ನಾಶನಕ್ಕೆ ಅರ್ಹರಾದ ನಮ್ಮನ್ನು ತಡೆಯಲು ದೇವರು ತನ್ನ ಮಹಾ ಪ್ರೀತಿಯನ್ನು ನಮ್ಮ ಕಡೆಗೆ ಹೇಗೆ ಪ್ರಕಟಿಸಿದನು?

ದೇವರು ತನ್ನ ಒಬ್ಬನೇ ಮಗನನ್ನು ನಾವು ಆತನ ಮೂಲಕ ಜೀವಿಸುವದಕ್ಕಾಗಿ ಲೋಕಕ್ಕೆ ಕಳುಹಿಸಿಕೊಟ್ಟದ್ದರಲ್ಲಿಯೇ ದೇವರ ಪ್ರೀತಿ ನಮ್ಮಲ್ಲಿ ಪ್ರತ್ಯಕ್ಷವಾಗಿದೆ. (1ಯೋಹಾನ 4:9).

ಆದಾಮನ ಪಾಪವು ಜನಾಂಗವನ್ನು ನಿರಾಶಾದಾಯಕವಾದ ಸಂಕಟದಲ್ಲಿ ಮುಣುಗಿಸಿದಾಗ, ದೇವರು ಬಿದ್ದು ಹೋದ ಜೀವಿಗಳೊಂದಿಗೆ ತನ್ನ ಸಂಬಂಧವನ್ನು ಮುರಿದುಕೊಳ್ಳ ಬಹುದಿತ್ತು. ಆತನು ಅವರನ್ನು ಪಾಪಿಗಳನ್ನು ನಡೆಸಿಕೊಳ್ಳುವಂತೆ ನಡೆಸಿಕೊಳ್ಳಬಹುದಿತ್ತು. ಆತನು ಪರಲೋಕದ ದೇವದೂತರಿಗೆ ತನ್ನ ರೌದ್ರದ ಪಾತ್ರೆಯನ್ನು ಲೋಕದ ಮೇಲೆ ಸುರಿಯಲು ಆಜ್ಞಾಪಿಸಬಹುದಿತ್ತು. ಆತನು ಈ ಕಪ್ಪು ಚುಕ್ಕೆಯನ್ನು ವಿಶ್ವದಿಂದ ಅಳಿಸಿಹಾಕಬಹುದಿತ್ತು. ಆದರೆ ಆತನು ಹಾಗೆ ಮಾಡಲಿಲ್ಲ. ಬದಲಾಗಿ ಅವರನ್ನು ತನ್ನ ಸಾನಿಧ್ಯದಿಂದ ಹೊರಕ್ಕೆ ಹಾಕಿದನು. ಆತನು ಇನ್ನು ಹೆಚ್ಚಾಗಿ ಬಿದ್ದುಹೋದ ಜನಾಂಗದ ಸಮೀಪಕ್ಕೆ ಬಂದನು. ಆತನು ತನ್ನ ಮಗನನ್ನು ನಮ್ಮ ಎಲಬುಗಳ ಎಲಬು ಮತ್ತು ನಮ್ಮ ಮಾಂಸದ ಮಾಂಸವು ಆಗುವಂತೆ ನೀಡಿದನು. ಮನುಷ್ಯನಿಗೆ ದೇವರು ನೀಡಿದ ಬಹುಮಾನ ಎಣಿಕೆಗೆ ಮೀರಿದ್ದಾಗಿದೆ.  ಏನನ್ನು

ಉಳಿಸಿಕೊಳ್ಳಲಿಲ್ಲ. ದೇವರು ಇನ್ನೂ ಹೆಚ್ಚು ಮಾಡಲಾಗುವದಿಲ್ಲ ಅಥವಾ ಅಗಾಧವಾದ ಅಳತೆಯ ಪ್ರೀತಿಯನ್ನು ಮಾನವ ಕುಲಕ್ಕೆ ಪ್ರಕಟಿಸುತ್ತೇನೆ ಎಂದು ಹೇಳಲು ಅನುಮತಿಸಲಿಲ್ಲ. ಕ್ರಿಸ್ತನ ಬಹುಮಾನದಲ್ಲಿ ಅವನು ಸಂಪೂರ್ಣ ಪರಲೋಕವನ್ನೇ ನೀಡಿದನು.

(6) ನಮ್ಮ ಮೇಲಿರುವ ದೇವರ ಮಹಾ ಪ್ರೀತಿಯಿಂದಾಗಿ, ಯಾವ ಉದ್ದೇಶಕ್ಕಾಗಿ ಆತನು ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದನು?

ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕಳುಹಿಸಿಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜ ಗುಣವು ತೋರಿ ಬರುತ್ತದೆ (1ಯೋಹಾನ 4:10)

ಆದಾಮ ಮತ್ತು ಹವ್ವಳರ ಪಾಪದ ಪರಿಣಾಮದಿಂದಾಗಿ ಅವರು ನಿರೀಕ್ಷೆಯಿಂದ ಕತ್ತರಿಸಲ್ಪಟ್ಟರು, ನ್ಯಾಯವು ಪಾಪಿಯ ಮರಣದ ಬೇಡಿಕೆಯನ್ನಿಟ್ಟಾಗ, ಕ್ರಿಸ್ತನು ತನ್ನನ್ನೇ ತಾನು ಯಜ್ಞವಾಗಿ ಅರ್ಪಿಸಿದನು. “ಇದು ಪ್ರೀತಿಯಾಗಿದೆ, ನಾವು ದೇವರನ್ನು ಪ್ರೀತಿಸಿದ್ದರಿಂದ ಅಲ್ಲ, ಆತನು ನಮ್ಮನ್ನು ಪ್ರೀತಿಸಿ ತನ್ನ ಮಗನನ್ನು ನಮ್ಮ ಪಾಪನಿವಾರಣಾರ್ಥವಾಗಿ ಕಳುಹಿಸಿ ಕೊಟ್ಟನು.” ನಾವೆಲ್ಲರೂ ದಾರಿತಪ್ಪಿದ ಕುರಿಗಳಂತಿದ್ದೆವು,

ನಾವೆಲ್ಲರೂ ನಮ್ಮ ಸ್ವಂತ ಮಾರ್ಗವನ್ನು ಹಿಡಿದಿದ್ದೆವು; ಕರ್ತನು ನಮ್ಮೆಲ್ಲರ ದುಷ್ಟತನವನ್ನು ಆತನ ಮೇಲೆ ಹಾಕಿದನು." 1ಯೋಹಾನ 4:10; ಯೆಶಾಯ 53:6.

ಮನುಷ್ಯರಿಗೆ ಒಬ್ಬನೇ ಮಧ್ಯವರ್ತಿ, ಒಬ್ಬನೇ ನಮಗಾಗಿ ಬೇಡಿಕೊಳ್ಳುವಾತನು, ಆತನು ನಮ್ಮ ಪಾಪಗಳನ್ನು ಕ್ಷಮಿಸಲು ಶಕ್ತನಾಗಿದ್ದಾನೆ. ನಮ್ಮ ಪಾಪ ನಿವಾರಣಾರ್ಥವಾಗಿ ಯೇಸುವನ್ನು ಕೊಟ್ಟಾತನಿಗಾಗಿ ನಮ್ಮ ಹೃದಯಗಳು ಕೃತಜ್ಞತೆಯಿಂದ ಉಬ್ಬಿಕೊಳ್ಳುವದಿಲ್ಲವೇ? ನಮ್ಮ ಪರವಾಗಿ ತಂದೆಯಾದ ದೇವರು ಪ್ರಕಟಿಸಿದ ಪ್ರೀತಿಯನ್ನು, ನಮಗಾಗಿ ಆತನು ವ್ಯಕ್ತಪಡಿಸಿದ ಪ್ರೀತಿಯನ್ನು ಆಳವಾಗಿ ಯೋಚಿಸಿರಿ. ನಾವು ಈ ಪ್ರೀತಿಯನ್ನು ಅಳೆಯಲು ಸಾಧ್ಯವಿಲ್ಲ. ಅಳೆಯುವದಕ್ಕೆ ಯಾವ ಅಳತೆಯೂ ಇಲ್ಲ, ನಾವು ಕೇವಲ ಕಲ್ವಾರಿಯನ್ನು, ಲೋಕಾದಿಯಿಂದಲೇ ಕೊಯ್ಯಲ್ಪಟ್ಟ ಕುರಿಮರಿಯೆಡೆಗೆ ಸೂಚಿಸಬಹುದು. ನಾವು ಈ ಅಗಾಧತೆಯನ್ನು ನಾವು ಗ್ರಹಿಸಲು ಮತ್ತು ಅಳೆಯಲು ಸಾಧ್ಯವೇ?

(7) ದೇವರು  ನಮ್ಮ ಮೇಲಿರುವ ತಮ್ಮ ಎಣಿಸಲಶಕ್ಯವಾದ ಪ್ರೀತಿಯ ಸ್ಪಷ್ಟವಾದ ಸಾಕ್ಷಿಯನ್ನು  ಪ್ರದರ್ಶಿಸಲು ಕ್ರಿಸ್ತನನ್ನು ಏಕೆ ಕಳುಹಿಸಿದನು?

ಆದರೆ ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣ ಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತ ಪಡಿಸಿದ್ದಾನೆ. (ರೋಮ 5:8).

ಇದು ಸುವಾರ್ತೆಯ ಮಹಿಮೆಯಾಗಿದೆ ಬಿದ್ದು ಹೋದ ಜನಾಂಗವನ್ನು ಪುನಃಸ್ಥಾಪಿಸುವದರಲ್ಲಿ ದೈವೀಕ ಸ್ವರೂಪವು ನಿರಂತರವಾದ ಔದಾರ್ಯವನ್ನು ಪ್ರಕಟಿಸಿತು. ಈ ಕಾರ್ಯವು ಪರಲೋಕದ ಆಸ್ಥಾನದಲ್ಲಿ ಪ್ರಾರಂಭವಾಯಿತು ಅಲ್ಲಿ ದೇವರು ಮಾನವ ಜೀವಿಗಳಿಗೆ ತಾನು ಅವರನ್ನು ಗೌರವಿಸಿದ ಪ್ರೀತಿಯ ಸ್ಪಷ್ಟವಾದ ಸಾಕ್ಷಿಯನ್ನು ನೀಡಲು ನಿರ್ಧರಿಸಿದನು. "ಆತನು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು, ತನ್ನ ಒಬ್ಬನೇ ಮಗನನ್ನು ಕೊಟ್ಟನು ಅತನನ್ನು ನಂಬುವ ಒಬ್ಬನಾದರೂ ನಾಶವಾಗಬಾರದು ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ಯೋಹಾನ 3:16.

ಜನಾಂಗದ ಮೇಲೆ ದೇವತ್ವಕ್ಕೆ ಅನುಕಂಪ ಹೆಚ್ಚಾಗಿ ತಂದೆಯು, ತನ್ನ ಮಗನನ್ನು ಮತ್ತು ಪವಿತ್ರಾತ್ಮನನ್ನು ಕೊಟ್ಟನು. ತಾವೇ ವಿಮೋಚನೆಯ ಯೋಜನೆಯನ್ನು ತಯಾರಿಸಿದರು. ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯರೂಪದಲ್ಲಿ ತರಲು, ಕ್ರಿಸ್ತನು,

ದೇವರ ಒಬ್ಬನೇ ಮಗನು, ತನ್ನನ್ನೇ ತಾನು ಪಾಪಕ್ಕೆ ಕಾಣಿಕೆಯಾಗಿ ನೀಡಬೇಕು. ಈ ಪ್ರೀತಿಯ ಆಳವನ್ನು ಯಾವುದರಿಂದ ಅಳೆಯಲು ಸಾಧ್ಯ? ದೇವರು ಇನ್ನೂ ಹೆಚ್ಚಾಗಿ ಮಾಡಬಹುದಿತ್ತು ಎಂದು ಮನುಷ್ಯರಿಗೆ ಹೇಳುವದಕ್ಕೆ ಅದನ್ನು ಅಸಾಧ್ಯವಾಗಿ ಮಾಡಿದ್ದಾನೆ. ಕ್ರಿಸ್ತನೊಂದಿಗೆ ಆತನು ಪರಲೋಕದ ಎಲ್ಲಾ ಸಂಪನ್ಮೂಲಗಳನ್ನು ನೀಡಿದ್ದಾನೆ, ಮನುಷ್ಯನನ್ನು ಮೇಲಕ್ಕೆ ಎತ್ತುವ ಯೋಜನೆಯಲ್ಲಿ ಬಹುಶಃ ಇನ್ನೂ ಹೆಚ್ಚಿಗೆ ಏನೂ ಬೇಕಾಗಿಲ್ಲ. ಪ್ರೀತಿ ಇಲ್ಲಿದೆ – ಇದರ ಚಿಂತನೆ ವರ್ಣಿಸಲಶಕ್ಯವಾದ ಕೃತಜ್ಞತೆಯೊಂದಿಗೆ ಆತ್ಮವನ್ನು ತುಂಬಿಸುತ್ತದೆ! ಓ, ಎಂಥ ಪ್ರೀತಿ, ಹೋಲಿಸಲಶಕ್ಯವಾದ ಪ್ರೀತಿ! ಈ ಪ್ರೀತಿಯ ಚಿಂತನೆ ಆತ್ಮವನ್ನು ಎಲ್ಲಾ ಸ್ವಾರ್ಥತೆಯಿಂದ ಶುದ್ಧೀಕರಿಸುತ್ತದೆ. ಅದು ಶಿಷ್ಯನನ್ನು ಸ್ವ-ನಿರಾಕರಣೆಗೆ ಮತ್ತು ಕ್ರೂಜೆಯನ್ನು ಹೊತ್ತು ವಿಮೋಚಕನನ್ನು ಹಿಂಬಾಲಿಸುವತ್ತ ನಡೆಸುತ್ತದೆ.

(8) ಆದಾಗ್ಯೂ ಪರಲೋಕ ಸೇರುವವರೆಗೆ ನಾವು ಎಂದಿಗೂ ಸಂಪೂರ್ಣವಾಗಿ ಗ್ರಹಿಸಿಕೊಳ್ಳುವದಿಲ್ಲ, ನಮ್ಮ ಮೇಲೆ ದೇವರಿಗೆ ಇರುವ ಪ್ರೀತಿಯ ಕುರಿತು ನಮ್ಮ ಪ್ರಾರ್ಥನೆ ಏನಾಗಿರಬೇಕು?

ನೀವು ದೇವರ ಪ್ರೀತಿಯಲ್ಲಿ ನೆಲಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ. (ಎಫೆಸ 3:18-19).

ದೇವರ ಪ್ರೀತಿಯ ಚಿಂತನೆ  ಬಿದ್ದು ಹೋದ ಮನುಷ್ಯನ ರಕ್ಷಣೆಗಾಗಿ ತನ್ನ ಮಗನನ್ನು ಬಹುಮಾನವಾಗಿ ಕೊಡುವದರಲ್ಲಿ ಪ್ರಕಟವಾಗಿದೆ.  ಅದು ಹೃದಯವನ್ನು ಕಲಕಿ ಆತ್ಮದ ಬಲವನ್ನು ಎಬ್ಬಿಸುತ್ತದೆ, ಬೇರೆ ಯಾವುದೂ ಈ ಕಾರ್ಯವನ್ನು ಮಾಡಲು ಸಾಧ್ಯವಿಲ್ಲ. ದೇವರ ವಿಶ್ವದಲ್ಲಿ ವಿಮೋಚನೆಯ ಕಾರ್ಯ ಅದು ಅದ್ಭುತವಾದ ಕಾರ್ಯವಾಗಿದೆ. ಇಂಥ ಅಪರಿಮಿತವಾದ ಪ್ರೀತಿಯ ಉದ್ದೇಶಗಳು ಎಷ್ಟು ಉದಾಸೀನಕ್ಕೆ ಒಳಗಾಗಿವೆ!

ಒಂದುವೇಳೆ ನಮ್ಮ ಪ್ರಜ್ಞೆ ಮೊಂಡಾಗಿದ್ದಲ್ಲಿ ಪಾಪದಿಂದ ಕತ್ತಲೆಯ ಚಿಂತನೆ, ಸೈತಾನನು ನಿರಂತರವಾಗಿ ನಮ್ಮೆದುರಿನಲ್ಲಿ ಒಂದು ಚಿತ್ರವನ್ನು ಮಂಡಿಸುತ್ತಿದ್ದಾನೆ ಉತ್ಸಾಹದಿಂದ ಕೂಡಿದ ಕೃತಜ್ಞತೆಯ ನಿರಂತರವಾದ

ಹರಿಯುವಿಕೆ ನಮ್ಮ ಹೃದಯದಿಂದ ಆತನೆಡೆಗೆ ಅಂದರೆ ಪ್ರತಿನಿತ್ಯ ನಾವು ಅರ್ಹರಲ್ಲದ ಪ್ರಯೋಜನೀಯತೆಯ ಹೊರೆಗಳಿಂದ ನಮ್ಮನ್ನು ತುಂಬಿಸುವಾತನೆಡೆಗೆ. ವಿಮೋಚನೆ ಹೊಂದಿದವರ ಶಾಶ್ವತವಾದ ಸಂಗೀತ ನಮ್ಮನ್ನು ಪ್ರೀತಿಸಿ ಮತ್ತು ನಮ್ಮನ್ನು ನಮ್ಮ ಪಾಪಗಳಿಂದ ತನ್ನ ಸ್ವಂತ ರಕ್ತದ ಮೂಲಕ ತೊಳೆದಾತನ ಸ್ತುತಿ ಗೀತೆಯಾಗಿದೆ; ಒಂದುವೇಳೆ ಎಂದಾದರೂ ನಾವು ಈ ಹಾಡನ್ನು ಸಿಂಹಾಸನದ ಎದುರಿನಲ್ಲಿ ಹಾಡುವುದಾದರೆ ಅದನ್ನು ನಾವು ಇಲ್ಲಿ ಕಲಿಯಬೇಕು.

(9) ನಾವು ಆಳವಾದ ಪಾಪ ಮತ್ತು ನಿರಾಶೆಯಲ್ಲಿ ಬಿದ್ದಾಗಲೂ ಮತ್ತು ನಾವು ಬಹಳ ಅನರ್ಹರಾಗಿದ್ದಾಗಲೂ. ಪ್ರೀತಿ ಸ್ವರೂಪಿಯಾದ ನಮ್ಮ ದೇವರು ನಮಗೆ ಯಾವ ಮೂರು ಸಂಗತಿಗಳನ್ನು ವಾಗ್ದಾನ ಮಾಡುತ್ತಾನೆ?

ನಾನು ನನ್ನ ಜನರ ಭ್ರಷ್ಟತ್ವವನ್ನು ಪರಿಹರಿಸಿ ಅವರನ್ನು ಮನಃಪೂರ್ವಕವಾಗಿ ಪ್ರೀತಿಸುವೆನು; ನನ್ನ ಕೋಪವು ಅವರ ಕಡೆಯಿಂದ ತೊಲಗಿಹೋಯಿತು. (ಹೋಶೇಯ 14:4)

ದೇವರ ಪಟ್ಟಣವನ್ನು ಪ್ರವೇಶಿಸುವವರು ನೇರವಾದ ಬಾಗಿಲಿನ ಮೂಲಕ ಪ್ರವೇಶಿಸುತ್ತಾರೆ --

ವೇದನಾದಾಯಕ ಪ್ರಯತ್ನಗಳು; ಯಾಕಂದರೆ "ಅದರಲ್ಲಿ ಹೊಲೆಯಾದದ್ದೊಂದೂ ಸೇರುವದಿಲ್ಲ" ಪ್ರಕಟನೆ 21:27. ಆದರೆ ಬಿದ್ದು ಹೋದವರಲ್ಲಿ ಒಬ್ಬರು ನಿರಾಶೆಗೆ ಒಳಗಾಗಬಾರದು, ವೃದ್ಧರು, ಒಮ್ಮೆ ದೇವರಿಂದ ಗೌರವವನ್ನು ಹೊಂದಿದವರು ತಮ್ಮ ಆತ್ಮವನ್ನು ಹೊಲೆ ಮಾಡಿಕೊಂಡರೆ ದುರಾಶೆಯೆಂಬ ವೇದಿಯ ಮೇಲೆ ತಮ್ಮ ಮೌಲ್ಯಗಳನ್ನು ಬಲಿಕೊಡುವವರು; ಆದರೆ ಒಂದುವೇಳೆ ಅವರು ಪಶ್ಚಾತ್ತಪಪಟ್ಟು ಪಾಪವನ್ನು ತೊರೆದು ಬಿಟ್ಟು ದೇವರ ಕಡೆಗೆ ತಿರುಗಿಕೊಂಡರೆ, ಅವರಿಗೆ ನಿರೀಕ್ಷೆ ಇನ್ನೂ ಇರುತ್ತದೆ.

"ಕೊನೆಯ ವರೆಗೂ ನಂಬಿಗಸ್ತನಾಗಿರು, ನಾನು ನಿನಗೆ ಜೀವವೆಂಬ ಜಯ ಮಾಲೆಯನ್ನು ಕೊಡುತ್ತೇನೆ" ಎಂದು ಪ್ರಕಟಿಸಿದಾತನು ನಿಮಗೆ ಆಮಂತ್ರಣವನ್ನು ಸಹ ನೀಡುತ್ತಿದ್ದಾನೆ, "ದುಷ್ಟರು ತಮ್ಮ ದುರ್ಮಾರ್ಗವನ್ನು ಬಿಡಲಿ; ಕೆಡುಕನು ತನ್ನ ದುರಾಲೋಚನೆಗಳನ್ನು ತ್ಯಜಿಸಲಿ; ಯೆಹೋವನ ಕಡೆಗೆ ತಿರುಗಿಕೊಂಡು ಬರಲಿ, ಆತನು ಅವನನ್ನು ಕರುಣಿಸುವನು; ನಮ್ಮ ದೇವರನ್ನು ಆಶ್ರಯಿಸಲಿ, ಆತನು ಮಹಾ ಕೃಪೆಯಿಂದ ಕ್ಷಮಿಸುವನು," ಪ್ರಕಟನೆ 2:10; ಯೆಶಾಯ 55:7, ದೇವರು ಪಾಪವನ್ನು ಹಗೆಮಾಡುತ್ತಾನೆ, ಆದರೆ

ಆತನು ಪಾಪಿಯನ್ನು ಪ್ರೀತಿಸುತ್ತಾನೆ. "ನಾನು ನನ್ನ ಜನರ ಭ್ರಷ್ಟತ್ವವನ್ನು ಪರಿಹರಿಸಿ. ಅವರನ್ನು ಮನಃಪೂರ್ವಕವಾಗಿ ಪ್ರೀತಿಸುವೆನು ಎಂದು ಆತನು ಹೇಳುತ್ತಾನೆ." ಹೋಶೇಯ 14:4

(10) ದೇವರು ನಮ್ಮನ್ನು ಕ್ರಿಸ್ತನೊಂದಿಗೆ ಜೀವಿಸ ಮಾಡಿ ಯಾವ ಕಾರಣಕ್ಕಾಗಿ ನಮ್ಮ ಮೇಲೆ ತನ್ನ ಅಪರಿಮಿತ ಕರುಣೆಯನ್ನು ಸುರಿಸುತ್ತಾನೆ?

ಆದರೆ ಕರುಣಾನಿಧಿಯಾಗಿರುವ ದೇವರು ನಮ್ಮ ಮೇಲೆ ಮಹಾ ಪ್ರೀತಿಯನ್ನಿಟ್ಟು ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು. ಕೃಪೆಯಿಂದ ರಕ್ಷಣೆ ಹೊಂದಿದವ ರಾಗಿದ್ದೇವೆ (ಎಫೆಸ 2:4-5).

ದೇವರು ಕರುಣಾಮಯನು ಮಾತ್ರವಲ್ಲ; ಆತನು ತನ್ನನ್ನು ಕರೆಯುವವರೆಲ್ಲರಿಗೆ ಕರುಣೆಯಲ್ಲಿ ಸಮೃದ್ಧಿಯುಳ್ಳ ವನಾಗಿದ್ದಾನೆ, ಅವರು ಅದಕ್ಕೆ ಅರ್ಹರಾಗಿದ್ದಾರೆಂದಲ್ಲ, ಆದರೆ ಕರುಣೆಯನ್ನು ತೋರಿಸುವದರಲ್ಲಿ ಆನಂದಿಸುವಾತನಾಗಿದ್ದಾನೆ (ತೀತ 3:5; 1ಪೇತ್ರ 1:3).

ದೇವರ ಪ್ರೀತಿ ಅನುಕಂಪಕ್ಕಿಂತ ಹೆಚ್ಚಿನದಾಗಿದೆ; ಅದು ಪ್ರಯೋಜನೀಯ ಕಾರ್ಯಕ್ಕೆ ನಡೆಸುತ್ತದೆ ಮತ್ತು ಅದು

ಬದಲಾಗುವದಿಲ್ಲ. “ನಾವು ಇನ್ನೂ ಪಾಪಿಗಳಾಗಿದ್ದಾಗಲೇ” ದೇವರು ನಮ್ಮನ್ನು ಪ್ರೀತಿಸಿದ್ದಾನೆ ಮತ್ತು ನಮ್ಮನ್ನು ಪ್ರೀತಿಸುವದನ್ನು ಎಂದಿಗೂ ನಿಲ್ಲಿಸುವದಿಲ್ಲ. ಈ ಪ್ರೀತಿಯೇ ಅವನನ್ನು ರಕ್ಷಣೆಯ ಕಾರ್ಯಕ್ಕೆ ಪ್ರೇರೆಪಿಸಿತು (ಯೋಹಾನ 3:16) ಪ್ರೀತಿ ದೇವರ ಗುಣಲಕ್ಷಗಳಲ್ಲಿ ಪ್ರಾಮುಖ್ಯ ವಾದದ್ದಾಗಿದೆ (1ಯೋಹಾನ 4:8), ಕ್ರಿಸ್ತನ ವ್ಯಕ್ತಿತ್ವದಲ್ಲಿ ಅದರ ಅತ್ಯಂತ ಉನ್ನತವಾದ ವ್ಯಕ್ತಪಡಿಸುವಿಕೆಯನ್ನು ಕಾಣುತ್ತೇವೆ. ದೇವರಿಗೆ ನಮ್ಮ ಮೇಲೆ ಕರುಣೆಯಿದೆ ಯಾಕಂದರೆ ನಾವು ಪಾಪಿಗಳಾಗಿದ್ದೇವೆ ಮತ್ತು ಆತನು ನಮ್ಮನ್ನು ಪ್ರೀತಿಸುತ್ತಾನೆ ಯಾಕಂದರೆ ನಾವು ಆತನ ಸೃಷ್ಟಿಗಳಾಗಿದ್ದೇವೆ, ಮನುಷ್ಯರಿಗಾಗಿ ಆತನ ಶ್ರೇಷ್ಠ ಕಾರ್ಯ ಕೇವಲ ಔದಾರ್ಯ ಅಥವಾ ಪರೋಪಕಾರದ ನಮ್ರ ಕಾರ್ಯವಾಗಿದೆ; ಇದು ಮಮತೆಯ, ಪ್ರೀತಿಯ ಕ್ರಿಯೆಯಾಗಿದೆ.

ದೇವರ ಕೃಪೆ ಇಂಥದ್ದಾಗಿದೆ, ಇಂಥ ಪ್ರೀತಿಯ ಮೂಲಕ ನಾವು ಉಲ್ಲಂಘನೆ ಮತ್ತು ಪಾಪಗಳಿಂದ ಸತ್ತವರಾಗಿ ದ್ದಾಗಲೇ, ನಮ್ಮ ಮನಸ್ಸಿನಲ್ಲಿ ದುಷ್ಟಕೆಲಸಗಳಿಂದಾಗಿ ವೈರಿ ಗಳಾಗಿದ್ದಾಗಲೇ, ದುರಾಶೆ ಮತ್ತು ಸುಖಾನುಭೋಗಗಳಿಗೆ ದಾಸ ರಾಗಿದ್ದಾಗಲೇ ಹೀನಾಯವಾದ ಆಕಾಂಕ್ಷೆ ಮತ್ತು ದಾಹಗಳಿಗೆ ಗುಲಾಮ

ರಾಗಿದ್ದಾಗಲೇ, ಪಾಪ ಮತ್ತು ಸೈತಾನನ ಸೇವಕರಾಗಿದ್ದಾಗಲೇ ಆತನು ನಮ್ಮನ್ನು ಪ್ರೀತಿಸಿದ್ದಾನೆ. ಕ್ರಿಸ್ತನಲ್ಲಿ ಎಂಥ ಆಳವಾದ ಪ್ರೀತಿ ಪ್ರಕಟವಾಗಿದೆ, ಆತನು ನಮ್ಮ ಪಾಪನಿವಾರಣಾರ್ಥವಾಗಿ ಯಜ್ಞವಾದನು.ಪವಿತ್ರಾತ್ಮನ ಸೇವೆಯ ಮೂಲಕ ಆತ್ಮಗಳು ಪಾಪಗಳಿಗೆ ಕ್ಷಮಾಪಣೆಯನ್ನು ಹೊಂದುವತ್ತ ನಡೆಸಲ್ಪಟ್ಟವು.

(11) ಲೋಕಕ್ಕೆ ದೇವರು ಯಾರ ಮೂಲಕ ತನ್ನ ಗುಣಲಕ್ಷಣವಾದ ಪ್ರೀತಿಯನ್ನು ಪ್ರಕಟಿಸಿದನು?

ಯೇಸು ಅವನಿಗೆ ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ನನ್ನನ್ನು ಇನ್ನೂ ಅರಿತುಕೊಳ್ಳಲಿಲ್ಲವೇ, ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ, ನನಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? (ಯೋಹಾನ 14:9).

ಲೋಕವು ದೇವರನ್ನು ತಪ್ಪಾಗಿ ತಿಳಿದುಕೊಳ್ಳುವದರ ಮೂಲಕ ಕತ್ತಲೆಯಲ್ಲಿತ್ತು. ಮಬ್ಬಾದ ನೆರಳುಗಳು ಪ್ರಕಾಶಮಾನವಾಗುವಂತೆ, ಲೋಕವನ್ನು ತಿರುಗಿ ದೇವರ ಬಳಿಗೆ ತರುವಂತೆ ಸೈತಾನನ ಮೋಸದ ಶಕ್ತಿಯನ್ನು ಮುರಿಯಬೇಕಾಗಿತ್ತು. ಇದನ್ನು ಒತ್ತಾಯ ಪೂರ್ವಕವಾಗಿ

ಮಾಡಲು ಸಾಧ್ಯವಿರಲಿಲ್ಲ. ಒತ್ತಾಯ ಮಾಡುವದು ದೇವರ ಆಡಳಿತದ ತತ್ವಕ್ಕೆ ವಿರುದ್ಧವಾದದ್ದು; ಆತನು ಕೇವಲ ಪ್ರೀತಿಯ ಸೇವೆಯನ್ನು ಬಯಸುತ್ತಾನೆ; ಪ್ರೀತಿ ಎಂದಿಗೂ ಆಜ್ಞಾಪಿಸುವದಿಲ್ಲ; ಅದು ಒತ್ತಾಯದಿಂದ  ಅಥವಾ ಅಧಿಕಾರದಿಂದ ಗೆದ್ದುಕೊಳ್ಳುವಂಥದಲ್ಲ. ಕೇವಲ ಪ್ರೀತಿಯ ಮೂಲಕ ಪ್ರೀತಿ ಜಾಗ್ರುತಗೊಳ್ಳುತ್ತದೆ.

ದೇವರು ಆತನನ್ನು ಪ್ರೀತಿಸುತ್ತಾನೆ ಎಂದು ತಿಳಿದುಕೊಳ್ಳಲು; ಆತನ ಗುಣಲಕ್ಷಣ  ಸೈತಾನನ ಗುಣಲಕ್ಷಣಕ್ಕೆ ವ್ಯತ್ಯಾಸವಾಗಿ ಪ್ರಕಟಗೊಳ್ಳಬೇಕು. ಈ ಕಾರ್ಯವನ್ನು ಈಡೀ ವಿಶ್ವದಲ್ಲಿ ಒಂದೇ ಒಂದು ಜೀವಿ ಮಾಡಲು ಸಾಧ್ಯ. ದೇವರ ಪ್ರೀತಿಯ ಎತ್ತರ ಮತ್ತು ಆಳವನ್ನು ಬಲ್ಲಂತವನು ಮಾತ್ರ ಇದನ್ನು ತಿಳಿಯ ಪಡಿಸ ಬಲ್ಲನು. ಲೋಕದ ಕತ್ತಲೆಯ ರಾತ್ರಿಯಲ್ಲಿ ಧರ್ಮವೆಂಬಸೂರ್ಯನು ಉದಯಿಸಬೇಕು. “ಸ್ವಸ್ಥತೆಯನ್ನುಂಟು ಮಾಡುವ ಕಿರಣಗಳುಳ್ಳವನಾಗಿ ಮೂಡುವನು” ಮಲಾಕಿ 4:2

(12) ಮೊದಲು ಬಂದದ್ದು ಯಾವುದು, ನಮ್ಮ ಮೇಲಿರುವ ದೇವರ

ಪ್ರೀತಿಯೋ ಅಥವಾ ನಮ್ಮನ್ನು ರಕ್ಷಿಸಲು ಆತನ ಮಗನ ವರವೋ?

ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು; ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು (ಯೋಹಾನ 3:16).

ಈ ದೊಡ್ಡ ಬಲಿದಾನವು ತಂದೆಯ ಹೃದಯದಲ್ಲಿ ಮನುಷ್ಯರಿಗಾಗಿ ಪ್ರೀತಿಯನ್ನು ಸೃಷ್ಟಿಸಲು, ಅವರನ್ನು ರಕ್ಷಿಸಲು ಸಿದ್ಧನನ್ನಾಗಿ ಮಾಡುವದಕ್ಕಾಗಿ ಮಾಡಲಿಲ್ಲ, ಇಲ್ಲ, ಇಲ್ಲ! ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಯೋಹಾನ 3:16. ತಂದೆಯು ನಮ್ಮನ್ನು ಪ್ರೀತಿಸುತ್ತಾನೆ ದೊಡ್ಡ ಪ್ರಾಯಶ್ಚಿತ್ತ ಯಜ್ಞದಿಂದಾಗಿ ಅಲ್ಲ, ಆದರೆ ಆತನು ಪ್ರಾಯಶ್ಚಿತ್ತ ಯಜ್ಞವನ್ನು ನಮ್ಮನ್ನು ಪ್ರೀತಿಸು ವದರಿಂದ  ಒದಗಿಸಿದನು. ಕ್ರಿಸ್ತನು ಬಿದ್ದು ಹೋದ ಲೋಕದ ಮೇಲೆ ಆತನ ಅಪರಿಮಿತ ಪ್ರೀತಿಯನ್ನು ಸುರಿಸುವ ಸಾಧನವಾದನು. “ದೇವರು ಲೋಕವನ್ನು ಕ್ರಿಸ್ತನಲ್ಲಿ ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದನೆಂಬದೇ.” 2 ಕೊರಿಂಥ 5:19. ದೇವರು ತನ್ನ

ಮಗನೊಂದಿಗೆ ಕಷ್ಟಾನುಭವವನ್ನು ಅನುಭವಿಸಿದನು. ಗೆತ್ಸೇಮನೆ ತೋಟದ ವೇದನೆಯಲ್ಲಿ, ಕಲ್ವಾರಿಯ ಸಾವಿನಲ್ಲಿ, ಅನಂತ ಪ್ರೀತಿಯ ಹೃದಯ ನಮ್ಮ ವಿಮೋಚನೆಯ ಬೆಲೆಯನ್ನು ತೆತ್ತಿತು. ಯೇಸು ಹೇಳಿದ್ದು, "ನಾನು ತಿರುಗಿ ಪಡೆದುಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ." ಯೋಹಾನ 10:17 ಅದರ ಅರ್ಥ "ನನ್ನ ತಂದೆಯು ನಿಮ್ಮನ್ನು ಬಹಳವಾಗಿ ಪ್ರೀತಿಸಿದ್ದಾನೆ ನಿಮ್ಮನ್ನು ವಿಮೋಚಿಸುವದಕ್ಕಾಗಿ ನನ್ನ ಜೀವಿತವನ್ನೇ ನೀಡಿದ್ದಕ್ಕಾಗಿ ಆತನು ನನ್ನನ್ನು ಸಹ ಪ್ರೀತಿಸುತ್ತಾನೆ.ನಿಮ್ಮ ಬದಲಿ ವ್ಯವಸ್ಥೆಯಾಗಿ ಮತ್ತು ಜಾಮೀನಾಗಿ ನಿಮ್ಮ ಉತ್ತರ ದಾಯಿತ್ವವನ್ನು, ನಿಮ್ಮ ಪಾಪಗಳನ್ನು ನನ್ನ ಮೇಲೆ ತೆಗೆದುಕೊಂಡು ನನ್ನ ಜೀವಿತವನ್ನು ಸಮರ್ಪಿಸಿದ್ದೇನೆ; ಇದರಿಂದಾಗಿ ನಾನು ನನ್ನ ತಂದೆಗೆ ಪ್ರಿಯನಾಗಿದ್ದೇನೆ; ನನ್ನ ಬಲಿದಾನದ ಮೂಲಕ ದೇವರು ನ್ಯಾಯವಂತನು ಮತ್ತು ಯೇಸುವಿನಲ್ಲಿ ನಂಬಿಕೆ ಯನ್ನಿಡುವವರು ನೀತಿವಂತರಾಗುತ್ತಾರೆ

(13) ಪಾಪಕ್ಕೆ ಸತ್ತವರಾಗಿದ್ದವರು ಕ್ರಿಸ್ತನ ಮೂಲಕ ತನ್ನ ಮಹಾ ಪ್ರೀತಿಯಲ್ಲಿ ದೇವರು ಯಾವ ಎರಡು ಸಂಗತಿಗಳನ್ನು ನಮಗಾಗಿ ಮಾಡುತ್ತಾನೆ?

ಅಪರಾಧಗಳ ದೆಸೆಯಿಂದ ಸತ್ತವರಾಗಿದ್ದ ನಮ್ಮನ್ನು ಕ್ರಿಸ್ತನೊಂದಿಗೆ ಬದುಕಿಸಿದನು, (ಕೃಪೆಯಿಂದಲೇ ರಕ್ಷಣೆ ಹೊಂದಿದವರಾಗಿದ್ದೀರಿ!) ಬದುಕಿಸಿದ್ದಲ್ಲದೆ ತಾನು ಕ್ರಿಸ್ತ ಯೇಸುವಿನಲ್ಲಿ ನಮಗೆ ಮಾಡುವ ಉಪಕಾರದ ಮೂಲಕ ತನ್ನ ಅಪಾರವಾದ ಕೃಪಾತಿಶಯವನ್ನು ಮುಂದಣ ಯುಗಗಳಲ್ಲಿ ತೋರಿಸಬೇಕೆಂದು ಕ್ರಿಸ್ತ ಯೇಸುವಿನಲ್ಲಿರುವ ನಮ್ಮನ್ನು ಆತನೊಂದಿಗೆ ಎಬ್ಬಿಸಿ ಪರಲೋಕದಲ್ಲಿ ಆತನೊಂದಿಗೆ ಕೂಡ್ರಿಸಿದ್ದಾನೆ. (ಎಫೆಸ 2:5-6)
ಜೀವ ಮತ್ತು ಮಹಿಮೆಯ ಕರ್ತನು ತನ್ನ ದೈವತ್ವ ಮತ್ತು ಮಾನವತ್ವವನ್ನು ಧರಿಸಿ ಮನುಷ್ಯರಿಗೆ ದೇವರು ಕ್ರಿಸ್ತನ ಕೊಡುಗೆಯ ಮೂಲಕ ನಮ್ಮನ್ನು ತನ್ನೊಂದಿಗೆ ಸಂಧಾನ ಮಾಡಿಕೊಳ್ಳುತ್ತಾನೆ ಎಂಬುದನ್ನು ಪ್ರದರ್ಶಿಸಿದನು. ದೇವರೊಂದಿಗೆ ಸಂಬಂಧವಿಲ್ಲದೆ ಯಾರೂ ಬಹಳ ಮಟ್ಟಿಗೆ ಸಂತೋಷದಿಂದ ಇರಲು ಸಾಧ್ಯವಿಲ್ಲ. ಬಿದ್ದು ಹೋದ ಮನುಷ್ಯನು ನಮ್ಮ ಪರಲೋಕದ ತಂದೆಯು ಆತನ ಪ್ರೀತಿಯೂ ಪಶ್ಚಾತ್ತಾಪ ಪಡುವ ಪಾಪಿಯನ್ನು ತಬ್ಬಿಕೊಳ್ಳುವವರೆಗೆ, ದೋಷರಹಿತನಾದ ಕುರುಮರಿಯ ಕಾರ್ಯಗಳ ಮೂಲಕ ಪರಿವರ್ತನೆ ಹೊಂದುವತನಕ  ತೃಪ್ತಿ ಹೊಂದಲಾರನು.

ಪರಲೋಕದ ಜ್ಞಾನದ ಕೆಲಸಗಳು ಇಲ್ಲಿಯವರೆಗೆ ಮಾತ್ರ. ತಮ್ಮ ಯಜಮಾನನ ಆಜ್ಞೆಯ ಮೇರೆಗೆ ಪಾಪ ಮಾಡಿ ತಮ್ಮನ್ನು ತಾವು ಪರಲೋಕದ ತಂದೆಯಿಂದ ಬೇರ್ಪಟ್ಟವರನ್ನು ಮರಳಿ ಪಡೆದುಕೊಳ್ಳಲು ಕಾರ್ಯ ಮಾಡಬೇಕು. ಒಂದು ಯೋಜನೆ ರಚಿಸಲ್ಪಟ್ಟಿದೆ ಅದರ ಮೂಲಕ ಅದ್ಭುತವಾದ ಕೃಪೆ ಮತ್ತು ಕ್ರಿಸ್ತನ ಪ್ರೀತಿ ಲೋಕಕ್ಕೆ ಪ್ರಕಟವಾಗುತ್ತದೆ. ಮನುಷ್ಯರಿಗಾಗಿ ದೇವಕುಮಾರನು ತೆತ್ತ ಅಪರಿಮಿತವಾದ ಬೆಲೆ , ದೇವರ ಪ್ರೀತಿ ಪ್ರಕಟವಾಗಿದೆ, ಈಡೀ ಲೋಕವನ್ನು ರಕ್ಷಿಸಲು ಈ ಭವ್ಯವಾದ ವಿಮೋಚನೆಯ ಯೋಜನೆ ಈಡೀ ಲೋಕವನ್ನು ರಕ್ಷಿಸಲು ದಾರಾಳವಾಗಿದೆ. ಪಾಪಿ ಮತ್ತು ಬಿದ್ದುಹೋದ ಮನುಷ್ಯನು ಯೇಸುವಿನಲ್ಲಿ ಪಾಪಗಳ ಕ್ಷಮಾಪಣೆಯ ಮೂಲಕ ಮತ್ತು ಕ್ರಿಸ್ತನ ನೀತಿವಂತಿಕೆಯನ್ನು ಹೊಂದಿಕೊಳ್ಳುವದರ ಮೂಲಕ ಪರಿಪೂರ್ಣನಾಗಿ ಮಾಡಲ್ಪಡುತ್ತಾನೆ.

ಕ್ರಿಸ್ತನು ಮನುಷ್ಯ ದೇಹದಲ್ಲಿ ಲೋಕಕ್ಕೆ ತಂದೆಯ ಪ್ರೀತಿಯನ್ನು ಪ್ರಕಟಿಸಲು ಮತ್ತು ನಮ್ಮನ್ನು ನಾಶನದಿಂದ ತಪ್ಪಿಸಲು ಬಂದಿರುವ ದೈವೀಕತೆಯ ರಹಸ್ಯವನ್ನು ನೋಡಿ ನಾನು ಆಶ್ಚರ್ಯಚಕಿತನಾಗಿದ್ದೇನೆ.

ದುಂಡು ಸುತ್ತಿರಿ:  ಹೌದು    ನಿರ್ಧರಿಸಿಲ್ಲ

ಆತನ ಮಗನ ಬಹುಮಾನಕ್ಕಾಗಿ ನಾನು ನಿತ್ಯಕಾಲಕ್ಕೂ ಕೃತಜ್ಞಳಾಗಿದ್ದೇನೆ. ದೇವರು ಬಹಳ ಧಾರಾಳವಾಗಿ ನಾನು ಭವಿಷ್ಯತ್ತನ್ನೂ ಮತ್ತು ಆತನ ಸಾನಿಧ್ಯದ ಜೀವಿತದ ನಿರೀಕ್ಷೆಯನ್ನು ಅದು ವೇದನೆ, ಕಷ್ಟಾನುಭವ ಮತ್ತು ಮರಣದಿಂದ ದೂರವಾದ ಜೀವಿತವನ್ನು ಕೊಟ್ಟಿದ್ದಾನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ದೇವರು ನನ್ನನ್ನು ತನ್ನ ಆತ್ಮನಿಂದ ತುಂಬಿಸಬೇಕು ಎಂಬದು ನನ್ನ ಪ್ರಾರ್ಥನೆಯಾಗಿದೆ ಇದರಿಂದಾಗಿ ನಾನು ಪಾಪದ ಕತ್ತಲೆಯನ್ನು ಪ್ರೀತಿಸದೇ ಮತ್ತು ಕತ್ತಲೆಯ ಶಿಕ್ಷೆಯನ್ನು ಆರಿಸಿಕೊಳ್ಳದೇ ಬದಲಾಗಿ ಆತನ ಅದ್ಭುತವಾದ ಪ್ರೀತಿಯ ಬೆಳಕನ್ನು ಆಯ್ದುಕೊಳ್ಳುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನನ್ನ ಸನ್ಮಾರ್ಗ ಭ್ರಷ್ಟತೆಯನ್ನು ಸ್ವಸ್ಥಪಡಿಸುತ್ತೇನೆ ಎಂಬ ನಿನ್ನ ವಾಗ್ದಾನಕ್ಕಾಗಿ ತಂದೆಯೇ ನಿನಗೆ ವಂದನೆಗಳನ್ನು ತಿಳಿಸುತ್ತೇನೆ, ನನ್ನನ್ನು ಬಹಳವಾಗಿ ಪ್ರೀತಿಸು, ನಿನ್ನ ಕೋಪವನ್ನು ನನ್ನ ಮೇಲಿನಿಂದ ತೆಗೆದು ಬಿಡು.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಬಿದ್ದು ಹೋದ ನಮ್ಮ ಜನಾಂಗದ ಮೇಲೆ ದೈವತ್ವವು ಅನುಕಂಪ ತೋರಿರುವದನ್ನು ಮತ್ತು ತಾವೇ ನನಗಾಗಿ ವಿಮೋಚನೆಯ ಯೋಜನೆಯನ್ನು ಸಿದ್ಧಪಡಿಸಿ ರುವದಕ್ಕಾಗಿ ನಾನು ಪ್ರಶಂಶಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಈ ದಿವಸ ನಾನು ನನ್ನ ಹೃದಯವನ್ನು ಮನಸ್ಸು ಮತ್ತು ಆತ್ಮವನ್ನು ಕರ್ತನಿಗೆ ಕೊಡುತ್ತೇನೆ ಮತ್ತು ಪ್ರಾರ್ಥಿಸುತ್ತೇನೆ ಆತನ ಕೃಪೆ ಮತ್ತು ಪ್ರೀತಿಯ ಮೂಲಕ ನನ್ನ ಜೀವಿತವನ್ನು ಆತನ ಮಹಿಮೆಗಾಗಿ ಜೀವಿಸುತ್ತೇನೆ. ನಾನು ಆತನ ಪ್ರೀತಿ ಮತ್ತು ನನಗಾಗಿ ಕ್ರಿಸ್ತನ ಜೀವಿತ ಮತ್ತು ಮರಣದ ಮೂಲಕ ಪ್ರಕಟವಾದ ಆತನ ಉಪಕಾರಕ್ಕೆ ಬಲವಾದ ಸಾಕ್ಷಿಯಾಗಿರಲು ಅಪೇಕ್ಷಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

___

___

___

___

___

___

___

___

___

___



## ಪಾಠ 6
## ದೇವರ ಪ್ರೀತಿ ಆತನ ನ್ಯಾಯ ಮತ್ತು ಕರುಣೆಯ ಮೂಲಕ ಪ್ರಕಟವಾಗಿದೆ

(1) ಕ್ರಿಸ್ತನು  ಈ ಲೋಕಕ್ಕೆ ಬಂದನು ಮತ್ತು ಗೌರವಿಸಲು, ನೆರವೇರಿಸಲು ಮತ್ತು ಎತ್ತಿಹಿಡಿಯಲು ತನ್ನ ಪ್ರಾಣವನ್ನು ಕೊಟ್ಟನು ಏಕೆ?

ಮೋಶೆಯ ಧರ್ಮಶಾಸ್ತ್ರವನ್ನಾಗಲಿ ಪ್ರವಾದಿಗಳ ವಚನಗಳನ್ನಾಗಲಿ ತೆಗೆದು ಹಾಕುವದಕ್ಕೆ ನಾನು ಬಂದೆನೆಂದು ನೆನಸಬೇಡಿರಿ, ತೆಗೆದುಹಾಕುವದಕ್ಕೆ ಬಂದಿಲ್ಲ ನೆರವೇರಿಸುವದಕ್ಕೆ ಬಂದಿದ್ದೇನೆ. (ಮತ್ತಾಯ 5:17). ಅನಂತನಾದ ದೇವರು ತಪ್ಪಿಹೋದ ಜನಾಂಗವನ್ನು ವಿಮೋಚಿಸಲು ತನ್ನ ಒಬ್ಬನೇ ಮಗನ ಬಹುಮಾನದಲ್ಲಿ ಪ್ರಕಟಿಸಿಕೊಂಡಿದ್ದಾನೆ. ಕ್ರಿಸ್ತನು ಮನುಷ್ಯರಿಗೆ ತನ್ನ ತಂದೆಯ

ಗುಣಲಕ್ಷಣಗಳನ್ನು ಪ್ರಕಟಿಸುವದಕ್ಕೆ ಈ ಲೋಕಕ್ಕೆ ಬಂದನು ಮತ್ತು ಆತನ ಜೀವಿತವು ದೈವೀಕ ಕೋಮಲತೆ ಮತ್ತು ಅನುಕಂಪದ ಕಾರ್ಯಗಳಿಂದ ತುಂಬಿದ್ದವು, ಆದಾಗ್ಯೂ ಕ್ರಿಸ್ತನು ತಾನೇ ಪ್ರಕಟಿಸುತ್ತಾನೆ, "ಆಕಾಶವೂ ಭೂಮಿಯೂ ಅಳಿದು ಹೋಗುವ ತನಕ ಧರ್ಮಶಾಸ್ತ್ರವೆಲ್ಲಾ ನೆರವೇರದ ಹೊರತು ಅದರೊಳಗಿಂದ ಒಂದು ಸೊನ್ನೆಯಾದರೂ ಒಂದು ಗಡುಸಾದರೂ ಅಳಿದು ಹೋಗಲಾರದು.ಮತ್ತಾಯ 5:18.

ಯೇಸು ಕ್ರಿಸ್ತನ ಮೂಲಕ ಕರುಣೆ ಮನುಷ್ಯರಿಗೆ ಪ್ರಕಟವಾಯಿತು' ಆದರೆ ಕರುಣೆ ನ್ಯಾಯವನ್ನು ಬದಿಗೆ ಇಡಲಿಲ್ಲ. ಧರ್ಮಶಾಸ್ತ್ರವು ದೇವರ ಗುಣಲಕ್ಷಣದ ಗುಣಧರ್ಮವನ್ನು ಪ್ರಕಟಿಸುತ್ತದೆ, ಮನುಷ್ಯನ ಬಿದ್ದು ಹೋದ ಸ್ಥಿತಿಯಲ್ಲಿ ಅವನನ್ನು ತಲುಪಲು ಒಂದು ಸೊನ್ನೆಯಾದರು ಒಂದು ಗಡುಸಾದರೂ ಬದಲಾಗುವದಿಲ್ಲ. ದೇವರು ತನ್ನ ಧರ್ಮಶಾಸ್ತ್ರವನ್ನು ಬದಲಾಯಿಸಲಿಲ್ಲ ಬದಲಾಗಿ ಆತನು ತನ್ನನ್ನು ತಾನು ಕ್ರಿಸ್ತನಲ್ಲಿ, ಮಾನವರ ವಿಮೋಚನೆಗಾಗಿ ಬಲಿಯಾಗಿ ಅರ್ಪಿಸಿದನು. "ದೇವರು ಕ್ರಿಸ್ತನಲ್ಲಿ ಲೋಕವನ್ನು ತನಗೆ ಸಮಾಧಾನ ಪಡಿಸಿಕೊಳ್ಳುತ್ತಿದ್ದ ನೆಂಬುದೇ." 2ಕೊರಿಂಥ 5:19.

ಧರ್ಮಶಾಸ್ತ್ರಕ್ಕೆ ನೀತಿವಂತಿಕೆಯ ಅವಶ್ಯಕತೆಯಿದೆ – ನೀತಿವಂತಿಕೆಯ

ಜೀವಿತ, ಪರಿಪೂರ್ಣವಾದ ನಡತೆ;
ಮನುಷ್ಯನು ಕೊಡುವದಿಲ್ಲ, ಅವನು
ದೇವರ ಪರಿಶುದ್ಧ ಧರ್ಮಶಾಸ್ತ್ರದ
ಬೇಡಿಕೆಗಳನ್ನು ಸಂಧಿಸಲಾರನು.
ಆದರೆ ಕ್ರಿಸ್ತನು ಮನುಷ್ಯನಾಗಿ
ಭೂಮಿಗೆ ಬಂದಾಗ ಪರಿಶುದ್ಧತೆಯ
ಜೀವಿತವನ್ನು ಜೀವಿಸಿದನು, ಮತ್ತು
ಪರಿಪೂರ್ಣವಾದ ನಡೆತೆಯನ್ನು
ಬೆಳೆಸಿಕೊಂಡನು. ಆತನು ಉಚಿತವಾದ
ಈ ಕೊಡುಗೆಯನ್ನು ಯಾರು
ಸ್ವೀಕರಿಸುತ್ತಾರೋ ಅವರೆಲ್ಲರಿಗೂ
ನೀಡುತ್ತಾನೆ. ಆತನ ಜೀವಿತವು
ಮನುಷ್ಯನ ಜೀವಿತಕ್ಕಾಗಿ ಇದೆ. ಹೀಗೆ
ಅವರು ಹಿಂದಿನ ಪಾಪದ
ವಿಮೋಚನೆಯನ್ನು ದೇವರ ತಾಳ್ಮೆಯ
ಮೂಲಕ ಹೊಂದಿದರು.
ಇದಕ್ಕಿಂತಲೂ ಹೆಚ್ಚಾಗಿ ಕ್ರಿಸ್ತನು
ಮನುಷ್ಯರನ್ನು ದೇವರ
ಗುಣಧರ್ಮದಿಂದ ತುಂಬಿದನು.
ಅವನು ಮಾನವನ ಗುಣಲಕ್ಷಣಗಳನ್ನು
ದೈವೀಕ ಗುಣಲಕ್ಷಣದ ಹೋಲಿಕೆಗೆ
ಅಭಿವೃದ್ಧಿ ಪಡಿಸುತ್ತಾನೆ, ಆತ್ಮೀಕ ಬಲ
ಮತ್ತು ಸೌಂದರ್ಯದ ದೈವೀಕ ಒಟ್ಟು
ಗೂಡಿಸುವಿಕೆ. ಹೀಗೆ ಧರ್ಮಶಾಸ್ತ್ರದ
ನೀತಿವಂತಿಕೆ ಕ್ರಿಸ್ತನಲ್ಲಿ ವಿಶ್ವಾಸ
ವಿಡುವವನಲ್ಲಿ ನೆರವೇರುತ್ತದೆ.
ದೇವರು ತಾನು
ನೀತಿಸ್ವರೂಪಿಯಾಗಿಯೂ
ಯೇಸುವಿನಲ್ಲಿ ನಂಬಿಕೆಯಿಡುವವರು
ನೀತಿವಂತರೆಂದು ನಿರ್ಣಯಿಸುವವ

ನಾಗಿಯೂ ಕಾಣಿಸಿಕೊಂಡಿದ್ದಾನೆ."
ರೋಮ 3:26

(2) "ಕರ್ತನು, ದೇವರಾಗಿದ್ದಾನೆ" ಅಂದರೆ ಏನು ಆತನು ಅದನ್ನು ಕೃಪೆಯೊಂದಿಗೆ ಪರಿಪೂರ್ಣ ಸಮತೋಲನದಲ್ಲಿ ಇರಿಸುತ್ತಾನೆ ಮತ್ತು ಕೊನೆಯಲ್ಲಿ ಕ್ರೂಜೆಯ ಮೇಲೆ ಪ್ರಕಟಿಸಿದ್ದಾನೋ?

ಹೀಗಿರಲು ಯೆಹೋವನು ನಿಮಗೆ ಕೃಪೆ ತೋರಿಸಬೇಕೆಂದು ಕಾದಿರುವನು; ನಿಮ್ಮನ್ನು ಕರುಣಿಸಬೇಕೆಂದು ಉನ್ನತೋನ್ನತನಾಗಿ ಕಾಣಿಸಿ ಕೊಳ್ಳುವನು; ಯೆಹೋವನು ನ್ಯಾಯ ಸ್ವರೂಪನಾದ ದೇವರು ಆತನಿಗಾಗಿ ಕಾದಿರುವವರೆಲ್ಲರೂ ಧನ್ಯರು. (ಯೆಶಾಯ 30:18)

ದೇವರ ಪ್ರೀತಿಯನ್ನು ಆತನ ಕೃಪೆಯಲ್ಲಿರುವದಕ್ಕಿಂಥ ಏನೂ ಕಡಿಮೆಯಿಲ್ಲದಂತೆ ಆತನ ನ್ಯಾಯದಲ್ಲಿ ವ್ಯಕ್ತಪಡಿಸಲಾಗಿದೆ. ನ್ಯಾಯವು ಆತನ ಸಿಂಹಾಸನದ ಅಸ್ತಿವಾರವಾಗಿದೆ, ಮತ್ತು ಆತನ ಪ್ರೀತಿಯ ಫಲವಾಗಿದೆ. ಸೈತಾನನ ಉದ್ದೇಶ ಕರುಣೆಯನ್ನು ಆತನ ಸತ್ಯ ಮತ್ತು ನ್ಯಾಯದಿಂದ ಬೇರ್ಪಡಿಸು ವದಾಗಿದೆ. ಅವನು ದೇವರ ಧರ್ಮಶಾಸ್ತ್ರದ ನೀತಿವಂತಿಕೆ ಸಮಾಧಾನದ ವೈರಿಯಾಗಿದೆ. ಆದರೆ ಕ್ರಿಸ್ತನು ದೇವರ ಯೋಜನೆಯಲ್ಲಿ ಅವು

ಬೇರ್ಪಡಿಸಲಾರದಷ್ಟು ಒಟ್ಟಾಗಿ ಸೇರಿಕೊಂಡಿವೆ ಎಂದು ತೋರಿಸುತ್ತಾನೆ; ಒಂದು ಇನ್ನೊಂದನ್ನು ಬಿಟ್ಟು ಅಸ್ತಿತ್ವದಲ್ಲಿ ಇಲ್ಲ, "ಕೃಪೆಯೂ ಸತ್ಯವೂ ಒಂದನ್ನೊಂದು ಕೂಡಿರುವವು, ನೀತಿಯೂ ಸಮಾಧಾನವೂ ಮುದ್ದಿಟ್ಟುಕೊಳ್ಳುವವು." ಕೀರ್ತನೆ 85:10.

ತನ್ನ ಜೀವಿತ ಮತ್ತು ತನ್ನ ಮರಣದಿಂದ ಕ್ರಿಸ್ತನು ದೇವರ ನ್ಯಾಯದಿಂದ ಆತನ ಕರುಣೆ ನಾಶವಾಗಲಿಲ್ಲ ಎಂದು ಸಿದ್ಧಾಂತ ಪಡಿಸುತ್ತಾನೆ, ಆದರೆ ಆ ಪಾಪವನ್ನು ಕ್ಷಮಿಸಬಹುದು ಮತ್ತು ಧರ್ಮಶಾಸ್ತ್ರವು ಪರಿಪೂರ್ಣವಾದದ್ದು ಅದಕ್ಕೆ ವಿಧೇಯರಾಗಬೇಕು. ಸೈತಾನನ ದೂರುಗಳು ಖಂಡಿಸಲ್ಪಟ್ಟಿವೆ. ದೇವರು ಮನುಷ್ಯನಿಗೆ ತನ್ನ ಪ್ರೀತಿಯ ಸ್ಪಷ್ಟವಾದ ಸಾಕ್ಷಿಯನ್ನು ನೀಡಿದ್ದಾನೆ.

(3) ತನ್ನ ಮಹಾ ಪ್ರೀತಿ ಮತ್ತು ದೈವೀಕ ಬಲದಿಂದ  ಕ್ರಿಸ್ತನ ಒಳ್ಳೆಯತನ ಮತ್ತು ಆತನು ನಮ್ಮೊಳಗೆ ವಾಸಮಾಡುವದರ ಮೂಲಕ ದೇವರು  ನಮ್ಮನ್ನು ಯಾವುದರಲ್ಲಿ ಪಾಲುಗಾರರಾಗಲು ಅನುಮತಿಸಿದ್ದಾನೆ?

ನಮ್ಮನ್ನು ತನ್ನ ಪ್ರಭಾವದಿಂದಲೂ ಗುಣಾತಿಶಯದಿಂದಲೂ ಕರೆದ ದೇವರ ವಿಷಯವಾಗಿ ಯೇಸುವಿನ ದಿವ್ಯ ಶಕ್ತಿಯು ನಮಗೆ ಪರಿಜ್ಞಾನವನ್ನು ಕೊಟ್ಟದ್ದರಲ್ಲಿ ಜೀವಕ್ಕೂ ಭಕ್ತಿಗೂ

ಬೇಕಾದದ್ದೆಲ್ಲವೂ ದೊರೆಯಿತೆಂದು ಬಲ್ಲೆವಷ್ಟೆ, ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವಸ್ವಭಾವದಲ್ಲಿ ಪಾಲನ್ನು ಹೊಂದುವವರಾಗಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯ ವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ದಯಪಾಲಿಸಿದ್ದಾನೆ. (2ಪೇತ್ರ 1:3-4)

ಮನುಷ್ಯನ ವಿಮೋಚನೆಯ ಕಾರ್ಯವನ್ನು ಕೈಗೆತ್ತಿಕೊಂಡ ಮೇಲೆ, ತಂದೆಯು ಏನನ್ನೂ ಉಳಿಸಿಕೊಳ್ಳಲಿಲ್ಲ, ಎಷ್ಟೇ ಪ್ರೀತಿಪಾತ್ರವಾದದ್ದನ್ನೂ ಸಹ, ಅದು ಆತನ ಕಾರ್ಯವನ್ನು ಪೂರ್ತಿಗೊಳಿಸಲು ಅಗತ್ಯವಾಗಿತ್ತು. ಆತನು ಮನುಷ್ಯರಿಗೆ ಅವಕಾಶಗಳನ್ನು ಮಾಡಿದನು. ಆತನು ಅವರ ಮೇಲೆ ತನ್ನ ಆಶೀರ್ವಾದಗಳನ್ನು ಸುರಿಸಿದನು. ಆತನು ದಯೆಯ ಮೇಲೆ ದಯೆ, ಬಹುಮಾನಗಳ ಮೇಲೆ ಬಹುಮಾನಗಳು ನೀಡ ತೊಡಗಿದನು, ಪರಲೋಕದಲ್ಲಿರುವ ಈಡೀ ಖಜಾನೆಯನ್ನು ಆತನು ರಕ್ಷಿಸಲು ಬಂದವರಿಗಾಗಿ ತೆರೆದಿಟ್ಟನು. ವಿಶ್ವದ ಎಲ್ಲಾ ಸಂಪತ್ತನ್ನು ಸಂಗ್ರಹಿಸಿದ ಮೇಲೆ ತನ್ನ ದೈವೀಕ ಸ್ವರೂಪದ ಎಲ್ಲಾ ಸಂಪನ್ಮೂಲಗಳನ್ನು ಅವರ ಮೇಲೆ ಹಾಕಿದನು, ದೇವರು ಮನುಷ್ಯನ ಉಪಯೋಗಕ್ಕಾಗಿ ಎಲ್ಲವನ್ನೂ

ನೀಡಿದನು, ಅವರು ಆತನ ಉಚಿತವಾದ ವರವಾಗಿದ್ದರು. ಎಂಥ ಸಾಗರದಂತ ಪ್ರೀತಿ ಹರಿಯುತ್ತಿದೆ, ದೈವೀಕ ವಾತಾವರಣ ಲೋಕದ ಸುತ್ತಲೂ! ಎಂಥ ವಿಧದ ಪ್ರೀತಿ ಇದಾಗಿದೆ, ನಿತ್ಯನಾದ ದೇವರು ತನ್ನ ಮಗನ ವ್ಯಕ್ತಿತ್ವದಲ್ಲಿ ಮಾನವ ರೂಪವನ್ನು ಅಳವಡಿಸಿ ಕೊಂಡನು ಮತ್ತು ಅದನ್ನೇ ಉನ್ನತವಾದ ಪರಲೋಕಕ್ಕೂ ಕೊಂಡೊಯ್ಯದನು!

ನಮ್ಮ ವಿಮೋಚಕನು ತನ್ನ ಒಳ್ಳೇಯತನದ ಮೂಲಕ ದೇವರ ಪ್ರೀತಿಯು ತನ್ನನ್ನು ನಂಬುವವರ ಆತ್ಮಗಳ ಮೂಲಕ ಹರಿಯಬೇಕು ಎಂದು ನಿರ್ಧರಿಸಿದನು. ನಮ್ಮ ಜೀವಿತದಂತೆ ದೇವರ ಪ್ರೀತಿಯ ಮೌಲ್ಯ ನಮ್ಮ ಸ್ವಭಾವದ ಪ್ರತಿಯೊಂದು ಭಾಗದಲ್ಲೂ ಹರಿಯಬೇಕು, ಅದು ಯೇಸು ಕ್ರಿಸ್ತನಲ್ಲಿ ವಾಸಿಸುವ ಪ್ರಕಾರ ನಮ್ಮಲ್ಲಿ ನೆಲೆಗೊಳ್ಳಬೇಕು. ಜೀವಿಸುವ ನಂಬಿಕೆಯ
ಮೂಲಕ ಕ್ರಿಸ್ತನಲ್ಲಿ ಒಂದಾಗಿದ್ದೇವೆ, ತಂದೆಯು ನಮ್ಮನ್ನು ಕ್ರಿಸ್ತನ ರೂಪಾಂತರ ಹೊಂದಿದ ದೇಹದ ಸದಸ್ಯರನ್ನಾಗಿ ಪ್ರೀತಿಸುತ್ತಾನೆ, ಅದರ ಮೂಲಕ ಕ್ರಿಸ್ತನು ಮಹಿಮೆಯ ಶಿರಸ್ಸಾಗಿದ್ದಾನೆ.

(4) ನಮ್ಮ ಬಿದ್ದು ಹೋದ ಆತ್ಮಗಳಿಗಾಗಿ ಕರುಣೆ ಮತ್ತು ಅನುಕಂಪದಿಂದ

ಕೂಡಿದ್ದಾನೆ ಯಾವ ಪಾಪಿಯೂ
ಏನನ್ನೂ ಮಾಡಬಾರದು ಎಂದು
ದೈವತ್ವವು ಇಚ್ಛಿಸುತ್ತದೆ?
ಅಪಕಾರಕ್ಕೆ ಅಪಕಾರವನ್ನು ನಿಂದೆಗೆ
ನಿಂದೆಯನ್ನು ಮಾಡದೆ
ಆಶೀರ್ವದಿಸಿರಿ. ಇದಕ್ಕಾಗಿ ದೇವರು
ನಿಮ್ಮನ್ನು ಕರೆದನಲ್ಲಾ; ಹೀಗೆ
ಮಾಡುವದಾದರೆ ನೀವು
ಆಶೀರ್ವಾದವನ್ನು ಬಾಧ್ಯವಾಗಿ
ಹೊಂದುವಿರಿ. (2ಪೇತ್ರ 3:9)

ಇದು ಸುವಾರ್ತೆಯ ಮಹಿಮೆಯಾಗಿದೆ
ಇದು ಬಿದ್ದುಹೋದ ಜನಾಂಗವನ್ನು
ದಯೆಯ ನಿರಂತರವಾದ
ಪ್ರಕಟಿಸುವಿಕೆಯ ಮೂಲಕ ದೈವೀಕ
ಸ್ವರೂಪವನ್ನು ಪುನರುಜ್ಜೀವನ
ಗೊಳಿಸುವ ತತ್ವದ ಆಧಾರದ ಮೇಲೆ
ಸ್ಥಾಪಿಸಲಾಗಿದೆ. ಈ ಕಾರ್ಯವು
ಪರಲೋಕದ ಆಸ್ತಾನದಲ್ಲಿ
ಪ್ರಾರಂಭವಾಯಿತು. ಅಲ್ಲಿ ದೇವರು
ಮಾನವ ಜೀವಿಗೆ ಆತನು ಎಂಥ
ಪ್ರೀತಿಯಿಂದ ಅವರನ್ನು ಗೌರವಿಸಿದನು
ಎಂಬುದಕ್ಕೆ ಸ್ಪಷ್ಟವಾದ ಸಾಕ್ಷಿಯನ್ನು
ನೀಡಲು ನಿರ್ಧರಿಸಿದನು, ಆತನು
"ಲೋಕದ ಮೇಲೆ ಎಷ್ಟೋ
ಪ್ರೀತಿಯನ್ನಿಟ್ಟು ತನ್ನ ಒಬ್ಬನೇ
ಮಗನನ್ನು ಕೊಟ್ಟನು; ಆತನನ್ನು
ನಂಬುವ ಒಬ್ಬನಾದರೂ ನಾಶವಾಗದೆ
ಎಲ್ಲರೂ ನಿತ್ಯಜೀವವನ್ನು
ಪಡೆಯಬೇಕೆಂದು ಆತನನ್ನು ಕೊಟ್ಟನು
ಯೋಹಾನ 3:16.

ದೈವತ್ವವು ಜನಾಂಗದ ಮೇಲೆ ಅನುಕಂಪಗೊಂಡು, ತಂದೆ, ಮಗ ಮತ್ತು ಪವಿತ್ರಾತ್ಮನು ವಿಮೋಚನೆಯ ಯೋಜನೆಯನ್ನು ಕಾರ್ಯರೂಪದಲ್ಲಿ ತರಲು ತಮ್ಮನ್ನೇ ತಾವು ಕೊಟ್ಟರು. ಈ ಯೋಜನೆಯನ್ನು ಸಂಪೂರ್ಣವಾಗಿ ಕಾರ್ಯಗತಗೊಳಿಸಲು, ದೇವರ ಒಬ್ಬನೇ ಮಗನಾದ ಕ್ರಿಸ್ತನು ಪಾಪಕ್ಕೆ ಪ್ರಾಯಶ್ಚಿತ್ತವಾಗಿ ತನ್ನನ್ನೇ ತಾನು ನೀಡಬೇಕು ಎಂದು ನಿರ್ಧರಿಸಲಾಯಿತು. ಯಾವ ಅಳತೆ ಈ ಪ್ರೀತಿಯ ಆಳವನ್ನು ಅಳೆಯಲು ಸಾಧ್ಯ? ದೇವರು ಇನ್ನೂ ಹೆಚ್ಚಾಗಿ ಮಾಡಬಹುದಿತ್ತು ಎಂದು ಮನುಷ್ಯನು ಹೇಳುವದನ್ನು ದೇವರು ಅಸಾಧ್ಯವಾಗಿ ಮಾಡಿದನು. ಕ್ರಿಸ್ತನೊಂದಿಗೆ ಆತನು ಪರಲೋಕದ ಎಲ್ಲಾ ಸಂಪನ್ನಮೂಲಗಳನ್ನು ನೀಡಿದನು ಮನುಷ್ಯನನ್ನು ಮೇಲೆಕ್ಕೆತ್ತುವ ಯೋಜನೆಯಲ್ಲಿ ಯಾವುದೇ ಕೊರತೆಯಾಗಬಾರದೆಂದು. ಇಲ್ಲಿ ಇದೆ ಆ ಪ್ರೀತಿ – ಇದರ ಚಿಂತನೆ ಆತ್ಮವನ್ನು ವರ್ಣಿಸಲಶಕ್ಯವಾದ ಕೃತಜ್ಞತೆಯಿಂದ ತುಂಬಿಸುತ್ತದೆ. ಈ ಯೋಜನೆಯನ್ನು ಸಂಪುರ್ಣವಾಗಿ ಕಾರ್ಯಗತಗೊಳಿಸಲು, ಎಂಥ ಪ್ರೀತಿ, ಎಂಥ ಹೋಲಿಸಲಶಕ್ಯವಾದ ಪ್ರೀತಿ! ಈ ಪ್ರೀತಿಯ ಚಿಂತನೆ ಆತ್ಮವನ್ನು ಎಲ್ಲಾ ಸ್ವಾರ್ಥತೆಯಿಂದ ಶುದ್ದೀಕರಿಸುತ್ತದೆ.

ಇದು ಶಿಷ್ಯನನ್ನು ಸ್ವನಿರಾಕರಣೆಗೆ, ಕ್ರೂಜೆಯನ್ನು ಹೊತ್ತುಕೊಂಡು ವಿಮೋಚಕನನ್ನು ಹಿಂಬಾಲಿಸುವತ್ತ ನಡೆಸುತ್ತದೆ.

(5) ಪಾಪಿಗಳಾಗಿ ನಾವು ನ್ಯಾಯ, ಕರುಣೆ ಮತ್ತು ಕ್ರೂಜೆಯ ಬೆಳಕಿನಲ್ಲಿ ದೇವರ ಪ್ರೀತಿಯನ್ನು ಗ್ರಹಿಸಿಕೊಳ್ಳುವಾಗ ಪೌಲನಂತೆ ನಮ್ಮ ಸಾಕ್ಷಿಯ ಕೇಂದ್ರೀಕರಿಸುವಿಕೆ ಏನು?

ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು. (1ಕೊರಿಂಥ 2:2)

ಯೇಸು ಕ್ರೂಜೆಯನ್ನು ಪರಲೋಕದಿಂದ ಬರುವ ಬೆಳಕಿನ ಸಾಲಿನಲ್ಲಿ ಇರಿಸಿದನು, ಯಾಕಂದರೆ ಅದು ಮನುಷ್ಯನ ದೃಷ್ಟಿಯನ್ನು ಸೆರೆಹಿಡಿಯುತ್ತದೆ. ಕ್ರೂಜೆ ದೈವೀಕ ಕೃಪಾದೃಷ್ಟಿಯ  ಪ್ರಕಾಶದ ನೇರವಾದ ಸಾಲಿನಲ್ಲಿದೆ, ಇದರಿಂದಾಗಿ ಕ್ರೂಜೆಯನ್ನು ದೃಷ್ಟಿಸುವಾಗ, ಮನುಷ್ಯರು ನೋಡಬಹುದು ಮತ್ತು ಆತನು ಕಳುಹಿಸಿಕೊಟ್ಟ ಯೇಸು ಕ್ರಿಸ್ತನನ್ನು ತಿಳಿದುಕೊಳ್ಳಬಹುದು. ದೇವರನ್ನು ದೃಷ್ಟಿಸುವಾಗ ನಾವು ತನ್ನ ಆತ್ಮವನ್ನು ಮರಣಕ್ಕೆ

ಒಪ್ಪಿಸಿದಾತನನ್ನು ನೋಡಬಹುದು. ಕ್ರೂಜೆಯನ್ನು ದೃಷ್ಟಿಸುವಾಗ ದೃಶ್ಯವು ದೇವರ ತನಕ ವಿಸ್ತರಿಸುತ್ತದೆ, ಮತ್ತು ಪಾಪವನ್ನು ಆತನು ಹಗೆ ಮಾಡುತ್ತಾನೆ ಎಂಬ ಮನವರಿಕೆ ಆಗುತ್ತದೆ ಎಂಬುದನ್ನು ಸಹ ನಾವು ನೋಡುತ್ತೇವೆ. ಪಾಪಿಗಳ ಮೇಲೆ ಆತನಿಗಿರುವ ಪ್ರೀತಿ ಮರಣಕ್ಕಿಂತ ಬಲವಾಗಿದೆ. ಲೋಕಕ್ಕೆ ಕ್ರೂಜೆಯ ದೇವರು ಸತ್ಯ, ಬೆಳಕು ಮತ್ತು ಪ್ರೀತಿಯಾಗಿದ್ದಾನೆ ಎಂಬುದು ನಿರ್ವಿವಾದದ ಚರ್ಚೆಯಾಗಿದೆ.

(6) ಪಾಪದ ಮೂಲಕ ನಾವು ನ್ಯಾಯಯುತವಾಗಿ ದೇವರಿಂದ ಬೇರ್ಪಟ್ಟೆವು, ಯೇಸುವಿನ ಮರಣದ ಮೂಲಕ ಯಾರು ಸ್ವೀಕರಿಸಲ್ಪಡು ತ್ತಾರೋ  ಅವರಿಗೆ ಯಾವ ಕೃಪೆಯ ಕಾರ್ಯ ನೆರವೇರಿಸಲ್ಪಟ್ಟಿದೆ?

ದೇವರಿಗೆ ವೈರಿಗಳಾಗಿದ್ದ ನಾವು ಆತನ ಮಗನ ಮರಣದ ಮೂಲಕ ಆತನೊಂದಿಗೆ ಸಮಾಧಾನವಾಗಿರಲಾಗಿ ಆತನ ಕೂಡ ಸಮಾಧಾನವಾದ ನಮಗೆ ಆ ಮಗನಿಗಿರುವ ಜೀವದಿಂದ ರಕ್ಷಣೆಯಾಗುವದು ಮತ್ತು ನಿಶ್ಚಯವಲ್ಲವೇ, ಇಷ್ಟು ಮಾತ್ರವೇ ಅಲ್ಲದೇ ನಾವು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ಸಮಾಧಾನ

ಸ್ಥಿತಿ ಹೊಂದಿದವರಾಗಿ ಆತನ ಮುಖಾಂತರ ದೇವರಲ್ಲಿ ಹರ್ಷಗೊಳ್ಳುತ್ತೇವೆ. (ರೋಮಾ5:10-11)

ಮನುಷ್ಯನು ಪಾಪದಿಂದಾಗಿ ದೇವರ ಜೀವಿತದಿಂದ ಬೇರ್ಪಟ್ಟನು. ಆತನ ಆತ್ಮವು ಸೈತಾನನ , ಪಾಪದ ಮೂಲನ ಒಳಸಂಚಿನಿಂದಾಗಿ ದುರ್ಬಲನಾದನು. ಇದರಿಂದಾಗಿ ಅವನು ಪಾಪವನ್ನು ಊಹಿಸಲು ಅಸಮರ್ಥನಾದನು, ಮೆಚ್ಚಿಗೆ ವ್ಯಕ್ತಿಪಡಿಸಲು ಮತ್ತು ದೈವೀಕ ಸ್ವರೂಪವನ್ನು ಸಮಂಜಗೊಳಿಸಲು ಅಸಮರ್ಥನಾದನು. ಅದು ಅವನನ್ನು ಅವನ ಸ್ವಾಭಾವಿಕ ಹೃದಯ ಬಯಸುವದಕ್ಕೆ ಏನೂ ಇಲ್ಲದಂತೆ ಮಾಡಿತು.

ಆದರೆ ದೇವರು ಸೈತಾನನಿಂದ ಸೋಲಲಿಲ್ಲ. ಆತನು ತನ್ನ ಮಗನನ್ನು ಲೋಕಕ್ಕೆ ಕಳುಹಿಸಿದನು, ಅವನು ಮನುಷ್ಯನ ರೂಪವನ್ನು ಮತ್ತು ಸ್ವರೂಪವನ್ನು ಧರಿಸುವದರಿಂದ ಮಾನವತ್ವ ಮತ್ತು ದೈವತ್ವ ಆತನಲ್ಲಿ ಒಂದಾಗುತ್ತದೆ ಅದು ಮನುಷ್ಯನನ್ನು ದೇವರ ನೈತಿಕ ಮೌಲ್ಯಗಳಿಗೆ ಏರಿಸುತ್ತದೆ.

ಲೋಕದ ಮೇಲೆ ದೇವರ ಪ್ರೀತಿ ಆತನು ತನ್ನ ಮಗನನ್ನು ಕಳುಹಿಸಿದ್ದರಿಂದ ಪ್ರಕಟವಾಗಲಿಲ್ಲ, ಆದರೆ ಆತನು ಲೋಕವನ್ನು ಪ್ರೀತಿಸಿದ್ದರಿಂದ ದೈವತ್ವ

ಮಾನವತ್ವದ ಹೊದಿಕೆಯಲ್ಲಿ ಮಾನವಕುಲವನ್ನು ಸ್ಪರ್ಶಿಸಬಹುದು, ಎಂದು ತನ್ನ ಮಗನನ್ನು ಕಳುಹಿಸಿದನು, ಅದೇ ಸಮಯದಲ್ಲಿ ದೈವತ್ವವು ದೈವತ್ವವನ್ನು ಗಟ್ಟಿಯಾಗಿ ಹಿಡಿದುಕೊಳ್ಳುವದು. ಪಾಪವು ಮನುಷ್ಯ ಮತ್ತು ದೇವರ ಮಧ್ಯದಲ್ಲಿ ಕಂದರವನ್ನು ನಿರ್ಮಿಸಿದ್ದಾಗ್ಯೂ, ದೈವೀಕ ದಯೆಯು ಕಂದರಕ್ಕೆ ಸೇತುವೆ ಯೋಜನೆಯನ್ನು ಒದಗಿಸಿತು. ಯಾವ ವಸ್ತುಗಳನ್ನು ಉಪಯೋಗಿಸಲಾಯಿತು? ಆತನನ್ನು ಹೊರತುಪಡಿಸಿ ತಂದೆಯ ಪ್ರಕಾಶವನ್ನು ಮಹಿಮೆಯು ಲೋಕಕ್ಕೆ ಬಂತು ಹೃದಯ ಕಠಿಣಮಾಡಿಕೊಂಡವರು ದೋಷದಿಂದ ಶಾಪಹೊಂದಿದವನಿಗೆ ,ಆತನ ಸ್ವಂತ ದೈವೀಕ ಗುಣಲಕ್ಷಣ, ಆತನ ಸ್ವಂತ ದೈವೀಕ ದೇಹ, ಸೇತುವೆಯನ್ನು ನಿರ್ಮಿಸಿತು. ಪರಲೋಕದ ಕಿಟಕಿಗಳು ತೆರೆಯಲ್ಪಟ್ಟವು ಮತ್ತು ಪರಲೋಕದ ದಿವ್ಯ ಆಶೀರ್ವಾದ ಕತ್ತಲೆಯಲ್ಲಿರುವ ಲೋಕಕ್ಕೆ ಸ್ವಸ್ಥತೆಯನ್ನು ನೀಡುವ ಕೃಪೆಯ ತ್ವರೆಯಾಗಿ ಹರಿದು ಬಂತು.

(7)ನಿತ್ಯತ್ವದ ವರ್ಷಗಳು ಉರುಳುತ್ತಾ ಇರುವ ಹಾಗೆ ಅದರೊಂದಿಗೆ ದೇವರ ಪ್ರೀತಿ, ನ್ಯಾಯ ಮತ್ತು ಕರುಣೆಯ ಪ್ರಕಟನೆ ಇನ್ನೂ ಆಳವಾಗಿ ಬಂತು. ನಮ್ಮ ಸ್ತುತಿಯ ರಾಗ ಯಾವುದು?

ಇದಲ್ಲದೆ ಆಕಾಶಾದಲ್ಲಿಯೂ ಭೂಮಿಯ ಮೇಲೆಯೂ ಭುಮಿಯ ಕೆಳಗೆಯೂ ಸಮುದ್ರದ ಮೇಲೆಯೂ ಇರುವ ಎಲ್ಲಾ ಸೃಷ್ಟಿಗಳು ಅಂದರೆ ಭೂಮ್ಯಾಕಾಶಾ ಸಮುದ್ರಗಳೊಳಗೆ ಇರುವದೆಲ್ಲವೂ – ಸಿಂಹಾಸನಾಸೀನನಿಗೂ ಯಜ್ಞನದ ಕುರಿಯಾದಾತನಿಗೂ ಸ್ತೋತ್ರ ಮಾನ ಪ್ರಭಾವ ಆಧಿಪತ್ಯಗಳು ಯುಗಯುಗಾಂತರಗಳಲ್ಲಿಯೂ ಇರಲಿ, (ಪ್ರಕಟನೆ 5:13).

ನಿತ್ಯತ್ವದ ವರ್ಷಗಳು ಉರುಳುತ್ತಿರುವ ಹಾಗೆ ಅವು ದೇವರ ಮತ್ತು ಕ್ರಿಸ್ತನ ಕುರಿತು ಇನ್ನೂ ಸಂಪತ್ತಭರಿತವಾದ ಮತ್ತು ಹೆಚ್ಚಾದ ಮಹಿಮೆಯನ್ನು ಪ್ರಕಟಿಸಿದವು. ಜ್ಞಾನವು ಮುಂದುವರೆಯುತ್ತಿರುವ ಹಾಗೆ, ಪ್ರೀತಿ, ಗೌರವ ಮತ್ತು ಸಂತೋಷವು ಅದರಂತೆ ಹೆಚ್ಚಾಯಿತು. ಮನುಷ್ಯರು ದೇವರ ಕುರಿತು ಹೆಚ್ಚು ಕಲಿಯುತ್ತಿರುವ ಹಾಗೆ ಅವರಲ್ಲಿ ಆತನ ಗುಣಲಕ್ಷಣದ ಮೆಚ್ಚಿಕೆ ಸಹ ಮಹತ್ತರವಾಯಿತು. ಯೇಸು ವಿಮೋಚನೆಯ ಸಂಪತ್ತನ್ನು ಮತ್ತು ಸೈತಾನನ ದೊಡ್ಡ ವಿವಾದದ ಆಶ್ಚರ್ಯಕರವಾದ ಸಾಧನೆಗಳನ್ನು ಅವರ ಎದುರಿನಲ್ಲಿ ತೆರೆದಿಡುತ್ತಿರುವ ಹಾಗೆ, ಬಂಧ ಮುಕ್ತರಾದವರ ಹೃದಯಗಳು ಇನ್ನೂ ತೀವ್ರವಾದ ಶ್ರದ್ಧೆಯಿಂದ ಪುಲಕಿತಗೊಂಡವು ಮತ್ತು ಹೆಚ್ಚು ಭಾವಾವೇಶದ ಆನಂದದಿಂದ

ಅವರು ಬಂಗಾರದ ವೀಣೆಗಳನ್ನು ಬಾರಿಸಿದರು; ಹತ್ತು ಸಾವಿರ ಬಾರಿ ಸಾವಿರಾರೂ ಧ್ವನಿಗಳು ಭವ್ಯವಾದ ಸ್ತುತಿ ಗೀತೆಯನ್ನು ಹಾಡಲು ಒಂದಾದವು.

ದೊಡ್ಡ ವಿವಾದ ಕೊನೆಗೊಂಡಿತು. ಪಾಪ ಮತ್ತು ಪಾಪಿಗಳು ಇನ್ನಿಲ್ಲ. ಸಂಪೂರ್ಣ ವಿಶ್ವವು ಶುದ್ಧವಾಯಿತು. ಒಂದು ಮಿಡಿತದ ಸಾಮರಸ್ಯ ಮತ್ತು ವಿಶಾಲವಾದ ಸೃಷ್ಟಿಯುದ್ದಕ್ಕೂ ಸಂತೋಷ ಹರಡಿಕೊಂಡಿತು. ಎಲ್ಲವನ್ನೂ ಸೃಷ್ಟಿಸಿದಾತನಿಂದ, ಜೀವ ಮತ್ತು ಬೆಳಕು ಮತ್ತು ಆನಂದ ಲೋಕದಲ್ಲಿ ಮಿತಿಯಿಲ್ಲದ ಅಂತರವಿರುವ ಕ್ಷೇತ್ರಗಳಲ್ಲಿ ಹರಿಯಿತು, ಒಂದು ಅತ್ಯಂತ ಚಿಕ್ಕ ಅಣುವಿನಿಂದ ಅತ್ಯಂತ ದೊಡ್ಡ ಜಗತ್ತಿನ ವರೆಗೆ ಎಲ್ಲಾ ಸಜೀವ ಮತ್ತು ನಿರ್ಜೀವ ಸಂಗತಿಗಳಲ್ಲಿ ಅದರ ಸೌಂದರ್ಯ ಮತ್ತು ಪರಿಪೂರ್ಣ ಸಂತೋಷ ದೇವರು ಪ್ರೀತಿಯಾಗಿದ್ದಾನೆ ಎಂದು ಪ್ರಕಟಿಸಿದವು.

(8) ತಂದೆಯು ನಮ್ಮ ಧರ್ಮಭ್ರಷ್ಟತೆಯನ್ನು ಶುದ್ಧೀಕರಿಸಿ ಮರೆಮಾಡಿದ ನಂತರ ನಮ್ಮ ಪಾಪಗಳು ಎಷ್ಟರ ಮಟ್ಟಿಗೆ ತೆಗೆದುಹಾಕಲ್ಪಟ್ಟಿವೆ?

ಪೂರ್ವಕ್ಕೂ ಪಶ್ಚಿಮಕ್ಕೂ ಎಷ್ಟು ದೂರವೋ ನಮ್ಮ ದ್ರೋಹಗಳನ್ನು

ನಮ್ಮಿಂದ ತೆಗೆದು ಅಷ್ಟು ದೂರ ಮಾಡಿದ್ದಾನೆ. (ಕೀರ್ತನೆ 103:12)

ಆದರೆ ಕ್ಷಮಾಪಣೆ ಅನೇಕರು ತಿಳಿದಿರುವದಕ್ಕಿಂತ ವಿಶಾಲವಾದ ಅರ್ಥವನ್ನು ಹೊಂದಿದೆ. ದೇವರು "ಧಾರಾಳವಾಗಿ ಕ್ಷಮಿಸುತ್ತೇನೆ" ಎಂದು ವಾಗ್ದಾನ ಮಾಡಿರುವಾಗ, ವಾಗ್ದಾನದ ಅರ್ಥ ನಾವು ಗ್ರಹಿಸಿರುವ ಎಲ್ಲದಕ್ಕಿಂತ ಅಧಿಕವಾಗಿದೆ: "ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ, ಭೂಮಿಯ ಮೇಲೆ ಆಕಾಶವು ಎಷ್ಟು ಉನ್ನತವೋ ನಿಮ್ಮ ಮಾರ್ಗಗಳಿಗಿಂತ ನನ್ನ ಮಾರ್ಗಗಳೂ ನಿಮ್ಮ ಆಲೋಚನೆಗಳಿಗಿಂತ ನನ್ನ ಆಲೋಚನೆಗಳೂ ಅಷ್ಟು ಉನ್ನತವಾಗಿವೆ."ಯೆಶಾಯ 55:7-9

ದೇವರ ಕ್ಷಮಾಪಣೆ ದಂಡನೆಯಿಂದ ಮುಕ್ತಗೊಳಿಸುವ ಕೇವಲ ನ್ಯಾಯದ ಕ್ರಿಯೆಯಲ್ಲ. ಅದು ಪಾಪಗಳ ಕ್ಷಮಾಪಣೆ ಮಾತ್ರವಲ್ಲ, ಆದರೆ ಪಾಪದಿಂದ ಮರಳಿ ಪಡೆದುಕೊಳ್ಳುವದು. ಇದು ಹೃದಯವನ್ನು ಪರಿವರ್ತಿಸುವ ವಿಮೋಚನೆಯ ಪ್ರೀತಿಯ ಹರಿಯುವಿಕೆಯಾಗಿದೆ. ದಾವೀದನು "ದೇವರೇ,  ನನ್ನಲ್ಲಿ ಶುದ್ಧಹೃದಯವನ್ನು ನಿರ್ಮಿಸು; ನನಗೆ ಸ್ಥಿರಚಿತ್ತವನ್ನು ಅನುಗ್ರಹಿಸಿ ನನ್ನನ್ನು

ನೂತನ ಪಡಿಸು." ಕೀರ್ತನೆ 51:10 ಎಂದು ಪ್ರಾರ್ಥಿಸುವಾಗ ಅವನಲ್ಲಿ ಕ್ಷಮಾಪಣೆಯ ನಿಜವಾದ ತಿಳುವಳಿಕೆ ಇತ್ತು.

(9) ಪಾಪಿಗಳಾದ ನಾವು ಕ್ರೂಜೆಯ ಮೇಲೆ ಪ್ರದರ್ಶಿಸಿದ ದೇವರ ಪ್ರೀತಿಯ ವಿಶಿಷ್ಟತೆಯನ್ನು ಅರಿತುಕೊಳ್ಳುವಾಗ ಪೌಲನಂತೆ ನಾವು ಏನು ಮಾಡಬೇಕು?

ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ ಆತನ ಮೂಲಕ ಲೋಕವು ಶಿಲುಬೆಗೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು. (ಗಲಾತ್ಯ 6:4).

ಕ್ರಿಸ್ತನ ಮರಣ ಮನುಷ್ಯನ ಮೇಲೆ ದೇವರ ಮಹಾ ಪ್ರೀತಿಯನ್ನು ಸಿದ್ಧಾಂತಪಡಿಸುತ್ತದೆ. ಇದು ನಮ್ಮ ರಕ್ಷಣೆಯ ಪ್ರತಿಜ್ಞೆಯಾಗಿದೆ. ಕ್ರೈಸ್ತರಿಂದ ಕ್ರೂಜೆಯನ್ನು ತೆಗೆಯುವುದೆಂದರೆ ಸೂರ್ಯನನ್ನು ಆಕಾಶದಿಂದ ಅಳಿಸಿಹಾಕಿದಂತೆ. ಕ್ರೂಜೆ ನಮ್ಮನ್ನು ದೇವರ ಸಮೀಪಕ್ಕೆ ತರುತ್ತದೆ, ಆತನೊಂದಿಗೆ ಮರುಸಂಧಾನ ಮಾಡುವದಕ್ಕಾಗಿ. ತಂದೆಯ ದಯೆಯ ಅನುಕಂಪದೊಂದಿಗೆ, ಯೆಹೋವನು ಜನಾಂಗವನ್ನು ನಿತ್ಯವಾದ

ಮರಣದಿಂದ ತಪ್ಪಿಸಲು ತನ್ನ ಮಗನು ಸಹಿಸಿದ ಕಷ್ಟಾನುಭವವನ್ನು ನೋಡುತ್ತಾನೆ ಮತ್ತು ನಮ್ಮನ್ನು ತನ್ನ ಪ್ರಿಯನಲ್ಲಿ ಸ್ವೀಕರಿಸುತ್ತಾನೆ.

ಕ್ರೂಜೆಯಿಲ್ಲದೆ, ಮನುಷ್ಯನು ತಂದೆಯೊಂದಿಗೆ ಐಕ್ಯತೆಯನ್ನು ಹೊಂದುತ್ತಿರಲಿಲ್ಲ. ಅದರ ಮೇಲೆ ನಮ್ಮ ಎಲ್ಲಾ ನಿರೀಕ್ಷೆ ಅವಲಂಬಿಸಿದೆ. ಅದರ ಮೂಲಕ ರಕ್ಷಕನ ಪ್ರೀತಿಯ ಬೆಳಕು ಪ್ರಕಾಶಿಸುತ್ತದೆ ಮತ್ತು ಕ್ರೂಜೆಯ ಬುಡದಲ್ಲಿ ಪಾಪಿ ತನ್ನನ್ನು ರಕ್ಷಿಸುವದಕ್ಕಾಗಿ ಮರಣ ಹೊಂದಿದವನನ್ನು ನೋಡುವಾಗ ಆತನ ಪರಿಪೂರ್ಣವಾದ ಆನಂದದಿಂದ, ತನ್ನ ಪಾಪವು ಕ್ಷಮಿಸಲ್ಪಟ್ಟಿವೆ ಎಂದು ಸಂತೋಷಿಸುತ್ತಾನೆ. ಕ್ರೂಜೆಯ ಬಳಿ ನಂಬಿಕೆಯಿಂದ ಮೊಣಕಾಲೂರಿ, ಅವನು ಮನುಷ್ಯನು ತಲುಪಬಹುದಾದ ಉನ್ನತವಾದ ಸ್ಥಳವನ್ನು ತಲುಪುತ್ತಾನೆ.

ಕ್ರೂಜೆಯ ಮೂಲಕ ನಾವು ಪರಲೋಕದ ತಂದೆಯು ಶಾಶ್ವತವಾದ ಪ್ರೀತಿಯಿಂದ ನಮ್ಮನ್ನು ಪ್ರೀತಿಸುತ್ತಾನೆಂದು ಕಲಿಯುತ್ತೇವೆ. ಪೌಲನು ಉದ್ಗರಿಸಿದಂತೆ ನಾವೂ ಉದ್ಗರಿಸೋಣವೆ, “ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳ ಪಡುವದು ಬೇಡವೇ ಬೇಡ.” ಗಲಾತ್ಯ 6:14. ಕ್ರೂಜೆಯಲ್ಲಿ ಮಹಿಮೆ

ಹೊಂದುವದು ನಮ್ಮ ಸೌಭಾಗ್ಯ ಸಹ ಆಗಿದೆ, ನಮ್ಮನ್ನು ಸಂಪೂರ್ಣವಾಗಿ ಆತನಿಗೆ ನೀಡುವದು ನಮ್ಮ ಸೌಭಾಗ್ಯವಾಗಿದೆ. ಆಗ ಕಲ್ವಾರಿಯಿಂದ ಹರಿಯುವ ಬೆಳಕು ನಮ್ಮ ಮುಖದಲ್ಲಿ ಪ್ರಕಾಶಿಸುತ್ತದೆ, ನಾವು ಕತ್ತಲೆಯಲ್ಲಿರುವವರಿಗೆ ಈ ಬೆಳಕನ್ನು ಪ್ರಕಟಿಸಲು ಮುನ್ನಡೆಯಬಹುದು.

ಕ್ರಿಸ್ತನು ದೇವರ ಪ್ರೀತಿಯ ನಿಯಮವನ್ನು ಧೃಢಪಡಿಸಲು ಬಂದನು ಅದರಿಂದ ದೂರಹೋಗಲು ಅಲ್ಲ ಎಂಬುದನ್ನು ಈಗ ತಿಳಿದುಕೊಂಡಿದ್ದೇನೆ. ಕ್ರಿಸ್ತನು ನಮ್ಮನ್ನು ವಿಮೋಚಿಸಲು ಮರಣಹೊಂದಿದನು ಎಂಬ ಸತ್ಯ ಶಾಶ್ವತವಾದ ಇರುವಿಕೆಯಲ್ಲಿ ತನ್ನ ಪ್ರಾಮುಖ್ಯತೆಯನ್ನು ಧೃಢಪಡಿಸುತ್ತದೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ದೇವರ ಪ್ರೀತಿ ನ್ಯಾಯ ಮತ್ತು ಕರುಣೆ ಇವುಗಳ ಮಧ್ಯದಲ್ಲಿ ಪರಿಪೂರ್ಣವಾದ ಸಮತೋಲವನ್ನು ಹೊಂದಿದೆ ಮತ್ತು ಇವು ಆತನ ಸಿಂಹಾಸನದ ಮತ್ತು ಆಡಳಿತದ ಅಸ್ತಿವಾರಗಳಾಗಿವೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ಯಾರೊಬ್ಬರೂ ನಾಶವಾಗುವದು ದೇವರ ಚಿತ್ತವಲ್ಲ ಎಂದು ತಿಳಿದು ನಾನು

ಬಹಳ ವಂದನೆಗಳನ್ನು ಸಲ್ಲಿಸುತ್ತೇನೆ ಮತ್ತು ಯೇಸುವಿನ ಕ್ರೂಜೆಯನ್ನು ದೃಷ್ಟಿಸುತ್ತೇನೆ ಮತ್ತು ನಮ್ಮ ಪಾಪಗಳನ್ನು ಮರೆಮಾಡಲು ಆತನು ಅಮೂಲ್ಯ ರಕ್ತವನ್ನು ಕೇಳಿಕೊಳ್ಳುತ್ತೇನೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ಕ್ರಿಸ್ತನನ್ನು ಆಯ್ಕೆ ಮಾಡಿಕೊಂಡದ್ದರಿಂದ ಮತ್ತು ಆತನ ಆತ್ಮವನ್ನು ನನ್ನಲ್ಲಿ ತುಂಬಲು ಅನುಮತಿಸಿದ್ದರಿಂದ ನಾನು ಆತನ ದೈವೀಕ ಸ್ವರೂಪವು ನನ್ನಲ್ಲಿ ವಾಸಿಸುವದು ನನ್ನ ಸೌಭಾಗ್ಯವಾಗಿದೆ. ಆ ಸೌಭಾಗ್ಯವನ್ನು ನಾನು ಈಗಲೇ ದೇವರಿಗೆ ಕೇಳಿಕೊಳ್ಳುತ್ತೇನೆ.

ದುಂಡು ಸುತ್ತಿರಿ:   ಹೌದು   ನಿರ್ಧರಿಸಿಲ್ಲ



ಪಾಠ 7

ದೈವೀಕತೆಯ ರಹಸ್ಯ

(1) ಜೀವಿಸುವ ವಾಕ್ಯವಾದ ಕ್ರಿಸ್ತನು ಏನು ಮಾಡುತ್ತಾನೆ. ಇಂಥ ಅದ್ಭುತವಾದ ಸಂಗತಿ ಎಂದಾದರೂ ಸಂಭವಿಸಿದೆಯೋ?

ಆ ವಾಕ್ಯವೆಂಬವನು ನರಾವತಾರ ಎತ್ತಿ ನಮ್ಮ ಮದ್ಯದಲ್ಲಿ ವಾಸಮಾಡಿದನು. ನಾವು ಆತನ ಮಹಿಮೆಯನ್ನು ನೋಡಿದೆವು. ಆ ಮಹಿಮೆಯು ತಂದೆಯ ಬಳಿಯಿಂದ ಬಂದ ಒಬ್ಬನೇ ಮಗನಿಗೆ ಇರತಕ್ಕ ಮಹಿಮೆ. ಆತನು ಕೃಪೆಯಿಂದಲೂ ಸತ್ಯದಿಂದಲೂ ತುಂಬಿದವನಾಗಿದ್ದನು. (ಯೋಹಾನ 1:14).

ನಾವು ಒಂದು ಆಳವಾದ ಸಮಸ್ಯೆಯನ್ನು ಅಧ್ಯಯನ ಮಾಡಲು ಬಯಸುವಾಗ, ನಮ್ಮ ಮನಸ್ಸನ್ನು ಅತ್ಯಂತ

ಅದ್ಭುತವಾದ ಭೂಲೋಕದಲ್ಲಿ ಅಥವಾ ಪರಲೋಕದಲ್ಲಿ ಎಂದಿಗೂ ಸಂಭವಿಸದಂತ ಸಂಗತಿಗಳ ಮೇಲೆ ಕೇಂದ್ರೀಕರಿಸೋಣ – ದೇವ ಕುಮಾರನ ನರಾವತಾರ ದೇವರು ತನ್ನ ಮಗನನ್ನು ಪಾಪಿಗಳಾದ ಮಾನವ ಜೀವಿಗಳಿಗಾಗಿ ಸಾಯುವದಕ್ಕಾಗಿ ನೀಡಿದನು ಕಳಂಕ ಮತ್ತು ಅಪಮಾನದ ಮರಣವನ್ನು ಹೊಂದುವದಕ್ಕಾಗಿ. ಪರಲೋಕದ ಸ್ಥಾನದಲ್ಲಿ ಸೇನಾಧಿಪತಿಯಾಗಿದ್ದಾತನು ತನ್ನ ರಾಜ ವೈಭವವನ್ನು ರಾಜನ ಕಿರೀಟವನ್ನು, ರಾಜ ವಸ್ತ್ರಗಳನ್ನು ತ್ಯಜಿಸಿದನು ದೈವತ್ವಕ್ಕೆ ಬದಲಾಗಿ ಮಾನವತ್ವವನ್ನು  ಧರಿಸಿ ಈ ಲೋಕಕ್ಕೆ ಮಾನವ ಕುಲದ ನಾಯಕರ ಎದುರಿನಲ್ಲಿ ಮಾನವ ರೂಪದಲ್ಲಿ ನಿಲ್ಲುವದಕ್ಕೆ ಬಂದನು. ಆತನು ತನ್ನನ್ನು ತಾನು ತಗ್ಗಿಸಿಕೊಂಡು ಈ ಜನಾಂಗದೊಂದಿಗೆ ಕಷ್ಟಾನುಭವವನ್ನು ಅನುಭವಿಸಿದನು, ಅವರ ಎಲ್ಲಾ ವೇದನೆಗಳಲ್ಲಿ ವೇದನೆಯನ್ನು ಅನುಭವಿಸಿದನು.

ಈಡೀ ಲೋಕವು ಆತನದು, ಆದರೆ ಆತನು ಸಂಪೂರ್ಣವಾಗಿ ತನ್ನನ್ನು ಬರಿದು ಮಾಡಿಕೊಂಡನೆಂದರೆ ಆತನ ಸೇವಾ ಅವಧಿಯಲ್ಲಿ ಆತನು “ನರಿಗಳಿಗೆ ಗುದ್ದುಗಳಿವೆ; ಆಕಾಶದಲ್ಲಿ ಹಾರಾಡುವ ಹಕ್ಕಿಗಳಿಗೆ ಗೂಡುಗಳಿವೆ; ಆದರೆ ಮನುಷ್ಯಕುಮಾರನಿಗೆ ತಲೆಯಿಡುವಷ್ಟು ಸ್ಥಳವೂ ಇಲ್ಲ”[ಮತ್ತಾಯ 8:20 ರಿಂದ ಉಲ್ಲೇಖಿಸಲಾಗಿದೆ]

(2) ಕ್ರಿಸ್ತನಿಗೆ ಸಂಬಂಧಿಸಿದಂತೆ ಮತ್ತು ನಮ್ಮೊಂದಿಗೆ ಆತನ ಪ್ರೀತಿಯ ಆಳವನ್ನು ಊಹಿಸಲಶಕ್ಯವಾದ ಸಂಬಂಧಕ್ಕೆ "ಇಮ್ಮಾನುವೇಲ್" ಹೆಸರಿನ ಅರ್ಥವೇನು?

ಇಗೋ! ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು: ಆತನಿಗೆ ಇಮ್ಮನುವೇಲ್ ಎಂದು ಹೆಸರಿಡುವರು ಎಂಬುದು "ದೇವರು ನಮ್ಮ ಕೂಡ ಇದ್ದಾನೆಂದು" ಈ ಹೆಸರಿನ ಅರ್ಥ." (ಮತ್ತಾಯ 1:23)

ಮಾನವತ್ವದಲ್ಲಿ ನರಾವತಾರವೆತ್ತಿದ ಕ್ರಿಸ್ತನ ಚಿಂತನೆಯನ್ನು ಮಾಡುವಾಗ, ನಾವು ಊಹಿಸಲಶಕ್ಯವಾದ ರಹಸ್ಯದ ಮುಂದು ಬೆರಗಾಗಿ ನಿಲ್ಲುತ್ತೇವೆ, ಮನುಷ್ಯನ ಮನಸ್ಸು ಗ್ರಹಿಸಲಾರದು. ಹೆಚ್ಚು ನಾವು ಇದರ ಮೇಲೆ ಹೆಚ್ಚು ಚಿಂತನೆ ಮಾಡುವಾಗ, ಹೆಚ್ಚಾದ ಆಶ್ಚರ್ಯಕ್ಕೆ ನಾವು ಒಳಗಾಗುತ್ತೇವೆ. ಕ್ರಿಸ್ತನ ದೈವತ್ವ ಮತ್ತು ಬೆತ್ಲೇಹೇಮಿನ ಗೋದಲಿಯಲ್ಲಿರುವ ಅಸಹಾಯಕ ಬಾಲಕನ ಮಧ್ಯದಲ್ಲಿರುವ ವ್ಯತ್ಯಾಸ ಎಷ್ಟು ವಿಶಾಲವಾಗಿದೆ! ಅದ್ಭುತನಾದ ದೇವರು  ಮತ್ತು ಅಸಾಹಾಯಕ ಮಗು ಮಧ್ಯದಲ್ಲಿರುವ ಅಂತರವನ್ನು ನಾವು ಹೇಗೆ ಅಳೆಯಲು ಸಾಧ್ಯ?ಆದಾಗ್ಯೂ ಲೋಕದ ಸೃಷ್ಟಿ ಕರ್ತನು ಆತನಲ್ಲಿ ದೈವತ್ವದ ಪರಿಪೂರ್ಣತೆಯು ದೈಹೀಕವಾಗಿ., ಅಸಹಾಯಕ ಮಗು

ಗೋದಲಿಯಲ್ಲಿ ಪ್ರಕಟವಾಯಿತು. ಯಾವುದೇ ದೇವ ದೂತರಿಗಿಂತ ಬಹಳ ಉನ್ನತವಾದವನು, ತಂದೆಯೊಂದಿಗೆ ಗೌರವ ಮತ್ತು ಮಹಿಮೆಯಲ್ಲಿ ಸರಿಸಮಾನನಾದವನು! ಆದಾಗ್ಯೂ ಮಾನವತ್ವದ ರೂಪವನ್ನು ಧರಿಸಿದನು! ದೈವತ್ವ ಮತ್ತು ಮಾನವತ್ವ ರಹಸ್ಯಮಯವಾಗಿ ಒಂದಾದವು. ಮನುಷ್ಯನು ಮತ್ತು ದೇವರು ಒಂದಾದರು. ಈ ಐಕ್ಯತೆಯಲ್ಲಿ ನಾವು ನಮ್ಮ ಬಿದ್ದು ಹೋದ ಜನಾಂಗದ ನಿರೀಕ್ಷೆಯನ್ನು ಕಾಣುತ್ತೇವೆ. ಮಾನವತ್ವದಲ್ಲಿ ಕ್ರಿಸ್ತನನ್ನು ನೋಡುವಾಗ, ನಾವು ದೇವರನ್ನು ನೋಡುತ್ತೇವೆ ಮತ್ತು ಆತನಲ್ಲಿ ನಾವು ಆತನ ಮಹಿಮೆಯ ಪ್ರಕಾಶವನ್ನು ನೋಡುತ್ತೇವೆ, ಆತನ ವ್ಯಕ್ತಿತ್ವದ ಸ್ಪಷ್ಟವಾದ ಸ್ವರೂಪವನ್ನು ನೋಡುತ್ತೇವೆ.

(3) ದೇವರ ಮಕ್ಕಳಾಗಿ ನಾವು ಅಳವಡಿಸಿಕೊಳ್ಳಬಹುದಾದ ತಂದೆಯಿಂದ ಕಳುಹಿಸಲ್ಪಟ್ಟ ಕ್ರಿಸ್ತನ ಪ್ರೀತಿಯ ನಿಯೋಗ ಯಾವುದು?

ಆದರೆ ಕಾಲವು ಪರಿಪೂರ್ಣವಾದಾಗ ದೇವರು ತನ್ನ ಮಗನನ್ನು ಕಳುಹಿಸಿಕೊಟ್ಟನು. ಧರ್ಮಶಾಸ್ತ್ರಾಧೀನರಾದವರನ್ನು ವಿಮೋಚಿಸಬೇಕೆಂತಲೂ ಪುತ್ರರ ಪದವಿಯನ್ನು ನಮಗೆ

ದೊರಕಿಸಬೇಕೆಂತಲೂ ಆತನು ಸ್ತ್ರೀಯಲ್ಲಿ ಹುಟ್ಟಿದವನಾಗಿಯೂ ಧರ್ಮಶಾಸ್ತ್ರಾಧೀನನಾಗಿಯೂ ಬಂದನು. (ಗಲಾತ್ಯ 4:4-5)

ಪಾಪಿಯು ಕಲ್ವಾರಿಯ ಕ್ರೂಜೆಯ ಮೇಲೆ ಸಾಯುತ್ತಿರುವ ರಕ್ಷಕನನ್ನು ದೃಷ್ಟಿಸುವಂತೆ, ಕಷ್ಟಾನುಭವವನ್ನು ಅನುಭವಿಸುತ್ತಿರುವವನು ದೈವೀಕನೆಂದು ಅರಿತು ಕೊಳ್ಳುವಾಗ ಅವನು ಯಾಕೆ ಇಷ್ಟು ದೊಡ್ಡ ಬಲಿದಾನ ನೀಡಿದನು  ಎಂದು ಕೇಳುತ್ತಾನೆ ಮತ್ತು ಕ್ರೂಜೆಯು ಉಲ್ಲಂಘಿಸಲಾದ ದೇವರ ಪರಿಶುದ್ಧ ಧರ್ಮಶಾಸ್ತ್ರದೆಡೆಗೆ ಸೂಚಿಸುತ್ತದೆ. ಕ್ರಿಸ್ತನ ಮರಣ ಧರ್ಮಶಾಸ್ತ್ರದ ಬದಲಾಗದ ಮತ್ತು ನೀತಿವಂತಿಕೆಗೆ ಉತ್ತರಿಸಲಾರದ ವಾದವಾಗಿದೆ.

ಕ್ರಿಸ್ತನ ಕುರಿತು ಪ್ರವಾದಿಸುವಾಗ, ಯೆಶಾಯನು ಹೇಳುತ್ತಾನೆ "ಯೆಹೋವನು ಧರ್ಮಸ್ವರೂಪನಾಗಿರುವದರಿಂದ ಧರ್ಮೋಪದೇಶವನ್ನು ಘನಪಡಿಸಿ ಮಹತ್ತಿಗೆ ತರಬೇಕೆಂದು ಇಷ್ಟಪಟ್ಟನು." (ಯೆಶಾಯ 42:21). ಧರ್ಮಶಾಸ್ತ್ರಕ್ಕೆ ತಪ್ಪು ಮಾಡುವವನನ್ನು ಶಿಕ್ಷಿಸುವ ಅಧಿಕಾರವಿರಲಿಲ್ಲ. ಅದರ ಕೆಲಸ ಅವನ ತಪ್ಪುಗಳನ್ನು ಎತ್ತಿತೋರಿಸುವದು, ಇದರಿಂದಾಗಿ ಅವನು ತನ್ನ ರಕ್ಷಿಸಲು ಶಕ್ತನಾದವನ, ತನಗೆ ಬದಲಿ

ವ್ಯವಸ್ಥೆಯಾಗುವವನ,ತನಗೆ ಜಾಮೀನಾಗುವವನ, ನೀತಿವಂತಿಕೆಯ ಅಗತ್ಯತೆಯನ್ನು ತಿಳಿದುಕೊಳ್ಳಲೆಂದು, ಯೇಸು ಪಾಪಿಯ ಅಗತ್ಯತೆಯನ್ನು ಪೂರೈಸುತ್ತಾನೆ. ಯಾಕಂದರೆ ಆತನು ಉಲ್ಲಂಘಿಸಿದವನ ಪಾಪಗಳನ್ನು ತನ್ನ ಮೇಲೆ ತೆಗೆದುಕೊಂಡನು. “ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು, ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು.” (ಯೆಶಾಯ 53:5). ಕರ್ತನು ಪಾಪಿಯನ್ನು ತನ್ನಿಂದ ಬೇರ್ಪಡಿಸಬಹುದಿತ್ತು ಮತ್ತು ಅವನನ್ನು ಸಂಪೂರ್ಣವಾಗಿ ನಾಶಮಾಡಬಹುದಿತ್ತು; ಆದರೆ ಬಹಳ ಬೆಲೆಯುಳ್ಳ ಯೋಜನೆಯನ್ನು ಅವನು ಆಯ್ಕೆ ಮಾಡಿದನು . ತನ್ನ ಮಹಾ ಪ್ರೀತಿಯಲ್ಲಿ ನಿರೀಕ್ಷೆಯಿಲ್ಲದವನಿಗೆ ನಿರೀಕ್ಷೆಯನ್ನು ಆತನು ಒದಗಿಸಿದನು, ಲೋಕದ ಪಾಪವನ್ನು ಹೊತ್ತುಕೊಳ್ಳಲು ತನ್ನ ಒಬ್ಬನೇ ಮಗನನ್ನು ಕೊಡುವದರ ಮೂಲಕ. ಅಂದಿನಿಂದ ಆತನು ಈಡೀ ಪರಲೋಕವನ್ನು ಆ ಒಂದು ಬಹುಮಾನದಲ್ಲಿ ಸುರಿದನು. ಮನುಷ್ಯನಿಗೆ ರಕ್ಷಣೆಯ ಪಾತ್ರೆಯನ್ನು ತೆಗೆದುಕೊಳ್ಳಲು ಮತ್ತು ದೇವರಿಗೆ ಬಾಧ್ಯಸ್ಥನಾಗಲು, ಕ್ರಿಸ್ತನೊಂದಿಗೆ ಸಹ

ಬಾಧ್ಯಸ್ಥನಾಗಲು ಅಗತ್ಯವಿರುವ ಯಾವುದೇ ಸಹಾಯವನ್ನು ಅವನು ತಡೆಹಿಡಿಯಲಿಲ್ಲ.

(4) ಸ್ವ-ಬಲಿಯನ್ನು ನೀಡುವ ಪ್ರೀತಿಯಲ್ಲಿ ನಮ್ಮನ್ನು ಬಿಡುಗಡೆಗೊಳಿಸಲು ನಮ್ಮ ಸಂಪೂರ್ಣ ಪುನಃಸ್ಥಾಪಾನೆಯನ್ನು ಸುರಕ್ಷಿತತಗೊಳಿಸಲು ಕ್ರಿಸ್ತನು ಭೂಮಿಗೆ ಹೇಗೆ ಬಂದನು?

ದೇವರು ನಮ್ಮನ್ನು ಅಂಧಕಾರದ ದೊರೆತನದಿಂದ ಬಿಡಿಸಿ ತನ್ನ ಪ್ರಿಯ ಕುಮಾರನ ರಾಜ್ಯದೊಳಗೆ ಸೇರಿಸಿದನು. ಆ ಕುಮಾರನಲ್ಲಿ ನಮ್ಮ ಪಾಪಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. (ಕೊಲಸ್ಸೆ 1:13-14).

ನಮ್ಮ ಅಪರಾಧಗಳ ನಿಮ್ಮಿತ್ತ ಕ್ರಿಸ್ತನು ನಮ್ಮಿಂದ ದೂರಕ್ಕೆ ಹೋಗಿರಬಹುದು. ನಮ್ಮಿಂದ ಇನ್ನೂ ದೂರಕ್ಕೆ ಹೋಗುವದಕ್ಕೆ ಬದಲಾಗಿ, ಆತನು ಬಂದು ನಮ್ಮ ಮಧ್ಯದಲ್ಲಿ ವಾಸಿಸಿದನು, ದೈವತ್ವದ ಎಲ್ಲಾ ಸಂಪೂರ್ಣತೆಯಿಂದ ನಮ್ಮನ್ನು ತುಂಬಿಸಿದನು, ಆತನ ಕೃಪೆಯ ಮೂಲಕ ನಾವು ಪರಿಪೂರ್ಣತೆಯನ್ನು ಹೊಂದಬಹುದೆಂದು  ನಮ್ಮೊಂದಿಗೆ ಒಂದಾದನು. ಅಪಮಾನದ ಮತ್ತು ಹಿಂಸೆಯ ಮರಣದ ಮೂಲಕ ಆತನು ಮನುಷ್ಯನ ಬಂಧ ಮುಕ್ತತೆಯ ಬೆಲೆಯನ್ನು ನೀಡಿದನು. ಇದು ಎಂಥ

ಸ್ವ-ಬಲಿದಾನದ ಪ್ರೀತಿ! ಉನ್ನತವಾದ ಸ್ಥಾನದಿಂದ ಆತನು ಬಂದನು, ಆತನ ದೈವತ್ವ ಮಾನವತ್ವವನ್ನು ಧರಿಸಿತು, ಹಂತ ಹಂತವಾಗಿ ಅವಮಾನದ ಅತ್ಯಂತ ಆಳಕ್ಕೆ ಇಳಿದನು. ಯಾವ ಅಳತೆಯೂ ಆತನ ಪ್ರೀತಿಯನು ಅಳೆಯಲು ಸಾದ್ಯವಿಲ್ಲ. ಕ್ರಿಸ್ತನು ನಮಗೆ ದೇವರು ನಮ್ಮನ್ನು ಎಷ್ಟಾಗಿ ಪ್ರೀತಿಸುತ್ತಾನೆ ಮತ್ತು ನಮ್ಮ ವಿಮೋಚಕನು ನಮ್ಮ ಸಂಪೂರ್ಣ ಪುನಃಸ್ಥಾಪನೆಯನ್ನು ಸುರಕ್ಷಿತಗೊಳಿಸಲು ಹಿಂಸೆಯನ್ನು ಅನುಭವಿಸಿದನು ಎಂದು  ತೋರಿಸಿದನು. ಆತನು ತನ್ನ ಮಕ್ಕಳು ತನ್ನ ಗುಣಾತಿಶಯಗಳನ್ನು ಆತನ ಪ್ರಭಾವವನ್ನು ಪ್ರಕಟಿಸಬೇಕು ಎಂದು ಬಯಸುತ್ತಾನೆ ಇದರಿಂದಾಗಿ ಇತರ ಮನಸ್ಸುಗಳು ಆತನ ಮನಸ್ಸಿನೊಂದಿಗೆ ಸಾಮರಸ್ಯದಲ್ಲಿ ಬರಲು ಸೆಳೆಯಬಹುದು.

(5) ಅದು ಪ್ರೀತಿಯ ಕ್ರಿಯೆಯನ್ನು ಕ್ರಿಸ್ತನ ನರಾವತಾರದಲ್ಲಿ ತರುತ್ತದೆ ಅದನ್ನು ಮಾನವನು ಅಳೆಯಲು ಸಾಧ್ಯವಿಲ್ಲದ ಯಾವ ಅದ್ಭುತವಾದ ಸತ್ಯವನ್ನು ಪೌಲನು ಸೂಚಿಸುತ್ತಾನೆ?

ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂಆಧಾರಭೂತನು, (ಕೊಲಸ್ಸೆ 1:17).

ಅಪೊಸ್ತಲನು ಕ್ರಿಸ್ತನನ್ನು ತನ್ನ ಸಹೋದರರ ಮುಂದೆ ಆತನ ಮೂಲಕ ದೇವರು ಎಲ್ಲವನ್ನೂ ಸೃಷ್ಟಿಸಿದ್ದಾನೆ ಮತ್ತು ಅವನ ಮೂಲಕ ದೇವರು ವಿಮೋಚನೆಯನ್ನು ತಂದಿದ್ದಾನೆ ಎಂದು ಮಹಿಮೆ ಪಡಿಸಿದನು. ಲೋಕವನ್ನು ಅಂತರಿಕ್ಷದಲ್ಲಿ ಸಂರಕ್ಷಿಸುವ ಕೈ, ಅದನ್ನು ಕ್ರಮಬದ್ಧವಾದ ವ್ಯವಸ್ಥೆಯಲ್ಲಿ ಮತ್ತು ದೇವರ ಈ ವಿಶ್ವದುದ್ದಕ್ಕೂ ಎಲ್ಲಾ ಸಂಗತಿಗಳನ್ನು ಆಯಾಸವಿಲ್ಲದ ಚಟುವಟಿಕೆಗಳನ್ನು ನಡೆಸಿತ್ತಾನೆ, ಇದೇ ಕೈ ಅವರಿಗಾಗಿ ಕ್ರೂಜೆಯ ಮೇಲೆ ಮೊಳೆ ಜಡಿಸಿಕೊಂಡಿತು ಎಂದು ಪ್ರಕಟಿಸುತ್ತಾನೆ. "ಆತನ ಮೂಲಕ ಸಮಸ್ತವು ಸೃಷ್ಟಿಸಲ್ಪಟ್ಟಿತು" ಪೌಲನು ಬರೆಯುತ್ತಾನೆ, ಭೂಪರಲೋಕಗಳಲ್ಲಿರು ದೃಶ್ಯಾದೃಶ್ಯವಾದವುಗಳೆಲ್ಲವು ಸಿಂಹಾಸನಗಳಾಗಲಿ ಪ್ರಭುತ್ವಗಳಾಗಲಿ ದೊರೆತಗಳಾಗಲಿ  ಅಧಿಕಾರಗಳಾಗಲಿ ಆತನಲ್ಲಿ ಸೃಷ್ಟಿಸಲ್ಪಟ್ಟವು, ಸರ್ವವು ಆತನ ಮುಖಾಂತರವಾಗಿಯೂ ಆತನಿಗೋಸ್ಕರವಾಗಿಯೂ ಸೃಷ್ಟಿಸಲ್ಪಟ್ಟಿತು. ಆತನು ಎಲ್ಲಕ್ಕೂ ಮೊದಲು ಇದ್ದವನು; ಆತನು ಸಮಸ್ತಕ್ಕೂ ಆಧಾರಭೂತನು."  ನೀವು ಕೆಲವು ಸಮಯ ದೂರಹೋದವರು ಮತ್ತು ನಿಮ್ಮ ಮನಸ್ಸಿನಲ್ಲಿರುವ ದುಷ್ಟ ಕಾರ್ಯಗಳಿಂದ ಆತನಿಗೆ ವೈರಿಗಳು ಆಗಿದ್ದೀರಿ, ಆದಾಗ್ಯೂ ಆತನು ತನ್ನ ದೇಹದಲ್ಲಿ ಮರಣಹೊಂದುವದರ ಮೂಲಕ ನಮ್ಮನ್ನು ಮರುಸಂಧಾನ

ಮಾಡಿದ್ದಾನೆ, ಆತನ ದೃಷ್ಟಿಯಲ್ಲಿ ನಿಮ್ಮನ್ನು ಪರಿಶುದ್ಧರನ್ನಾಗಿ ಮತ್ತು ದೋಷರಹಿತರನ್ನಾಗಿ, ಅಕ್ಷೇಪಣೆಗೆ ಒಳಗಾಗದವರನ್ನಾಗಿ ಮಾಡಿದ್ದಾನೆ.

(6) ಯಾವುದು ವಿವಾದವಿಲ್ಲದ್ದು, ಪ್ರೀತಿಯ ಹೆಚ್ಚು ವಿಶ್ವಸನೀಯವಾದ ಕ್ರಿಸ್ತನ ನರಾವತಾರದಲ್ಲಿ ಪ್ರಕಟಿಸಲಾದ ಕಾರ್ಯ ಎಂದು ವರ್ಣಿಸಲು ಅಪೋಸ್ತಲನಾದ ಪೌಲನು ಯಾವ ವಾಕ್ಯಾಂಗವನ್ನು ಉಪಯೋಗಿಸುತ್ತಾನೆ?

ದೇವಭಕ್ತಿಗೆ ಆಧಾರವಾಗಿರುವ ಸತ್ಯಾರ್ಥವು ಗಂಭೀರವಾದ್ದೆಂಬದಕ್ಕೆ ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ; ಅದೇನಂದರೆ – ಆತನು ಶರೀರಧಾರಿಯಾಗಿ ಪ್ರತ್ಯಕ್ಷನಾದನು ಆತ್ಮ ಸಂಬಂಧವಾಗಿ ಆತನೇ ಎಂದು ಸ್ಥಾಪಿಸಲ್ಪಟ್ಟನು; ದೇವದೂತರಿಗೆ ಕಾಣಿಸಿಕೊಂಡನು; ಅನ್ಯಜನರಲ್ಲಿ ಪ್ರಸಿದ್ಧಿಮಾಡಲ್ಪಟ್ಟನು' ಪ್ರಭಾವಸ್ಥಾನದಲ್ಲಿ ಸೇರಿಸಲ್ಪಟ್ಟನು. (1ತಿಮೋಥಿ 3:16)

ಕ್ರಿಸ್ತನ ನರಾವತಾರವು ರಹಸ್ಯಗಳಲ್ಲಿ ರಹಸ್ಯವಾಗಿದೆ. ಕ್ರಿಸ್ತನು ತಂದೆಯೊಂದಿಗೆ ಒಂದಾಗಿದ್ದನು, ಆದಾಗ್ಯೂ ... ಅವನು ದೇವರಿಗೆ ಸರಿಸಮಾನನಾಗಿದ್ದವನು ತನ್ನ ಸ್ವ-ಇಚ್ಛೆಯಿಂದ ತನ್ನ ಮಹಿಮಾ ಪದವಿಯನ್ನು ಬಿಟ್ಟು ಬರಲು ಸಿದ್ಧನಾದನು. ಬಿದ್ದು ಹೋದ

ಜನಾಂಗದ ಮೇಲೆ ತನ್ನ ಪ್ರೀತಿಯ ಉದ್ದೇಶವನ್ನು ನೆರವೇರಿಸಲು ಆತನು ನಮ್ಮ ಎಲುಬುಗಳ ಎಲುಬು ನಮ್ಮ ಮಾಂಸದ ಮಾಂಸವೂ ಆದನು.

ಕ್ರಿಸ್ತನ ದೈವತ್ವ  ಮತ್ತು ಬೇತ್ಲೆಹೇಮಿನ ಗೋದಲಿಯಲ್ಲಿ ಅಸಹಾಯಕ ಮಗುವಿನ ಮಧ್ಯದಲ್ಲಿ ಎಂಥ ದೊಡ್ಡ ವ್ಯತ್ಯಾಸ! ಅದ್ಭುತನಾದ ದೇವರು ಮತ್ತು ಅಸಹಾಯಕನಾದ ಮಗುವಿನ ಮಧ್ಯದಲ್ಲಿರುವ ಅಂತರವನ್ನು ನಾವು ಹೇಗೆ ಅಳೆಯಲು ಸಾಧ್ಯ. ಆದಾಗ್ಯೂ, ಲೋಕದ ಸೃಷ್ಟಿ ಕರ್ತನಾದ ಆತನಲ್ಲಿ ದೈವೀಕತ್ವದ ಪರಿಪೂರ್ಣತೆ ದೈಹೀಕವಾಗಿ ಗೋದಲಿಯಲ್ಲಿ ಅಸಹಾಯಕ ಮಗುವಿನಲ್ಲಿ ಪ್ರಕಟವಾಯಿತು. ಆತನು ದೇವದೂತರಿಗಿಂತ ಉನ್ನತವಾದ, ಗೌರವ ಮತ್ತು ಮಹಿಮೆಯಲ್ಲಿ ತಂದೆಗೆ ಸರಿಸಮಾನನಾಗಿದ್ದಾಗ್ಯೂ ಮಾನವತ್ವವನ್ನು ಧರಿಸಿದನು! ದೈವತ್ವ ಮತ್ತು ಮಾನವತ್ವ ಎರಡೂ ರಹಸ್ಯವಾಗಿ ಒಂದಾದವು, ಮತ್ತು ಮನುಷ್ಯನು ಮತ್ತು ದೇವರು ಒಂದಾದರು.

ಇದು ಹೆಚ್ಚು ಕಡಿಮೆ  ದೇವಕುಮಾರನಿಗೆ ಮನುಷ್ಯನ ಸ್ವರೂಪವನ್ನು ಹೊಂದಿಕೊಳ್ಳುವದು ಅಪಾರವಾದ ಅವಮಾನ, ಆದಾಮನು ತನ್ನ ಮುಗ್ದತೆಯಲ್ಲಿ ಏದೇನ ತೋಟದಲ್ಲಿ ನಿಂತಿದ್ದಾಗಲೂ ಸಹ. ಆದರೆ ನಾಲ್ಕು

ಸಾವಿರ ವರ್ಷಗಳ ಪಾಪದಿಂದಾಗಿ ಜನಾಂಗವು ಬಲಹೀನವಾಗಿರುವಾಗ ಯೇಸು ಇದನ್ನು ಸ್ವೀಕರಿಸಿದನು. ಆದಾಮನ ಪ್ರತಿಯೊಬ್ಬ ಮಗುವಿನಂತೆ ಆತನು ವಂಶಪಾರಂಪರ್ಯದ ಮಹಾ ನಿಯಮವನ್ನು ಒಪ್ಪಿಕೊಂಡನು. ಇದರ ಫಲಿತಾಂಶಗಳನ್ನು ಆತನ ಇಹಲೋಕದ ವಂಶಾವಳಿಯ ಇತಿಹಾಸದಲ್ಲಿ ತೋರಿಸಲಾಗಿದೆ, ಆತನು ಇಂಥ ವಂಶಪರಂಪರೆಯೊಂದಿಗೆ ಆತನು ಬಂದನು ನಮಗೆ ಪಾಪರಹಿತ ಜೀವಿತದ ಉದಾಹರಣೆಯನ್ನು ನೀಡಲು ನಮ್ಮ ದುಃಖ ಮತ್ತು ಶೋಧನೆಯನ್ನು ಹಂಚಿಕೊಂಡನು.

ಯಾರು ಕ್ರಿಸ್ತನಿಗೆ ಪಾಪ ಮಾಡುವದು ಸಾಧ್ಯವಿರಲಿಲ್ಲ ಎಂದು ಹೇಳುತ್ತಾರೋ ಅವರು ಆತನು ನಿಜವಾಗಿಯೂ ಮಾನವ ಸ್ವರೂಪವನ್ನು ತೆಗೆದುಕೊಂಡನು ಎಂಬುದನ್ನು ನಂಬುವದಿಲ್ಲ. ಕ್ರಿಸ್ತನು ನಿಜವಾಗಿ ಶೋಧನೆಗೆ ಒಳಗಾಗಲಿಲ್ಲವೋ, ಅಡವಿಯಲ್ಲಿ ಸೈತಾನನಿಂದ ಮಾತ್ರವಲ್ಲ ತನ್ನ ಜೀವಿತದುದ್ದಕ್ಕೂ ಬಾಲ್ಯಾವಸ್ಥೆಯಿಂದ ಪ್ರೌಢಾವಸ್ಥೆಯ ವರೆಗೆ ಶೋಧನೆಗೆ ಒಳಗಾಗಲಿಲ್ಲವೆ? {NP}

ನಮ್ಮ ರಕ್ಷಕನು ಎಲ್ಲಾ ಭಾದ್ಯತೆಯನ್ನು ತೆಗೆದುಕೊಂಡು ಮಾನವತ್ವವನ್ನು ತೆಗೆದುಕೊಂಡನು. ಆತನು ಮನುಷ್ಯನ ಸ್ವರೂಪವನ್ನು, ಶೋಧನೆಗೆ ಗುರಿಯಾಗುವ ಸಾಧ್ಯತೆಗಾಗಿ

ತೆಗೆದುಕೊಂಡನು. ಆತನು ಸಹಿಸಿರುವ ಯಾವುದನ್ನು ನಾವು ಸಹಿಸಬೇಕಾಗಿಲ್ಲ.

(7) ಕ್ರಿಸ್ತನ ಮಹಾಪ್ರೀತಿಯಿಂದಾಗಿ "ದೈವೀಕತೆಯ ರಹಸ್ಯ" ಮೂಲಕ ಪ್ರದರ್ಶಿಸಲ್ಪಟ್ಟಿತು ಸಭೆಯಾಗಿ ನಾವು ಹೇಗೆ ಪರಿಶುದ್ಧನಾದ ದೇವರ ಎದುರಿನಲ್ಲಿ ನಿಲ್ಲಲು ಸಾಧ್ಯ?

ಅದನ್ನು ಕಳಂಕ ಸುಕ್ಕು ಮುಂತಾದ್ದೊಂದು ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧ ಮಾಡಿದನು. (ಎಫೆಸ 5:27)

ಓ ಅಮೂಲ್ಯನಾದ ಪ್ರೀತಿಯುಳ್ಳ, ದೀರ್ಘಶಾಂತಿಯುಳ್ಳ, ದೀರ್ಘ ಸಹನೆಯುಳ್ಳಾತನೇ ನನ್ನ ಆತ್ಮವು ನಿನ್ನನ್ನು ಎಷ್ಟಾಗಿ ಸ್ತುತಿಸುತ್ತದೆ! ಬಡವ, ಅಯೋಗ್ಯ, ಪಾಪದಿಂದ ಅಶುದ್ಧವಾದ ಆತ್ಮ ಪರಿಶುದ್ಧನಾದ ದೇವರ ಎದುರಿನಲ್ಲಿ ನಿಲ್ಲಲು ಹೇಗೆ ಸಾಧ್ಯ, ನೀತಿವಂತಿಕೆಯಲ್ಲಿ ಪರಿಪೂರ್ಣನು, ನಮ್ಮ ಬದಲಾಗಿ ಮತ್ತು ಜಾಮೀನಾಗಿ ನಿಂತವನು! ಅದ್ಭುತ ಓ ಪರಲೋಕವೇ ಆಶ್ಚರ್ಯಗೊಳ್ಳು ಓ ಭೂಮಿಯೇ, ಬಿದ್ದು ಹೋದ ಮನುಷ್ಯನು ಆತನ ಶಾಶ್ವತವಾದ ಪ್ರೀತಿಯ ಮತ್ತು

ಆನಂದದ ಉದ್ದೇಶವಾಗಿದ್ದಾನೆ, ಆತನು ಅವರಲ್ಲಿ ಸ್ವರ್ಗಾನಂದದ ಹಾಡುಗಳೊಂದಿಗೆ  ಹರ್ಷಿಸುತ್ತಾನೆ ಮತ್ತು ಪಾಪದಿಂದ ಅಶುದ್ಧನಾದವನು ಕ್ರಿಸ್ತನ ನೀತಿವಂತಿಕೆಯಿಂದ ಶುದ್ದೀಕರಿಸಲ್ಪಟ್ಟವನನ್ನು  ತಂದೆಯ ಎದುರಿನಲ್ಲಿ ಪಾಪದ ಯಾವುದೇ ಕಲೆ ಕಳಂಕ ಇಲ್ಲದೇ ಮಂಡಿಸುತ್ತಾನೆ. ಕಳಂಕ ಸುಕ್ಕು ಮುತಾದ್ದೊಂದು ಇಲ್ಲದಂತೆ (ಎಫೆಸ 5:27) ದೇವರು ಆದುಕೊಂಡವರ ಮೇಲೆ ಯಾರು ತಪ್ಪುಹೊರಿಸಾರು?
ದೇವರೇ ನಮ್ಮನ್ನು ನೀತಿವಂತರೆಂದು ನಿರ್ಣಯಿಸುವವನಾಗಿದ್ದಾನೆ.
(ರೋಮ 8:33)

(8) ನಾವು ಆತನಲ್ಲಿ ಪರಿಪೂರ್ಣರು ಆಗಿರಬೇಕೆಂದು ದೇವರನ್ನು ನಾವು ತಿಳಿದುಕೊಳ್ಳಬೇಕು ಮತ್ತು ಅನುಭವಿಸಬೇಕು ಎಂದು ದೇವರು ಬಯಸುವ “ಈ ರಹಸ್ಯದ ಮಹಿಮೆಯ ಸಂಪತ್ತುಗಳು” ಯಾವವು?

ಈ ಮರ್ಮದ ಮಹಿಮಾತಿಶಯವು ಎಷ್ಟೆಂಬದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸುಮಾಡಿಕೊಂಡನು. ಈ ಮರ್ಮವು ಏನಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ. (ಕೊಲಸ್ಸೆ 1:27)

ದೇವರ ಮಕ್ಕಳ ಸೌಲಭ್ಯಗಳನ್ನು, ಆಶೀರ್ವಾದಗಳನ್ನು, ಅಪೋಸ್ತಲನು ಈ ಭಾಷೆಯಲ್ಲಿ ಉಲ್ಲೇಖಿಸುತ್ತಾನೆ: ಈ ಮರ್ಮದ ಮಹಿಮಾತಿಶಯವು ಎಷ್ಟೆಂಬದನ್ನು ದೇವರು ತನ್ನ ಜನರಿಗೆ ತಿಳಿಸಲಿಕ್ಕೆ ಮನಸ್ಸುಮಾಡಿಕೊಂಡನು. ಈ ಮರ್ಮವು ಏನಂದರೆ ಕ್ರಿಸ್ತನು ನಿಮ್ಮಲ್ಲಿದ್ದು ಪ್ರಭಾವದ ನಿರೀಕ್ಷೆಗೆ ಆಧಾರಭೂತನಾಗಿರುವದೇ. ಕೊಲಸ್ಸೆ 1:27. ನಾವು ನಮ್ಮ ಮಹಿಮೆಯ ನಿರೀಕ್ಷೆ ಕ್ರಿಸ್ತನಾಗಿದ್ದಾನೆ, ನಾವು ಆತನಲ್ಲಿ ಪರಿಪೂರ್ಣರಾಗಿದ್ದೇವೆ ಎಂದು ನಾವು ತಿಳಿದುಕೊಳ್ಳುವಾಗ, ನಾವು ವರ್ಣಿಸಲಶಕ್ಯವಾದ ಆನಂದದಿಂದ ಮತ್ತು ಮಹಿಮೆಯಿಂದ ತುಂಬಿ ಹರ್ಷಿಸುತ್ತೇವೆ.

(9) ಕ್ರಿಸ್ತನು ದೇವರ ಮಗನು ಕತ್ತಲೆಯಿಂದ ತುಂಬಿದ ಈ ಲೋಕಕ್ಕೆ ಬಂದು ನಮಗಾಗಿ ತಾಳಿಕೊಂಡನು ಏನು ಮಾಡಿದನು ಎಂಬುದನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತಾ ಪ್ರೀತಿಯೊಂದಿಗೆ ನಾವು ನಿತ್ಯತ್ವದಲ್ಲಿ ಕಳೆಯುತ್ತೇವೆ?

ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ

ಬಾಸುಂಡೆಗಳಿಂದ ನಮಗೆ ಗುಣವಾಯಿತು. (ಯೆಶಾಯ 53:5).

ದೇವ ಕುಮಾರನು ಬಿದ್ದುಹೋದವರನ್ನು ಎದ್ದು ನಿಲ್ಲಿಸಲು ತಗ್ಗಿಸಿಕೊಂಡನು. ಇದಕ್ಕಾಗಿ ಆತನು ಮೇಲೆ ಇರುವ ಪಾಪರಹಿತ ಲೋಕವನ್ನು ಬಿಟ್ಟನು, ತೊಂಬತ್ತೊಂಬತ್ತು ಜನ ಆತನನ್ನು ಪ್ರೀತಿಸುವವರಿದ್ದರು ಆತನು ಈ ಲೋಕಕ್ಕೆ ಬಂದನು "ನಮ್ಮ ದ್ರೋಹಗಳಿಗಾಗಿ ಆತನಿಗೆ ಗಾಯವಾಯಿತು" ಮತ್ತು ನಮ್ಮ "ಅಪರಾಧಗಳಿಗಾಗಿ ಜಜ್ಜಲ್ಪಟ್ಟನು ಯೆಶಾಯ 53:5. ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನ್ನಾಗಿ ಮಾಡಿಕೊಂಡನು. ಅವನು ನಮ್ಮಂತೆ, ಶರೀರಧಾರಿಯಾದನು. ಅವನಿಗೆ ಹಸಿದಿರುವದು, ನೀರಡಿಸುವದು, ಆಯಾಸಗೊಳ್ಳುವದು ಎಂದರೆ ಏನು ಎಂದು ತಿಳಿದಿತ್ತು. ಆತನು ಸಂರಕ್ಷಣೆಗಾಗಿ ಊಟ ಮಾಡಿದನು ಮತ್ತು ದಣಿವಾರಿಸಿಕೊಳ್ಳಲು ನಿದ್ರೆಮಾಡಿದನು. ಅವನು ಅಪರಿಚಿತನು ಮತ್ತು ಭೂಮಿಯ ಮೇಲೆ ಈ ಲೋಕದಲ್ಲಿ ಪ್ರಯಾಣಿಕನೂ ಆಗಿದ್ದನು. ಆದರೆ ಈ ಲೋಕದವನಾಗಿರಲಿಲ್ಲ; ಇಂದು ಪುರುಷ ಮತ್ತು ಸ್ತ್ರೀಯರು ಶೋಧನೆ ಮತ್ತು ವಿಚಾರಣೆಗೆ ಒಳಗಾಗುವಂತೆ ಶೋಧನೆಗೆ ಮತ್ತು ವಿಚಾರಣೆಗೆ ಒಳಗಾದನು,

ಆದಾಗ್ಯೂ ಪಾಪದಿಂದ ದೂರವಾದ ಜೀವಿತವನ್ನು ಜೀವಿಸುತ್ತಿದ್ದನು. ನಮ್ರತೆ, ಅನುಕಂಪ, ಕರುಣೆ, ಯಾವಾಗಲೂ ಇತರರರನ್ನು ಪರಿಗಣಿಸುವವನು ಆಗಿದ್ದನು ಅವನು ದೇವರ ಗುಣಲಕ್ಷಣವನ್ನು ಪ್ರತಿನಿಧಿಸುತ್ತಿದ್ದನು. “ವಾಕ್ಯವೆಂಬಾತನು ನರಾವತಾರವೆತ್ತಿ ನಮ್ಮ ಮಧ್ಯದಲ್ಲಿ ವಾಸಿಸಿದನು ... ಕೃಪೆಯಿಂದ ಮತ್ತು ಸತ್ಯದಿಂದ ತುಂಬಿದವನಾಗಿದ್ದನು.” ಯೋಹಾನ 1:14

ಸೃಷ್ಟಿಕರ್ತನಾದ ಕ್ರಿಸ್ತನು ತನ್ನನ್ನು ತಗ್ಗಿಸಿಕೊಂಡು ಬೇತ್ಲೇಹೇಮಿನ ಗೋದಲಿಯಲ್ಲಿ ಅಸಹಾಯಕ ಮಗುವಾದನು. ಕ್ರಿಸ್ತನ ನರಾವತಾರವು ಖಂಡಿತವಾಗಿ ರಹಸ್ಯಗಳ ರಹಸ್ಯವಾಗಿದೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ವಿಶ್ವದೊಂದಿಗೆ ಕ್ರಿಸ್ತನು ನನ್ನನ್ನು ಪ್ರೀತಿಸಲು ತನ್ನ ರಾಜ ವಸ್ತ್ರವನ್ನು ಮತ್ತು ರಾಜನ ಕಿರೀಟವನ್ನು  ತ್ಯಜಿಸಿ ಶರೀರಧಾರಿಯಾಗಿ ನಮ್ಮ ಮಧ್ಯದಲ್ಲಿ ವಾಸಿಸಿದನು ಮತ್ತು ಕೊನೆಯದಾಗಿ ನನ್ನನ್ನು ರಕ್ಷಿಸಲು ತನ್ನ ಪ್ರಾಣವನ್ನೇ ಕೊಟ್ಟನು.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ಕ್ರಿಸ್ತನು ಧರ್ಮಶಾಸ್ತ್ರವನ್ನು ಆಧರಿಸಿದ ದೇವರ ಪ್ರೀತಿಯನ್ನು ತೆಗೆದು ಹಾಕಲು

ಬರಲಿಲ್ಲ ಬದಲಾಗಿ ಅದನ್ನು ಎತ್ತಿ ಹಿಡಿಯಲು ಮತ್ತು ನೆರವೇರಿಸಲು ಬಂದನು. ಒಂದುವೇಳೆ ಇದು ಉದ್ದೇಶವಾಗದಿದ್ದಲ್ಲಿ ಆತನು ನನ್ನ ಪಾಪಗಳಿಗಾಗಿ ಸಾಯುವ ಅಗತ್ಯತೆ ಇರಲಿಲ್ಲ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ನಾನು ನನ್ನ ಪಾಪಗಳನ್ನು ಅರಿಕೆ ಮಾಡುತ್ತೇನೆ ಮತ್ತು ಕ್ಷಮಾಪಣೆಯನ್ನು ಕೇಳುತ್ತೇನೆ ಮತ್ತು ವಾಗ್ದಾನವನ್ನು ಕೇಳಿ ಹೊಂದಿಕೊಳ್ಳುತ್ತೇನೆ. ಯಾಕಂದರೆ ಆತನ ಅಶ್ಚರ್ಯಕರವಾದ ಪ್ರೀತಿಯ ಕಾರ್ಯದಿಂದಾಗಿ ನಾನು ಪಾಪರಹಿತನಾಗಿ ಅಥವಾ ದೋಷರಹಿತನಾಗಿ ತಂದೆಯ ಎದುರಿನಲ್ಲಿ ನಿಲ್ಲಬಹುದಾಗಿದೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ನಿತ್ಯತ್ವದ ವರ್ಷಗಳು ಉರುಳುತ್ತಿರುವ ಹಾಗೆ ನಾನು ಯೇಸುವಿನ ಪಾದಗಳ ಬಳಿಯಲ್ಲಿ ಕುಳಿತುಕೊಳ್ಳುವದನ್ನು ಎದುರು ನೋಡುತ್ತಿದ್ದೇನೆ ಮತ್ತು ಆತನು ಮಾಡಿದ ಅದ್ಭುತವಾದ ಸಂಗತಿಗಳನ್ನು ಗ್ರಹಿಸಿಕೊಳ್ಳಲು ಕಲಿಯುತ್ತಿದ್ದೇನೆ ಮತ್ತು ಎಂದೆಂದಿಗೂ ಆತನ ಪರಿಶುದ್ಧ ನಾಮವನ್ನು ಸ್ತುತಿಸುತ್ತೇನೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ



ಪಾಠ 8
ಸೆಳೆದುಕೊಳ್ಳುವ ದೇವರ ಪ್ರೀತಿ

(1) ಕರ್ತನು ಯಾವ ತರ್ಕ ವಿಧಾನದಿಂದ ನಮ್ಮ ಮಮತೆಯನ್ನು ವಿನಂತಿ ಸುತ್ತಿದ್ದಾನೆ ಮತ್ತು ಪ್ರೀತಿಯಿಂದ ನಮ್ಮನ್ನು ತನ್ನ ಕಡೆಗೆ ಸೆಳೆಯುತ್ತಿದ್ದಾನೆ?

ನಾನು ನನ್ನ ಜನರನ್ನು ಮಾನವರಿಗೆ ತಕ್ಕ ಮೂಗುದಾರದಿಂದ ಅಂದರೆ ಮಮತೆಯ ಹಗ್ಗದಿಂದ ಸೆಳೆದುಕೊಂಡೆನು; ನೊಗವನ್ನು ತಲೆಯ ಈಚೆಗೆ  ತೆಗೆಯುವವರಂತೆ ನಾನು ಅವರನ್ನು ಸುಧಾರಿಸಿ ಅವರಿಗೆ ತೀನಿಯನ್ನು ನಯದಿಂದ ಇಕ್ಕಿದೆನು. (ಹೋಶೇಯ 11:4)

ವಿಶಿಷ್ಟವಾದ ಪದವಿನ್ಯಾಸ, ಮನುಷ್ಯರು ಕ್ರೂರ ಪ್ರಾಣಿಗಳನ್ನು ಪಳಗಿಸಲು

ಉಪಯೋಗಿಸುವ ಮೂಗುದಾರ ಗಳಿಗಿಂತ ವಿಭಿನ್ನವಾಗಿವೆ. ಕೆಳವರ್ಗದ ಪ್ರಾಣಿಗಳನ್ನು ಕೆಲವೊಂದು ಸಮಯ ಒಂದು ಹಂತದ ಬಲಾತ್ಕಾರದ ಮೂಲಕ ಉಪಯುಕ್ತ ಕೆಲಸಕ್ಕೆ ಪಳಗಿಸಬಹುದು; ಆದರೆ ದೇವರು ಮನುಷ್ಯರನ್ನು ಈ ಕಾರಣಕ್ಕಾಗಿ ಸೆಳೆಯುತ್ತಾನೋ. ಆತನು ಒರಟಾದ ಹಗ್ಗವನ್ನು ಅಥವಾ ಕಬ್ಬಿಣದ ಪಟ್ಟಿಯನ್ನು ಉಪಯೋಗಿಸುವದಿಲ್ಲ. ಆತನು ನಮ್ಮನ್ನು ತರ್ಕಸಮ್ಮತವಾದ ಮಾರ್ಗಗಳಿಂದ ಸೆಳೆಯುತ್ತಾನೆ,ನಮ್ಮ ಜ್ಞಾನವನ್ನು ಅಹ್ವಾನಿಸುವ ಮತ್ತು ನಮ್ಮ ಮಮತೆಯನ್ನು ಅರಿಕೆ ಮಾಡುವಂತೆ ಸೆಳೆಯುತ್ತಾನೆ (ಯೆಶಾಯ 1:18 ನೋಡಿರಿ).

ದೇವರು ನಮ್ಮನ್ನು ದೇವರ ಸ್ವರೂಪದಲ್ಲಿ ಮಾಡಲ್ಪಟ್ಟ ನಮ್ಮ ಸ್ವಭಾವದ ಘನತೆಗೆ ತಕ್ಕಂತೆ ಸೆಳೆಯುತ್ತಾನೆ (ಆದಿಕಾಂಡ 1:26-27). ಆತ್ಮಗಳಿಗಾಗಿ ಕೆಲಸಮಾಡುವಾಗ ನಾವು ಯಾವಾಗಲೂ ಪ್ರೀತಿಯ ಈ ವಿಧಾನವನ್ನು ಉಪಯೋಗಿಸಬೇಕು (1ಕೊರಿಂಥ 9:19-23; 1ಥೆಸಲೋನಿಕ 2:7,8; 3:12; ಇಬ್ರಿಯ 5:2). ಕ್ರಿಸ್ತನು ನಮ್ಮನ್ನು ಮನುಷ್ಯರ ಹಗ್ಗಗಳಿಂದ ಸೆಳೆದನು ಆತನು ಮನುಷ್ಯನಾಗಿ ಮತ್ತು ಜೀವಿಸಿ ಮತ್ತು ನಮ್ಮ ಒಳ್ಳೇಯದಕ್ಕಾಗಿ ತನ್ನನ್ನು ಯಜ್ಞವಾಗಿ ಅರ್ಪಿಸಿದಾಗ (ಯೋಹಾನ 12:32; ಅ.ಕೃ. 10:38). ದೇವಕುಮಾರನು ಮನುಷ್ಯನಾಗಲು

ಒಂದು ಕಾರಣ ಮನುಷ್ಯರನ್ನು ಕರುಣೆಯೆಂಬ ಹಗ್ಗದಿಂದ ಸೆಳೆಯಲು, ಅವರೊಂದಿಗೆ ಸಾಮಾನ್ಯ ಸ್ವರೂಪದಲ್ಲಿ ಭಾಗಿಯಾಗಲು.

ಕ್ರಿಸ್ತನು ದೇವರ ಪ್ರೀತಿಯನ್ನು ಲೋಕಕ್ಕೆ ಪ್ರಕಟಿಸಲು ಬಂದನು. ತನ್ನೆಡೆಗೆ ಎಲ್ಲಾ ಮನುಷ್ಯರ ಹೃದಯಗಳನ್ನು ಸೆಳೆದುಕೊಳ್ಳಲು... ರಕ್ಷಣೆಯೆಡೆಗೆ ಮೊದಲನೆಯ ಹೆಜ್ಜೆ ಕ್ರಿಸ್ತನ ಪ್ರೀತಿಯ ಸೆಳೆಯುವಿಕೆಗೆ ಪ್ರತಿಕ್ರಿಯಿಸುವದು. ... ಮನುಷ್ಯರು ಕ್ಷಮಾಪಣೆಯ ಆನಂದವನ್ನು, ದೇವರ ಸಮಾಧಾನವನ್ನು ಕ್ರಿಸ್ತನು ಅವರನ್ನು ಪ್ರೀತಿಯನ್ನು ಪ್ರಕಟಿಸುವದರ ಮೂಲಕ ಸೆಳೆದುಕೊಳ್ಳುತ್ತಾನೆ ಎಂಬುದನ್ನು ತಿಳಿದುಕೊಳ್ಳಬಹುದು. ಒಂದುವೇಳೆ ಅವರು ಆತನ ಸೆಳೆಯುವಿಕೆಗೆ ಪ್ರತಿಕ್ರಿಯಿಸಿದ್ದಲ್ಲಿ, ತಮ್ಮ ಹೃದಯಗಳನ್ನು ಆತನ ಕೃಪೆಗೆ ಅಧೀನ ಪಡಿಸಿದ್ದಲ್ಲಿ. ಆತನು ಅವರನ್ನು ಹಂತ ಹಂತವಾಗಿ ತನ್ನ ಕುರಿತು ಸಂಪೂರ್ಣ ತಿಳುವಳಿಕೆಗೆ ನಡೆಸುತ್ತಾನೆ, ಇದು ನಿತ್ಯವಾದ ಜೀವಿತವಾಗಿದೆ.

(2) ಯಾವ ಬಹುಮಾನಕ್ಕಾಗಿ ಕ್ರಿಸ್ತನು ದಂಡವನ್ನು ತೆತ್ತನು ಮತ್ತು ಕ್ಷಮಾಪಣೆಯನ್ನು ಒದಗಿಸಿದನು ಮತ್ತು ಅದನ್ನು ದೇವರು ಧಾರಾಳವಾಗಿ ನಮಗೆ ನೀಡಿದ್ದಾನೆ?

ಯಾಕಂದರೆ ಪಾಪವು ಕೊಡುವ ಸಂಬಳ ಮರಣ; ದೇವರ ಉಚಿತಾರ್ಥವರವು ನಮ್ಮ ಕರ್ತನಾದ ಯೇಸುವಿನಲ್ಲಿರುವ ನಿತ್ಯಜೀವ. (ರೋಮಾ 6:23).

ಬಂಧ ಮುಕ್ತತೆಗೆ ಬೆಲೆಯನ್ನು ನೀಡಿದನು ಮತ್ತು ಇದರಿಂದ ಎಲ್ಲರಿಗೂ ದೇವರ ಬಳಿಗೆ ಬರಲು ಸಾಧ್ಯವಾಯಿತು ಮತ್ತು ವಿಧಯತೆಯ ಜೀವಿತದ ಮೂಲಕ ನಿತ್ಯಜೀವವನ್ನು ಹೊಂದಿಕೊಳ್ಳಲು ಸಾಧ್ಯವಾಯಿತು. ಹಾಗಿದ್ದಲ್ಲಿ ಮನುಷ್ಯರು ನಶ್ವರವಾದ ಸ್ವಾಸ್ತ್ಯದೆಡೆಗೆ ತಿರುಗುವದು  ಮತ್ತು ತಮ್ಮ ಹೆಮ್ಮೆಯನ್ನು ತೃಪ್ತಿಪಡಿಸುವದಕ್ಕಾಗಿ, ಸ್ವಾರ್ಥ ಮತ್ತು ಪ್ರದರ್ಶನಕ್ಕಾಗಿ ಮತ್ತು ಸೈತಾನನ ನಿಯಮಗಳಿಗೆ ಅಧೀನಪಡಿಸುವದಕ್ಕಾಗಿ ಜೀವಿಸುವದು ಎಷ್ಟು ದುಃಖಕರವಾಗಿದೆ, ಅವರು ಈ ಜೀವಿತದಲ್ಲಿ ಮತ್ತು ಬರಲಿಕ್ಕಿರುವ ಜೀವಿತದಲ್ಲಿ ಹೊಂದಿಕೊಳ್ಳಬೇಕಾದ ಆಶೀರ್ವಾದವನ್ನು ಕಳೆದುಕೊಳ್ಳುತ್ತಾರೆ. ಅವರು ಪರಲೋಕದ ಅರಮನೆಯಲ್ಲಿದ್ದು ಸ್ವತಂತ್ರ ಮತ್ತು ಕ್ರಿಸ್ತನೊಂದಿಗೆ ಮತ್ತು ಪರಲೋಕದ ದೇವದೂತರೊಂದಿಗೆ ಮತ್ತು ದೇವರ ರಾಜಕುಮಾರನೊಂದಿಗೆ ಸಮಾನತೆಯಲ್ಲಿ ಪ್ರವೇಶಿಸಬಹುದು, ಆದಾಗ್ಯೂ ಅದು ವಿಶ್ವಸನೀಯವಾಗಿ ತೋರುವಂತೆ ಅವರು ಪರಲೋಕದ ಆಕರ್ಷಣೆಯಿಂದ ತಿರುಗಿಕೊಳ್ಳುತ್ತಾರೆ.

ಸರ್ವ ಲೋಕದ ಸೃಷ್ಟಿಕರ್ತನು ಯಾರು ತನ್ನ ಒಬ್ಬನೇ ಮಗನನ್ನು ತಮ್ಮ ಸ್ವಂತ ರಕ್ಷಕನೆಂದು ನಂಬುತ್ತಾರೋ ಅವರನ್ನು ಆತನು ತನ್ನ ಮಗನನ್ನು ಪ್ರೀತಿಸಿದಂತೆ ಪ್ರೀತಿಸುವ ಸಲಹೆಯನ್ನು ನೀಡುತ್ತಾನೆ. ಇಲ್ಲಿ ಮತ್ತು ಈಗ ಆತನ ಧಾರಾಳವಾದ ಈ ಅದ್ಭುತವಾದ ಮಟ್ಟಕ್ಕೆ ಸುರಿಯಲ್ಪಟ್ಟಿದೆ. ಆತನು ಮನುಷ್ಯರಿಗೆ ಬೆಳಕಿನ ಮತ್ತು ಪರಲೋಕದ ಭವ್ಯತೆಯ ಬಹುಮಾನವನ್ನು ನೀಡಿದ್ದಾನೆ ಮತ್ತು ಆತನೊಂದಿಗೆ ಪರಲೋಕದ ಎಲ್ಲಾ ಸಂಪತ್ತನ್ನು ನೀಡಿದ್ದಾನೆ. ಬರಲಿಕ್ಕಿರುವ ಜೀವಿತದಲ್ಲಿ ಹೆಚ್ಚಾದ ವಾಗ್ದಾನಗಳನ್ನು ನಮಗೆ ಮಾಡಿದ್ದಾನೆ. ಆತನು ನಮಗೆ ಈ ಜೀವಿತದಲ್ಲಿ ರಾಜಕುಮಾರರು ಹೊಂದಬೇಕಾದ ಮತ್ತು ಆತನ ಕೃಪೆಗೆ ಪಾತ್ರರಾಗುವ ಬಹುಮಾನಗಳನ್ನು ನೀಡಿದ್ದಾನೆ. ಆತನು ನಮ್ಮನ್ನು ಶಕ್ತರನ್ನಾಗಿ ಮಾಡುವ, ವಿಸ್ತರಿಸುವ ಮತ್ತು ನಮ್ಮ ನಡತೆಯನ್ನು ಉನ್ನತಿಗೇರಿಸುವ ಎಲ್ಲವನ್ನೂ ಆನಂದಿಸಲು ನೀಡಿದ್ದಾನೆ. ನಮ್ಮನ್ನು ಮೇಲಿರುವ ಪರಲೋಕದ ಆಸ್ಥಾನಕ್ಕೆ ಅರ್ಹರಾಗಿಸುವದು ಆತನ ರಚನೆಯಾಗಿದೆ.

ನ್ಯಾಯ ಪಾಪವು ಕೇವಲ ಕ್ಷಮಿಸಲ್ಪಡುವದನ್ನು ಕೇಳುವದಿಲ್ಲ, ಆದರೆ ಮರಣ ದಂಡನೆಯನ್ನು ವಿಧಿಸಬೇಕು ಅನ್ನುತ್ತದೆ, ದೇವರು ತನ್ನ ಒಬ್ಬನೇ ಮಗನ ಬಹುಮಾನದಲ್ಲಿ ಈ

ಎರಡು ಅಗತ್ಯತೆಗಳನ್ನು ಪೂರೈಸಿದ್ದಾನೆ. ಮನುಷ್ಯನ ಸ್ಥಾನದಲ್ಲಿ ಸಾಯುವದರ ಮೂಲಕ ಬೆಲೆಯನ್ನು ತೆತ್ತಿದ್ದಾನೆ ಮತ್ತು ಕ್ಷಮಾಪಣೆಯನ್ನು ನೀಡಿದ್ದಾನೆ.
(3) ಕ್ರಿಸ್ತನು ಈ ಲೋಕಕ್ಕೆ ಅದನ್ನು ಸ್ವೀಕರಿಸುವವರೆಲ್ಲರಿಗೂ ಸಮೃದ್ಧಿಯಾಗಿ ಒದಗಿಸುವದಕ್ಕಾಗಿ ಬಂದನೇನೋ?

ಕಳ್ಳನು ಕದ್ದುಕೊಳ್ಳುವದಕ್ಕೂ ಕೊಯ್ಯುವದಕ್ಕೂ ಹಾಳುಮಾಡುವದಕ್ಕೂ ಬರುತ್ತಾನೆ ಹೊರತು ಮತ್ತಾವದಕ್ಕೂ ಬರುವದಿಲ್ಲ; ನಾನಾದರೋ ಅವುಗಳಿಗೆ ಜೀವವು ಇರಬೇಕೆಂತಲೂ ಅದು ಸಮೃದ್ಧಿಯಾಗಿ ಇರಬೇಕೆಂತಲೂ ಬಂದೆನು.
(ಯೋಹಾನ 10:10)

ನಾವು ಹೊಂದಿಕೊಳ್ಳಬೇಕಾದದ್ದು ಈ ಜೀವಿತ ಮತ್ತು ಅದನ್ನು ನಾವು ಸಮೃದ್ಧಿಯಾಗಿ ಹೊಂದಿಕೊಳ್ಳಬೇಕು. ದೇವರು ಈ ಜೀವವನ್ನು ಸ್ವಾರ್ಥಕ್ಕಾಗಿ ಸತ್ತು ಕ್ರಿಸ್ತನಿಗಾಗಿ ಜೀವಿಸುವ ಪ್ರತಿಯೊಂದು ಆತ್ಮನಲ್ಲಿ  ಉಸಿರಿದ್ದಾನೆ. ಆದರೆ ಸಂಪೂರ್ಣ ಸ್ವ-ನಿರಾಕರಣೆ ಅಗತ್ಯವಾಗಿದೆ. ಇದು ಸಂಭವಿಸದ ಹೊರತು, ನಾವು ನಮ್ಮ ಸಂತೋಷವನ್ನು ಹಾಳುಮಾಡುವ ಕೆಟ್ಟತನವನ್ನು ಕೊಂಡೊಯ್ಯುತ್ತೇವೆ. ಸ್ವಾರ್ಥವು ಕ್ರೂಜೆಗೆ ಹಾಕಲ್ಪಟ್ಟಾಗ, ಕ್ರಿಸ್ತನು ನಮ್ಮಲ್ಲಿ ವಾಸಮಾಡುತ್ತಾನೆ

ಮತ್ತು ಪವಿತ್ರಾತ್ಮನ ಬಲ ನಮ್ಮ ಪ್ರಯತ್ನಗಳಿಗೆ ಸಹಾಯಕವಾಗುತ್ತದೆ. ನಾವು ದೇವರು ನಮಗೆ ಏನು ನೀಡುತ್ತಾನೋ ನಾವು ಅದಾಗಿರಬೇಕು ಎಂದು ನಾನು ಬಯಸುತ್ತೇನೆ— ಕರ್ತನಲ್ಲಿ ಸಂಪೂರ್ಣ ಬೆಳಕಾಗಿ. ನಾವು ಉನ್ನತವಾದ ಮಟ್ಟವನ್ನು ತಲುಪಬೇಕು ಆದರೆ ನಾವು ಸ್ವಾರ್ಥವನ್ನು ವೇದಿಯ ಮೇಲೆ ಸಮರ್ಪಿಸದ ಹೊರತು, ಪವಿತ್ರಾತ್ಮನು ನಮ್ಮನ್ನು ನಿಯಂತ್ರಣದಲ್ಲಿ ಇಡದ ಹೊರತು ನಮ್ಮನ್ನು ತನ್ನ ದೈವೀಕತೆಯ ಹೋಲಿಕೆಯಲ್ಲಿ ರೂಪಿಸದ ಮತ್ತು ರಚಿಸದ ಹೊರತು ನಾವು ಇದನ್ನು ಮಾಡಲು ಸಾಧ್ಯವಿಲ್ಲ.

ಅವನು (ವಿಶ್ವಾಸಿ) ಕ್ರಿಸ್ತನು ಸತ್ತಂತೆ ಸಾಯಬಹುದು ಆದರೆ ರಕ್ಷಕನ ಜೀವ ಆತನಲ್ಲಿದೆ. ಅವನ ಜೀವಿತ ಕ್ರಿಸ್ತನೊಂದಿಗೆ ದೇವರಲ್ಲಿ ಮರೆಯಾಗಿದೆ. "ಅವರಿಗೆ ಜೀವ ಇರಬೇಕೆಂದು ನಾನು ಬಂದೆನು." ಯೇಸು ಹೇಳುತ್ತಾನೆ, "ಅದು ಅವರಲ್ಲಿ ಸಮೃದ್ಧಿಯಾಗಿ ಇರಬೇಕು." ಆತನು ಶ್ರೇಷ್ಠವಾದ ಪ್ರಕ್ರಿಯೆಯಲ್ಲಿ ನಡೆಸುತ್ತಾನೆ ಇದರಿಂದ ವಿಶ್ವಾಸಿಗಳು ಈ ಜೀವಿತದಲ್ಲಿ ಆತನೊಂದಿಗೆ ಒಂದಾಗುತ್ತಾರೆ ಮತ್ತು ನಿತ್ಯತ್ವದಲ್ಲೆಲ್ಲಾ ಆತನೊಂದಿಗೆ ಒಂದಾಗಿ ಇರುತ್ತಾರೆ.

(4) ಪ್ರೀತಿಯ ಕುರುಬನಂತೆ ಪ್ರತಿಯೊಂದು ಆತ್ಮಕ್ಕೆ

ಅದೊಂದಕ್ಕಾಗಿಯೇ ತಾನು ಸತ್ತಿದ್ದೇನೆ ಎಂದು ಭಾವಿಸಿ ಕರ್ತನು ಏನು ಮಾಡುತ್ತಾನೆ?

ಮನುಷ್ಯಕುಮಾರನು ಕೆಟ್ಟು ಹೋಗಿರುವದನ್ನು ಹುಡುಕಿ ರಕ್ಷಿಸುವದಕ್ಕೆ ಬಂದನು ಎಂದು ಹೇಳಿದನು. (ಲೂಕ 19:10)

ತನಗಾಗಿ ಮಾತ್ರ ರಕ್ಷಕನು ಸತ್ತನು ಎಂಬಂತೆ ಪ್ರತಿಯೊಂದು ಆತ್ಮವು ಯೇಸುವಿಗೆ ತಿಳಿದಿದದೆ ಪ್ರತಿಯೊಬ್ಬರ ವೇದನೆ ಆತನ ಹೃದಯವನ್ನು ಸ್ಪರ್ಶಿಸುತ್ತದೆ. ಸಹಾಯಕ್ಕಾಗಿ ಕೂಗುವಾಗ ಆತನ ಕಿವಿಯನ್ನು ತಲುಪುತ್ತದೆ. ಆತನು ಎಲ್ಲಾ ಮನುಷ್ಯರನ್ನು ತನ್ನ ಕಡೆಗೆ ಸೆಳೆದುಕೊಳ್ಳುವದಕ್ಕಾಗಿ ಬಂದನು, ಆತನು ಅವರನ್ನು "ನನ್ನನ್ನು ಹಿಂಬಾಲಿಸು" ಎಂದು ಕರೆಯುತ್ತಿದ್ದಾನೆ ಮತ್ತು ಅವರು ಆತನ ಬಳಿಗೆ ಬರುವಂತೆ ಸೆಳೆಯಲು ಆತನ ಆತ್ಮವು ಅವರ ಹೃದಯಗಳ ಮೇಲೆ ಚಲಿಸುತ್ತದೆ. ಅನೇಕರು ಯೇಸುವಿನ ಬಳಿಗೆ ಬರುವದನ್ನು ನಿರಾಕರಿಸುತ್ತಾರೆ. ಯೇಸುವಿಗೆ ಅವರು ಯಾರು ಎಂದು ತಿಳಿದದೆ, ಯಾರು ಸಂತೋಷದಿಂದ ತನ್ನ ಕರೆಯನ್ನು ಆಲಿಸುತ್ತಾರೆ ಮತ್ತು ತನ್ನ ಪೋಷಣೆಯ ಅಡಿಯಲ್ಲಿ ಬರುವದಕ್ಕೆ ಸಿದ್ಧರಾಗಿದ್ದಾರೆ ಎಂದು ಸಹ ಆತನಿಗೆ ಗೊತ್ತು. ಆತನು

ಹೇಳುತ್ತಾನೆ, "ನನ್ನ ಕುರಿಗಳು ನನ್ನ ಸ್ವರಕ್ಕೆ ಕಿವಿಗೊಡುತ್ತವೆ, ನನ್ನನ್ನು ತಿಳಿದಿವೆ ಮತ್ತು ಅವು ನನ್ನನ್ನು ಹಿಂಬಾಲಿಸುತ್ತವೆ." ಆತನು ನಮ್ಮಲ್ಲಿ ಪ್ರತಿಯೊಬ್ಬರಿಗೋಸ್ಕರ ಈ ಲೋಕದಲ್ಲಿ ಮತ್ತೊಂದಿಲ್ಲ ಎನ್ನುವ ರೀತಿಯಲ್ಲಿ ಚಿಂತಿಸುತ್ತಾನೆ.

ಆತನು ತನ್ನ ಸ್ವಂತ ಕುರಿಗಳನ್ನು ಹೆಸರಿಡಿದು ಕರೆಯುತ್ತಾನೆ ಮತ್ತು ಅವುಗಳನ್ನು ನಡೆಸುತ್ತಾನೆ.  ಮತ್ತು ಕುರಿಗಳು ಆತನನ್ನು ಹಿಂಬಾಲಿಸುತ್ತವೆ: ಯಾಕಂದರೆ ಅವು ಆತನ ಸ್ವರವನ್ನು ಬಲ್ಲವು "ಪೌರಾತ್ಯ ಕುರುಬರು ತಮ್ಮ ಕುರಿಗಳನ್ನು ನಡೆಸುವದಿಲ್ಲ. ಆತನು ಒತ್ತಡ ಅಥವಾ ಭಯವನ್ನು ಅವಲಂಬಿಸುವದಿಲ್ಲ. ಆದರೆ ಹೋಗುವ ಪೂರ್ವದಲ್ಲಿ, ಆತನು ಅವುಗಳನ್ನು ಕರೆಯುತ್ತಾನೆ. ಅವು ಆತನ ಸ್ವರವನ್ನು ಬಲ್ಲವು ಆತನ ಕರೆಗೆ ವಿಧೇಯರಾಗುತ್ತವೆ. ಅದರಂತೆ ರಕ್ಷಕನಾದ ಕುರುಬನು ತನ್ನ ಕುರಿಗಳೊಂದಿಗೆ ಇರುತ್ತಾನೆ.

ವೇದವಾಕ್ಯವು ಹೇಳುತ್ತದೆ, "ಕುರುಬನು ಕುರಿಹಿಂಡನ್ನು ಹೇಗೋ ಹಾಗೆ ನೀನು ಮೋಶೆ ಆರನೋರ ಮುಖಾಂತರ ನಿನ್ನ ಪ್ರಜೆಯನ್ನು ಕರೆದೊಯ್ದಿ." ಪ್ರವಾದಿಗಳ ಮೂಲಕ, ಯೇಸು ಪ್ರಕಟಿಸುತ್ತಾನೆ, "ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ. ಆದಕಾರಣ ನಿನ್ನನ್ನು ಮಮತೆಯಿಂದ

ಸೆಳೆದುಕೊಂಡಿದ್ದೇನೆ."ಮಾನವರಿಗೆ ತಕ್ಕ ಮೂಗುದಾರದಿಂದ ಅಂದರೆ ಮಮತೆಯ ಹಗ್ಗದಿಂದ ಸೆಳೆದುಕೊಂಡೆನು." ಕೀರ್ತನೆ 77:20; ಯೆರೆಮೀಯ 31:3; ಹೋಶೇಯ 11:4.
(5) ಕ್ರಿಸ್ತನ ಜೀವಿತದಲ್ಲಿ ಯಾವಾಗ ನಾವು ಕರುಣೆ, ನಮ್ರತೆ, ಅನುಕಂಪ ಮತ್ತು ಪ್ರೀತಿಯನ್ನು ನೋಡುತ್ತೇವೆ, ಯಾರ ಗುಣಲಕ್ಷಣಗಳನ್ನು ಮತ್ತು ವಿಶೇಷಗುಣಗಳನ್ನು ಸಹ ನಾವು ನೋಡುತ್ತೇವೆ?

ಯೇಸು ಅವನಿಗೆ – ಫಿಲಿಪ್ಪನೇ, ನಾನು ಇಷ್ಟು ದಿವಸ ನಿಮ್ಮ ಸಂಗಡ ಇದ್ದರೂ ನೀನು ಇನ್ನೂ ನನ್ನನ್ನು ಅರಿತುಕೊಳ್ಳಲಿಲ್ಲವೇ. ನನ್ನನ್ನು ನೋಡಿದವನು ತಂದೆಯನ್ನು ನೋಡಿದ್ದಾನೆ, ನಮಗೆ ತಂದೆಯನ್ನು ತೋರಿಸೆಂದು ನೀನು ಹೇಳುವದು ಹೇಗೆ? (ಯೋಹಾನ 14:9)

ವಿಶ್ವದ ದೇವರ ಪರಿಶುದ್ಧತೆಯನ್ನು ಮತ್ತು ಮಹಿಮೆಯನ್ನು  ದೃಷ್ಟಿಸುವಾಗ ನಾವು ಭಯಭ್ರಾಂತರಾಗುತ್ತೇವೆ ಯಾಕಂದರೆ ಆತನ ನ್ಯಾಯ ಅಪರಾಧಿಯನ್ನು ಮುಕ್ತಗೊಳಿಸಲು ಅನುಮತಿಸುವದಿಲ್ಲ. ಆದರೆ ನಾವು ಭಯದಲ್ಲಿ ಉಳಿಯುವ ಅಗತ್ಯವಿಲ್ಲ, ಕ್ರಿಸ್ತನು ದೇವರ ಗುಣಲಕ್ಷಣವನ್ನು ಪ್ರಕಟಿಸುವದಕ್ಕೆ ಈ ಲೋಕಕ್ಕೆ ಬಂದನು, ತಾನು ದತ್ತು

ತೆಗೆದುಕೊಂಡಿರುವ ಮಗುವಿಗೆ ಪಾಲಕರ ಪ್ರೀತಿಯನ್ನು ನೀಡುವದನ್ನು ನಮಗೆ ಸ್ಪಷ್ಟಪಡಿಸಿದ್ದಾನೆ. ನಾವು ದೇವರ ಗುಣಲಕ್ಷಣವನ್ನು ಕೇವಲ ನಿಸರ್ಗದ ಆಶ್ಚರ್ಯಕರ ಕಾರ್ಯಗಳಿಂದ ಮಾತ್ರ ಅಂದಾಜು ಮಾಡುವದು ಬೇಡ ಬದಲಾಗಿ ಯೇಸುವಿನ ಸರಳ ಮತ್ತು ಸುಂದರ ಜೀವಿತದಿಂದ ನೋಡೋಣ ಆತನು ಯೆಹೋವನನ್ನು ನಮ್ಮ ಲೋಕದ ತಂದೆತಾಯಿಗಳಿಗಿಂತ ಹೆಚ್ಚು ಕರುಣೆಯುಳ್ಳವನು, ಹೆಚ್ಚು ಅನುಕಂಪವುಳ್ಳವನು, ಹೆಚ್ಚು ನಮ್ರತೆಯುಳ್ಳವನು ಎಂದು ಮಂಡಿಸುತ್ತಾನೆ.

ಯೇಸು ತಂದೆಯನ್ನು ನಾವು ನಮ್ಮ ವಿಶ್ವಾಸವನ್ನು ಇಡಬಹುದಾದ ಮತ್ತು ನಮ್ಮ ಬಯಕೆಗಳನ್ನು ಮಂಡಿಸ ಬಹುದಾದ ಒಬ್ಬನು ಎಂದು ಮಂಡಿಸುತ್ತಾನೆ. ನಾವು ದೇವರ ಭಯದಲ್ಲಿರುವಾಗ ಮತ್ತು ಆತನ ಮಹಿಮೆ ಮತ್ತು ಭ್ಯವತೆಯನ್ನು ನೋಡಿ ಭಾವೋದ್ರೇಕಕ್ಕೆ ಒಳಗಾದಾಗ ದೇವರು ತನ್ನ ಪ್ರತಿನಿಧಿಯದ ಕ್ರಿಸ್ತನೆಡೆಗೆ ನಮ್ಮನ್ನು ಸೂಚಿಸುತ್ತಾನೆ. ನಾವು ಏನನ್ನು ನೋಡುತ್ತೇವೋ ಅದು ಯೇಸುವಿನಲ್ಲಿ ಪ್ರಕಟವಾಗಿದೆ, ನಮ್ರತೆ, ಅನುಕಂಪ ಮತ್ತು ಪ್ರೀತಿ ಇವು ತಂದೆಯ ವಿಶೇಷಗುಣಗಳನ್ನು ಪ್ರತಿಫಲಿಸುತ್ತವೆ. ಕಲ್ವಾರಿ ಕ್ರೂಜೆ ಮನುಷ್ಯನಿಗೆ ದೇವರ ಪ್ರೀತಿಯನ್ನು ಪ್ರಕಟಿಸುತ್ತದೆ ಕ್ರಿಸ್ತನು

ವಿಶ್ವದ ಸಾರ್ವಭೌಮನನ್ನು ಪ್ರೀತಿಯ ದೇವರು  ಎಂದು ಪ್ರತಿನಿಧಿಸುತ್ತಾನೆ. ಪ್ರವಾದಿಗಳ ಬಾಯಿಂದ ಆತನು “ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ. ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ.” ಎಂದು ಹೇಳುತ್ತಾನೆ (ಯೆರೆಮೀಯ 31:3)

(6) ಕ್ರಿಸ್ತನ ಕೃಪೆ ಮತ್ತು ಸುರಿಸಿದ ರಕ್ತಕ್ಕೆ ಅನುಗುಣವಾಗಿ ನಾವು ಅದನ್ನು ಸ್ವೀಕರಿಸುವದನ್ನು ಆಯ್ಕೆ ಮಾಡಿಕೊಳ್ಳುವುದಾದರೆ ನಾವು ಏನು ಮಾಡಬೇಕು?

ಈತನು ನಮಗೋಸ್ಕರ ತನ್ನ ರಕ್ತವನ್ನು ಸುರಿಸಿದ್ದರಿಂದ ನಮ್ಮ ಅಪರಾಧಗಳು ಪರಿಹಾರವಾಗಿ ನಮಗೆ ಬಿಡುಗಡೆಯಾಯಿತು. ಇದು ದೇವರ ಕೃಪಾತಿಶಯವೇ, (ಎಫೆಸ 1:7)

ಜೀವ ಮತ್ತು ಮಹಿಮೆಯ ಒಡೆಯನು ತನ್ನ ದೈವೀಕತೆಯನ್ನು ಮಾನವತ್ವದೊಂದಿಗೆ ಧರಿಸಿದನು, ದೇವರು ಕ್ರಿಸ್ತನ ಬಹುಮಾನದ ಮೂಲಕ ನಮ್ಮನ್ನು ತನ್ನೊಂದಿಗೆ ಜೋಡಿಸಿಕೊಳ್ಳುತ್ತಾನೆ. ದೇವರೊಂದಿಗೆ ಸಂಬಂಧವಿಲ್ಲದೆ ಯಾರೊಬ್ಬರು ಸಂತೋಷದಿಂದ ಇರಲು ಸಾಧ್ಯವಿಲ್ಲ. ಬಿದ್ದು ಹೋದ ಮನುಷ್ಯನು ಪರಲೋಕದ ತಂದೆಯು ತನ್ನ ಪ್ರೀತಿಯು ಪಶ್ಚಾತ್ತಾಪಪಡುವ

ಪಾಪಿಯನ್ನು ತಬ್ಬಿಕೊಳ್ಳುವವರೆಗೆ ಮತ್ತು ದೋಷರಹಿತ ಕುರಿಮರಿಯ ಒಳ್ಳೇತನದ ಮೂಲಕ ಪರಿವರ್ತನೆಯನ್ನು ಹೊಂದುವರೆಗೆ ತೃಪ್ತಿ ಹೊಂದಲಾರದು ಎಂಬುದನ್ನು ಕಲಿಯಬೇಕು.

ಪರಲೋಕದ ಜ್ಞಾನದ ಎಲ್ಲಾ ಕಾರ್ಯಗಳು ಇಲ್ಲಿಯವರೆಗ ಮಾತ್ರ. ತಮ್ಮ ಅಧಿಕಾರಿಯ ಆಜ್ಞೆಯ ಮೇರೆಗೆ ಯಾರು ಉಲ್ಲಂಘನೆಯಿಂದಾಗಿ ತಮ್ಮನ್ನು ಪರಲೋಕದ ತಂದೆಯೊಂದಿಗೆ ಬೇರ್ಪಡಿಸಿಕೊಂಡಿದ್ದಾರೋ ಅವರನ್ನು ಮರಳಿ ಪಡೆದುಕೊಳ್ಳುವ ಕೆಲಸವನ್ನು ಅವರು ಮಾಡಬೇಕಾಗಿದೆ. ಒಂದು ಯೋಜನೆ ರಚಿಸಲ್ಪಟ್ಟಿದೆ ಇದರ ಮೂಲಕ ಅದ್ಭುತವಾದ ಕೃಪೆ ಮತ್ತು ಕ್ರಿಸ್ತನ ಪ್ರೀತಿ ಲೋಕಕ್ಕೆ ಪ್ರಕಟಿಸಲ್ಪಡುತ್ತವೆ.ಮನುಷ್ಯನನ್ನು ಬಂಧ ಮುಕ್ತಗೊಳಿಸಲು ದೇವ ಕುಮಾರನು ಅಪರಿಮಿತವಾದ ಬೆಲೆಯನ್ನು ತೆತ್ತಿರುವದರಲ್ಲಿ ದೇವರ ಪ್ರೀತಿಯು ಪ್ರಕಟವಾಗಿದೆ. ಭ್ಯವವಾದ ವಿಮೋಚನೆಯ ಈ ಯೋಜನೆಯು ತನ್ನ ಒದಗಿಸುವಿಕೆಯಲ್ಲಿ  ಈಡೀ ಲೋಕವನ್ನು ರಕ್ಷಿಸಲು ಸಾಕಾಗುತ್ತದೆ. ಪಾಪಿಯಾದ ಮತ್ತು ಬಿದ್ದುಹೋದ ಮನುಷ್ಯನು ಯೇಸುವಿನ ಮೂಲಕ ಕ್ಷಮಾಪಣೆಯನ್ನು ಹೊಂದಿ ಪರಿಪೂರ್ಣನಾಗುತ್ತಾನೆ ಮತ್ತು ಕ್ರಿಸ್ತನ

ನೀತಿವಂತಿಕೆಯನ್ನು ಹೊಂದಿಕೊಳ್ಳುತ್ತಾನೆ.

(7) ಒಂದು ವೇಳೆ ನಾವು ನಮ್ಮ ಪಾಪಗಳಿಗಾಗಿ ಆತನಿಗೆ ಆದ ಗಾಯಗಳನ್ನು ನಮ್ಮ ದ್ರೋಹಗಳಿಗಾಗಿ ಆತನು ಜಜ್ಜಲ್ಪಟ್ಟಿರುವದನ್ನು ಮತ್ತು ನಾವು ಅನುಭವಿಸಬೇಕಾದ ದಂಡನೆಯನ್ನು ಅವನು ಅನುಭವಿಸಿರುವದನ್ನು ಸ್ವೀಕರಿಸುವಾಗ ಆತನ ಬಾಸುಂಡೆಗಳ ಹಿಂಸೆ ನಮ್ಮ ಆತ್ಮಕ್ಕೆ  ಏನನ್ನು ತರುತ್ತದೆ?

ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು. (ಯೆಶಾಯ 53:5).

ಸಾದ್ಯವಾದರೆ ಕ್ರಿಸ್ತನ ಹಿಂಸೆಯ ಸ್ವರೂಪ ಮತ್ತು ಶ್ರೇಣಿಯನ್ನು ಕಲ್ಪಿಸಿಕೊಳ್ಳಿರಿ. ಮಾನವೀಯತೆಯಲ್ಲಿ ಈ ಕಷ್ಟಾನುಭವವು ಕ್ರಿಸ್ತನು ಯಾರೆಲ್ಲರಿಗಾಗಿ ಸತ್ತನೋ ಅವರ ಮೇಲೆ ದೇವರ ಕೋಪದ ಸುರಿಸುವಿಕೆಯನ್ನು ತಡೆಗಟ್ಟುವದಕ್ಕಾಗಿ, ಹೌದ ಸಭೆಗೆ ಈ ದೊಡ್ಡ ಬಲಿದಾನ ನಿತ್ಯತ್ವದುದ್ದಕ್ಕೂ ಅಪೇಕ್ಷಿತ ಫಲವನ್ನು ಉಂಟು

ಮಾಡುತ್ತದೆ, ನಾವು ಅವಳ ಉಲ್ಲಂಘನೆಗಳನ್ನು ಸಂಖ್ಯೆಯಲ್ಲಿ ಎಣಿಸಬಹುದೋ? ಅಸಾಧ್ಯ. ಹಾಗಿದ್ದ ಮೇಲೆ ಕ್ರಿಸ್ತನು ತನ್ನ ಸಭೆಗಾಗಿ ಜಾಮೀನುಗಾರನ ಸ್ಥಾನದಲ್ಲಿ ನಿಲ್ಲುವಾಗ ತಾಳಿಕೊಂಡಿರುವದರ ಕಲ್ಪನೆಯನ್ನು  ಯಾರು ಮಾಡಿಕೊಳ್ಳಲು ಸಾಧ್ಯ?

[ಆತನು] ಒಬ್ಬನೇ ಒಬ್ಬನು ಪಾಪಿಯ ಪರವಾಗಿ ಏಟುಗಳನ್ನು ಸಹಿಸಲು ಸಾಧ್ಯ ಯಾಕಂದರೆ ಆತನ ಮುಗ್ಧತೆ ನಾಶವಾಗಿರಲಿಲ್ಲ. ದೇವರ ಒಬ್ಬನೇ ಮಗನ ಬಲಿದಾನದಲ್ಲಿ ಅದ್ಭುತವಾದ ದೈವೀಕ ನ್ಯಾಯ ಮತ್ತು ಪರಿಶುದ್ಧತೆಯು ಪ್ರದರ್ಶಿಸಲ್ಪಟ್ಟಿದೆ.

ತನ್ನ ಸ್ವಂತ ಜೀವಿತವನ್ನೆ ಪಣವಾಗಿಡುವದರ ಮೂಲಕ ಭೂಮಿಯ ಮೇಲಿರುವ ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಗೆ ತನ್ನನ್ನು ತಾನು ಜವಾಬ್ದಾರನನ್ನಾಗಿಸಿಕೊಂಡಿದ್ದಾನೆ. ಆತನು ದೇವರ ಸಾನಿದ್ಯದಲ್ಲಿ ನಿಂತು “ತಂದೆಯೇ ಆ ಆತ್ಮದ ಅಪರಾಧವನ್ನು ನಾನು ನನ್ನ ಮೇಲೆ ತೆಗೆದುಕೊಳ್ಳುತ್ತೇನೆ. ಇದರ ಅರ್ಥ ಅವನು ಅದನ್ನು ಸಹಿಸುವುದಾದರೆ ಅದು ಅವನಿಗೆ ಮರಣ. ಒಂದುವೇಳೆ ಅವನು ಪಶ್ಚಾತ್ತಾಪಪಟ್ಟರೆ ಕ್ಷಮಿಸಲ್ಪಡುತ್ತಾನೆ. ನನ್ನ ರಕ್ತವು ಅವನನ್ನು ಸಕಲ ಪಾಪಗಳಿಂದ ಶುದ್ಧೀಕರಿಸುತ್ತದೆ. ನಾನು

ನನ್ನ ಜೀವವನ್ನು ಲೋಕದ ಪಾಪಗಳಿಗಾಗಿ ನೀಡಿದ್ದೇನೆ.

(8) ನಾವು ಎಲ್ಲಾ ಅನೀತಿಯಿಂದ ಶುದ್ಧರಾಗಬೇಕಾದರೆ ಮತ್ತು ಆತನ ವಸ್ತ್ರದಿಂದ ಹೊದಿಸಲ್ಪಡಬೇಕಾದರೆ ನಾವು ಮಾಡಬೇಕಾದ ಪಾತ್ರವೇನು?

ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು (1ಯೋಹಾನ 1:9).

ನಾವು ಪಾಪಿಗಳು ಮತ್ತು ಮಾಡದವರು ಆಗಿದ್ದೇವೆ ಆದರೆ ಈ ಹಂತದಲ್ಲಿ ನಿಮಗೆ ರಕ್ಷಕನ ಅಗತ್ಯತೆ ಇದೆ. ನಿಮ್ಮಲ್ಲಿ ಅರಿಕೆಮಾಡುವ ಪಾಪಗಳಿದ್ದಲ್ಲಿ ತಡಮಾಡಬೇಡಿರಿ. ಈ ಕ್ಷಣಗಳು ಅಮೂಲ್ಯ ಕ್ಷಣಗಳಾಗಿವೆ. “ನಾವು ನಮ್ಮ ಪಾಪಗಳನ್ನು ಒಪ್ಪಿಕೊಂಡು ಅರಿಕೆ ಮಾಡಿದರೆ ಆತನು ನಂಬಿಗಸ್ತನೂ ನೀತಿವಂತನೂ ಆಗಿರುವದರಿಂದ ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು ಸಕಲ ಅನೀತಿಯನ್ನು ಪರಿಹರಿಸಿ ನಮ್ಮನ್ನು ಶುದ್ಧಿಮಾಡುವನು." (1ಯೋಹಾನ 1:9). ಯಾರು ನೀತಿವಂತಿಕೆಗಾಗಿ ಹಸಿವೆ ಮತ್ತು ಬಾಯಾರಿಕೆಯಿಂದ ಇರುತ್ತಾರೋ ಅವರಿಗೆ ತೃಪ್ತಿಯಾಗುವದು; ಯಾಕಂದರೆ ಯೇಸು ಇದನ್ನು ವಾಗ್ದಾನ ಮಾಡಿದ್ದಾನೆ.

ಅಮೂಲ್ಯ ರಕ್ಷಕ! ಆತನ ಬಾಹುಗಳು ನಮ್ಮನ್ನು ಸ್ವೀಕರಿಸುವದಕ್ಕೆ ತೆರೆದಿವೆ ಮತ್ತು ದೊಡ್ಡ ಹೃದಯ ನಮ್ಮನ್ನು ಆಶೀರ್ವದಿಸಲು ಕಾಯುತ್ತಿದೆ.

ಎಂಥ ವರ್ಣಿಸಲಶಕ್ಯವಾದ ಪ್ರೀತಿ ರಕ್ಷಕನು ಮನುಷ್ಯರ ಮಕ್ಕಳಾದ ನಮ್ಮೆಡೆಗೆ ತೋರಿಸಿದ್ದಾನೆ! ಆತನು ನಮ್ಮ ಪಾಪದ ಮುದ್ರೆಯನ್ನು ತೆಗೆದುಹಾಕುವದು ಮಾತ್ರವಲ್ಲ ಆತನು ನನ್ನ ಆತ್ಮವನ್ನು ಶುದ್ಧೀಕರಿಸುತ್ತಾನೆ ಮತ್ತು ಪರಿಶುದ್ಧಗೊಳಿಸುತ್ತಾನೆ, ತನ್ನ ಸ್ವಂತ ನೀತಿವಂತಿಕೆಯ ವಸ್ತ್ರದಿಂದ ನನ್ನನ್ನು ಹೊದಿಸುತ್ತಾನೆ, ಅದು ಕಳಂಕ ರಹಿತವಾದದ್ದು ಪರಲೋಕದ ನೂಲಿನಿಂದ ನೇಯಲ್ಪಟ್ಟದ್ದು. ಆತನು ಪಾಪಿಯ ಮೇಲಿರುವ ಶಾಪವನ್ನು ಮಾತ್ರ ತೆಗೆದುಹಾಕಲಿಲ್ಲ ಬದಲಾಗಿ ಅವನನ್ನು ತನ್ನೊಂದಿಗೆ ಒಂದಾಗಿಸಿಕೊಳ್ಳುತ್ತಾನೆ. ಅವನ ಮೇಲೆ ತನ್ನ ನೀತಿವಂತಿಕೆಯ ಪ್ರಕಾಶದ ಕಿರಣಗಳನ್ನು ಪ್ರತಿಫಲಿಸುತ್ತಾನೆ. ಅವನು ಪರಲೋಕದಲ್ಲಿ ದೇವರ ಪ್ರಿಯ ಮಗನಾಗಿ ಸ್ವಾಗತಿಸಲ್ಪಡುತ್ತಾನೆ. ಬಿದ್ದು ಹೋದ ಮನುಷ್ಯನು ಪಶ್ಚಾತ್ತಾಪ ಮತ್ತು ನಂಬಿಕೆಯ ಮೂಲಕ ಎಂಥ ಮಹಿಮೆಯನ್ನು ಹೊಂದಿಕೊಳ್ಳುತ್ತಾನೆ. ದೇವರ ಬಳಿಗೆ ಹಿಂತಿರುಗಿ ಬರುತ್ತಾನೆ.

(9) ಕ್ರಿಸ್ತನು ತನ್ನ ಪ್ರತಿಯೊಂದು "ಕುರಿಯನ್ನು" ಹೇಗೆ ಕರೆಯುತ್ತಾನೆ ಅದು

ಪ್ರತಿಯೊಂದರ ಕುರಿತು  ಆತನ ಪ್ರೀತಿ ಮತ್ತು ಕಾಳಜಿಯನ್ನು ಪ್ರಕಟಿಸುತ್ತದೆ ?

ಬಾಗಲು ಕಾಯುುವವನು ಅವನಿಗೆ ಬಾಗಲನ್ನು ತೆರೆಯುತ್ತಾನೆ, ಕುರಿಗಳು ಅವನ ಸ್ವರಕ್ಕೆ ಕಿವಿಗೊಡುತ್ತವೆ. ಅವನು ಸ್ವಂತ ಕುರಿಗಳನ್ನು ಹೆಸರು ಹೇಳಿ ಕರೆದು ಒಳಗೆ ಬಿಡುತ್ತಾನೆ. (ಯೋಹಾನ 10:3) ತನಗಾಗಿ ಮಾತ್ರ ರಕ್ಷಕನು ಸತ್ತನು ಎಂಬಂತೆ ಪ್ರತಿಯೊಂದು ಆತ್ಮವು ಯೇಸುವಿಗೆ ತಿಳಿದಿದದೆ ಪ್ರತಿಯೊಬ್ಬರ ವೇದನೆ ಆತನ  ಹೃದಯವನ್ನು ಸ್ಪರ್ಶಿಸುತ್ತದೆ. ಸಹಾಯಕ್ಕಾಗಿ ಕೂಗುವಾಗ ಆತನ ಕಿವಿಯನ್ನು ತಲುಪುತ್ತದೆ. ಆತನು ಎಲ್ಲಾ ಮನುಷ್ಯರನ್ನು ತನ್ನ ಕಡೆಗೆ ಸೆಳೆದುಕೊಳ್ಳುವದಕ್ಕಾಗಿ ಬಂದನು, ಆತನು ಅವರನ್ನು “ನನ್ನನ್ನು ಹಿಂಬಾಲಿಸು” ಎಂದು ಕರೆಯುತ್ತಿದ್ದಾನೆ ಮತ್ತು ಅವರು ಆತನ ಬಳಿಗೆ ಬರುವಂತೆ ಸೆಳೆಯಲು ಆತನ ಆತ್ಮವು ಅವರ ಹೃದಯಗಳ ಮೇಲೆ ಚಲಿಸುತ್ತದೆ. ಅನೇಕರು ಯೇಸುವಿನ ಬಳಿಗೆ ಬರುವದನ್ನು ನಿರಾಕರಿಸುತ್ತಾರೆ. ಯೇಸುವಿಗೆ ಅವರು ಯಾರು ಎಂದು ತಿಳಿದದೆ, ಯಾರು ಸಂತೋಷದಿಂದ ತನ್ನ ಕರೆಯನ್ನು ಆಲಿಸುತ್ತಾರೆ ಮತ್ತು ತನ್ನ ಪೋಷಣೆಯ ಅಡಿಯಲ್ಲಿ ಬರುವದಕ್ಕೆ ಸಿದ್ಧರಾಗಿದ್ದಾರೆ ಎಂದು ಸಹ ಆತನಿಗೆ ಗೊತ್ತು. ಆತನು ಹೇಳುತ್ತಾನೆ, “ನನ್ನ ಕುರಿಗಳು ನನ್ನ

ಸ್ವರಕ್ಕೆ ಕಿವಿಗೊಡುತ್ತವೆ, ನನ್ನನ್ನು ತಿಳಿದಿವೆ ಮತ್ತು ಅವು ನನ್ನನ್ನು ಹಿಂಬಾಲಿಸುತ್ತವೆ." ಆತನು ನಮ್ಮಲ್ಲಿ ಪ್ರತಿಯೊಬ್ಬರಿಗೋಸ್ಕರ ಈ ಲೋಕದಲ್ಲಿ ಮತ್ತೊಂದಿಲ್ಲ ಎನ್ನುವ ರೀತಿಯಲ್ಲಿ ಚಿಂತಿಸುತ್ತಾನೆ.

"ಪೌರಾತ್ಯ ಕುರುಬರು ತಮ್ಮ ಕುರಿಗಳನ್ನು ನಡೆಸುವದಿಲ್ಲ. ಆತನು ಒತ್ತಡ ಅಥವಾ ಭಯವನ್ನು ಅವಲಂಬಿಸುವದಿಲ್ಲ. ಆದರೆ ಹೋಗುವ ಪೂರ್ವದಲ್ಲಿ, ಆತನು ಅವುಗಳನ್ನು ಕರೆಯುತ್ತಾನೆ. ಅವು ಆತನ ಸ್ವರವನ್ನು ಬಲ್ಲವು ಆತನ ಕರೆಗೆ ವಿಧೇಯರಾಗುತ್ತವೆ. ಅದರಂತೆ ರಕ್ಷಕನಾದ ಕುರುಬನು ತನ್ನ ಕುರಿಗಳೊಂದಿಗೆ ಇರುತ್ತಾನೆ. ವೇದವಾಕ್ಯವು ಹೇಳುತ್ತದೆ, "ಕುರುಬನು ಕುರಿಹಿಂಡನ್ನು ಹೇಗೋ ಹಾಗೆ ನೀನು ಮೋಶೆ ಆರೋನರ ಮುಖಾಂತರ ನಿನ್ನ ಪ್ರಜೆಯನ್ನು ಕರೆದೊಯ್ದುದಿ." ಪ್ರವಾದಿಗಳ ಮೂಲಕ, ಯೇಸು ಪ್ರಕಟಿಸುತ್ತಾನೆ, "ನಾನು ನಿನ್ನನ್ನು ಪ್ರೀತಿಸಿರುವದು ಶಾಶ್ವತ ಪ್ರೇಮದಿಂದಲೇ. ಆದಕಾರಣ ನಿನ್ನನ್ನು ಮಮತೆಯಿಂದ ಸೆಳೆದುಕೊಂಡಿದ್ದೇನೆ."ಮಾನವರಿಗೆ ತಕ್ಕ ಮೂಗುದಾರದಿಂದ ಅಂದರೆ ಮಮತೆಯ ಹಗ್ಗದಿಂದ." ಕೀರ್ತನೆ

77:20; ಯೆರೆಮೀಯ 31:3; ಹೋಶೇಯ 11:4.

ಕ್ರಿಸ್ತನ ಶಿಷ್ಯರು ಆತನನ್ನು ಹಿಂಬಾಲಿಸುವದು ಶಿಕ್ಷೆಯ ಭಯದಿಂದ ಅಲ್ಲ ಅಥವಾ ನಿತ್ಯಜೀವದ ಬಹುಮಾನದ ನಿರೀಕ್ಷೆಯಿಂದಾಗಿ ಅಲ್ಲ. ಅವರು ರಕ್ಷಕನ ಅದ್ವಿತೀಯ ಪ್ರೀತಿಯನ್ನು, ಇಹಲೋಕದಲ್ಲಿ  ಆತನ ಯಾತ್ರೆಯುದ್ದಕ್ಕೂ ಬೇತ್ಲೇಹೇಮಿನ ಗೋದಲಿಯಿಂದ ಕಲ್ವಾರಿ ಕ್ರೂಜೆಯ ವರೆಗೆ ಪ್ರಕಟಗೊಂಡಿರುವದನ್ನು ನೋಡಿದ್ದಾರೆ, ಮತ್ತು ಆತನ ಆ ದೃಶ್ಯವೇ ಆಕರ್ಷಿಸುತ್ತದೆ. ನೋಡುವವರ ಹೃದಯದಲ್ಲಿ ಪ್ರೀತಿ ಜಾಗ್ರುತಗೊಳ್ಳುತ್ತದೆ. ಅವರು ಆತನ ಸ್ವರವನ್ನು ಆಲಿಸುತ್ತಾರೆ ಮತ್ತು ಅವರು ಆತನನ್ನು ಹಿಂಬಾಲಿಸುತ್ತಾರೆ.

ದೇವರು ನನ್ನನ್ನು ಪ್ರೀತಿಯಿಂದ, ತಾಳ್ಮೆಯಿಂದ, ಕರುಣೆಯಿಂದ ಮತ್ತು ವಿವೇಚನೆಯ ಮಾರ್ಗದಲ್ಲಿ ಸೆಳೆಯುತ್ತಾನೆ ಮತ್ತು ಸೈತಾನನ ವಿಧಾನವಾದ ಒತ್ತಾಯವನ್ನು ಆತನು ಉಪಯೋಗಿಸುವದಿಲ್ಲ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ದೇವರ ನೀಡಿರುವ ಕ್ರಿಸ್ತನ ಬಹುಮಾನದ ಮೂಲಕ ನನ್ನ ರಕ್ಷಣೆಯ ಬಂಧಮುಕ್ತತೆಯ ಬೆಲೆ ನೀಡಲಾಯಿತು

ಅದಕ್ಕಾಗಿ ನಾನು ಬಹಳ ಕೃತಜ್ಞಳಾಗಿದ್ದೇನೆ. ನಾನು ಈ ಆಶ್ಚರ್ಯಕರವಾದ ಶಾಶ್ವತವಾದ ಬಾಧ್ಯತೆಯನ್ನು ಸ್ವೀಕರಿಸುತ್ತೇನೆ, ಆತನು ಅದನ್ನು ಸ್ವೀಕರಿಸುವವರೆಲ್ಲರಿಗೂ ಧಾರಾಳವಾಗಿ ನೀಡುತ್ತಾನೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ನಾನು, ದೇವರ ಕೃಪೆಯಿಂದ ಹೆಮ್ಮೆ, ಸ್ವಾರ್ಥದಿಂದ  ತಿರುಗಿಕೊಳ್ಳುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ಆತನು ಈ ಜೀವಿತದಲ್ಲಿ ಮತ್ತು ಬರಲಿಕ್ಕಿರುವ ಜೀವಿತದಲ್ಲಿ ನೀಡಲಿರುವ ಆಶೀರ್ವಾದಗಳನ್ನು ಮತ್ತು ರಾಜಯೋಗ್ಯ ಬಹುಮಾನಗಳನ್ನು ಸ್ವೀಕರಿಸುತ್ತೇನೆ,

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ಕ್ರಿಸ್ತನ ಪ್ರೀತಿಯ ವೈಯಕ್ತಿಕ ಕರೆಯನ್ನು ನಾನು ಆಲಿಸುತ್ತೇನೆ ಮತ್ತು ನನ್ನ ಜೀವಿತವನ್ನು ವೇದಿಯ ಮೇಲೆ ಸಜೀವ ಯಜ್ಞವಾಗಿ ಸಮರ್ಪಿಸಲು ಆಯ್ಕೆ ಮಾಡಿದ್ದಾರೆ. ನಾನು ನನ್ನ ಜೀವಿತದಲ್ಲಿ ಆತನ ಚಿತ್ತವನ್ನು ಧಾರಾಳವಾಗಿ ಜೀವಿಸಲು ಕೇಳಿಕೊಳ್ಳುತ್ತೇನೆ ಮತ್ತು ಅನುಮತಿಸುತ್ತೇನೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ



ಪಾಠ 9

ಕ್ರೂಜೆಯನ್ನು ದೃಷ್ಟಿಸುವದು

(1) ವೇದವಾಕ್ಯವು ನಮ್ಮ ಮೇಲಿನ ಮಹಾ ಪ್ರೀತಿಯಿಂದಾಗಿ ಯೇಸು ಹೊಂದಿದ ಉಪಚಾರವನ್ನು ಹೇಗೆ ವರ್ಣಿಸುತ್ತದೆ?

ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು, ಬಾಯಿ ತೆರೆಯಲೇ ಇಲ್ಲ. (ಯೆಶಾಯ 53:7)

ಕ್ರಿಸ್ತನನ್ನು ನೋಡುವಾಗ, ಆತನ ಪ್ರೀತಿ ಸಮಾಂತರವಾದದ್ದಲ್ಲ, ಆತನು ಅಪರಾಧಿಯಾದ ಪಾಪಿಯ ಸ್ಥಾನವನ್ನು ತೆಗೆದುಕೊಂಡನು ಮತ್ತು ಕಳಂಕವಿಲ್ಲದ ಆತನ ನೀತಿವಂತಿಕೆಯನ್ನು ಆರೋಪಿಸಿದರು. ಪಾಪಿಯು ತನ್ನ ಬದಲಾಗಿ ಪಾಪದ ಶಾಪದಿಂದ ರಕ್ಷಕನು ಕ್ರೂಜೆಯ ಮೇಲೆ

ಸಾಯುವದನ್ನು ನೋಡುವಾಗ, ಕ್ಷಮಿಸುವ ಆತನ ಪ್ರೀತಿಯನ್ನು ದೃಷ್ಟಿಸುವಾಗ ಅವನ ಹೃದಯದಲ್ಲಿ ಪ್ರೀತಿ ಜಾಗ್ರತವಾಗುತ್ತದೆ. ಪಾಪಿಯು ಕ್ರಿಸ್ತನನ್ನು ಪ್ರೀತಿಸುತ್ತಾನೆ, ಯಾಕಂದರೆ ಕ್ರಿಸ್ತನು ಮೊದಲು ಅವನನ್ನು ಪ್ರೀತಿಸಿದ್ದಾನೆ, ಪ್ರೀತಿಯು ಎಲ್ಲಾ ಧರ್ಮಶಾಸ್ತ್ರವನ್ನು ನೆರವೇರಿಸುವಂಥದ್ದಾಗಿದೆ. ಪಶ್ಚಾತ್ತಾಪಪಡುವ ಆತ್ಮವು ದೇವರು "ನಂಬಿಗಸ್ತನು ಮತ್ತು ನಮ್ಮ ಪಾಪಗಳನ್ನು ಕ್ಷಮಿಸುವ ನ್ಯಾಯವಂತನು" ಎಂದು ಅರಿತುಕೊಳ್ಳುತ್ತದೆ. ದೇವರ ಆತ್ಮನು ವಿಶ್ವಾಸಿಯ ಆತ್ಮದಲ್ಲಿ ಕಾರ್ಯಮಾಡುವಾಗ ಅವನನ್ನು ಒಂದು ಹಂತದ ವಿಧೇಯತೆಯಿಂದ ಇನ್ನೊಂದಕ್ಕೆ ಮುನ್ನಡೆಯಲು ಶಕ್ತರನ್ನಾಗಿಸುತ್ತದೆ, ಕ್ರಿಸ್ತನ ಬಲದಿಂದ ದೊಡ್ಡ ಬಲಕ್ಕೆ, ಕೃಪೆಯಿಂದ ಕೃಪೆಗೆ ನಡೆಸುತ್ತದೆ.

ನನ್ನ ತಂದೆಯು ನನ್ನನ್ನು ಪ್ರೀತಿಸಿದ ಮಿತಿಯಿಲ್ಲದ ಪ್ರೀತಿಯಿಂದ ನಿಮ್ಮನ್ನು ಹೆಚ್ಚಾಗಿ ಪ್ರೀತಿಸುತ್ತಾನೆ ಯಾಕಂದರೆ ನಾನು ನಿಮ್ಮನ್ನು ಪ್ರೀತಿಸಿ  ನನ್ನ ಜೀವಿತವನ್ನು ನಿಮ್ಮನ್ನು ವಿಮೋಚಿಸುವದಕ್ಕಾಗಿ ನೀಡಿದ್ದೇನೆ. ಸರಿ ಶಿಷ್ಯರು ತಮ್ಮ ರಕ್ಷಕನು ಅವಮಾನ, ದಂಡನೆ, ಸಂದೇಹ, ಬಿಡಲ್ಪಟ್ಟ ಸ್ಥಿತಿಯನ್ನು

ಸಹಿಸಿಕೊಳ್ಳುವದನ್ನು ನೋಡುವಾಗ ಈ ಪ್ರೀತಿಯನ್ನು ತಿಳಿದುಕೊಂಡರು, ಅವರು ಗೆತ್ಸೇಮನೆ ತೋಟದಲ್ಲಿ ಆತನ ವೇದನೆಯನ್ನು ಮತ್ತು ಕಲ್ವಾರಿ ಶಿಲುಬೆಯಲ್ಲಿ ಆತನ ಮರಣವನ್ನು ನೋಡುವಾಗ. ಈ ಪ್ರೀತಿಯ ಆಳವನ್ನು ಆರೋಗ್ಯವಂತನು ಅಳೆಯಲಾರನು. ಶಿಷ್ಯರು ಗ್ರಹಿಸಿಕೊಳ್ಳುವಾಗ ಅವರ ತಿಳುವಳಿಕೆ ದೇವರ ದೈವೀಕ ಅನುಕಂಪವನ್ನು ಹಿಡಿದುಕೊಳ್ಳುವಾಗ ಅವರು ಮಗನ ಕಷ್ಟಾನುಭವದಲ್ಲಿ ತಂದೆಯ ಕಷ್ಟಾನುಭವಿದೆ ಎಂಬ ಅರ್ಥವನ್ನು ಅರಿತುಕೊಂಡರು.

(2) ಒಂದುವೇಳೆ ನಾವು ಜೀವಿತದ ಕಳವಳಗಳ ಮೇಲೆ ಗಮನವಿಡದಿದ್ದರೆ ಬದಲಾಗಿ ಯೇಸುವನ್ನು ನಮ್ಮ ರಕ್ಷಕನ, ಮಾದರಿ ಮತ್ತು ನಡೆತೆಯ ಮಾದರಿ ಎಂದು ದೃಷ್ಟಿಸುವಾಗ ಆತನು ನಮ್ಮಲ್ಲಿ ಏನನ್ನು ಪ್ರಾರಂಭಿಸುತ್ತಾನೆ ಮತ್ತು ಮುಕ್ತಾಯಗೊಳಿಸುತ್ತಾನೆ?

ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯನ್ನಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ

ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. (ಇಬ್ರಿಯ 12:2).

ಮಕ್ಕಳಾಗಿ ಯಾವಾಗಲೂ ಮೇಲಕ್ಕೆ ದೃಷ್ಟಿಸುತ್ತಾ ಕ್ರಿಸ್ತನ ಮೇಲೆ ನಮ್ಮ ನಂಬಿಕೆಯ ಕಣ್ಣುಗಳನ್ನು ನೆಲೆಯಾಗಿರಿಸುವದು ನಮ್ಮ ಸೌಭಾಗ್ಯವಾಗಿದೆ. ನಾವು ನಿರಂತರವಾಗಿ ಆತನನ್ನು ದೃಷ್ಟಿಸುವಾಗ, ಆತನ ಸಾನಿಧ್ಯದ ಪ್ರಕಾಶ ನಮ್ಮ ಮನಸ್ಸಿನ ಕೋಣೆಗಳಲ್ಲಿ ಹರಿದು ಬರುತ್ತದೆ. ಕ್ರಿಸ್ತನ ಬೆಳಕು ಮನಸ್ಸಿನ ಆಲಯದಲ್ಲಿ ಸಮಾಧಾನವನ್ನು ತರುತ್ತದೆ. ಆತ್ಮವು ಕರ್ತನಲ್ಲಿ ನೆಲೆಯಾಗಿರುತ್ತದೆ. ಎಲ್ಲಾ ಕಳವಳಗಳು ಮತ್ತು ವ್ಯಾಕುಲತೆಗಳು ಯೇಸುವಿಗೆ ಸರ್ಮಪಿಸಲಾಗುತ್ತದೆ. ನಾವು ಆತನನ್ನು ದೃಷ್ಟಿಸುತ್ತಾ ಇರುವಾಗ. ಆತನ ಸ್ವರೂಪವು ನಮ್ಮ ಹೃದಯದಲ್ಲಿ ಕೆತ್ತಲ್ಪಡುತ್ತದೆ ಮತ್ತು ಅದು ದಿನನಿತ್ಯದ ಜೀವಿತದಲ್ಲಿ ಪ್ರಕಟವಾಗುತ್ತದೆ.

ನಾವು ಮಾನವರನ್ನು ನಕಲು ಮಾಡುತ್ತೇವೆ. ಯಾವ ಮನುಷ್ಯನು ನಮ್ಮ ಅಳತೆಗೋಲಾಗುವಷ್ಟು ಜ್ಞಾನಿಯಲ್ಲ. ನಾವು ಪುರುಷ, ಕ್ರಿಸ್ತ ಯೇಸುವನ್ನು ನೋಡಬೇಕು, ಆತನು ನೀತಿವಂತಿಕೆ ಮತ್ತು ಪರಿಶುದ್ಧತೆಯಲ್ಲಿ ಸಂಪೂರ್ಣವಾಗಿ ಪರಿಪೂರ್ಣ ನಾಗಿದ್ದಾನೆ. ಆತನು ನಮ್ಮ

ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿದ್ದಾನೆ. ಅವನು ಪುರುಷನ ಮಾದರಿಯಾಗಿದ್ದಾನೆ ಆತನ ಅನುಭವ ನಾವು ಹೊಂದಿಕೊಳ್ಳ ಬೇಕಾದ ಅನುಭವದ ಅಳತೆಗೋಲಾಗಿದೆ. ಆತನ ಗುಣಲಕ್ಷಣ ನಮ್ಮ ಮಾದರಿಯಾಗಿದೆ. ಹೀಗಿರುವದರಿಂದ ನಮ್ಮ ಮನಸ್ಸನ್ನು ಈ ಜೀವಿತದ ಕಳವಳ ಮತ್ತು ಸಮಸ್ಯೆಗಳಿಂದ ಹೊರಗೆ ತೆಗೆಯೋಣ, ಅವುಗಳನ್ನು ಆತನ ಮೇಲೆ ನೆಲೆಗೊಳಿಸೋಣ, ಆತನನ್ನು ನೋಡುವದರಿಂದ ನಾವು ಆತನ ಸಾರೂಪ್ಯಕ್ಕೆ ಬದಲಾಗಬಹುದು. ನಾವು ಕ್ರಿಸ್ತನನ್ನು ಉತ್ತಮ ಉದ್ದೇಶಕ್ಕಾಗಿ ದೃಷ್ಟಿಸಬಹುದು. ನಾವು ಸುರಕ್ಷಿತವಾಗಿ ಆತನನ್ನು ದೃಷ್ಟಿಸಬಹುದು ಮತ್ತು ಆತನ ಕುರಿತು ಯೋಚಿಸಬಹುದು. ಮಹಿಮೆಯ ನಿರೀಕ್ಷೆಯಾದಾತನು ನಮ್ಮೊಳಗೆ ರೂಪಿಸಲ್ಪಡುತ್ತಾನೆ,

(3) ಕುರಿಮರಿಯ ರಕ್ತ ಮತ್ತು ಆತನ ಧಾರಾಳವಾದ ಕೃಪೆಯ ಮೂಲಕ ನಾವು ಏನನ್ನು ಹೊಂದಿಕೊಳ್ಳುತ್ತೇವೆ ಮತ್ತು ಇದು ಅತ್ಯಂತ ದೊಡ್ಡ ಮುಖ್ಯವಿಷಯ ಇದರ ಮೇಲೆ ನಮ್ಮ ಮನಸ್ಸುಗಳು ನೆಲೆಯಾಗಿರಬೇಕೋ?

ಇಸ್ರಾಯೇಲೇ ಯೆಹೋವನನ್ನು ಮುಂಗಾದಿರು; ಯೆಹೋವನು ಕೃಪಾಸಂಪನನು;

ಪೂರ್ಣವಿಮೋಚನೆಯು ಆತನಿಂದಲೇ ದೊರಕುವದು. (ಕೀರ್ತನೆ 130:7)

ರಕ್ಷಣೆಯ ಯೋಜನೆ, ದೇವರ ನ್ಯಾಯ ಮತ್ತು ಪ್ರೀತಿಯನ್ನು ಪ್ರಕಟಿಸುತ್ತಾ, ಬಿದ್ದುಹೋಗದಿರುವ ಲೋಕಗಳಲ್ಲಿ ಅಲ್ಲದೇ ಕುರಿಮರಿಯ ರಕ್ತದ ಮೂಲಕ ವಿಮೋಚನೆಯನ್ನು ಹೊಂದಲಿ ರುವವರ ಸ್ವಾಮಿದ್ರೋಹದ ವಿರುದ್ಧ ನಿತ್ಯವಾದ ರಕ್ಷಣೋಪಾಯವನ್ನು ಮಾಡುತ್ತದೆ. ನಮ್ಮ ಒಂದೇ ನಿರೀಕ್ಷೆ ಆತನ ಆತನ ರಕ್ತದಲ್ಲಿ ಪರಿಪೂರ್ಣ ವಾದ ವಿಶ್ವಾಸ ಆತನು ಕಟ್ಟಕಡೆ ಯಿಂದ ದೇವರ ಬಳಿಗೆ ಬರುವವರೆಲ್ಲರನ್ನೂ ರಕ್ಷಿಸಲು ಶಕ್ತನಾಗಿದ್ದಾನೆ. ಕಲ್ವಾರಿ ಕ್ರೂಜೆಯಲ್ಲಿ ಕ್ರಿಸ್ತನ ಮರಣ ಓ ಲೋಕದಲ್ಲಿ ನಮಗಿರುವ ಒಂದೇ ನಿರೀಕ್ಷೆ ಮತ್ತು ಅದು ಬರಲಿಕ್ಕಿರುವ ಲೋಕದಲ್ಲಿ ನಮ್ಮ ಮುಖ್ಯವಿಷಯವಾಗಿದೆ. ಓ ನಾವು ಆತನ ಪ್ರಾಯಶ್ಚಿತ್ತದ ಬೆಲೆಯನ್ನು ನಾವು ಗ್ರಹಿಸಲಾರೆವು! ಒಂದುವೇಳೆ ನಾವು ಹಾಗೆ ಮಾಡಿದ್ದಲ್ಲಿ, ನಾವು ಅದರ ಕುರಿತಾಗಿ ಬಹಳವಾಗಿ ಮಾತಾಡುತ್ತೇವೆ. ತನ್ನ ಪ್ರಿಯ ಮಗನಲ್ಲಿ ಆತನ ಬಹುಮಾನ ಆತನ ಗ್ರಹಿಸಲಶಕ್ಯವಾದ ಪ್ರೀತಿಯ ವ್ಯಕ್ತಪಡಿಸುವಿಕೆಯಾಗಿದೆ. ತನ್ನ ಧರ್ಮಶಾಸ್ತ್ರದ ಗೌರವವನ್ನು ಕಾಯ್ದುಕೊಳ್ಳಲು ಇದು ಕಟ್ಟಕಡೆಯದಾಗಿದೆ. ಅದು ಇನ್ನೂ

ಪಾಪಿಯನ್ನು ರಕ್ಷಿಸುತ್ತದೆ. ಮನುಷ್ಯನು ವಿಮೋಚನೆಯ ಮುಖ್ಯ ವಿಷಯವನ್ನು ಅದ್ಯಯನ ಮಾಡುವದಿಲ್ಲ? ಇದು ಮಾನವನ ಮನಸ್ಸನ್ನು ತೊಡಗಿಸುವ ಅತ್ಯಂತ  ದೊಡ್ಡ ವಿಷಯವಾಗಿದೆ. ಒಂದುವೇಳೆ ಕ್ರೂಜೆಯ ಮೇಲೆ ಪ್ರದರ್ಶಿಸಿದ ಕ್ರಿಸ್ತನ ಪ್ರೀತಿಯನ್ನು ಅವಲೋಕಿಸುವುದಾದರೆ, ಅವರ ನಂಬಿಕೆ ಆತನು ಸುರಿಸಿದ ರಕ್ತದ ಒಳ್ಳೇಯತನವನ್ನು ಸರಿಯಾಗಿ ತಿಳಿದುಕೊಳ್ಳಲು ಬಲಗೊಳ್ಳುತ್ತದೆ ಮತ್ತು ಅವರು ಶುದ್ಧರಾಗಿ ಮತ್ತು ಪಾಪದಿಂದ ರಕ್ಷಣೆ ಹೊಂದುತ್ತಾರೆ.

(4) ಆತನು ನಿಸ್ವಾರ್ಥದಿಂದ ಮತ್ತು ಸ್ವ-ಇಚ್ಛೆಯಿಂದ ನಮ್ಮ ದೈವೀಕ ಪ್ರತಿನಿಧಿ ಸಾಯುವಾಗ. ಕ್ರೂಜೆಯ ಮೇಲೆ ಕ್ರಿಸ್ತನು ಪ್ರದರ್ಶಿಸಿದ ಆತನ ಪ್ರೀತಿಯ ನಾಲ್ಕು ಮೂಲಭೂತ ಗುಣಲಕ್ಷಣಗಳು ಯಾವವು?

ನೀತಿನ್ಯಾಯಗಳು ನಿನ್ನ ಸಿಂಹಾಸನದ ಅಸ್ತಿವಾರವು;ನಿನ್ನ ಸಾನಿದ್ಯದೂತರು ಪ್ರೀತಿಸತ್ಯತೆಗಳೇ. (ಕೀರ್ತನೆ 89:14).

ನಮ್ಮ ದೈವೀಕ ಪ್ರತಿನಿಧಿಯಾದಾತನು ನ್ಯಾಯದ ಖಡ್ಗವನ್ನು ತನ್ನ ಆತ್ಮಕ್ಕೆ ಸಹಿಸಿಕೊಂಡನು, ನಾವು ನಾಶವಾಗಬಾರದು ನಿತ್ಯಜೀವವನ್ನು ಹೊಂದಬೇಕು ಎಂಬುದಕ್ಕಾಗಿ. ಕ್ರಿಸ್ತನು ಹೇಳುತ್ತಾನೆ, "ನಾನು ತಿರುಗಿ

ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ನನ್ನ ಪ್ರಾಣವನ್ನು ಯಾರೂ ನನ್ನಿಂದ ತೆಗೆಯರು.ನನ್ನಷ್ಟಕ್ಕೆ ನಾನೇ ಅದನ್ನು ಕೊಡುತ್ತೇನೆ; ಅದನ್ನು ಕೊಡುವದಕ್ಕೆ ನನಗೆ ಅಧಿಕಾರ ಉಂಟು, ಅದನ್ನು ತಿರುಗಿ ಪಡೆದುಕೊಳ್ಳುವದಕ್ಕೆ ನನಗೆ ಅಧಿಕಾರ ಉಂಟು." (ಯೋಹಾನ 10:17, 18). ಭೂಮಿಯಲ್ಲಿ ಯಾವ ಮನುಷ್ಯನು ಅಥವಾ ಪರಲೋಕದ ದೇವದೂತನು ಪಾಪದ ದಂಡನೆಯನ್ನು ತೆತ್ತಿರಲಿಲ್ಲ. ಯೇಸು ಮಾತ್ರ ಒಬ್ಬನೇ ಒಬ್ಬನು ದಂಗೆ ಎದ್ದ ಮನುಷ್ಯನನ್ನು ರಕ್ಷಿಸಿದನು. ಆತನಲ್ಲಿ ದೈವತ್ವ ಮತ್ತು ಮಾನವತ್ವ ಜೊತೆಗೂಡಿದ್ದವು ಮತ್ತು ಇದು ಕಲ್ವಾರಿ ಕ್ರೂಜೆಯಲ್ಲಿ ಪರಿಣಾಮಕಾರಿಯಾದ ಕೊಡುಗೆಯನ್ನು ನೀಡಿತು. ಕ್ರೂಜೆಯಲ್ಲಿ ಕರುಣೆ ಮತ್ತು ಸತ್ಯ ಒಂದನ್ನೊಂದು ಸಂಧಿಸಿದವು, ನೀತಿವಂತಿಕೆ ಮತ್ತು ಸಮಾಧಾನ ಒಂದನ್ನೊಂದು ಮುದ್ದಿಟ್ಟವು.

ನಿಸ್ವಾರ್ಥ ಪ್ರೀತಿಯ ಪ್ರದರ್ಶನ ಯೇಸು ತನ್ನನ್ನೇ ತಾನು ಸ್ವ-ಇಚ್ಛೆಯಿಂದ ಮಾನವಕುಲದ ವಿಮೋಚನೆಗಾಗಿ ನೀಡಿದ್ದು ತಂದೆಯ ಪ್ರೀತಿಗೆ ಇನ್ನೊಂದು ಕಾರಣವನ್ನು ಸೇರಿಸಿದಂತಾಯಿತು. ಜಗದುತ್ಪತ್ತಿಗೆ ಮೊದಲೇ ರಕ್ಷಣೆಯ ಯೋಜನೆ ಸಿದ್ಧವಾಗಿತ್ತು (ಪ್ರಕಟನೆ 13:8).

ಯೇಸುವಿನ ಪುನರುತ್ಥಾನವೂ ಸಹ ಕ್ರೂಜೆಗೆ ಹಾಕುವ ಯೋಜನೆಯಂತೆ ನಿತ್ಯತ್ವದ ಯೋಜನೆಯ ಭಾಗವಾಗಿತ್ತು. ಯೇಸು ಮರಣದ ಸಾಮ್ರಾಜ್ಯದಲ್ಲಿ ಸ್ವಲ್ಪ ಅವಧಿಯವರೆಗೆ ಹಾದು ಹೋಗಬೇಕಾಗಿತ್ತು (ಕೀರ್ತನೆ 16:10; ಅ,ಕೃ. 2:31-32) ಮತ್ತು ಅದರ ನಂತರ ಮಹಿಮೆಹೊಂದಲು ಪುನರುತ್ಥಾನ ಮತ್ತು ಜೀವ (ಯೋಹಾನ 11:25) ಮತ್ತು ಮನುಷ್ಯನ ಮಧ್ಯವರ್ತಿಯಾಗಿ (ಇಬ್ರಿಯ 7:25). ಆತನ ಅವಮಾನದ ಫಲವಾಗಿ ತಂದೆಯು ಆತನನ್ನು ಅತ್ಯುನ್ನತ ಸ್ಥಾನಕ್ಕೆ ಏರಿಸಿ ಮತ್ತು ಎಲ್ಲಾ ಹೆಸರುಗಳಿಗಿಂತ ಶ್ರೇಷ್ಠವಾದ ಹೆಸರನ್ನು ಆತನಿಗೆ ದಯಪಾಲಿಸಿದ್ದಾನೆ (ಫಿಲಿಪ್ಪಿ 2:9).

(5) ನಾವು ಒಂದುವೇಳೆ ಯೋಹಾನನಂತೆ ವಿಮೋಚನೆಯು ಯೋಜನೆಯನ್ನು ಮತ್ತು ಕ್ರೂಜೆಯನ್ನು ಗ್ರಹಿಸಲು ತವಕಪಡುವುದಾದರೆ. ನಾವು ಲೋಕಕ್ಕೆ ಪ್ರಕಟಿಸಲು ಯಾವದರಲ್ಲಿ ಆನಂದವನ್ನು ತೆಗೆದುಕೊಳ್ಳುತ್ತೇವೆ?

ಮರುದಿನ ಯೋಹಾನನು ತನ್ನ ಕಡೆಗೆ ಬರುವ ಯೇಸುವನ್ನು ನೋಡಿ – ಅಗೋ(ಯಜ್ಞಕ್ಕೆ) ದೇವರು ನೇಮಿಸಿದ ಕುರಿ, ಲೋಕದ ಪಾಪವನ್ನು ನಿವಾರಣೆ ಮಾಡುವವನು! (ಯೋಹಾನ 1:29)

ಕ್ರಿಸ್ತನ ಕ್ರೂಜೆಯ ಮೇಲೆ ನಮ್ಮ ಗಮನವನ್ನು ತೀವ್ರಗೊಳಿಸುವಾಗ,

ನಮ್ಮ ಈಡೀ ವ್ಯಕ್ತಿತ್ವವು ಉದಾತ್ತಗೊಳ್ಳುತ್ತದೆ. ರಕ್ಷಕನ ಪ್ರೀತಿಯ ತಿಳುವಳಿಕೆ ಆತ್ಮವನ್ನು ನಿಗ್ರಹಿಸುತ್ತದೆ ಮತ್ತು ಮನಸ್ಸನ್ನು ಸಮಯ ಮತ್ತು ಭಾವನೆಗಳಿಗಿಂತ ಮೇಲಕ್ಕೆ ಎತ್ತುತ್ತದೆ. ಎಲ್ಲಾ ತಾತ್ಕಾಲಿಕ ಕ್ರೂಜೆಯಿಂದ ಪ್ರಕಾಶಿಸುವ ಬೆಳಕಿನ ಅಡಿಯಲ್ಲಿ ಅಂದಾಜು ಮಾಡಿಕೊಳ್ಳುವದನ್ನು ಕಲಿಯೋಣ. ಮನುಷ್ಯನನ್ನು ನಿತ್ಯತ್ವದ ವೈಭವವನ್ನು ಹೊಂದಿಕೊಳ್ಳಲೆಂದು ನಮ್ಮ ರಕ್ಷಕನು ಇಳಿದು ಬಂದು ತಾಳಿದ ಅವಮಾನದ ಆಳವನ್ನು ಅಳೆಯಲು ವಿಶೇಷ ಪ್ರಯತ್ನವನ್ನು ಮಾಡೋಣ. ನಾವು ವಿಮೋಚನೆಯ ಯೋಜನೆಯನ್ನು ಅಧ್ಯಯನ ಮಾಡುತ್ತಿರುವ ಹಾಗೆ, ನಮ್ಮ ಹೃದಯವು ರಕ್ಷಕನ ಎದೆಬಡಿತವನ್ನು ಅನುಭವಿಸಲಿ ಮತ್ತು ಆತನ ಗುಣಲಕ್ಷಣಗಳ ಆಕರ್ಷಣೆಯನ್ನು ಹಿಡಿದಿಟ್ಟುಕೊಳ್ಳಲಿ.

ಕ್ರಿಸ್ತನ ಪ್ರೀತಿ ನಮ್ಮ ಪರಲೋಕವನ್ನು ಸೃಷ್ಟಿಸುತ್ತದೆ. ಆದರೆ ನಾವು ಈ ಪ್ರೀತಿಯ ಕುರಿತು ಹೇಳಲು ಪ್ರಯತ್ನಿಸುವಾಗ ಭಾಷೆ ವಿಫಲವಾಗುತ್ತದೆ ನಾವು ಇಹಲೋಕದಲ್ಲಿ ಆತನ ಜೀವಿತದ ಕುರಿತು ಯೋಚಿಸುತ್ತೇವೆ, ನಮಗಾಗಿ ಆತನ ಬಲಿದಾನ; ನಮ್ಮ ಮಧ್ಯವರ್ತಿಯಾಗಿ ಪರಲೋಕದಲ್ಲಿ ಆತನ ಕಾರ್ಯದ ಕುರಿತು

ಯೋಚಿಸುತ್ತೇವೆ. ಆತನನ್ನು ಪ್ರೀತಿಸುವವರಿಗಾಗಿ ಆತನು ಸಿದ್ಧ ಪಡಿಸುತ್ತಿರುವ ಬಿಡಾರಗಳ ಕುರಿತು ಯೋಚಿಸುತ್ತೇವೆ. ಮತ್ತು ನಾವು ಉದ್ಗರಿಸಬಹುದು, "ಓ ಕ್ರಿಸ್ತನ ಪ್ರೀತಿಯ ಎತ್ತರ ಮತ್ತು ಆಳವೇ! ನಾವು ಕ್ರೂಜೆಯ ಅಡಿಯಲ್ಲಿ ಕಾಲಕಳೆಯುತ್ತಿರುವಾಗ, ನಾವು ದೇವರ ಪ್ರೀತಿಯ ಅಸ್ಪಷ್ಟ ಕಲ್ಪನೆಯನ್ನು ಹೊಂದಿಕೊಳ್ಳುತ್ತೇವೆ ಮತ್ತು ನಾವು ಹೇಳುತ್ತೇವೆ, "ಪ್ರೀತಿ ಇಲ್ಲಿದೆ, ನಾವು ದೇವರನ್ನು ಪ್ರೀಸಿದ್ದೇವೆಂದಲ್ಲ, ಆದರೆ ಆತನು ನಮ್ಮನ್ನು ಪ್ರೀತಿಸಿದ್ದಾನೆ, ಮತ್ತು ತನ್ನ ಮಗನನ್ನು ನಮ್ಮ ಪಾಪಗಳಿಗಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ಕಳುಹಿಸಿದ್ದಾನೆ." ಆದರೆ ಕ್ರಿಸ್ತನ ಕುರಿತು ನಮ್ಮ ಚಿಂತನೆಯಲ್ಲಿ ನಾವು ಕೇವಲ ಮಿತಿಯಿಲ್ಲದ ಪ್ರೀತಿಯ ತುದಿಯಲ್ಲಿ ಸುಳಿದಾಡುತ್ತಿದ್ದೇವೆ , ಆತನ ಪ್ರೀತಿಯು ವಿಶಾಲವಾದ ಸಾಗರವಿದ್ದಂತೆ, ತಳ ಅಥವಾ ಮೇರೆಯಿಲ್ಲದ್ದು.

ಎಲ್ಲಾ ನಿಜ ಶಿಷ್ಯರಲ್ಲಿ ಈ ಪ್ರೀತಿ, ಪವಿತ್ರ ಬೆಂಕಿಯಂತೆ, ಹೃದಯದ ವೇದಿಯ ಮೇಲೆ ಉರಿಯುತ್ತದೆ. ಯೇಸುವಿನ ಮೂಲಕ ಭೂಮಿಯ ಮೇಲೆ ದೇವರ ಪ್ರೀತಿ ಪ್ರಕಟಿಸಲ್ಪಟ್ಟಿದೆ. ಆತನ ಮಕ್ಕಳು ಈ ಭೂಮಿಯ ಮೇಲೆ ದೋಷರಹಿತ ಜೀವಿತದ ಮೂಲಕ ಆತನ ಪ್ರೀತಿ ಪ್ರಕಾಶಿಸುವಂತೆ ಮಾಡಬೇಕು. ಹೀಗೆ ಪಾಪಿಗಳು ಕ್ರೂಜೆಗೆ

ನಡೆಸಲ್ಪಡುತ್ತಾರೆ, ದೇವರ ಕುರಿಮರಿಯನ್ನು ದೃಷ್ಟಿಸಲು.

(6) ಒಂದುವೇಳೆ ನಾವು ಕ್ರಿಸ್ತನನ್ನು ದೃಷ್ಟಿಸಿದ್ದಲ್ಲಿ ಮತ್ತು ಆತನ ಮಹಿಮೆಯನ್ನು, ಆತನ ಸುಂದರವಾದ ಗುಣಲಕ್ಷಣವನ್ನು ಮತ್ತು ಆತನ ಅದ್ವಿತೀಯ ಪ್ರೀತಿಯ ಆಯಾಮಗಳನ್ನು ನೋಡಿದ್ದಲ್ಲಿ ಏನಾಗುತ್ತದೆ?

ನಾವೆಲ್ಲರೂ ಮುಸುಕುತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನು ಸಾರವಾದದ್ದೇ.(2ಕೊರಿಂಥ 3:18).

ಕ್ರಿಸ್ತನನ್ನು ನೋಡಿರಿ, ಆತನ ಗುಣಲಕ್ಷಣದ ಆಕರ್ಷಕ ಒಳ್ಳೇತನವನ್ನು ದೃಷ್ಟಿಸಿರಿ, ಮತ್ತು ದೃಷ್ಟಿಸುವದರ ಮೂಲಕ ನೀವು ಆತನ ಸಾರೂಪ್ಯಕ್ಕೆ ಬದಲಾಗುವಿರಿ. ಕ್ರಿಸ್ತನು ಮತ್ತು ಆತ್ಮದ ಮಧ್ಯದಲ್ಲಿ ಅಡ್ಡಿಯಾಗಿರುವ ಮಂಜು ಉರುಳಿಹೋಗುತ್ತದೆ  ನಾವು

ನಂಬಿಕೆಯಿಂದ ಹಿಂದಕ್ಕೆ ಸೈತಾನನ ನರಕದ ದುಸ್ಥಿತಿಯನ್ನು ನೋಡುತ್ತೇವೆ ಮತ್ತು ದೇವರ ಧರ್ಮಶಾಸ್ತ್ರದಲ್ಲಿ ಆತನ ಮಹಿಮೆಯನ್ನು ಮತ್ತು ಕ್ರಿಸ್ತನ ನೀತಿವಂತಿಕೆಯನ್ನು ನೋಡುತ್ತೇವೆ.

ಸೈತಾನನು ಯೇಸುವನ್ನು ನಮ್ಮಿಂದ ಮರೆಮಾಡಲು ಪ್ರಯತ್ನಿಸುತ್ತಾನೆ ಆತನ ಬೆಳಕಿಗೆ ಗ್ರಹಣಹಿಡಿಯುವಂತೆ ಮಾಡುತ್ತಾನೆ; ನಾವು ಆತನ ಮಹಿಮೆಯ ಕ್ಷಣಿಕ ದರ್ಶನವನ್ನು ಹೊಂದಿದಾಗ. ನಾವು ಆತನೆಡೆಗೆ ಆಕರ್ಷಿತರಾಗುತ್ತೇವೆ. ಪಾಪವು ನಮ್ಮ ದೃಷ್ಟಿಯಿಂದ ಯೇಸುವಿನ ಅದ್ವೀತಿಯ ಆಕರ್ಷಣೆಯನ್ನು ಮರೆಮಾಡುತ್ತದೆ. ಪೂರ್ವಕಲ್ಪಿತ ಅಭಿಪ್ರಾಯಗಳು , ಸ್ವಾರ್ಥತೆ, ಸ್ವ-ನೀತಿವಂತಿಕೆ ಮತ್ತು ದಾಹ ನಮ್ಮ ಕಣ್ಣುಗಳನ್ನು ಕುರುಡಾಗಿಸುತ್ತವೆ, ಇದರಿಂದಾಗಿ ನಾವು ರಕ್ಷಕನನ್ನು ಗುರುತಿಸುವದಿಲ್ಲ. ಓ, ಒಂದುವೇಳೆ ನಂಬಿಕೆಯಿಂದ ದೇವರ ಸಮೀಪಕ್ಕೆ ಬಂದಿದ್ವಲ್ಲಿ. ಆತನು ನಮಗೆ ತನ್ನ ಮಹಿಮೆಯನ್ನು ಪ್ರಕಟಿಸು ತ್ತಿದ್ದನು, ಅದು ಆತನ ಗುಣಲಕ್ಷಣ ವಾಗಿದೆ ಮತ್ತು ದೇವರ ಸ್ತುತಿ ಮಾನವ ಹೃದಯಗಳ ಮೂಲಕ ಹರಿದು ಬರುತ್ತದೆ ಮತ್ತು ಮಾನವ ಸ್ವರದಲ್ಲಿ ಕೇಳಿಬರುತ್ತದೆ. ಆಗ ನಾವು ಎಂದೆಂದಿಗೂ ದೇವರಿಗೆ ವಿರೋಧವಾಗಿ ಪಾಪ ಮಾಡುವದರ ಮತ್ತು ಸಂದೇಹ ಮತ್ತು ಅಪನಂಬಿಕೆಯ ಮಾತುಗಳನ್ನು

ಮಾತಾಡುವದರ ಮೂಲಕ ಸೈತಾನನಿಗೆ ಮಹಿಮೆಯನ್ನು ಸಲ್ಲಿಸುವದನ್ನು ಬಿಟ್ಟುಬಿಡುತ್ತೇವೆ. ನಾವು ಇನ್ನೆಂದಿಗೂ ಎಡುವುದಿಲ್ಲ, ಗುಣುಗುಟ್ಟುವದಿಲ್ಲ ಮತ್ತು ಶೋಕಿಸುವದಿಲ್ಲ ಮತ್ತು ದೇವರ ವೇದಿಯನ್ನು ನಮ್ಮ ಕಣ್ಣೀರಿನಿಂದ ಮುಚ್ಚಿಬಿಡುತ್ತೇವೆ,

(7) ಪೌಲನಂತೆ, ಯಾವ ಭವ್ಯವಾದ ಮುಖ್ಯವಿಷಯದ ಮೇಲೆ ನಮ್ಮ ತುಟಿಗಳು ಉತ್ಸುಕತೆಯಿಂದ ಮಾತಾಡಬೇಕು ಮತ್ತು ನಮ್ಮ ಮನಸ್ಸುಗಳು ನಿರಂತರವಾಗಿ ನೆಲೆಯಾಗಿರಬೇಕು?

ನಾನು ಶಿಲುಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯದವನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು.(1ಕೊರಿಂಥ 2:2).

ತಪ್ಪಿಹೋದ ಪಾಪಿಗಳಿಗಾಗಿ ಯೇಸು ಮಾಡಿದ ಬಲಿದಾನ, ಧ್ಯಾನಕ್ಕಾಗಿ ಎಂಥ ಮುಖ್ಯ ವಿಷಯವಾಗಿದೆ! “ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು. ನಮ್ಮ ಅಪರಾಧಗಳ ನಿಮಿತ್ತ ಅವನು ಜಜ್ಜಲ್ಪಟ್ಟನು; ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ

ಬಾಸುಂಡೆಗಳಿಂದ ನಮಗೆ ಗುಣವಾಯಿತು." {ಯೆಶಾಯ 53:5}. ನಮ್ಮ ಸಮೀಪಕ್ಕೆ ಬಂದ ಈ ಆಶೀರ್ವಾದವನ್ನು ನಾವು ಹೇಗೆ ಅಂದಾಜು ಮಾಡಬಹುದು? ಯೇಸು ಇನ್ನೂ ಹೆಚ್ಚು ಕಷ್ಟವನ್ನು ಅನುಭವಿಸಬೇಕಾಗಿತ್ತೋ? ಆತನು ನಮಗಾಗಿ ಇನ್ನೂ ಬೆಲೆಯುಳ್ಳ ಆಶೀರ್ವಾದಗಳನ್ನು ಕೊಂಡುಕೊಳ್ಳಬಹುದಿತ್ತೋ? ಆತನು ನಮಗೋಸ್ಕರ ಪರಲೋಕದ ಸಂತೋಷವನ್ನು ವೈಭವವನ್ನು ಬಿಟ್ಟು ಬಂದು ಬಡತನ ಮತ್ತು ಅವಮಾನ , ಕ್ರೂರ ವೇದನೆ ಮತ್ತು ಭಯಂಕರವಾದ ಮರಣವನ್ನು ಅನುಭವಿಸಿದನೆಂಬುದು ಅತ್ಯಂತ ಕಠಿಣ ಹೃದಯಗಳನ್ನು ಕರಗಿಸುವದಿಲ್ಲವೋ? ಆತನು ತನ್ನ ಮರಣ ಮತ್ತು ಪುನರುತ್ಥಾನದ ಮೂಲಕ ನಿರೀಕ್ಷೆಯ ಬಾಗಿಲನ್ನು ತೆರೆಯಲಿಲ್ಲವೋ, ನಮಗೆ ಏನೂ ಗೊತ್ತಿಲ್ಲ, ಆದರೆ ಕತ್ತಲೆಯ ಭಯಂಕರತೆ ಮತ್ತು ಸಂಕಟಗಳ ನಿರಾಶೆ ಇದನ್ನು ಬಿಟ್ಟು. ನಮ್ಮ ಪ್ರಸ್ತುತ ಸ್ಥಿತಿಯಲ್ಲಿ ದಯೆಗೆ ಪಾತ್ರರಾಗಿ ಮತ್ತು ಆಶೀರ್ವದಿಸಲ್ಪಟ್ಟಿದ್ದೇವೆ ನಾವು ಸಂರಕ್ಷಿಸಲ್ಪಟ್ಟ ಆಳವನ್ನು ಅರಿತುಕೊಳ್ಳಲಾರೆವು. ನಮ್ಮ ಅಪರಾಧದ ಆಳವಾಗಿವೆ ಎಂದು ಮತ್ತು ನಮ್ಮ ವಿಪತ್ತುಗಳು ಎಷ್ಟು ದೊಡ್ಡವಾಗಿವೆ ಎಂದು  ನಾವು ಅಳಿಯಲಾರೆವು, ಯೇಸು ತನ್ನ ಕರುಣೆ

ಮತ್ತು ಪ್ರೀತಿಯ ತೋಳುಗಳಿಂದ ನಮ್ಮನ್ನು ಆವರಿಸಿಲ್ಲವೆ ಮತ್ತು ಮೇಲೆಕ್ಕೆ ಎತ್ತಲಿಲ್ಲವೆ.

(8) ಪೌಲನಂತೆ ಕ್ರಿಸ್ತನಲ್ಲಿ ರಕ್ಷಣೆಯನ್ನು ಸ್ವೀಕರಿಸಿದವರು ಯಾವ ಮುಖ್ಯ ವಿಷಯದ ಮೇಲೆ ಉತ್ಸಾಹದಿಂದ ಹೊಗಳಿಕೊಳ್ಳುತ್ತಾರೆ?

ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ, ಆತನ ಮೂಲಕ ಲೋಕವು ಶಿಲುಬೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು. ನಾನು ಶಿಲುಬೆಗೆ ಹಾಕಿಸಿಕೊಂಡು ಲೋಕದ ಪಾಲಿಗೆ ಸತ್ತೆನು.(ಗಲಾತ್ಯ 6:14)

ಕ್ರೈಸ್ತರೆಂದು ಹೇಳಿಕೊಳ್ಳುವ ಅನೇಕರು ಲೌಕಿಕ ಸಾಹಸಗಳಲ್ಲಿ ಉತ್ಸುಕರಾಗುತ್ತಾರೆ ಮತ್ತು ಹೊಸ ಮತ್ತು ಉತ್ಸಾಹಭರಿತವಾದ ಮೋಜುಗಳಲ್ಲಿ ಅವರ ಆಸಕ್ತಿಯು ಜಾಗ್ರುತಗೊಳ್ಳುತ್ತದೆ. ಅದೇ ಸಮಯದಲ್ಲಿ ಅವರು ದೇವರ ವಿಷಯದಲ್ಲಿ  ಭಾವಹೀನರು ಮತ್ತು ಮಂಕಾದವರಂತೆ ಕಾಣುತ್ತಾರೆ, ಇಲ್ಲಿ ಒಂದು ಮುಖ್ಯ ವಿಷಯವಿದೆ ಒಬ್ಬ ಬಡ ಸಂಪ್ರದಾಯವಾದಿ, ಇದೇ ನಿಮ್ಮಲ್ಲಿ ಉತ್ಸಾಹವನ್ನು ಹುಟ್ಟಿಸಲು ಸಾಕಷ್ಟು ಮಹತ್ವದ್ದಾಗಿದೆ. ಇಲ್ಲಿ ನಿತ್ಯವಾದ ಆಸಕ್ತಿ ತೊಡಗಿಸಿಕೊಂಡಿದೆ. ಈ

ಮುಖ್ಯವಿಷಯದ ಮೇಲೆ ಕಂಡ ಪಾಪ ಮೌನವಾಗಿ ಮತ್ತು ಆತುರಗೊಂಡಿರುವದಾಗಿದೆ. ಕಲ್ವಾರಿಯ ದೃಶ್ಯ ಆಳವಾದ ಭಾವನೆಗೆ ಕರೆಕೊಡುತ್ತದೆ. ಈ ವಿಷಯದ ಮೇಲೆ ನಿಮಗೆ ಒಂದುವೇಳೆ ನೀವು ಕೂತೂಹಲವನ್ನು ವ್ಯಕಪಡಿಸಿದರೆ ಅದು ಕ್ಷಮಾರ್ಹವಾಗಿದೆ. ಕ್ರಿಸ್ತನು, ಬಹಳ ಅತ್ಯುತ್ತಮನು, ಬಹಳ ಮುಗ್ದನು ಅಂಥವನು ಇಂಥ ವೇದನಾದಾಯಕವಾದ ಮರಣವನ್ನು ಅನುಭವಿಸಿದನು. ಲೋಕದ ಪಾಪದ ಭಾರವನ್ನು ಹೊತ್ತು, ನಮ್ಮ ಆಲೋಚನೆಗಳು ಮತ್ತು ಕಲ್ಪನೆಗಳು ಎಂದಿಗೂ ಸಂಪೂರ್ಣವಾಗಿ ಗ್ರಹಿಸಲಾರವು . ಇಂಥ ಅದ್ಭುತವಾದ ಪ್ರೀತಿಯ ಉದ್ದ, ಅಗಲ, ಎತ್ತರ, ಆಳ ನಾವು ಅಳೆಯಲಾರೆವು. ರಕ್ಷಕನ ಅದ್ವೀತಿಯ ಪ್ರೀತಿಯ ಆಳದ ಚಿಂತನೆ ಮನಸ್ಸನ್ನು ತುಂಬಬೇಕು, ಆತ್ಮವನ್ನು ಸ್ಪರ್ಶಿಸಬೇಕು ಮತ್ತು ಕರಗಿಸಬೇಕು, ಮಮತೆಯನ್ನು ನವೀಕರಿಸಿ ಉನ್ನತಿಗೇರಿಸಬೇಕು ಮತ್ತು ಸಂಪೂರ್ಣ ನಡತೆಯನ್ನು ಪರಿವರ್ತಿಸಬೇಕು. ಅಪೋಸ್ತಲನ ಭಾಷೆಯಲ್ಲಿ, “ನಾನು ಶಿಲಿಬೆಗೆ ಹಾಕಲ್ಪಟ್ಟವನಾದ ಯೇಸು ಕ್ರಿಸ್ತನನ್ನೇ ಹೊರತು ಬೇರೆ ಯಾವುದನ್ನೂ ತಿಳಿಯವದನಾಗಿ ನಿಮ್ಮಲ್ಲಿ ಇರುವೆನೆಂದು ತೀರ್ಮಾನಿಸಿಕೊಂಡೆನು.” ನಾವು ಸಹ ಕಲ್ವಾರಿಯನ್ನು ನೋಡಿ

ಉದ್ಗರಿಸಬಹುದು, "ನನಗಾದರೋ ನಮ್ಮ ಕರ್ತನಾದ ಯೇಸು ಕ್ರಿಸ್ತನ ಶಿಲುಬೆಯ ವಿಷಯದಲ್ಲಿ ಹೊರತು ಹೆಚ್ಚಳಪಡುವದು ಬೇಡವೇ ಬೇಡ ಆತನ ಮೂಲಕ ಲೋಕವು ಶಿಲುಬೆ ಹಾಕಿಸಿಕೊಂಡು ನನ್ನ ಪಾಲಿಗೆ ಸತ್ತಿತು ನಾನು ಶಿಲುಬೆಗೆ ಹಾಕಿಸಿಕೊಂಡವನಾಗಿ ಲೋಕದ ಪಾಲಿಗೆ ಸತ್ತೆನು."

(9) ನಾವು ಪವಿತ್ರಜೀವಿಗಳೊಂದಿಗೆ ಗ್ರಹಿಸಿಕೊಳ್ಳಲು ಪ್ರಯತ್ನಿಸುತ್ತಾ ನಿತ್ಯತ್ವದಲ್ಲಿ ಹೇಗೆ ಕಳೆಯುತ್ತೇವೆ?

ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಅಗಲ ಉದ್ದ ಎತ್ತರ ಆಳ ಎಷ್ಟೆಂಬುದನ್ನು ದೇವಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ಕ್ರಿಸ್ತನ ಪ್ರೀತಿಯನ್ನು ತಿಳುಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ. ಎಫೆಸ 3:18-19). ಅದು ಕ್ರಿಸ್ತನ ಪ್ರೀತಿ ನಮ್ಮ ಪರಲೋಕವನ್ನು ಸೃಷ್ಟಿಸುತ್ತದೆ. ಈ ಪ್ರೀತಿಯನ್ನು ಹೇಳಲು ನಾವು ಪ್ರಯತ್ನಿಸುವಾಗ ಭಾಷೆ ವಿಫಲವಾಗುತ್ತದೆ. ಇಹಲೋಕದಲ್ಲಿ ಆತನ ಜೀವಿತವನ್ನು, ಆತನು ನಮಗಾಗಿ ಮಾಡಿದ ಬಲಿದಾನವನ್ನು ನಾವು ಯೋಚಿಸುವಾಗ, ನಾವು ನಮ್ಮ

ಮಧ್ಯವರ್ತಿಯಾಗಿ ಆತನ ಕೆಲಸವನ್ನು, ತನ್ನನ್ನು ಪ್ರೀತಿಸುವವರಿಗೋಸ್ಕರ ಆತನು ಸಿದ್ಧಪಡಿಸುತ್ತಿರುವ ಬಿಡಾರಗಳನ್ನು ಯೋಚಿಸುವಾಗ ನಾವು ಸಹ ಉದ್ಗರಿಸಬಹುದು "ಓ ಕ್ರಿಸ್ತನ ಪ್ರೀತಿಯ ಎತ್ತರ ಮತ್ತು ಆಳ!" ನಾವು ಕ್ರೂಜೆಯ ಅಡಿಯಲ್ಲಿ ಸುಳಿದಾಡುತ್ತಿರುವ ಹಾಗೆ ನಾವು ದೇವರ ಕುರಿತು ಮಂಕಾದ ಕಲ್ಪನೆಯನ್ನು ಹೊಂದಿಕೊಳ್ಳುತ್ತೇವೆ ಮತ್ತು ನಾವು ಹೇಳುತ್ತೇವೆ, "ನಾವು ದೇವರನ್ನು ಪ್ರೀತಿಸಿದ್ದರಿಂದಲ್ಲ ಆದರೆ ಆತನು ನಮ್ಮನ್ನು ಪ್ರೀತಿಸಿದ್ದಾನೆ ಮತ್ತು ತನ್ನ ಮಗನನ್ನು ನಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಯಜ್ಞವಾಗಿ ಕಳುಹಿಸಿದ್ದರಲ್ಲಿ ಆತನ ಪ್ರೀತಿ ತೋರಿಬರುತ್ತದೆ" ಕ್ರಿಸ್ತನ ಕುರಿತಾದ ನಮ್ಮ ಚಿಂತನೆಯಲ್ಲಿ ನಾವು ಕೇವಲ ಅಳೆಯಲಶಕ್ಯವಾದ ಪ್ರೀತಿಯ ತುದಿಯಲ್ಲಿ ಸುಳಿದಾಡುತ್ತಾ ಇದ್ದೇವೆ. ಆತನ ಪ್ರೀತಿಯು ವಿಶಾಲವಾದ ಸಾಗರವಿದ್ದಂತೆ ತಳ ಅಥವಾ ಮೇರೆಯಿಲ್ಲದಂಥದ್ದು.

ನಿಜವಾದ ಎಲ್ಲಾ ಶಿಷ್ಯರಲ್ಲಿ ಈ ಪ್ರೀತಿಯು , ಪವಿತ್ರ ಬೆಂಕಿಯಂತೆ , ಹೃದಯವೆಂಬ ವೇದಿಯ ಮೇಲೆ ಸುಡುತ್ತಾಯಿದೆ, ಭೂಮಿಯ ಮೇಲೆ ದೇವರ ಪ್ರೀತಿ ಯೇಸುವಿನ ಮೂಲಕ ಪ್ರಕಟವಾಗಿದೆ. ಭೂಮಿಯ ಮೇಲೆ ಆತನ ಮಕ್ಕಳು ತಮ್ಮ ದೋಷರಹಿತ ಜೀವಿತದ ಮೂಲಕ ಈ ಪ್ರೀತಿ ಪ್ರಕಾಶಿಸುವಂತೆ

ಮಾಡಬೇಕು. ಹೀಗೆ ಪಾಪಿಗಳು ದೇವರ ಕುರಿಮರಿಯನ್ನು ದೃಷ್ಟಿಸಲು ಕ್ರೂಜೆಯ ಬಳಿಗೆ ನಡೆಸಲ್ಪಡುತ್ತಾರೆ.

(10) ವಿಶ್ವದ ಪ್ರತಿಯೊಂದು ಜೀವಿಗಳಿಂದ ನಿತ್ಯತ್ವದುದ್ದಕ್ಕೂ ಅವರು ಕ್ರೂಜೆಯ ವೈಶಿಷ್ಟತೆಯನ್ನು ಗ್ರಹಿಸಲು ಪ್ರಯತ್ನಿಸುತ್ತಿರುವ ಹಾಗೆ ಇರುವ ಸ್ತುತಿಯ ಪದಗಳು ಯಾವವು?

ಕರ್ತನೇ  ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ; ಸಮಸ್ತವನ್ನು ಸೃಷ್ಟಿಸಿದಾತನು ನೀನೇ, ಎಲ್ಲವು ನಿನ್ನ ಚಿತ್ತದಿಂದಲೇ ಇದ್ದವು ನಿನ್ನ ಚಿತ್ತದಿಂದಲೇ ನಿರ್ಮಿತವಾದವು ಎಂದು ಹೇಳುತ್ತಾ ಯುಗಯುಗಾಂತರ ಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುವರು (ಪ್ರಕಟನೆ 4:11).

ಈ ಜೀವಿತದಲ್ಲಿ ನಾವು ಕೇವಲ ವಿಮೋಚನೆಯ ಅದ್ಭುತವಾದ ಮುಖ್ಯವಿಷಯವನ್ನು ತಿಳಿದುಕೊಳ್ಳುತ್ತೇವೆ. ನಮ್ಮ ತಾತ್ಕಾಲಿಕವಾದ ಗ್ರಹಿಕೆಯಿಂದಾಗಿ ನಾವು ಕ್ರೂಜೆಯ ಮೇಲೆ ಕಂಡುಕೊಂಡ ಅವಮಾನ ಮತ್ತು ವೈಭವ, ಜೀವ ಮತ್ತು ಮರಣ, ನ್ಯಾಯ ಮತ್ತು ಕರುಣೆ, ಹೆಚ್ಚು ಶ್ರದ್ಧೆಯಿಂದ ಪರಿಗಣಿಸುತ್ತೇವೆ; ಆದಾಗ್ಯೂ ನಮ್ಮ ಅತ್ಯುನ್ನತ ಬೌದ್ಧಿಕ ಬಲದ ಪೂರ್ಣವೈಶಿಷ್ಟತೆಯನ್ನು

ಗ್ರಹಿಸಿಕೊಳ್ಳಲು ವಿಫಲರಾಗುತ್ತೇವೆ. ವಿಮೋಚನೆಯ ಪ್ರೀತಿಯ ಉದ್ದ ಮತ್ತು ಅಗಲ, ಆಳ ಮತ್ತು ಎತ್ತರ ಇವುಗಳನ್ನು ಮಂಕಾಗಿ ಗ್ರಹಿಸಿಕೊಂಡಿದ್ದೇವೆ. ವಿಮೋಚನೆಯ ಯೋಜನೆಯು ಸಂಪೂರ್ಣವಾಗಿ ತಿಳಿಯದಿರುವಾಗ, ಬಂಧಮುಕ್ತತೆಯ ಬೆಲೆಯನ್ನು ಸಹ ಅವರು ನೋಡಿ ತಿಳಿದುಕೊಂಡಂತೆ ತಿಳಿದುಕೊಂಡಿದ್ದಾರೆ; ಆದರೆ ಅನಂತ ಕಾಲಗಳಿಂದ, ಹೊಸ ಸತ್ಯವು ಆಶ್ಚರ್ಯಪಡುವ ಮತ್ತು ಹರ್ಷಪಡುವ ಮನಸ್ಸಿಗೆ ನಿರಂತರವಾಗಿ ತೆರೆದಿಡಲ್ಪಡುತ್ತಿವೆ. ಈ ಲೋಕದ ವೇದನೆಗಳು ಮತ್ತು ನೋವುಗಳು ಮತ್ತು ಶೋಧನೆಗಳು ಮುಕ್ತಾಯಗೊಂಡಿದ್ದರೂ ಮತ್ತು ಕಾರಣಗಳು ತೆಗೆದು ಹಾಕಲ್ಪಟ್ಟಿದ್ದರು, ದೇವಜನರು ತಮ್ಮ ರಕ್ಷಣೆಗೆ ತೆತ್ತ ಬೆಲೆ ಏನು ಎಂಬ ವಿಶಿಷ್ಟವಾದ, ಜ್ಞಾನ ತಿಳುವಳಿಕೆಯನ್ನು ಹೊಂದಿದ್ದಾರೆ.

(11) ಇಪ್ಪತ್ತನಾಲ್ಕು ಜನ ಹಿರಿಯರು ಮತ್ತು ವಿಮೋಚನೆಯನ್ನು ಹೊಂದಿದ ಎಲ್ಲರೂ ದೇವರ ಸಿಂಹಾಸನದ ಎದುರಿನಲ್ಲಿ ತಮ್ಮ ಸ್ತುತಿಯ ಗೀತೆಯನ್ನು ಹಾಡುತ್ತಿರುವಾಗ ಏನು ಮಾಡುತ್ತಾರೆ?

ಆ ಇಪ್ಪತ್ತನಾಲ್ಕು ಮಂದಿ ಹಿರಿಯರು ಸಿಂಹಾಸನದ ಮೇಲೆ ಕೂತಾತನ ಪಾದಕ್ಕೆ ಬಿದ್ದು ತಮ್ಮ ಕಿರೀಟಗಳನ್ನು

ಸಿಂಹಾಸನದ ಮುಂದೆ ಹಾಕಿ –ಕರ್ತನೇ ನಮ್ಮ ದೇವರೇ, ನೀನು ಪ್ರಭಾವ ಮಾನ ಬಲಗಳನ್ನು ಹೊಂದುವದಕ್ಕೆ ಯೋಗ್ಯನಾಗಿದ್ದೀ... ಎಂದು ಹೇಳುತ್ತಾ ಯುಗಯುಗಾಂತರಗಳಲ್ಲಿಯೂ ಜೀವಿಸುವಾತನನ್ನು ಆರಾಧಿಸುತ್ತಾರೆ. (ಪ್ರಕಟನೆ 4:10).

ಕ್ರಿಸ್ತನ ಕ್ರೂಜೆ ನಿತ್ಯತ್ವದುದ್ದಕ್ಕೂ ವಿಮೋಚನೆ ಹೊಂದಿದವರ ಜ್ಞಾನ ಮತ್ತು ಗೀತೆಯಾಗಿದೆ. ಕ್ರಿಸ್ತನ ಮಹಿಮೆಯಲ್ಲಿ ಅವರು ಕ್ರೂಜಿತನಾದ ಕ್ರಿಸ್ತನನ್ನು ನೋಡುತ್ತಾರೆ. ಅದನ್ನು ಎಂದಿಗೂ ಮರೆಯಲಾರರು ತನ್ನ ಬಲದಿಂದ ಸೃಷ್ಟಿಸಿದಾತನು ಮತ್ತು ಅಸಂಖ್ಯಾತ ಲೋಕಗಳನ್ನು ಎತ್ತಿ ಹಿಡಿದವನು ಅಂತರಿಕ್ಷದ ವಿಶಾಲವಾದ ಕ್ಷೇತ್ರಗಳ ಮೂಲಕ ದೇವರ ಪ್ರಿಯನು, ಪರಲೋಕದ ಸಾರ್ವಭೌಮನಾದವನು, ಕೆರೂಬಿಯರು ಮತ್ತು ಪ್ರಕಾಶಮಾನವಾದ ಸೆರಾಫಿಯರು ಆತನನ್ನು ಆರಾಧಿಸಲು ಹರ್ಷಿಸುವರು –ಬಿದ್ದು ಹೋದ ಮನುಷ್ಯರನ್ನು ಎತ್ತಿ ಹಿಡಿಯಲು ತಮ್ಮನ್ನು ತಗ್ಗಿಸಿಕೊಂಡು; ಪಾಪದ ಅಪರಾಧವನ್ನು ಮತ್ತು ಅವಮಾನವನ್ನು ಆತನು ಸಹಿಸಿದನು ಮತ್ತು ತನ್ನ ತಂದೆಯ ಮುಖದಿಂದ ಮರೆಮಾಡಿಕೊಂಡನು ತಪ್ಪಿಹೋದ ಲೋಕದ ಕೊನೆಯು ವಿಪತ್ತುಗಳ  ಸಹ ಆತನ ಹೃದಯವನ್ನು ಮುರಿದುಹಾಕಿತು ಆತನ ಜೀವಿತವನ್ನು ಕಲ್ವಾರಿ

ಶಿಲುಬೆಯಲ್ಲಿ ಜಜ್ಜಿಹಾಕಿತು, ಎಲ್ಲಾ
ಲೋಕಗಳ ಸೃಷ್ಟಿ ಕರ್ತನು ಎಲ್ಲಾ
ಅದೃಷ್ಟಗಳ ಮಧ್ಯಸ್ಥನು ತನ್ನ
ಮಹಿಮೆಯನ್ನು ಬದಿಗಿರಿಸಿ ಮತ್ತು
ಮನುಷ್ಯನ ಮೇಲಿನ ಪ್ರೀತಿಯಿಂದಾಗಿ
ತನ್ನನ್ನು ತಾನು ಅವಮಾನ ಕ್ಕೆ
ಒಳಪಡಿಸಿದ್ದು ಎಂದಾದರೂ ವಿಶ್ವದಲ್ಲಿ
ಆಶ್ಚರ್ಯ ಮತ್ತು ಆರಾಧನೆ.
ಉತ್ತೇಜಿಸಿದೆಯೋ? ರಕ್ಷಣೆ
ಹೊಂದಿದವರ ಜನಾಂಗಗಳು ಮೇಲಕ್ಕೆತ್ತಿ
ತಮ್ಮ ವಿಮೋಚಕನನ್ನು ನೋಡುವಾಗ
ಮತ್ತು ತಂದೆಯ ಶಾಶ್ವತವಾದ ಮಹಿಮೆ
ಆತನ ಸಾನಿಧ್ಯದಲ್ಲಿ ಪ್ರಕಾಶಿಸುವಾಗ;
ಅವರು ಎಂದೆಂದಿಗೂ ಯಾವಾಗಲೂ
ಇರುವ ಆತನ ಸಿಂಹಾಸನವನ್ನು
ದೃಷ್ಟಿಸುವಾಗ ಮತ್ತು ಆತನ ರಾಜ್ಯಕ್ಕೆ
ಅಂತ್ಯವೇ ಇಲ್ಲ ಎಂದು ತಿಳಿಯುವಾಗ,
ಸ್ವರ್ಗಾನಂದ ಸಂಗೀತ ಅವರಲ್ಲಿ
ಹೊರಹೊಮ್ಮುತ್ತದೆ “ವಧಿತನಾದ
ಕುರಿಯಾದಾತನು ಯೋಗ್ಯನು,
ಯೋಗ್ಯನು ಆತನು
ನಮ್ಮನ್ನು ತನ್ನ ಸ್ವಂತ ಪರಿಶುದ್ಧ
ರಕ್ತದಿಂದ ದೇವರಿಗಾಗಿ
ವಿಮೋಚಿಸಿದ್ದಾನೆ!

ಕ್ರಿಸ್ತನು ದೈಹೀಕವಾಗಿ ಮತ್ತು
ಮಾನಸಿಕವಾಗಿ ಸಹಿಸಿದ ಹಿಂಸೆಯ
ತಿಳುವಳಿಕೆಯಲ್ಲಿ ನಾನು
ಬೆಳೆಯುವಾಗ ನಾನು
ಸಮಾಂತರವಲ್ಲದ ಆತನ

ಪ್ರೀತಿಯನ್ನು ನನಗಾಗಿ ನೋಡುವಾಗ ಆತನು ನನಗಾಗಿ ಅಪರಾಧಿಯಾದ ನನ್ನ ಸ್ಥಾನವನ್ನು ತಾನು ತೆಗೆದುಕೊಂಡನು.

ದುಂಡುಸುತ್ತಿರಿ: ಹೌದು ನಿರ್ಧರಿಸಿಲ್ಲ

ನಾನು ಯಾವಾಗಲೂ ಕ್ರಿಸ್ತನನ್ನು ನೋಡುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ನನ್ನ ನಂಬಿಕೆಯ ಕಣ್ಣುಗಳನ್ನು ಆತನ ಮೇಲೆ ಕೇಂದ್ರೀಕರಿಸಿ ಮತ್ತು ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನು ಆತನೇ ಎಂದು ವಿಶ್ವಾಸವನ್ನು ಇಡುತ್ತೇನೆ.

ದುಂಡುಸುತ್ತಿರಿ: ಹೌದು ನಿರ್ಧರಿಸಿಲ್ಲ

ವಿಮೋಚನೆಯ ಯೋಜನೆಯು ಹೇಗೆ ಸ್ಪಷ್ಟವಾಗಿ ದೇವರ ನ್ಯಾಯ ಮತ್ತು ಪ್ರೀತಿಯನ್ನು ಪ್ರಕಟಿಸುತ್ತದೆ ಎಂದು ನಾನು ಆಶ್ಚರ್ಯಚಕಿತನಾಗಿದ್ದೇನೆ , ನಿಷ್ಪ್ರಯೋಜಕ ಪಾಪಿಯಾದ ನನ್ನನ್ನು ಇಂಥ ದೊಡ್ಡ ಬೆಲೆಯನ್ನು ತೆತ್ತು ವಿಮೋಚಿಸಲು ತನ್ನ ಮಗನನ್ನು ಕಳುಹಿಸಿದ್ದು ನಿಜವಾಗಿಯೂ ಗ್ರಹಿಸಲಾರದ ಪ್ರೀತಿಯ ವ್ಯಕ್ತಪಡಿಸುವಿಕೆಯಾಗಿದೆ. ಕಲ್ವಾರಿಯಲ್ಲಿ ನಾನು ನೀತಿವಂತಿಕೆ, ನ್ಯಾಯ ಮತ್ತು ಕರುಣೆಯ ಪರಿಪೂರ್ಣವಾದ ಸಮಾನತೆಯನ್ನು ನೋಡುತ್ತೇನೆ.

ದುಂಡುಸುತ್ತಿರಿ: ಹೌದು    ನಿರ್ಧರಿಸಿಲ್ಲ

ಪೌಲನಂತೆ ನಾನು ಕ್ರೂಜಿತನಾದ ಯೇಸುವಿನ ಅದ್ಭುತವಾದ ಮುಖ್ಯವಿಷಯದಲ್ಲಿ  ನೆಲೆಗೊಳ್ಳಲು ಬಯಸುತ್ತೇನೆ ಮತ್ತು ಅವರಿಗಾಗಿ ಆತನ ಅದ್ಭುತವಾದ ಪ್ರೀತಿಯನ್ನು ಲೋಕಕ್ಕೆ ಹೇಳುತ್ತೇನೆ.

ದುಂಡುಸುತ್ತಿರಿ: ಹೌದು    ನಿರ್ಧರಿಸಿಲ್ಲ

ನಾನು ನಿತ್ಯತ್ವವನ್ನು ಯೇಸುವಿನ ಪಾದಗಳ ಬಳಿಯಲ್ಲಿ ಯಾವಾಗಲೂ ಹುಡುಕುತ್ತಾ ಮತ್ತು ದೇವರ ಪ್ರೀತಿಯನ್ನು ಗ್ರಹಿಸಿಕೊಳ್ಳಲು ಯಾವಾಗಲೂ ಕಲಿಯುಲು ಪ್ರಯತ್ನಿಸುತ್ತಾ  ಕಳೆಯುವದನ್ನು ಎದುರುನೋಡುತ್ತೇನೆ

ದುಂಡುಸುತ್ತಿರಿ: ಹೌದು    ನಿರ್ಧರಿಸಿಲ್ಲ

ನಾನು ಯೇಸುವಿನ ಪಾದದಗಳ ಬಳಿಯಲ್ಲಿ ಆತನ ಪ್ರೀತಿಯ ಆದರದ ಭಯಕ್ಕಾಗಿ ನನ್ನ ಕಿರೀಟವನ್ನು ಆತನ ಪಾದಗಳ ಬಳಿಯಲ್ಲಿ ಇಡುವ ದಿನಕ್ಕಾಗಿ ಹಂಬಲಿಸುತ್ತಿದ್ದೇನೆ.

ದುಂಡುಸುತ್ತಿರಿ: ಹೌದು    ನಿರ್ಧರಿಸಿಲ್ಲ



ಪಾಠ 10

ಕ್ರಿಸ್ತನ ಪ್ರೀತಿಯ ಬಹುಮಾನ

(1) ನಾವು ವೇದವಾಕ್ಯದಲ್ಲಿ ಸತ್ಯಕ್ಕಾಗಿ ಹುಡುಕುವಾಗ ಮತ್ತು ಕ್ರಿಸ್ತನ ವಿಮೋಚನೆಯ ಪ್ರೀತಿಯನ್ನು ಕಲಿಯುವಾಗ, ಎಮ್ಮಾಹುವಿಗೆ ಹೋಗುವ ಮಾರ್ಗದಲ್ಲಿ ಶಿಷ್ಯರಂತೆ ಫಲಿತಾಂಶವೇನು?

ಆಗ ಅವರು ಒಬ್ಬರಿಗೊಬ್ಬರು - ಆತನು ದಾರಿಯಲ್ಲಿ ನಮ್ಮ ಸಂಗಡ ಮಾತಾಡಿದಾಗಲೂ ಗ್ರಂಥಗಳ ಅರ್ಥವನ್ನು ನಮಗೆ ಬಿಚ್ಚಿ ಹೇಳಿದಾಗಲೂ ನಮ್ಮ ಹೃದಯವು ನಮ್ಮಲ್ಲಿ ಕುದಿಯಿತಲ್ಲವೇ? ಎಂದು ಹೇಳಿಕೊಂಡರು. (ಲೂಕ 24:32)

ಕ್ರಿಸ್ತನಲ್ಲಿ ಮತ್ತು ಕ್ರಿಸ್ತನ ಮೂಲಕ ಸತ್ಯವನ್ನು ಅಳೆಯುವದು ಅಶಕ್ಯವಾದದ್ದು, ವೇದವಾಕ್ಯದ ವಿದ್ಯಾರ್ಥಿಗಳು ಅದರ ಆಳದಲ್ಲಿ ದಿಟ್ಟಿಸಿ ನೋಡುವಾಗ ಅದರಲ್ಲಿ ನೀರುಬುಗ್ಗೆ ಇರುವಂತೆ ಅದು ಅದರ ಆಳವನ್ನು ಹೆಚ್ಚಿಸುತ್ತದೆ ಮತ್ತು ಅಗಲವನ್ನು ವಿಶಾಲಗೊಳಿಸುತ್ತದೋ ಎಂಬಂತೆ ತೋರಿಬರುತ್ತದೆ ಎಂದು ಹೇಳುತ್ತಾರೆ. ದೇವರ ಪ್ರೀತಿಯನ್ನು ಈ ಜೀವಿತದಲ್ಲಿ ನಾವು ಗ್ರಹಿಸಿಕೊಳ್ಳಲಾರೆವು, ನಮ್ಮ ಪಾಪಗಳಿಗೆ ಪ್ರಾಯಶ್ಚಿತ್ತ ಬಲಿಯಾಗಿ ತನ್ನ ಮಗನನ್ನು ಅರ್ಪಿಸಿರುವ ರಹಸ್ಯವನ್ನು, ಈ ಲೋಕದಲ್ಲಿ ನಮ್ಮ ವಿಮೋಚಕನ ಕಾರ್ಯ ನಮ್ಮ ಕಲ್ಪನೆಯನ್ನು ಉನ್ನತ ಮಟ್ಟಕ್ಕೆ ಹಿಗ್ಗಿಸುತ್ತದೆ. ಈ ರಹಸ್ಯವನ್ನು ಅಳೆಯಲು ಈ ಸಾಹಸದಲ್ಲಿ ಮನುಷ್ಯನು ತನ್ನ ಎಲ್ಲಾ ಬೌದ್ಧಿಕ ಬಲವನ್ನು ಹಾಕಿದರು, ಅವನ ಮನಸ್ಸು ಮಂಕಾಗುತ್ತದೆ ಮತ್ತು ಆಯಾಸಗೊಳ್ಳುತ್ತದೆ. ಹೆಚ್ಚು ಪರಿಶ್ರಮಿಗಳಾದ ಸಂಶೋಧಕರು ತಮ್ಮ ಮುಂದೆ ಮಿತಿಯಿಲ್ಲದ ಮೇರೆಯಿಲ್ಲದ ಸಮುದ್ರವನ್ನು ನೋಡುತ್ತಾರೆ.

ಸತ್ಯವನ್ನು ಯೇಸುವಿನಲ್ಲಿ ಹಾಗೆಯೇ ಅನುಭವಿಸಬಹುದು, ಆದರೆ ಎಂದಿಗೂ ವಿವರಿಸಲು ಸಾಧ್ಯವಿಲ್ಲ. ಅದರ ಎತ್ತರ ಮತ್ತು ಅಗಲ ಮತ್ತು ಆಳ ನಮ್ಮ ತಿಳುವಳಿಕೆಗೆ ಮೀರಿದವುಗಳಾಗಿವೆ. ನಾವು

ಕೊನೆಯವರೆಗೆ ನಮ್ಮ ಕಲ್ಪನೆಗೆ ಕೆಲಸವನ್ನು ನೀಡಬಹುದು ಮತ್ತು ನಂತರ ನಾವು ಕೇವಲ ಪ್ರೀತಿಯ ಮಸುಕಾದ  ಮುಖ್ಯಾಂಶಗಳನ್ನು ಕಾಣುತ್ತೇವೆ ಅದು ವಿವರಿಸಲಶಕ್ಯ ವಾಗಿದೆ, ಅದು ಆಕಾಶದಷ್ಟು ಎತ್ತರ, ಆದರೆ ಅದು ಮಾನವ ಕುಲದ ಮೇಲೆಲ್ಲಾ ದೇವರ ರೂಪವನ್ನು ಮುದ್ರೆ ಒತ್ತಲು ಭೂಮಿಗೆ ಬಾಗಿದೆ.

ಆದಾಗ್ಯೂ ನಾವು ಸಾಕ್ಷಿನೀಡಬಹುದಾದ ದೈವೀಕ ಅನುಕಂಪದ ಎಲ್ಲವನ್ನೂ ನೋಡಲು ನಮಗೆ ಸಾಧ್ಯವಾಗಿದೆ. ಇದು ದೀನ ಮುರಿದ ಹೃದಯಕ್ಕೆ ತೆರೆದಿರಿಸಲಾಗಿದೆ. ನಾವು ದೇವರ ಅನುಕಂಪವನ್ನು ನಾವು  ನಮಗಾಗಿ ಆತನ ಬಲಿದಾನವನ್ನು ಮೆಚ್ಚಿಕೊಳ್ಳುವ ಹಂತದ ವರೆಗೆ ಮಾತ್ರ  ಅರ್ಥ ಮಾಡಿಕೊಳ್ಳುತ್ತೇವೆ. ನಾವು ದೀನತೆಯ ಹೃದಯದಿಂದ  ದೇವರ ವಾಕ್ಯವನ್ನು ಹುಡುಕುತ್ತಿರುವ ಹಾಗೆ ವಿಮೋಚನೆಯ ಭವ್ಯವಾದ ಮುಖ್ಯ ವಿಷಯವು ನಮ್ಮ ಸಂಶೋಧನೆಗೆ ತೆರೆಯಲ್ಪಡುತ್ತದೆ. ನಾವು ಅದನ್ನು ನೋಡುವಾಗ ಅದು ಪ್ರಕಾಶದಲ್ಲಿ ಹೆಚ್ಚಾಗುತ್ತದೆ, ಮತ್ತು ನಾವು ಅದನ್ನು ಗ್ರಹಿಸಿಕೊಳ್ಳುವ ಹೆಬ್ಬಯಕೆಯನ್ನು ಹೊಂದುವಾಗ ಅದರ ಎತ್ತರ ಮತ್ತು ಆಳ ಹೆಚ್ಚಾಗುತ್ತದೆ. (2) ಎಲ್ಲಾ ನಿರೀಕ್ಷೆಯು ಕಳೆದುಹೋದಾಗ ಕ್ರಿಸ್ತನು ಯಾವ ಅದ್ಭುತವಾದ ಸಂಗತಿಯನ್ನು

ಮಾಡುತ್ತಾನೆ. ಅದು ಆತನ ಮತ್ತು ತಂದೆಯ ಇಬ್ಬರ ಶ್ರೇಷ್ಠ ಪ್ರೀತಿಯನ್ನು ನಮಗೆ ಪ್ರಕಟಿಸುತ್ತದೆ?

ನಾನು ತಿರುಗಿ ಪಡಕೊಳ್ಳುತ್ತೇನೆಂದು ನನ್ನ ಪ್ರಾಣವನ್ನು ಕೊಡುತ್ತೇನೆ; ಅದರ ನಿಮಿತ್ತವಾಗಿ ತಂದೆಯು ನನ್ನನ್ನು ಪ್ರೀತಿಸುತ್ತಾನೆ. (ಯೋಹಾನ 10:17).

ಉಲ್ಲಂಘನೆ ಮತ್ತು ಪಾಪದ ಪರಿಣಾಮದಿಂದ ಎಲ್ಲಾ ನಿರೀಕ್ಷೆ ಆದಾಮ ಮತ್ತು ಹವ್ವಳರಿಂದ ತೆಗೆದುಹಾಕಲಾಯಿತು, ನ್ಯಾಯವು ಪಾಪಿಯ ಮರಣದ ಬೇಡಿಕೆಯನ್ನಿಟ್ಟಾಗ, ಕ್ರಿಸ್ತನು ತನ್ನನ್ನು ತಾನು ಲೋಕದ ಪಾಪಕ್ಕಾಗಿ ಪ್ರಾಯಶ್ಚಿತ್ತ ಯಜ್ಞವಾಗಿ ನೀಡಿದನು. ಲೋಕವು ದಂಡನೆಗೆ ಗುರಿಯಾಗಿತ್ತು ಕ್ರಿಸ್ತನು ಮನುಷ್ಯನಿಗೆ ಬದಲಿ ವ್ಯವಸ್ಥೆ ಮತ್ತು ಜಾಮೀನಾದನು.

ಬೇರೆ ಯಾರೂ ಅಲ್ಲ ಕೇವಲ ಮನುಷ್ಯಕುಮಾರನು ನಮ್ಮ ವಿಮೋಚನೆಯನ್ನು ನೆರವೇರಿಸ ಬೇಕಾಗಿತ್ತು, ಕೇವಲ ತಂದೆಯ ಎದೆಯಲ್ಲಿದ್ದಾತನು ಆತನನ್ನು ಪ್ರಕಟಿಸಬೇಕಾಗಿತ್ತು, ದೇವರ ಪ್ರೀತಿಯ ಎತ್ತರ ಮತ್ತು ಆಳವನ್ನು ಅರಿತಿರುವಾತನು ಮಾತ್ರ ಅದನ್ನು ಪ್ರಕಟಿಸಬಹುದಾಗಿತ್ತು. ಬಿದ್ದು ಹೋದ ಮನುಷ್ಯನ ಪರವಾಗಿ ಕ್ರಿಸ್ತನು ಮಾಡಿದ

ಅನಂತವಾದ ತ್ಯಾಗ ತಂದೆಯ ಪ್ರೀತಿಯನ್ನು ನಾಶನಕ್ಕೆ ಪಾತ್ರವಾದ ಮಾನವ ಕುಲಕ್ಕೆ ವ್ಯಕ್ತಪಡಿಸ ಬಹುದಾಗಿತ್ತು.

ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು." ಆತನು ಅವನನ್ನು ಕೇವಲ ಮನುಷ್ಯರ ಮಧ್ಯದಲ್ಲಿ ವಾಸಿಸಲು ನೀಡಲಿಲ್ಲ ಬದಲಾಗಿ ಅವರ ಯಜ್ಞವಾಗಿ ಮರಣಹೊಂದಲು. ಅವನು ತನ್ನನ್ನು ತಾನು ಬಿದ್ದು ಹೋದ ಮಾನವ ಕುಲಕ್ಕೆ ನೀಡಿದನು. ಕ್ರಿಸ್ತನು ತನ್ನನ್ನು ತಾನು ಮಾನವ ಕುಲದ ಆಸಕ್ತಿ ಮತ್ತು ಅಗತ್ಯತೆಗಳೊಂದಿಗೆ ಗುರುತಿಸಿಕೊಳ್ಳಬೇಕಾಗಿತ್ತು.

ದೇವರೊಂದಿಗೆ ಒಂದಾಗಿದ್ದವನು ತನ್ನನ್ನು ತಾನು ಮನುಷ್ಯರ ಮಕ್ಕಳೊಂದಿಗೆ ಜೋಡಿಸಿಕೊಂಡನು ಮುರಿದು ಹೋಗಲಾರದ ಬಂಧದ ಮೂಲಕ ಯೇಸು "ಅವರನ್ನು ಸಹೋದರರು ಎಂದು ಕರೆಯಲು ನಾಚಿಕೆಪಡಲಿಲ್ಲ (ಇಬ್ರಿಯ 2:11); ಆತನು ನಮ್ಮ ಯಜ್ಞವಾಗಿದ್ದಾನೆ, ನಮ್ಮ ಮಧ್ಯವರ್ತಿ, ನಮ್ಮ ಸಹೋದರನು ತಂದೆಯ ಸಿಂಹಾಸನದ ಎದುರಿನಲ್ಲಿ ಮಾನವನ ರೂಪವನ್ನು ಧರಿಸಿದ್ದಾನೆ ಮತ್ತು ನಿತ್ಯಕಾಲಕ್ಕೂ ತಾನು ವಿಮೋಚಿಸಿದ ಜನಾಂಗದೊಂದಿಗೆ

ಒಂದಾಗಿದ್ದಾನೆ – ಮನುಷ್ಯಕುಮಾರನು. ಇದೆಲ್ಲವೂ ಮನುಷ್ಯನನ್ನು ನಾಶನ ಮತ್ತು ಪಾಪದಿಂದ ಅವನತಿಯಿಂದ ಮೇಲೆಕ್ಕೆ ಎತ್ತುವದಕ್ಕಾಗಿ ಮತ್ತು ಅವನು ದೇವರ ಪ್ರೀತಿಯನ್ನು ಪ್ರತಿಫಲಿಸ ಬಹುದೆಂದು ಮತ್ತು ಆತನ ಸಂತೋಷ ಮತ್ತು ಪರಿಶುದ್ಧತೆಯಲ್ಲಿ ಪಾಲು ಹೊಂದಲೆಂದು ಮಾಡುತ್ತಾನೆ.

(3) ಶ್ರೇಷ್ಠ ಕಲಾಕಾರನ ನಿಸರ್ಗದ ಬಹುಮಾನ ಮತ್ತು ಪ್ರತಿಯೊಬ್ಬರಿಗಾಗಿ ಆತನ ವೈಯಕ್ತಿಕ ಕಾಳಜಿಯನ್ನು ಗ್ರಹಿಸಲು ಪ್ರಯತ್ನಿಸುತ್ತಿರುವ ಹಾಗೆ ಅರಸನಾದ ದಾವೀದನಂತೆ ನಮ್ಮ ಪ್ರತಿಕ್ರಿಯೆ ಏನು?

ಇಂಥ ಜ್ಞಾನವು ನನಗೆ ಬಹು ಆಶ್ಚರ್ಯವಾಗಿದೆ; ಅದು ಉನ್ನತವಾದದ್ದು ನನಗೆ ನಿಲುಕದು (ಕೀರ್ತನೆ 139:6)

ಬರಲಿಕ್ಕಿರುವ ಲೋಕದಲ್ಲಿ ಕ್ರಿಸ್ತನು ವಿಮೋಚನೆ ಹೊಂದಿದವರನ್ನು ಜೀವದ ನದಿಯ ಪಕ್ಕದಲ್ಲಿ ನಡೆಸುತ್ತಾನೆ ಮತ್ತು ಸತ್ಯದ  ಅದ್ಭುತವಾದ ಪಾಠಗಳನ್ನು ಕಲಿಸುತ್ತಾನೆ. ಆತನು ಅವರಿಗೆ ನಿಸರ್ಗದ ರಹಸ್ಯಗಳನ್ನು ತೆರೆದಿಡುತ್ತಾನೆ.  ಅವರು ಯಜಮಾನನ ಹಸ್ತವು ಲೋಕವನ್ನು ಅದರ ಸ್ಥಾನದಲ್ಲಿ ಹಿಡಿದಿರಿಸಿದೆ ಎಂಬುದನ್ನು ನೋಡುತ್ತಾರೆ. ಶ್ರೇಷ್ಠ ಕಲಾಕಾರನು ಪ್ರದರ್ಶಿಸಿದ

ಕೌಶಲ್ಯಗಳನ್ನು ಹೊಲದ ಹೂವಗಳಿಗೆ ಬಣ್ಣ ಹಚ್ಚುವದು  ಅವರು ನೋಡುತ್ತಾರೆ ಮತ್ತು ಕರುಣಾಮಾಯನಾದ ತಂದೆಯ ಉದ್ದೇಶವನ್ನು ತಿಳಿದುಕೊಳ್ಳುತ್ತಾರೆ, ಅವನು ಪ್ರತಿಯೊಂದು ಬೆಳಕಿನ ಕಿರಣವನ್ನು ಹಂಚಿಕೊಡುತ್ತಾನೆ ಮತ್ತು ಪರಿಶುದ್ಧ ದೇವದೂತರ ಮೂಲಕ ವಿಮೋಚಕನು ಕೃತಜ್ಞತೆಯಿಲ್ಲದ ಲೋಕದ ಮೇಲೆ ದೇವರ ಶ್ರೇಷ್ಠ ಪ್ರೀತಿಯ ಸ್ತುತಿಗೀತೆಯನ್ನು ಅರಿಕೆ ಮಾಡುತ್ತಾನೆ. ಆಗ ಅದು ತಿಳಿಯಲ್ಪಡುತ್ತದೆ, "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗಾಬಾರದು ನಿತ್ಯಜೀವವನ್ನು ಪಡೆಯಬೇಕು ಎಂದು ಆತನನ್ನು ಕೊಟ್ಟನು."

(4) ಇಹಲೋಕದಲ್ಲಿ ಪ್ರತಿಯೊಂದು ಮಗುವಿನ ಹೃದಯವು ರಕ್ಷಣೆಯ ಅದ್ಭುತವಾದ ಬಹುಮಾನವನ್ನು ಸ್ವೀಕರಿಸುವದಕ್ಕೆ  ಸಿದ್ಧ ಮಾಡಲು ಕ್ರಿಸ್ತನು ಏನು ಮಾಡುತ್ತಾನೆ?

ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು. (ಯೋಹಾನ 12:32)

ಕ್ರಿಸ್ತನು ದೇವರ ಪ್ರೀತಿಯನ್ನು ಲೋಕಕ್ಕೆ ಪ್ರಕಟಿಸಲು ಬಂದನು, ಎಲ್ಲಾ ಮನುಷ್ಯರ ಹೃದಯಗಳನ್ನು ತನ್ನ ಬಳಿ ಸೆಳೆದುಕೊಳ್ಳುವದಕ್ಕೆ ಬಂದನು. ಆತನು ಹೇಳಿದ್ದು, "ನಾನು ಭೂಮಿಯಲ್ಲಿಂದ ಮೇಲಕ್ಕೆ ಎತ್ತಲ್ಪಟ್ಟಾಗ ಎಲ್ಲರನ್ನೂ ನನ್ನ ಬಳಿಗೆ ಎಳಕೊಳ್ಳುವೆನು." (ಯೋಹಾನ 12:32). ರಕ್ಷಣೆಯೆಡೆಗೆ ಮೊದಲನೆಯ ಹೆಜ್ಜೆ ಕ್ರಿಸ್ತನ ಪ್ರೀತಿ ಸೆಳೆಯುವಾಗ ಪ್ರತಿಕ್ರಿಯಿಸುವದು.

(5) ತನ್ನ ಸಮಾಧಾನ ಮತ್ತು ಕ್ಷಮಾಪಣೆಯನ್ನು ನಮ್ಮೊಳಗೆ ನಾವು ಸ್ವೀಕರಿಸಿದರೆ, ನಮ್ಮ ಜೀವಿತದಲ್ಲಿ ಅಳವಡಿಸಲು  ನಡೆಸಲು ಅನುಮತಿಸಿದರೆ, ಕ್ರಿಸ್ತನ ಮೂಲಕ ದೇವರು ನಮಗೆ ಯಾವ ಬಹುಮಾನವನ್ನು ನೀಡುತ್ತಾನೆ.?

ದೇವರು ಆತನನ್ನೇ ಇಸ್ರಾಯೇಲ್ ಜನರಿಗೆ ಮಾನಸಾಂತರವನ್ನೂ ಪಾಪ ಪರಿಹಾರವನ್ನೂ ದಯಪಾಲಿ ಸುವದಕ್ಕಾಗಿ ನಾಯಕನೆಂತಲೂ ರಕ್ಷಕನೆಂತಲೂ ತನ್ನ ಬಲಗೈಯಿಂದ ಉನ್ನತಸ್ಥಾನಕ್ಕೆ ಏರಿಸಿದನು. (ಅ.ಕೃ. 5:31).

ದೇವರು ಮನುಷ್ಯರಿಗೆ ಸಂದೇಶದ ಮೇಲೆ ಸಂದೇಶವನ್ನು, ಅವರನ್ನು ಪಶ್ಚಾತ್ತಾಪಕ್ಕೆ ವಿನಂತಿಸುವದಕ್ಕಾಗಿ

ಕಳುಹಿಸುತ್ತಾನೆ. ಆತನು ಅವರನ್ನು ಕ್ಷಮಿಸಿ ಮತ್ತು ಅವರ ಹೆಸರಿನ ಮುಂದೆ ಕ್ಷಮಾಪಣೆಯನ್ನು ಬರೆಯಬಹುದೆಂದು. ಅಲ್ಲಿ ಪಶ್ಚಾತ್ತಾಪ ಇಲ್ಲವೋ? ಆತನ ವಿನಂತಿಯನ್ನು ಆಲಿಸುವದಿಲ್ಲವೋ? ಸಂಧಾನ ಮಾಡುವ ಆತನ ಕರುಣೆಯನ್ನು ಅಲಕ್ಷಿಸುತ್ತಿದ್ದೇವೋ? ಮತ್ತು ಆತನ ಪ್ರೀತಿಯನ್ನು ಒಟ್ಟಾರೆ ತಿರಸ್ಕರಿಸುತ್ತಿದ್ದೇವೋ? ಓ ಹಾಗಿದ್ದಲ್ಲಿ ಮನುಷ್ಯನು ನಿತ್ಯಜೀವವನ್ನು ಹೊಂದುವ ಮಾಧ್ಯಮದಿಂದ ತನ್ನನ್ನು ತಾನು ಕತ್ತರಿಸಿ ಹಾಕುತ್ತಾನೆ; ಯಾಕಂದರೆ ದೇವರು ಪಶ್ಚಾತ್ತಾಪ ಪಡುವವರನ್ನು ಮಾತ್ರ ಕ್ಷಮಿಸುತ್ತಾನೆ!

ತನ್ನ ಪ್ರೀತಿಯನ್ನು ಪ್ರಕಟಿಸುವದರ ಮೂಲಕ ತನ್ನ ಆತ್ಮನ ವಿನಂತಿಯ ಮೂಲಕ ಆತನು ಮನುಷ್ಯನನ್ನು ಪಶ್ಚಾತ್ತಾಪಕ್ಕೆ ನಡೆಸುತ್ತಾನೆ; ಯಾಕಂದರೆ ಪಶ್ಚಾತ್ತಾಪ ದೇವರ ವರವಾಗಿದೆ, ಮತ್ತು ಆತನು ಯಾರನ್ನು ಕ್ಷಮಿಸುತ್ತಾನೋ ಅವರನ್ನು ಆತನು ಮೊದಲು ಪಶ್ಚಾತ್ತಾಪ ಪಡುವಂತೆ ಮಾಡುತ್ತಾನೆ. ಮನುಷ್ಯನಿಗೆ ದೇವರೆಡೆಗೆ ಆತನ ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ್ದಕ್ಕಾಗಿ ಪ್ರಾಮಾಣಿಕ ಪಶ್ಚಾತ್ತಾಪದ ಮೂಲಕ, ಮತ್ತು ಕ್ರಿಸ್ತನಲ್ಲಿ ಆತನು ಪಾಪಿಗಳನ್ನು ವಿಮೋಚಿಸುವಾತನು ಮತ್ತು

ಮಧ್ಯವರ್ತಿ ಎಂದು  ನಂಬಿಕೆಯ ಮೂಲಕ  ಮಧುರವಾದ ಸಂತೋಷ ದೊರೆಯುತ್ತದೆ.

ಮನುಷ್ಯನು ಕ್ಷಮಾಪಣೆಯ ಆನಂದವನ್ನು, ದೇವರ ಸಮಾಧಾನವನ್ನು, ಕ್ರಿಸ್ತನು ಅವರನ್ನು ತನ್ನ ಪ್ರೀತಿಯ ಪ್ರಕಟಿಸುವಿಕೆಯ ಮೂಲಕ ಸೆಳೆದುಕೊಳ್ಳುತ್ತಾನೆ ಎಂದು ತಿಳಿದುಕೊಳ್ಳಬಹುದು. ಒಂದುವೇಳೆ ಅವರು ಆತನ ಸೆಳೆಯುವಿಕೆಗೆ ಪ್ರತಿಕ್ರಿಯಿಸಿದ್ದಲ್ಲಿ, ತಮ್ಮ ಹೃದಯವನ್ನು ಆತನ ಕೃಪೆಗೆ ಅಧೀನ ಪಡಿಸಿದ್ದಲ್ಲಿ ಆತನು ಅವರನ್ನು ತನ್ನ ವಿಷಯವಾದ ಸಂಪೂರ್ಣ ಜ್ಞಾನಕ್ಕೆ ಹಂತ ಹಂತವಾಗಿ ನಡೆಸುತ್ತಾನೆ ಮತ್ತು ಇದು ನಿತ್ಯಜೀವವಾಗಿದೆ.

(6) ಕ್ರಿಸ್ತನಿಂದ ನಮಗೆ ಎಂಥ ಆನಂದದಾಯಕವಾದ ಆಮಂತ್ರಣ ದೊರೆತಿದೆ ಅದನ್ನು ನಾವು ನಿಜವಾದ ಪಶ್ಚಾತ್ತಾಪದ ಅನುಭವಕ್ಕೆ ಬರುವ ಮೊದಲು ಪ್ರತಿಕ್ರಿಯಿಸಬೇಕು?

ಎಲೈ ಕಷ್ಟಪಡುವವರೇ, ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ವಿಶ್ರಾಂತಿ ಕೊಡುವೆನು. (ಮತ್ತಾಯ 11:28)

ಯಾರು ನಿಜವಾಗಿ ಪಶ್ಚಾತ್ತಾಪ ಪಡುವ ಇಚ್ಚೆಯನ್ನು ಹೊಂದಿರುತ್ತಾರೆ? ಅವನು

ಏನು ಮಾಡಬೇಕು? -- ಅವನು ತಾನು ಇದ್ದಂತೆಯೇ ಕ್ರಿಸ್ತನ ಬಳಿಗೆ ಬರಬೇಕು, ತಡಮಾಡಬಾರದು. ಅವನು ಕ್ರಿಸ್ತನ ವಾಕ್ಯ ನಿಜವಾದದ್ದು ಎಂದು ನಂಬಬೇಕು ಮತ್ತು ವಾಗ್ದಾನದಲ್ಲಿ ನಂಬಿಕೆಯನ್ನಿಡುತ್ತಾ, ತಾನು ಹೊಂದಿಕೊಳ್ಳಬಹುದು ಎಂದು ಬೇಡಿಕೊಳ್ಳಬೇಕು.

ಮನುಷ್ಯನನ್ನು ಪ್ರಾಮಾಣಿಕ ಬಯಕೆ ಪ್ರಾರ್ಥಿಸಲು ಪ್ರೇರೇಪಿಸಿದ್ದಲ್ಲಿ, ಅವರ ಪ್ರಾರ್ಥನೆ ವ್ಯರ್ಥವಾಗುವದಿಲ್ಲ. ಕರ್ತನು ತನ್ನ ಮಾತುಗಳನ್ನು ನೆರವೇರಿಸುತ್ತಾನೆ ಮತ್ತು ಪವಿತ್ರಾತ್ಮನನ್ನು ದೇವರೆಡೆಗೆ ಪಶ್ಚಾತ್ತಾಪಕ್ಕೆ ಮತ್ತು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೇಲೆ ನಂಬಿಕೆಡೆಗೆ ನಡೆಸಲು ನೀಡುತ್ತಾನೆ. ಅವನು ಪ್ರಾರ್ಥಿಸುತ್ತಾನೆ ಮತ್ತು ಕಾದಿರುತ್ತಾನೆ ಮತ್ತು ತನ್ನ ಪಾಪಗಳನ್ನು ಬಿಟ್ಟುಬಿಡುತ್ತಾನೆ ಮತ್ತು ದೇವರ ಆಜ್ಞೆಗಳಿಗೆ ವಿಧೇಯನಾಗುವ ಪ್ರಾಮಾಣಿಕ ಸಾಹಸದಲ್ಲಿ ತನ್ನ ಪ್ರಾಮಾಣಿಕತೆಯನ್ನು ಪ್ರಕಟಿಸುತ್ತಾನೆ. ಅವನು ಪ್ರಾರ್ಥನೆಯೊಂದಿಗೆ ನಂಬಿಕೆಯನ್ನು ಬೆರೆಸುತ್ತಾನೆ ನಂಬುವದು ಮಾತ್ರವಲ್ಲ ಬದಲಾಗಿ ಧರ್ಮಶಾಸ್ತ್ರದ ನಿಯಮಗಳಿಗೆ ವಿಧೇಯನಾಗುತ್ತಾನೆ. ತಾನು ಕ್ರಿಸ್ತನೊಂದಿಗೆ ಇದ್ದೇನೆ ಎಂದು ಪ್ರಕಟಿಸುತ್ತಾನೆ, ಅವನು ಎಲ್ಲಾ

ಹವ್ಯಾಸಗಳನ್ನು ಮತ್ತು ದೇವರಿಂದ ಹೃದಯವನ್ನು ಎಳೆದುಕೊಳ್ಳುವ ಪ್ರವೃತ್ತಿಯ ಸಹವಾಸವನ್ನು ತ್ಯಜಿಸುತ್ತಾನೆ.

(7) ಅನೇಕ ವರಗಳಲ್ಲಿ ಪಾಪದ ಶಾಪದಲ್ಲಿ ಕಷ್ಟವನ್ನು ಅನುಭವಿಸುತ್ತಿರುವ ಬಿದ್ದು ಹೋದ ಮನುಷ್ಯನಿಗೆ ಕ್ರಿಸ್ತನ ಪ್ರೀತಿಯನ್ನು ಪ್ರದರ್ಶಿಸಿದ ಒಂದೇ ಒಂದು ಶ್ರೇಷ್ಠ ಬಹುಮಾನ ಯಾವುದು?

ನಮ್ಮೆಲ್ಲರಿಗೋಸ್ಕರ ತನ್ನನ್ನೇ ದೇವರಿಗೆ ಸುಗಂಧವಾಸನೆಯಾದ ಕಾಣಿಕೆಯಾಗಿಯೂ ಯಜ್ಞವಾಗಿಯೂ ಸಮರ್ಪಿಸಿಕೊಂಡ ಪ್ರಕಾರ ನೀವೂ ಪ್ರೀತಿಯಲ್ಲಿ ನಡೆದುಕೊಳ್ಳಿರಿ. (ಎಫೆಸ 5:2)

ಮನುಷ್ಯನ ಬಿದ್ದು ಹೋಗುವಿಕೆ ಈಡೀ ಪರಲೋಕವನ್ನು ದುಃಖದಲ್ಲಿ ಮುಳುಗಿಸಿತು. ದೇವರು ಸೃಷ್ಟಿಸಿದ ಲೋಕವನ್ನು ಪಾಪದ ಶಾಪದಿಂದ ಮಬ್ಬಾಗಿಸಿತು ಮತ್ತು ಸಂಕಟ ಮತ್ತು ಮರಣದಲ್ಲಿ ಮುಣುಗಿದ ಜೀವಿಗಳಿಂದ ತುಂಬಿಸಿತು. ಯಾರು ಧರ್ಮಶಾಸ್ತ್ರವನ್ನು ಉಲ್ಲಂಘಿಸಿದ್ದಾರೋ ಅವರಿಗೆ ತಪ್ಪಿಸಿಕೊಳ್ಳುವ ಮಾರ್ಗವಿರಲಿಲ್ಲ. ದೇವದೂತರು ತಮ್ಮ ಸ್ತುತಿಗೀತೆಯನ್ನು

ನಿಲ್ಲಿಸಿದರು. ಪರಲೋಕ ಸಂಸ್ಥಾನದುದ್ದಕ್ಕೂ ಪಾಪವು ತಂದ ನಾಶನದಿಂದಾಗಿ ಶೋಕವು ತುಂಬಿತು.

ದೇವರ ಮಗನು, ಪರಲೋಕದ ಕರುಣೆಯುಳ್ಳ ಸೇನಾಧಿಪತಿ, ಬಿದ್ದು ಹೋದ ಜನಾಂಗಕ್ಕಾಗಿ ಅನುಕಂಪವುಳ್ಳವನಾದನು. ನಾಶವಾದ ಲೋಕದ ಶೋಕ ಆತನ ಎದುರಿನಲ್ಲಿ ನಿಲ್ಲುವಾಗ ಆತನ ಹೃದಯವು ಅನಂತ ಅನುಕಂಪದಿಂದ ಚಲಿಸಿತು. ದೈವೀಕ ಪ್ರೀತಿಯು ಮನುಷ್ಯನನ್ನು ವಿಮೋಚಿಸುವ ಒಂದು ಯೋಜನೆಯನ್ನು ಸಿದ್ಧಪಡಿಸಿತು. ಧರ್ಮಶಾಸ್ತ್ರವನ್ನು ಮುರಿದಿರುವ ಕಾರಣ ಅದು ಪಾಪಿಯ ಜೀವದ ಬೇಡಿಕೆಯನ್ನು ಇರಿಸಿತು. ಈಡೀ ವಿಶ್ವದಲ್ಲಿ ಒಬ್ಬನು ಮಾತ್ರ ಮನುಷ್ಯನಿಗೆ ಬದಲಾಗಿ ಅದರ ಬೇಡಿಕೆಯನ್ನು ಈಡೇರಿಸುವದಾಗಿತ್ತು. ದೈವೀಕ ಧರ್ಮಶಾಸ್ತ್ರವು ದೇವರಂತೆ ಪರಿಶುದ್ಧವಾದದ್ದಾಗಿತ್ತು. ಅದರ ಉಲ್ಲಂಘನೆಗೆ ದೇವರಿಗೆ ಸರಿಸಮಾನನಾದವನೊಬ್ಬನೆ ಅದರ ಪ್ರಾಯಶ್ಚಿತ್ತವನ್ನು ಮಾಡಬಹುದಾಗಿತ್ತು. ಕ್ರಿಸ್ತನೇ ಬಿದ್ದು ಹೋದ ಮನುಷ್ಯನನ್ನು ಧರ್ಮಶಾಸ್ತ್ರದ ಶಾಪದಿಂದ ವಿಮೋಚಿಸಬಹುದಾಗಿತ್ತು ಮತ್ತು ಅವನನ್ನು ತಿರುಗಿ ಪರಲೋಕದೊಂದಿಗೆ ಸಾಮರಸ್ಯದಲ್ಲಿ ಇರಿಸಬಹುದಾಗಿತ್ತು. ಕ್ರಿಸ್ತನು ಪಾಪದ

ಅಪರಾಧ ಮತ್ತು ಅವಮಾನವನ್ನು ತನ್ನ ಮೇಲೆ ತೆಗೆದುಕೊಂಡನು - ಪರಿಶುದ್ಧನಾದ ದೇವರಿಗೆ ಪಾಪ ಎಷ್ಟು ಜಿಗುಪ್ಸೆ ಹುಟ್ಟುತ್ತದೆಂದರೆ ಅದು ಆತನ ಮಗನನ್ನು ತಂದೆಯಿಂದ ಬೇರ್ಪಡಿಸಿತು. ಕ್ರಿಸ್ತನು ನಾಶವಾದ ಜನಾಂಗವನ್ನು ರಕ್ಷಿಸಲು ಆಳವಾದ ಸಂಕಟವನ್ನು ಅನುಭವಿಸಬೇಕಾಯಿತು. (8) ತನ್ನ ಬಳಿಗೆ ಬರುವ ಪ್ರತಿಯೊಬ್ಬ ಪಶ್ಚಾತ್ತಾಪ ಪಡುವ ಪಾಪಿಗೆ ಯೇಸು ಯಾವ ವಾಗ್ದಾನವನ್ನು ಮಾಡಿದ್ದಾನೆ?

ತಂದೆಯು ನನಗೆ ಕೊಡುವಂಥವರೆಲ್ಲರೂ ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವರನ್ನು ನಾನು ತಳ್ಳಿಬಿಡುವದೇ ಇಲ್ಲ, (ಯೋಹಾನ 6:37)

ಆದರೆ ಅನೇಕರು ತಮ್ಮಲ್ಲಿ ನಂಬಿಕೆಯ ಕೊರತೆಯಿದೆ ಎಂದು ಭಾವಿಸುತ್ತಾರೆ, ಆದುದರಿಂದ ಅವರು ಕ್ರಿಸ್ತನಿಂದ ದೂರ ಉಳಿಯುತ್ತಾರೆ. ಇಂಥ ಆತ್ಮಗಳು ತಮ್ಮ ಅಸಹಾಯಕ ಅಯೋಗ್ಯತೆಯಲ್ಲಿ ತಮ್ಮ ಅನುಕಂಪವುಳ್ಳ ರಕ್ಷಕನ ಮೇಲೆ ತಮ್ಮನ್ನು ತಾವು ಹಾಕಲಿ. ಸ್ವಂತಿಕೆಯನ್ನು ನೋಡುವದು ಬೇಡ, ಬದಲಾಗಿ ಕ್ರಿಸ್ತನನ್ನು ನೋಡಲಿ . ಮನುಷ್ಯರ ಮಧ್ಯದಲ್ಲಿ ಅವನು ಸಂಚರಿಸಿದಾಗ ರೋಗಿಗಳನ್ನು ಸ್ವಸ್ಥಪಡಿಸಿದಾತನು, ದೆವ್ವಗಳನ್ನು ಬಿಡಿಸಿದಾತನು ಈಗಲೂ ಅದೇ

ಅದ್ಭುತವಾದ ವಿಮೋಚಕನಾಗಿದ್ದಾನೆ. ನಂತರ ಜೀವದಾಯಕ ವೃಕ್ಷದಲ್ಲಿರುವ ಎಲೆಗಳಂತೆ ಆತನ ವಾಗ್ದಾನಗಳನ್ನು ಗ್ರಹಿಸಿಕೊಳ್ಳಲಿ, "ನನ್ನ ಬಳಿಗೆ ಬರುವರು; ಮತ್ತು ನನ್ನ ಬಳಿಗೆ ಬರುವವರನ್ನು ನಾನು ತಳ್ಳಿಬಿಡುವದೇ ಇಲ್ಲ," ಯೋಹಾನ 6:37. ನೀವು ಆತನ ಬಳಿಗೆ ಬರುತ್ತಿರುವ ಹಾಗೆ ಆತನು ನಿಮ್ಮನ್ನು ಸ್ವೀಕರಿಸುತ್ತಾನೆ ಎಂದು ನಂಬಿರಿ ಯಾಕಂದರೆ ಆತನು ವಾಗ್ದಾನ ಮಾಡಿದ್ದಾನೆ. ನೀವು ಇದನ್ನು ಮಾಡುವಾಗ ನೀವು ಎಂದಿಗೂ ನಾಶವಾಗುವದಿಲ್ಲ. – ಎಂದಿಗೂ ಇಲ್ಲ. ಪಶ್ಚಾತ್ತಾಪಪಡುವ ಪಾಪಿಯು ತನ್ನ ಅಪರಾಧ ಮತ್ತು ಅಯೋಗ್ಯತೆಯ ಪ್ರಜ್ಞೆಯೊಂದಿಗೆ, ತಾನು ಶಿಕ್ಷೆಗೆ ಅರ್ಹನು ಎಂಬ ಅರಿವಿನೊಂದಿಗೆ, ಆದರೆ ಕೇವಲ ಕ್ರಿಸ್ತನ ಕರುಣೆ ಮತ್ತು ಪ್ರೀತಿಯನ್ನು ಅವಲಂಬಿಸಿ ಕ್ರಿಸ್ತನ ಬಳಿಗೆ ಬರುವಾಗ ಅವನು ಹಿಂದಕ್ಕೆ ತಿರುಗಿ ಹೋಗುವದಿಲ್ಲ. ಕ್ಷಮಿಸುವ ದೇವರ ಪ್ರೀತಿ ಕಾರ್ಯ ಮಾಡುತ್ತದೆ ಮತ್ತು ಆತನ ರಕ್ಷಕನ ಅನಂತವಾದ ಅನುಕಂಪ ಮತ್ತು ಪ್ರೀತಿಯಿದಾಗಿ ಆನಂದದಾಯಕವಾದ ಕೃತಜ್ಞತೆ ಅವನ ಹೃದಯದಲ್ಲಿ ಪುಟಿದೇಳುತ್ತದೆ. ಈ ಸೌಭಾಗ್ಯವು ಆತನಿಗೆ ಜಗದುತ್ಪತ್ತಿಗೆ ಮೊದಲೇ ಪರಲೋಕದ ಸಭೇಯ ಮುಂದೆ ಮಾಡಲಾಗಿತ್ತು. ಅದೇನಂದರೆ ಕ್ರಿಸ್ತನು ಮನುಷ್ಯನ ಉಲ್ಲಂಘನೆಯ ದಂಡನೆಯನ್ನು ತನ್ನ ಮೇಲೆ

ತೆಗೆದುಕೊಳ್ಳಬೇಕು ಮತ್ತು ಅವನಿಗೆ ತನ್ನ ನೀತಿವಂತಿಕೆಯನ್ನು ನೀಡಬೇಕು ಎಂಬುದು, ಆಶ್ಚರ್ಯದಿಂದ ಭಾವೋದ್ರೇಕಕ್ಕೆ ನಡೆಸುತ್ತದೆ.

(9) ನಮ್ಮಲ್ಲಿ ಪ್ರತಿಯೊಬ್ಬರಿಗೆ ವರ್ಣಿಸಲಶಕ್ಯವಾದ ಮತ್ತು ಸಮಾನಾಂತರವಲ್ಲದ ಪ್ರೀತಿಯನ್ನು ಮೃದುವಾದ ಅನುಕಂಪವನ್ನು  ಯಾವ ಕಾರ್ಯದ ಮೂಲಕ ಕ್ರಿಸ್ತನು ಪ್ರಕಟಿಸಿದನು?

ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ಕೊಟ್ಟದ್ದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದು ಬಂದದೆ; ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ (1ಯೋಹಾನ 3:16).

ನಮ್ಮ ಮನಸ್ಸು ಕಲ್ವಾರಿ ಕ್ರೂಜೆಯೆಡೆಗೆ ಸೆಳೆಯಲ್ಪಡುವಾಗ ಕ್ರಿಸ್ತನು ಅವಮಾನಕರವಾದ ಕ್ರೂಜೆಯಿಂದ ನಮ್ಮ ಅಪರಿಪೂರ್ಣ ದೃಷ್ಟಿಯ ಮನವರಿಕೆಯನ್ನು, ಆತನು ಏಕೆ ಸತ್ತನು? ಪಾಪದ ಪರಿಣಾಮದಿಂದಾಗಿ ಯಾವ ಪಾಪ? ಧರ್ಮಶಾಸ್ತ್ರದ ಉಲ್ಲಂಘನೆಯ ಪಾಪ, ಆಗ ನಮ್ಮ ಕಣ್ಣುಗಳು ಪಾಪದ ಗುಣಲಕ್ಷಣವನ್ನು ನೋಡುವಂತೆ ತೆರೆಯಲ್ಪಡುತ್ತವೆ. ಧರ್ಮಶಾಸ್ತ್ರವು ಮುರಿಯಲ್ಪಟ್ಟಿದೆ ಆದರೆ ಉಲ್ಲಂಘಿಸಿದವನನ್ನು

ಕ್ಷಮಿಸಲಾರದು. ಅದು ನಮ್ಮ ಶಾಲೆಯ ಗುರುವಿದ್ದಂತೆ ನಮಗೆ ಶಿಕ್ಷೆಯನ್ನು ನೀಡುತ್ತದೆ. ಪರಿಹಾರ ಎಲ್ಲಿದೆ? ಅವನು ತನ್ನ ನೀತಿವಂತಿಕೆಯನ್ನು ಬಿದ್ದು ಹೋದ, ಪಾಪಿಯಾದ ಮನುಷ್ಯನಿಗೆ ನೀಡುವಂತೆ ಧರ್ಮಶಾಸ್ತ್ರವು ಕ್ರೂಜೆಯ ಮೇಲೆ ಬಲಿಯಾದ ಕ್ರಿಸ್ತನೆಡೆಗೆ ಸೆಳೆಯುತ್ತದೆ.ಹೀಗೆ ಮನುಷ್ಯನನ್ನು ತಂದೆಯ ಎದುರಿನಲ್ಲಿ ತನ್ನ ನೀತಿವಂತಿಕೆಯಲ್ಲಿ ನಿಲ್ಲಿಸುತ್ತಾನೆ.

ರಾತ್ರಿ ಮತ್ತು ಹಗಲು ಕ್ರಿಸ್ತನ ಗುಣಲಕ್ಷಣಗಳನ್ನು ಅಧ್ಯಯನ ಮಾಡಿರಿ. ಅದು ಆತನ ಮೃದುವಾದ ಅನುಕಂಪ, ಅದು ನಿಮ್ಮ ಆತ್ಮಕ್ಕೆ ಆತನ ವರ್ಣಿಸಲಶಕ್ಯವಾದ, ಸಮಾನಾಂತರವಲ್ಲದ ಪ್ರೀತಿ, ಆತನನ್ನು ಎಲ್ಲಾ ಅವಮಾನವನ್ನು,ನಿಂದೆಯನ್ನು, ದೂಷಣೆಯನ್ನು ಭೂಮಿಯ ತಪ್ಪುತಿಳುವಳಿಕೆಯನ್ನು ಸಹಿಸುವತ್ತ ನಡೆಸಿತು. ಆತನ ಸಮೀಪಕ್ಕೆ ಬನ್ನಿರಿ ನಮ್ಮ ಉಲ್ಲಂಘನೆಯಿಂದಾಗಿ ಜಜ್ಜಿದ ಮತ್ತು ಗಾಯವಾದ ಆತನ ಹಸ್ತವನ್ನು ಮತ್ತು ಆತನ ಪಾದಗಳನ್ನು ಹಿಡಿದುಕೊಳ್ಳಿರಿ."ನಮಗೆ ಸುಕ್ಷೇಮವನ್ನುಂಟುಮಾಡುವ ದಂಡನೆಯನ್ನು ಅವನು ಅನುಭವಿಸಿದನು; ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು."

ಸಮಯವನ್ನು ವ್ಯರ್ಥಮಾಡಬೇಡಿರಿ, ನಿತ್ಯತ್ವದಲ್ಲಿ ಇನ್ನೊಂದು ದಿನ ಗತಿಸಿ ಹೋಗುವದು ಬೇಡ, ನೀವು ಇದ್ದಂತೆಯೇ ಯಾವುದೇ ಬಲಹೀನತೆ ಇರಲಿ, ನಿಮ್ಮ ಅಯೋಗ್ಯತೆಯೊಂದಿಗೆ, ನಿಮ್ಮ ನಿರ್ಲಕ್ಷ, ಈಗ ಬರುವದು ಬೇಡ ಎಂಬ ನಿಮ್ಮ ವಿಳಂಬ ... ತನ್ನ ಬಳಿಗೆ ಬನ್ನಿರಿ ಎಂಬ ಯೇಸುವಿನ ಕರೆಯನ್ನು ಬಾಡಿಹೋಗದ ಜೀವವೆಂಬ ಜಯಮಾಲೆಯ ಮಹಿಮಾ ಕಿರೀಟವನ್ನು ನಿಮಗೆ ನೀಡುವದು ದೂರವಿಲ್ಲ, ಜೀವ, ನಿತ್ಯಜೀವ ದೇವರಿಂದ ದೊರಕುವ ಜೀವ ಆತನ ಆ ಸೇವೆಯನ್ನು ಮಮತೆಯಿಂದ ಮಾಡಲು ಸಾಕಷ್ಟು ಪ್ರೇರಣೆಯನ್ನು ನೀಡುತ್ತಿಲ್ಲವೆ.

(10) ಅತ್ಯಂತ ವೇದನಾದಾಯಕವಾದ ಪಾಪದ ಶಾಪವನ್ನು ಯಾರಿಗಾಗಿ ಕ್ರಿಸ್ತನು ತಾಳಿದನು?

ಆತನು ನಮ್ಮ ಪಾಪಗಳ ನಿವಾರಣಮಾಡುವ ಯಜ್ಞವಾಗಿದ್ದಾನೆ; ನಮ್ಮ ಪಾಪಗಳನ್ನು ಮಾತ್ರವಲ್ಲದೆ, ಸಮಸ್ತ ಲೋಕದ ಪಾಪಗಳನ್ನು ಸಹ ನಿವಾರಣಮಾಡುತ್ತಾನೆ. (1ಯೋಹಾನ 2:2)

ಮನುಷ್ಯನನ್ನು ಪಾಪವನ್ನು ಹೊತ್ತುಕೊಳ್ಳುವವನನ್ನಾಗಿ ಮಾಡಲಿಲ್ಲ

ಮತ್ತು ಅವನು ರಕ್ಷಕನು ಹೊತ್ತ ಪಾಪದ ಶಾಪದ ಭಯಂಕರತೆಯನ್ನು ಅರಿಯಲು ಎಂದಿಗೂ ಸಾಧ್ಯವಿಲ್ಲ. ಯಾವುದೇ ದುಃಖ ಆತನ ದುಃಖಕ್ಕೆ ಹೋಲಿಕೆಯಾಗಲಾರದು ಆತನ ಮೇಲೆ ದೇವರ ಕೋಪ ಅತ್ಯಾಧಿಕವಾದ ರಭಸದಿಂದ ಬಿತ್ತು. ಮಾನವ ಸ್ವರೂಪ ಸಹಿಸಬಹುದು ಆದರೆ ಮಿತಿಯಲ್ಲಿರುವ ಪರೀಕ್ಷೆ ಮತ್ತು ಶೋಧನೆಯನ್ನು ಮಾತ್ರ. ಪರಿಮಿತಿಯುಳ್ಳವನು ಪರಿಮಿತಿಯುಳ್ಳ ಅಳತೆಯನ್ನು ಮಾತ್ರ ಸಹಿಸಬಲ್ಲನು ಮತ್ತು ಮಾನವ ಸ್ವರೂಪ ಬಲಿಯಾಗುತ್ತದೆ; ಆದರೆ ಕ್ರಿಸ್ತನ ಸ್ವರೂಪ ಕಷ್ಟವನ್ನು ಅನುಭವಿಸುವ ದೊಡ್ಡ ಸಾಮರ್ಥ್ಯವನ್ನು ಹೊಂದಿತ್ತು; ದೈವೀಕ ಸ್ವರೂಪದಲ್ಲಿ ಅಸ್ತಿತ್ವದಲ್ಲಿದ್ದ ಮಾನವನು ಮತ್ತು ಕಷ್ಟವನ್ನು ಅನುಭವಿಸುವ ದೊಡ್ಡ ಸಾಮರ್ಥ್ಯವನ್ನು ಹೊಂದಿದವನು ಲೋಕದ ಫಲವಾದ ಪಾಪಗಳನ್ನು ಸಹಿಸಿದನು.

ಕ್ರಿಸ್ತನು ಸಹಿಸಿದ ವೇದನೆ, ವಿಶಾಲವಾಗುತ್ತದೆ, ಆಳವಾಗುತ್ತದೆ ಮತ್ತು ಪಾಪದ ಗುಣ ಲಕ್ಷಣದ ಮತ್ತು ಯಾರು ಪಾಪದಲ್ಲಿಯೇ ಮುಂದುವರೆಯುತ್ತಾರೋ ಅವರ ಮೇಲೆ ಬರುವ ದೇವರ ಗುಣಲಕ್ಷಣದ ಹೆಚ್ಚು ವಿಸ್ತರಿತ ತಿಳುವಳಿಕೆಯನ್ನು ನೀಡುತ್ತದೆ ಪಾಪದ ಸಂಬಳ ಮರಣ, ಆದರೆ ಪಾಶ್ಚಾತ್ತಾಪ ಪಡುವವವರಿಗೆ,

ನಂಬುವವರಿಗೆ ದೇವರು ಕೊಡುವ ವರ ಯೇಸು ಕ್ರಿಸ್ತನ ಮೂಲಕ ನಿತ್ಯಜೀವ.

ನಮ್ಮ ಕರ್ತನು ಹೇಳುತ್ತಾನೆ ಪಾಪದ ಮನವರಿಕೆಯ ಅಡಿಯಲ್ಲಿ ನಾನು ನಿಮಗೋಸ್ಕರ ಸತ್ತಿದ್ದೇನೆ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಿರಿ, ನನಗಾಗಿ ಹಿಂಸೆಗೆ, ಪೀಡನೆಗೆ ಮತ್ತು ವೇದನೆಗೆ ಒಳಗಾಗುವಾಗ ಸುವಾರ್ತೆಯು "ನಿಮ್ಮ ಮೇಲೆ ನನ್ನ ಪ್ರೀತಿ ಎಷ್ಟೋ ಅಪಾರವಾಗಿದೆ ನಾನು ನಿಮಗಾಗಿ ನನ್ನ ಜೀವವನ್ನೇ ಕೊಟ್ಟಿದ್ದೇನೆ ಎಂಬುದನ್ನು ಜ್ಞಾಪಿಸುತ್ತದೆ. ನಿಮ್ಮ ಕರ್ತವ್ಯಗಳು ನಿಷ್ಠುರ ಮತ್ತು ಕಠಿಣವಾಗಿರುವಾಗ, ನಿಮ್ಮ ಹೊರೆಗಳು ಹೊತ್ತುಕೊಳ್ಳಲು ಭಾರವಾಗಿರುವಾಗ ಜ್ಞಾಪಕದಲ್ಲಿಟ್ಟುಕೊಳ್ಳಿರಿ. ನಾನು ನಿಮಗಾಗಿ ಕ್ರೂಜೆಯನ್ನು ಹೊತ್ತುಕೊಂಡಿದ್ದೇನೆ, ಅವಮಾನವನ್ನು ತಾಳಿದ್ದೇನೆ. ನಿಮ್ಮ ಹೃದಯವು ತೀವ್ರವಾದ ಸತ್ವಪರೀಕ್ಷೆಗೆ ಒಳಗಾಗಿ ಕುಗ್ಗಿಹೋಗುತ್ತಿರುವಾಗ, ನಿಮ್ಮ ವಿಮೋಚಕನು ನಿಮ್ಮ ಪರವಾಗಿ ನಿಲ್ಲುವ ಮಧ್ಯವರ್ತಿಯು ಜೀವಿಸುತ್ತಾನೆ ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಿರಿ.

(11) ನಾವು ಯಾವ ಸ್ಥಿತಿಯಲ್ಲಿರುವಾಗ ಕರ್ತನು ನಮ್ಮ ಮೇಲೆ ವರ್ಣಿಸಲಶಕ್ಯವಾದ ಕೃಪೆಯ ವರವನ್ನು ನಮಗೆ ಪ್ರದರ್ಶಿಸಿದ್ದಾನೆ?

ನಾವು ಪಾಪಿಗಳಾಗಿದ್ದಾಗಲೂ ಕ್ರಿಸ್ತನು ನಮಗೋಸ್ಕರ ಪ್ರಾಣಕೊಟ್ಟದ್ದರಲ್ಲಿ ದೇವರು ನಮ್ಮ ಮೇಲೆ ತನಗಿರುವ ಪ್ರೀತಿಯನ್ನು ಸಿದ್ಧಾಂತಪಡಿಸಿದ್ದಾನೆ (ರೋಮ 5:8)

ನಾವು ಆತನನ್ನು ಮೊದಲು ಪ್ರೀತಿಸಿದ್ದರಿಂದ ಕ್ರಿಸ್ತನು ನಮ್ಮನ್ನು ಪ್ರೀತಿಸಲಿಲ್ಲ; ಆದರೆ "ನಾವು ಇನ್ನೂ ಪಾಪಿಗಳಾಗಿದ್ದಾಗಲೇ" ಆತನು ನಮಗೋಸ್ಕರ ಸತ್ತನು, ಆತನು ನಮ್ಮ ಪಾಪಗಳಿಗೆ ತಕ್ಕ ಹಾಗೆ ನಮ್ಮನ್ನು ನಡೆಸಿಕೊಳ್ಳಲಿಲ್ಲ. ನಮ್ಮ ಪಾಪಗಳು ದಂಡನೆಗೆ ಪಾತ್ರವಾಗಿದ್ದಾಗ್ಯೂ . ಆತನು ನಮ್ಮನ್ನು ದಂಡಿಸಲಿಲ್ಲ. ವರ್ಷದಿಂದ ವರ್ಷಕ್ಕೆ ಆತನು ನಮ್ಮ ಬಲಹೀನತೆಗಳನ್ನು ಮತ್ತು ಅಜ್ಞಾನವನ್ನು, ನಮ್ಮ ಕೃತಘ್ನತೆಯನ್ನು ಮತ್ತು ನಮ್ಮ ಭ್ರಷ್ಟತೆಯನ್ನು ಸಹಿಸಿಕೊಂಡನು. ದಾರಿತಪ್ಪುವಿಕೆಯನ್ನು,  ನಮ್ಮ ಹೃದಯದ ಕಾಠಿಣ್ಯವನ್ನು ಆತನ ಪವಿತ್ರವಾಕ್ಯವನ್ನು ನಾವು ನಿರ್ಲಕ್ಷಿಸಿರುವದನ್ನು ವಿರೋಧಿಸದೇ, ಇನ್ನೂ  ಆತನ ಹಸ್ತಗಳು ಚಾಚಿಕೊಂಡಿವೆ. ಅರ್ಹರಲ್ಲದೆ ಮಾನವ ಜೀವಿಗಳ ಮೇಲೆ ದೇವರು ಪ್ರಯೋಗಿಸಿದ ಕೃಪೆ ಆತನ ವಿಶೇಷಗುಣವಾಗಿದೆ, ನಾವು ಅದಕ್ಕಾಗಿ ಪ್ರಯತ್ನಿಸಲಿಲ್ಲ ಆದರೆ ಅದೇ ನಮ್ಮನ್ನು ಹುಡುಕಿ ಬಂದಿತು. ದೇವರು ನಮ್ಮ

ಮೇಲೆ ತನ್ನ ಕೃಪೆಯನ್ನು ಸುರಿಸಲು ಆನಂದಿಸುತ್ತಾನೆ, ನಾವು ಯೋಗ್ಯರೆಂಬುದಾಗಿ ಅಲ್ಲ ಬದಲಾಗಿ ನಾವು ಒಟ್ಟಾರೆ ಅಯೋಗ್ಯರಾಗಿರುವದಕ್ಕಾಗಿ. ಆತನ ಕೃಪೆಯನ್ನು ಬೇಡಿಕೊಳ್ಳುವದು ಕೇವಲ ನಮ್ಮ ಅಗತ್ಯತೆಗಾಗಿ.

(12) ಸುವಾರ್ತೆಯಲ್ಲಿ ಕ್ರೂಜೆಯ ಅದ್ಭುತವಾದ ಬಹುಮಾನದ ಸಂದೇಶವನ್ನು ಉಪದೇಶಿಸುವಾಗ ಅದು ಯಾರ ಗಮನವನ್ನು ಸೆಳೆಯುತ್ತದೆ?

... ಪರಲೋಕದಿಂದ ಕಳುಹಿಸಲ್ಪಟ್ಟ ಪವಿತ್ರಾತ್ಮನ ಬಲದಿಂದ ನಿಮಗೆ ಸುವಾರ್ತೆಯನ್ನು ಸಾರಿದವರ ಮೂಲಕ ನಿಮಗೆ ಪ್ರಸಿದ್ಧಿಮಾಡಲ್ಪಟ್ಟಿದೆ. ದೇವದೂತರಿಗೂ ಈ ಸಂಗತಿಗಳನ್ನು ಲಕ್ಷವಿಟ್ಟು ನೋಡಬೇಕೆಂದು ಅಪೇಕ್ಷೆ ಉಂಟು. (1ಪೇತ್ರ 1:12)

ವಿಮೋಚನೆಯ ಯೋಜನೆಯ ಮೂಲಕ ಕರುಣಾಮಯನಾದ ವಿಮೋಚಕನು ಪಾಪದ ಭಯಾನಕತೆಯಿಂದ ಮನುಷ್ಯನನ್ನು ರಕ್ಷಿಸಿದನು. ಇದು ಮನುಷ್ಯರ ಅಥವಾ ದೇವದೂತರ ಗ್ರಹಿಕೆಗೆ ಮೀರಿದ್ದು. ಇದು ನಿಜವಾಗಿಯೂ ರಹಸ್ಯವಾಗಿದೆ. ಅತ್ಯಂತ ಅತಿಶಯವಾದದ್ದು, ಅತ್ಯಂತ ಉದಾತ್ತವಾದದ್ದು ಅತ್ಯಂತ ಭವ್ಯವಾದದ್ದಾಗಿದೆ ಅದನ್ನು ನಾವು ಸಂಪೂರ್ಣವಾಗಿ ತಿಳಿದುಕೊಳ್ಳಲಾರೆವು.

ಬಿದ್ದು ಹೋದ ಮನುಷ್ಯನಿಗೆ ಕ್ರಿಸ್ತನ ತ್ಯಾಗ ಸಮಾನಾಂತರವಾದದ್ದು ಅಲ್ಲ. ಇದು ನಾವು ಧ್ಯಾನಿಸಬಹುದಾದ ಅತ್ಯಂತ ಘನವಾದ, ಮುಖ್ಯ ವಿಷಯವಾಗಿದೆ. ದೇವರ ಕೃಪೆಯಿಂದ ಜ್ಞಾನವನ್ನು ಪಡೆದುಕೊಂಡು ಪ್ರತಿಯೊಂದು ಹೃದಯವು ವಿವರಿಸಲಶಕ್ಯವಾದ ಕೃತಘ್ನತೆಯಿಂದ ಮತ್ತು ಆರಾದನಾಭಾದಿಂದ ವಿಮೋಚನಕ ಎದುರಿನಲ್ಲಿ ಆತನ ಅನಂತವಾದ ಬಲಿದಾನಕ್ಕಾಗಿ ತಲೆಬಾಗಲು ಒತ್ತಾಯ ಪಡಿಸುತ್ತದೆ.

ಕ್ರಿಸ್ತನೊಬ್ಬನೇ ದೇವರ ಪ್ರೀತಿಯ ಎತ್ತರ ಮತ್ತು ಆಳವನ್ನು ಬಲ್ಲಾತನಾಗಿದ್ದಾನೆ , ಆತನ ಪ್ರೀತಿಯನ್ನು ನಮಗೆ ಪ್ರಕಟಿಸಲು ನಮ್ಮಲ್ಲಿ ಒಬ್ಬನಾದನು ಅದಕ್ಕಾಗಿ ನಾನು ವಂದನೆಯನ್ನು ಸಲ್ಲಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನಾನು ಕ್ರಿಸ್ತನಿಗೆ ಬಹಳವಾಗಿ ವಂದನೆ ಸಲ್ಲಿಸುತ್ತೇನೆ, ದೇವಕುಮಾರನು ನನ್ನನ್ನು ಪ್ರೀತಿ ಮತ್ತು ಕರುಣೆಯಿಂದ ಸ್ಪರ್ಶಿಸಿದನು ಮತ್ತು ಮುರಿದ ಧರ್ಮಶಾಸ್ತ್ರದ ಬೆಲೆಯನ್ನು ತೆರೆಲು ಸ್ವ-ಇಚ್ಛೆಯಿಂದ ಸಿದ್ಧನಾದನು ಮತ್ತು ನನ್ನ ಅಪರಾಧ ಮತ್ತು ಅವಮಾನವನ್ನು ತನ್ನ ಮೇಲೆ ತೆಗೆದುಕೊಂಡನು ಮತ್ತು ನನ್ನನ್ನು ನನ್ನ ಆಳವಾದ ಸಂಕಟದಿಂದ ವಿಮೋಚಿಸಿದನು.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನಾನು ಜನಪ್ರಿಯತೆಯ ಬುಗ್ಗೆಯಾಗಿರುವ ಕ್ರಿಸ್ತನ ಪ್ರೀತಿಯನ್ನು ದೃಷ್ಟಿಸುವಾಗ, ಮತ್ತು ನಾನು ಅದರ ಆಳವನ್ನು ದೃಷ್ಟಿಸುತ್ತಿರುವ ಹಾಗೆ ಅದು ಆಳವಾಗುತ್ತಾ ಮತ್ತು ವಿಶಾಲವಾಗುತ್ತಾ ಹೋಗುತ್ತದೆ. ಮಿತಿಯಿಲ್ಲದ ಮೇರೆಯಿಲ್ಲದ ಸಾಗರವಾದ ಆತನ ಪ್ರೀತಿಯನ್ನು ಗ್ರಹಿಸುವದು ಸಾಧ್ಯವಿಲ್ಲ ಎಂದು ನಾನು ಅರಿತುಕೊಳ್ಳಲು ಪ್ರಾರಂಭಿಸುತ್ತೇನೆ, ಅರಸನಾದ ದಾವೀದನಂತೆ ನಾನು ಹೇಳಲೇಬೇಕು, "ಇಂಥ ನಿನ್ನ ಜ್ಞಾನವು ನನಗೆ ಆಶ್ಚರ್ಯವಾಗಿದೆ, ಅದು ಉನ್ನತವಾಗಿದೆ, ನಾನು ಅದನ್ನು ಗ್ರಹಿಸಲಾರೆನು.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಪಶ್ಚಾತ್ತಾಪದ ಅದ್ಭುತವಾದ ಬಹುಮಾನಕ್ಕಾಗಿ ನಾನು ಕೃತಜ್ಞಳಾಗಿದ್ದೇನೆ ಅದು ನನಗೆ ಕಲ್ವಾರಿ ಕ್ರೂಜೆಯಲ್ಲಿ ಪ್ರದರ್ಶಿಸಿದ ಕ್ರಿಸ್ತನ ಪ್ರೀತಿಯನ್ನು ಸ್ವೀಕರಿಸಲು ಸಾಧ್ಯವಾಗ ಮಾಡುತ್ತದೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಕ್ರಿಸ್ತನಲ್ಲಿ ನಂಬಿಕೆಯ ಮೂಲಕ ಮತ್ತು ಆತನು ನನಗೆ ಕೊಡುವ ಬಹುಮಾನದ

ಮೂಲಕ ನಾನು ಆತನ ಬಹುಮಾನಗಳನ್ನು ಸ್ವೀಕರಿಸುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ. ನಾನು ನನ್ನ ಜೀವಿತದಲ್ಲಿ ನನ್ನ ಸಂಪೂರ್ಣ ಚಿತ್ತವನ್ನು ಆತನ ನಡೆಸುವಿಕೆಗೆ ಅಧೀನಪಡಿಸುತ್ತೇನೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________

_______________________________________



ಪಾಠ 11

ಕ್ರಿಸ್ತನ ಸಮಾಧಾನದ ವಾಗ್ದಾನ

(1) ನಮ್ಮ ಮೇಲಿರುವ ಮಹಾ ಪ್ರೀತಿಯಿಂದಾಗಿ ಕ್ರಿಸ್ತನು ಯಾವ ಅದ್ಭುತವಾದ ನಿರೀಕ್ಷೆಯ ವಾಗ್ದಾನವನ್ನು ತನ್ನ ಹಿಂಬಾಲಕರಿಗೆ ಯುಗಯುಗಾಂತರಗಳಲ್ಲಿ ನೀಡಿದ್ದಾನೆ?

ನಾನು ಹೋಗಿ ನಿಮಗೆ ಸ್ಥಳವನ್ನು ಸಿದ್ಧಮಾಡಿದ ಮೇಲೆ ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ  ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು (ಯೋಹಾನ 14:3)

ಕ್ರಿಸ್ತನ ಎರಡನೇ ಬರೋಣದ ವಾಗ್ದಾನವು ಆತನ ಶಿಷ್ಯರ ಮನಸ್ಸಿನಲ್ಲಿ ಯಾವಾಗಲೂ ಹಸಿಯಾಗಿ ಇಟ್ಟುಕೊಳ್ಳಬೇಕು. ಅವರು ಪರಲೋಕಕ್ಕೆ ಏರಿ

ಹೋಗುತ್ತಿರುವದನ್ನು ನೋಡಿದ ಅದೇ ಯೇಸುವು , ತಿರುಗಿ ಬರಲಿಕ್ಕಿದ್ದಾನೆ, ಇಲ್ಲಿ ಕೆಳಗೆ ಯಾರು ಆತನ ಸೇವೆಗೆ ತಮ್ಮನ್ನು ಕೊಟ್ಟಿದ್ದಾರೋ ಅವರನ್ನು ಕರೆದುಕೊಂಡು ಹೋಗಲು ಬರುತ್ತಾನೆ, ಅವರಿಗೆ ಹೇಳಿದ ಅದೇ ಧ್ವನಿ, "ಇಗೋ ನಾನು ಎಲ್ಲಾ ದಿವಸ ನಿಮ್ಮ ಸಂಗಡ ಇದ್ದೇನೆ" ಅವರನ್ನು ಪರಲೋಕ ರಾಜ್ಯದಲ್ಲಿ ತನ್ನ ಸಾನಿಧ್ಯದಲ್ಲಿ ಸ್ವಾಗತಿಸುತ್ತದೆ.

ಯಾರು ಆತನನ್ನು ಪ್ರೀತಿಸಿದ್ದಾರೋ ಮತ್ತು ಆತನಿಗಾಗಿ ಕಾದಿದ್ದಾರೋ ಅವರಿಗೆ ಆತನು ಮಹಿಮೆಯ ಕಿರೀಟವನ್ನು ನೀಡುತ್ತಾನೆ ಮತ್ತು ಗೌರವ ಮತ್ತು ನಿತ್ಯತ್ವವನ್ನು ನೀಡುತ್ತಾನೆ.
ನೀತಿವಂತರಾದ ಸತ್ತವರು ತಮ್ಮ ಸಮಾಧಿಯೊಳಗಿಂದ ಎದ್ದು ಬರುತ್ತಾರೆ ಮತ್ತು ಜೀವಂತವಾಗಿರುವವರು ಅವರೊಂದಿಗೆ ಕರ್ತನನ್ನು ಸಂಧಿಸಲು ಮಧ್ಯಾಕಾಶದಲ್ಲಿ ಎತ್ತಲ್ಪಡುತ್ತಾರೆ. ಅವರು ಯೇಸುವಿನ ಧ್ವನಿಯನ್ನು ಆಲಿಸುತ್ತಾರೆ ಅದು ನಶ್ವರವಾದ ಕಿವಿಗಳು ಎಂದೂ ಆಲಿಸದ ಸುಮಧುರ ಸಂಗೀತವಾಗಿರುತ್ತದೆ, ಅದು ಅವರಿಗೆ ನಿಮ್ಮ ಹೋರಾಟ ಮುಗಿಯಿತು, "ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ,

ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ” ಎಂದು ಹೇಳುತ್ತಾರೆ. ಮತ್ತಾಯ 25: 34.

(2) ಕ್ರಿಸ್ತನು ನಮ್ಮನ್ನು ಸಂತೈಸುವಾತನಾಗಿ ಮತ್ತು ತಾನು ತಿರುಗಿ ಬರುವವರೆಗೆ ನಿರಂತರವಾಗಿ ನಮ್ಮಲ್ಲಿ ನೆಲೆಗೊಳ್ಳುವದಕ್ಕಾಗಿ  ಯಾರನ್ನು ಕಳುಹಿಸುತ್ತೇನೆ ಎಂದು ವಾಗ್ದಾನ ಮಾಡಿದ್ದಾನೆ?

ಆಗ ನಾನು ತಂದೆಯನ್ನು ಕೇಳಿಕೊಳ್ಳುವೆನು; ಆತನು ನಿಮಗೆ ಬೇರೊಬ್ಬ ಸಹಾಯಕನನ್ನು ಸದಾಕಾಲ ನಿಮ್ಮ ಸಂಗಡ ಇರುವದಕ್ಕೆ ಕೊಡುವನು. (ಯೋಹಾನ 14:16)

ಕ್ರಿಸ್ತನು ತನ್ನ ಹೆಸರಿನಲ್ಲಿ ಕಳುಹಿಸುವೆನು ಎಂದು  ವಾಗ್ದಾನ ಮಾಡಿದ ಸಂತೈಸುವಾತನು ನಮ್ಮೊಂದಿಗೆ ವಾಸಿಸುತ್ತಾನೆ. ದೇವರ ಪಟ್ಟಣಕ್ಕೆ ನಡೆಸುವ ಮಾರ್ಗದಲ್ಲಿ ಆತನ ಮೇಲೆ ವಿಶ್ವಾಸವಿಡುವವರು ಜಯಿಸದೇ ಇರುವ ಯಾವುದೇ ಕಠಿಣತೆಗಳು ಇಲ್ಲದಿರುವಂತೆ. ಅವರು ತಪ್ಪಿಸಿಕೊಳ್ಳಲಾರದ ಅಪಾಯಗಳು ಇಲ್ಲದಿರುವಂತೆ. ಆತನು ಪರಿಹಾರವನ್ನು ಒದಗಿಸದಿರುವ ದುಃಖವು ಅಲ್ಲಿ ಇಲ್ಲ, ವೇದನೆಯಿಲ್ಲ ಮನುಷ್ಯನ ಬಲಹೀನತೆಗಳಿಲ್ಲ.

ಯಾರೊಬ್ಬರೂ ಅಧೈರ್ಯ ಮತ್ತು ನಿರಾಶೆಯಲ್ಲಿ ತಮ್ಮನ್ನು ತಾವು ಕಳೆದುಕೊಳ್ಳುವದಿಲ್ಲ. ಸೈತಾನನು ನಿಮ್ಮ ಬಳಿಗೆ ಕ್ರೂರವಾದ ಸಲಹೆಗಳೊಂದಿಗೆ ಬರಬಹುದು. “ನಿಮ್ಮ ವಿಷಯ ನಿರೀಕ್ಷೆಯಿಲ್ಲದ್ದಾಗಿದೆ. ನಿಮ್ಮನ್ನು ವಿಮೋಚಿಸಲು ಸಾಧ್ಯವಿಲ್ಲ.” ಆದರೆ ಕ್ರಿಸ್ತನಲ್ಲಿ ನಿಮಗೆ ನಿರೀಕ್ಷೆ ಉಂಟು. ದೇವರು ನಮ್ಮನ್ನು ನಮ್ಮ ಸಾಮರ್ಥ್ಯದಿಂದ ಜಯಿಸಲು ಬಿಡಲಿಲ್ಲ. ಆತನು ನಮಗೆ ತನ್ನ ಸಮೀಪಕ್ಕೆ ಬರಲು ಕರೆನೀಡುತ್ತಿದ್ದಾನೆ. ನಾವು ನಮ್ಮ ಆತ್ಮವನ್ನು ಮತ್ತು ದೇಹವನ್ನು ಕುಗ್ಗಿಸುವ  ಯಾವುದೇ ಕಠಿಣತೆಗಳನ್ನು ಎದುರಿಸುತ್ತಿರಲಿ. ಆತನು ನಮ್ಮನ್ನು ಸ್ವತಂತ್ರರನ್ನಾಗಿಸಲು ಕಾಯುತ್ತಿದ್ದಾನೆ.

(3) ಯಾರಿಗೆ ಸಂತೈಸುವಾತನನ್ನು (ಪವಿತ್ರ ಅತ್ಮನನ್ನು) ಸಂಪೂರ್ಣ ಅಳತೆಯಲ್ಲಿ ನೀಡಲಾಗುತ್ತದೆ?

ಈ ಕಾರ್ಯಗಳಿಗೆ ನಾವು ಸಾಕ್ಷಿ; ದೇವರು ತನಗೆ ವಿಧೇಯರಾಗುವವರಿಗೆ ದಯಪಾಲಿಸಿರುವ ಪವಿತ್ರಾತ್ಮನೂ ಸಾಕ್ಷಿ ಎಂದು ಹೇಳಿದರು. (ಅ.ಕೃ. 5:32)

ಕ್ರಿಸ್ತನು ಪವಿತ್ರಾತ್ಮನ ವಾಗ್ದಾನವನ್ನು ತನ್ನ ಸಭೆಗೆ ಮಾಡಿದ್ದಾನೆ ಮತ್ತು ಆ ವಾಗ್ದಾನವು ಆದಿ ಶಿಷ್ಯರಿಗೆ ಎಷ್ಟು ಅನ್ವಯಿಸುತಿತ್ತೋ ಅಷ್ಟೇ ನಮಗೂ ಅನ್ವಯಿಸುತ್ತದೆ. ಆದರೆ ಇತರ

ವಾಗ್ದಾನಗಳಂತೆ ಇದನ್ನು ಶರತ್ತಿನ ಮೇಲೆ ನೀಡಲಾಗುತ್ತಾದೆ. ನಂಬುವ ಮತ್ತು ಕರ್ತನ ವಾಗ್ದಾನವನ್ನು ಹೊಂದುತ್ತೇವೆ ಎಂದು ಪ್ರಕಟಿಸುವ ಅನೇಕರಿದ್ದಾರೆ; ಅವರು ಕ್ರಿಸ್ತನ ಮತ್ತು ಪವಿತ್ರಾತ್ಮನ  ಕುರಿತು ಮಾತಾಡುತ್ತಾರೆ ಆದಾಗ್ಯೂ ಯಾವ ಪ್ರಯೋಜನವನ್ನು ಹೊಂದುವದಿಲ್ಲ. ಅವರು ತಮ್ಮ ಆತ್ಮವನ್ನು ದೈವೀಕ ಬಲದ ಮೂಲಕ ನಡೆಸಲು ಮತ್ತು ನಿಯಂತ್ರಿಸಲು ಅಧೀನಪಡಿಸುವದಿಲ್ಲ. ನಾವು ಪವಿತ್ರಾತ್ಮನನ್ನು ಉಪಯೋಗಿಸಲಾರೆವು. ಆತ್ಮನು ನಮ್ಮನ್ನು ಉಪಯೋಗಿಸಬೇಕು. ದೇವರ ಆತ್ಮನು ತನ್ನ ಜನರಲ್ಲಿ ಕಾರ್ಯ ಮಾಡುತ್ತಾನೆ. “ತನ್ನ ಸುಚಿತ್ತವನ್ನು ನೆರವೇರಿಸಬೇಕೆಂದು ನಿಮ್ಮಲ್ಲಿ ಉದ್ದೇಶವನ್ನೂ ಪ್ರಯತ್ನವನ್ನೂ ಉಂಟುಮಾಡುತ್ತಾನೆ.” ಫಿಲಿಪ್ಪಿ 2:13. ಆದರೆ ಅನೇಕರು ಅವನಿಗೆ ಅಧೀನಪಡಿಸುವದಿಲ್ಲ. ಅವರು ತಮ್ಮನ್ನು  ತಾವೆ ನಿರ್ವಹಿಸಲು ಬಯಸುತ್ತಾರೆ. ಈ ಕಾರಣದಿಂದಾಗಿ ಅವರು ಪರಲೋಕದ ವರಗಳನ್ನು ಹೊಂದುವದಿಲ್ಲ. ಯಾರು ದೇವರಲ್ಲಿ ದೀನತೆಯಿಂದ ಕಾದಿರುತ್ತಾರೋ. ಯಾರು ಆತನ ನಡೆಸುವಿಕೆ ಮತ್ತು ಕೃಪೆಯನ್ನು ನಿರೀಕ್ಷಿಸುತ್ತಾರೋ ಅವರಿಗೆ ಆತ್ಮನು ಕೊಡಲ್ಪಡುತ್ತಾನೆ. ದೇವರ ಬಲ ಅವರ ಬೇಡಿಕೆ ಮತ್ತು ಸ್ವೀಕರಿಸುವಿಕೆಗಾಗಿ ಕಾದಿರುತ್ತದೆ.

ವಾಗ್ದಾನ ಮಾಡಿದ ಈ ಆಶೀರ್ವಾದ, ನಂಬಿಕೆಯ ಮೂಲಕ ಹೊಂದಿಕೊಳ್ಳಬೇಕು, ಅದು ಎಲ್ಲಾ ಆಶೀರ್ವಾದಗಳನ್ನು ತನ್ನೊಂದಿಗೆ ತರುತ್ತದೆ. ಇವುಗಳನ್ನು ಆತನ ಸಮೃದ್ಧಿಯಾದ ಕೃಪೆಗೆ ಅನುಗುಣವಾಗಿ ಕೊಡಲ್ಪಡುತ್ತದೆ ಮತ್ತು ಆತನು ಪ್ರತಿಯೊಂದು ಆತ್ಮಕ್ಕೆ ಅದರ ಸಾಮರ್ಥ್ಯಕ್ಕೆ ಅನುಗುಣವಾಗಿ ಕೊಡಲು ಸಿದ್ಧನಾಗಿದ್ದಾನೆ.

ತನ್ನನ್ನು ಬದಿಗಿರಿಸಿ ಪವಿತ್ರಾತ್ಮನು ತನ್ನ ಹೃದಯದಲ್ಲಿ ಮತ್ತು ಜೀವಿತವನ್ನು ಸಂಪೂರ್ಣವಾಗಿ ಪ್ರತಿಷ್ಟಿಸಿ ಕಾರ್ಯ ಮಾಡಲು ಸ್ಥಳವನ್ನು ನೀಡುತ್ತಾನೋ ಅವನಿಗೆ ದೊರೆಯುವ ಪ್ರಯೋಜನೀಯತೆಗಳಿಗೆ ಮಿತಿಯಿಲ್ಲ.

(4) ನಾವು ಆತನನ್ನು ನಮ್ಮ ಜೀವಿತದಲ್ಲಿ ನೆಲೆಸುವ ಅತಿಥಿಯಾಗಿ ಆಮಂತ್ರಿಸುವುದಾದರೆ ಕ್ರಿಸ್ತನು ಯಾವ ಅಮೂಲ್ಯ ಬಹುಮಾನವನ್ನು ನಮಗೆ ಕೊಡಲು ವಾಗ್ದಾನ ಮಾಡಿದ್ದಾನೆ?

ಶಾಂತಿಯನ್ನು ನಿಮಗೆ ಬ್ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ; ಲೋಕವು ಕೊಡುವ ರೀತಿಯಿಂದ ನಾನು ನಿಮಗೆ ಕೊಡುವದಿಲ್ಲ. ನಿಮ್ಮ ಹೃದಯವು ಕಳವಳಗೊಳ್ಳದಿರಲಿ ಹೆದರದಿರಲಿ. (ಯೋಹಾನ 14:27)

ನಾವು ಕ್ರಿಸ್ತನನ್ನು ನಮ್ಮ ಆತ್ಮದಲ್ಲಿ ನೆಲಸುವ ಅತಿಥಿಯನ್ನಾಗಿ ಸ್ವೀಕರಿಸುವಾಗ ಎಲ್ಲಾ ಗ್ರಹಿಕೆಯನ್ನು ಉಂಟುಮಾಡುವ ದೇವರ ಸಮಾಧಾನವು ನಮ್ಮ ಹೃದಯ ಮತ್ತು ಮನಸ್ಸುಗಳಲ್ಲಿ ಕ್ರಿಸ್ತ ಯೇಸುವಿನ ಮೂಲಕ ನೆಲೆಯಾಗಿರುತ್ತದೆ. ಭೂಲೋಕದಲ್ಲಿ ರಕ್ಷಕನ ಜೀವಿತ, ಘರ್ಷಣೆಗಳ ಮಧ್ಯದಲ್ಲಿ ವಾಸಿಸಿದಾಗಲೂ, ಸಮಾಧಾನದ ಜೀವಿತವಾಗಿತ್ತು. ಕೋಪಗೊಂಡ ವೈರಿಗಳು ನಿರಂತರವಾಗಿ ಆತನನ್ನು ಪೀಡಿಸುತ್ತಿದ್ದರೂ, ಆತನು ಹೇಳಿದನು, ನನ್ನನ್ನು ಕಳುಹಿಸಿಕೊಟ್ಟಾತನು ನನ್ನ ಸಂಗಡ ಇದ್ದಾನೆ, ನಾನು ಆತನಿಗೆ ಮೆಚ್ಚಿಕೆಯಾದದ್ದನ್ನು ಯಾವಾಗಲೂ ಮಾಡುವದರಿಂದ ಆತನು ನನ್ನನ್ನು ಒಂಟಿಗನಾಗಿ ಬಿಡಲಿಲ್ಲ ಅಂದನು. ಯೋಹಾನ 8: 29. ಮಾನವನ ಅಥವಾ ಸೈತಾನನ ಕೋಪದ ಬಿರುಗಾಳಿಯು ದೇವರೊಂದಿಗಿರುವ ಶಾಂತವಾದ ಮತ್ತು ಪರಿಪೂರ್ಣವಾದ ಅನ್ಯೋನ್ಯತೆಗೆ ತೊಂದರೆಯನ್ನುಂಟು ಮಾಡುವದಿಲ್ಲ. ಮತ್ತು ಆತನು ನಮಗೆ ಹೇಳುತ್ತಾನೆ, “ಶಾಂತಿಯನ್ನು ನಿಮಗೆ ಬ್ಬಿಟ್ಟುಹೋಗುತ್ತೇನೆ, ನನ್ನಲ್ಲಿರುವಂಥ ಶಾಂತಿಯನ್ನು ನಿಮಗೆ ಕೊಡುತ್ತೇನೆ” “ನನ್ನ ನೊಗವನ್ನು ನಿಮ್ಮ ಮೇಲೆ ತೆಗೆದುಕೊಂಡು ನನ್ನಲ್ಲಿ ಕಲಿತುಕೊಳ್ಳಿರಿ; ಆಗ ನಿಮ್ಮ ಆತ್ಮಗಳಿಗೆ ವಿಶ್ರಾಂತಿ

ಸಿಕ್ಕುವದು”  ಯೋಹಾನ 14:27; ಮತ್ತಾಯ 11:29. ದೇವರ ಮಹಿಮೆಗಾಗಿ ನನ್ನ ನೊಗವನ್ನು ಸೇವೆಯ ನೊಗವನ್ನು ನಿಮ್ಮ ಮೇಲೆ ತೆಗೆದುಕೊಳ್ಳಿರಿ ಮತ್ತು ನೀವು ನೊಗವು ಸರಳವಾಗಿರುವದನ್ನು ಮತ್ತು ಹೊರೆಯು ಹಗುರವಾಗಿರುವದನ್ನು ಕಾಣುವಿರಿ.

(5) ಈ ವಚನದಲ್ಲಿ ಕ್ರಿಸ್ತನ ಉದಾಹರಣೆಯನ್ನು ಅನುಸರಿಸಲು, ನಮ್ಮ ಕುರಿತು ನಾವು ಏನನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಇದರಿಂದಾಗಿ ನಮ್ಮ ಸಮಾಧಾನವು ನಾಶವಾಗುವದಿಲ್ಲ?

ನನ್ನಷ್ಟಕ್ಕೆ ನಾನು ಏನೂ ಮಾಡಲಾರೆನು; ತಂದೆ ಹೇಳಿದ್ದನ್ನು ಕೇಳಿ ನ್ಯಾಯತೀರಿಸುತ್ತೇನೆ; ಮತ್ತು ಸ್ವಂತ ಚಿತ್ತ ನೆರವೇರಬೇಕೆಂದು ಅಪೇಕ್ಷಿಸದೆ ನನ್ನನ್ನು ಕಳುಹಿಸಿದಾತನ ಚಿತ್ತ ನೆರವೇರಬೇಕೆಂದು ಅಪೇಕ್ಷಿಸುವದರಿಂದ ನಾನು ಮಾಡುವ ತೀರ್ಪು ನ್ಯಾಯವಾಗಿದೆ. (ಯೋಹಾನ 5: 30)

ನಮ್ಮ ಮೇಲೆ ನಮಗಿರುವ ಪ್ರೀತಿ ಸಮಾಧಾನವನ್ನು ನಾಶಮಾಡುತ್ತದೆ. ಯಾವಾಗ ಸ್ವಾರ್ಥವು ಜೀವಿಸುವಾಗ,

ನಾವು ಅದನ್ನು ಮನಸ್ಸನ್ನು ನೋಯಿಸುವ ಮತ್ತು ಅವಮಾನದಿಂದ ಕಾಯ್ದುಕೊಳ್ಳಲು ಯಾವಾಗಲೂ ಸಿದ್ಧರಾಗಿರುತ್ತೇವೆ: ಆದರೆ ನಾವು ಸತ್ತಿದ್ದೇವೆ ನಮ್ಮ ಜೀವವು ಕ್ರಿಸ್ತನಲ್ಲಿ ದೇವರಿಗೆ ಮರೆಯಾಗಿಡಲ್ಪಟ್ಟಿದೆ ನಾವು ನಿರ್ಲಕ್ಷತನವನ್ನು ಮತ್ತು ಅವಮಾನವನ್ನು ಹೃದಯಕ್ಕೆ ತೆಗೆದುಕೊಳ್ಳುವದಲ್ಲ ಬದಲಾಗಿ ನಾವು ನಿಂದನೆಗೆ ಕಿವುಡರು ಮತ್ತು ತಿರಸ್ಕಾರ ಮತ್ತು ಅವಮಾನಕ್ಕೆ ಕುರುಡರು ಆಗಿರಬೇಕು. “ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ ದಯೆ ತೋರಿಸುವದು, ಪ್ರೀತಿಯು ಹೊಟ್ಟೇಕಿಚ್ಚು ಪಡುವದಿಲ್ಲ, ಸ್ವಪ್ರಯೋಜನವನ್ನು ಚಿಂತಿಸುವದಿಲ್ಲ. ಸಿಟ್ಟುಗೊಳ್ಳುವದಿಲ್ಲ, ಅಪಕಾರವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವದಿಲ್ಲ; ಅನ್ಯಾಯವನ್ನು ನೋಡಿ ಸಂತೋಷಪಡದೆ ಸತ್ಯಕ್ಕೆ ಜಯವಾಗುವಲ್ಲಿ ಸಂತೋಷಪಡುತ್ತದೆ; ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ. ಎಲ್ಲವನ್ನೂ ನಂಬುತ್ತದೆ, ಎಲ್ಲವನ್ನೂ ನಿರೀಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿ ಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದುಹೋಗುವದಿಲ್ಲ” 1ಕೊರಿಂಥ 13:4-8

ಇಹಲೋಕದ ಮೂಲಗಳಿಂದ ಸೆಳೆದುಕೊಂಡ ಸಂತೋಷವು ಪರಿಸ್ಥಿತಿಗೆ ಅನುಗುಣವಾಗಿ ಬದಲಾಗುತ್ತವೆ. ಆದರೆ ಕ್ರಿಸ್ತನ ಸಮಾಧಾನ ಸ್ಥಿರವಾದ ಮತ್ತು

ನೆಲೆಗೊಳ್ಳುವ ಸಮಾಧಾನವಾಗಿದೆ. ಅದು ಜೀವಿತದ ಪರಿಸ್ಥಿತಿಗಳನ್ನು, ಲೋಕದ ವಸ್ತುಗಳನ್ನು ಅಥವಾ ಇಹಲೋಕದ ಸ್ನೇಹಿತರ ಸಂಖ್ಯೆಯನ್ನು ಅವಲಂಬಿಸಿರುವದಿಲ್ಲ. ಕ್ರಿಸ್ತನು ಜೀವ ಕೊಡುವ ನೀರಿನ ಬುಗ್ಗೆಯಾಗಿದ್ದಾನೆ ಆತನಿಂದ ಎಳೆದುಕೊಂಡ ಸಂತೋಷವು ಎಂದಿಗೂ ಬಿದ್ದುಹೋಗುವದಿಲ್ಲ.

(6) ಪರಿಪೂರ್ಣ ಸಮಾಧಾನದಲ್ಲಿ ಇರುಸುತ್ತೇನೆ ಎಂದು ಕರ್ತನು ಯಾರಿಗೆ ವಾಗ್ದಾನ ಮಾಡುತ್ತಾನೆ?

ಸ್ಥಿರಚಿತ್ತವನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ. (ಯೆಶಾಯ 26:3)

ಯೇಸು ಕ್ರಿಸ್ತನ ಧರ್ಮವನ್ನು (ಸಂಬಧವನ್ನು) ಆನಂದಿಸುವ  ಪುರುಷ ಮತ್ತು ಸ್ತ್ರೀಯರು ಚಡಪಡಿಸುವವರಲ್ಲ, ಅವಿಶ್ರಾಂತರಲ್ಲ,  ಅತೃಪ್ತರಲ್ಲ, ಬದಲಾಗುವವರಲ್ಲ; ಕ್ರಿಸ್ತನ ಸಮಾಧಾನವು ಅವರ ಹೃದಯದಲ್ಲಿ ಅವರ ನಡತೆಗೆ ಬಲವನ್ನು ನೀಡುತ್ತದೆ.

ನಿಮ್ಮ ಆತ್ಮದ ಸಮಾಧಾನವನ್ನುನೀವು ಈಗತಾನೆ ಸ್ವೀಕರಿಸಿದ ವಿಶ್ರಾಂತಿ ಮತ್ತು ಭರವಸೆಯನ್ನು,  ಕದ್ದುಕೊಳ್ಳಲು ಯಾವುದಕ್ಕೂ ನೀವು ಅನುಮತಿಸ ಬಾರದು. ನಿಮ್ಮ ವಾಗ್ದಾನವನ್ನು ವಿನಿಯೋಗಿಸಿರಿ; ಕರ್ತನು ಸೂಚಿಸಿದ

ಅಂಶಗಳೊಂದಿಗೆ ಸಮ್ಮತಿಸುವಾಗ ಶರತ್ತಿನೊಂದಿಗೆ ಎಲ್ಲವೂ ನಿಮ್ಮವೇ. ನಿಮ್ಮ ಎಲ್ಲಾ ಮಾರ್ಗಗಳನ್ನು ಅಧೀನಪಡಿಸುವಾಗ, ಅದು ತುಂಬ ಬುದ್ಧಿವಂತಿಕೆಯಿಂದ ಕೂಡಿದ್ದಾಗಿದೆ, ಕ್ರಿಸ್ತನ ಮಾರ್ಗಗಳನ್ನು ಗೆದ್ದು ಕೊಳ್ಳುವದು ಆತನ ಪ್ರೀತಿಯಲ್ಲಿ ಪರಿಪೂರ್ಣ ವಿಶ್ರಾಂತಿಯ ರಹಸ್ಯವಾಗಿದೆ. ಕ್ರಿಸ್ತನ ಸೇವೆಗೆ ಪ್ರತಿಷ್ಟಿಸಲ್ಪಟ್ಟ ಆತ್ಮವು ಲೋಕವು ಕೊಡಲಾರದ ಮತ್ತು ಕದ್ದುಕೊಳ್ಳಲಾರದ ಸಮಾಧಾನವನ್ನು ನೀಡುತ್ತದೆ.

(7) ನಾವು ಪರಲೋಕದ ಸಂಗತಿಗಳಲ್ಲಿ ನೆಲೆಗೊಳ್ಳುವಾಗ ಮತ್ತು ನಂಬಿಕೆಯ ಮೂಲಕ ನಮ್ಮ ಹೃದಯಗಳಲ್ಲಿ ಕ್ರಿಸ್ತನು ವಾಸಿಸಲು ಅನುಮತಿಸುವಾಗ ಫಲಿತಾಂಶ ಏನಾಗಿರುತ್ತದೆ?

ಕ್ರಿಸ್ತನು ನಿಮ್ಮ ನಂಬಿಕೆಯ ಮೂಲಕ ನಿಮ್ಮ ಹೃದಯಗಳಲ್ಲಿ ವಾಸಮಾಡುವ ಹಾಗೆಯೂ ಅತನು ತನ್ನ ಮಹಿಮಾತಿಶಯದ ಪ್ರಕಾರ ಅನುಗ್ರಹಿಸಲಿ. (ಎಫೆಸ 3:17).

ಜ್ಞಾಪಕದಲ್ಲಿಟ್ಟುಕೊಳ್ಳಿರಿ, ಆತನಲ್ಲಿ ದೇವರ ಸರ್ವ ಸಂಪೂರ್ಣತೆ ದೈಹೀಕವಾಗಿ ವಾಸವಾಗಿದೆ. ಒಂದುವೇಳೆ ಕ್ರಿಸ್ತನು ನಂಬಿಕೆಯ ಮೂಲಕ ನಮ್ಮ ಹೃದಯಗಳಲ್ಲಿ ವಾಸಿಸುವುದಾದರೆ

ನಾವು ಆತನ ಜೀವಿತದ ಮಾದರಿಯನ್ನು ಅನುಸರಿಸುವವರಾಗಿದ್ದೇವೆ. ಯೇಸುವಿನಂತಾಗಲು ಪ್ರಯತ್ನಿಸುತ್ತೇವೆ – ಪರಿಶುದ್ಧ, ಸಮಾಧಾನ ಮತ್ತು ದೋಷರಹಿತರಾಗಿ. ನಾವು ನಮ್ಮ ನಡೆತೆಯಲ್ಲಿ ಕ್ರಿಸ್ತನನ್ನು ಪ್ರಕಟಿಸುತ್ತೇವೆ. ನಾವು ಕೇವಲ ಬೆಳಕನ್ನು ಸ್ವೀಕರಿಸಿ ಮತ್ತು ಹೀರಿಕೊಳ್ಳುವದು ಮಾತ್ರವಲ್ಲ ನಾವು ಅದನ್ನು ಹರಡುತ್ತೇವೆ. ನಾವು ಯೇಸು ನಮಗೆ ಯಾರಾಗಿದ್ದಾನೆ ಎಂಬುದರ ಹೆಚ್ಚು ಸ್ಪಷ್ಟವಾದ ಮತ್ತು ವಿಶಿಷ್ಟವಾದ  ದೃಷ್ತಿಕೋನವನ್ನು ಹೊಂದಿಕೊಳ್ಳುತ್ತೇವೆ. ಯೇಸು ಕ್ರಿಸ್ತನ ಜೀವಿತದಲ್ಲಿರುವ ಸಮರೂಪತೆ, ಒಳ್ಳೇತನ, ದಯೆ ನಮ್ಮ ಜೀವಿತದಲ್ಲಿ ಪ್ರಕಾಶಿಸುತ್ತವೆ.

ಯೇಸು ನಮ್ಮ ಹೃದಯದಲ್ಲಿ ನಂಬಿಕೆಯ ಮೂಲಕ ನೆಲೆಸಿರುವಾಗ, ಕ್ರಿಸ್ತನು ನಮಗೆ ನೀಡಿರುವ ಪಾಠಗಳನ್ನು ಅಭ್ಯಾಸಿಸುತ್ತೇವೆ. ನಾವು ಯೇಸು ಕ್ರಿಸ್ತನ ಕುರಿತು ಇಂಥ ಉನ್ನತವಾದ ದೃಷ್ಟಿಕೋನವನ್ನು ಹೊಂದಿಕೊಳ್ಳುತ್ತೇವೆ  ಆಗ ಸ್ವಾರ್ಥವನ್ನು ಕಡೆಗಣಿಸುತ್ತೇವೆ. ನಮ್ಮ ಮಮತೆಯ ಕೇಂದ್ರ ಯೇಸುವಾಗುತ್ತಾನೆ, ನಮ್ಮ ಆಲೋಚನೆಗಳು

ಪರಲೋಕದವುಗಳಾಗಿರುತ್ತವೆ. ಕ್ರಿಸ್ತನು ಹೆಚ್ಚಿಸಲ್ಪಡುತ್ತಾನೆ ನಾವು ತಗ್ಗಿಸಲ್ಪಡುತ್ತೇವೆ.

ಮನಸ್ಸು ಪರಲೋಕದ ಸಂಗತಿಗಳ ಮೇಲೆ ನೆಲೆಸಲು ತರಬೇತಿಯನ್ನು ಹೊಂದಬೇಕು. ಯೇಸು ಕ್ರಿಸ್ತನ ಒಳ್ಳೇತನವನ್ನು ಗ್ರಹಿಸಿಕೊಳ್ಳುವದರ ಫಲವಾಗಿ ದೀನತೆ ಬರುತ್ತದೆ. ಕ್ರಿಸ್ತನ ನಡತೆಯ ಅತ್ಯುತ್ತಮತೆಯಲ್ಲಿ ನೆಲೆಗೊಳ್ಳುವಾಗ, ನಾವು ಪಾಪದ ಅಪರಾಧದ ಗುಣಲಕ್ಷಣಗಳನ್ನು ಕಾಣುತ್ತೇವೆ ಮತ್ತು ನಂಬಿಕೆಯ ಮೂಲಕ ಯೇಸು ಕ್ರಿಸ್ತನ ನೀತಿವಂತಿಕೆಯನ್ನು ಗ್ರಹಿಸಿಕೊಳ್ಳುತ್ತೇವೆ. ನಾವು ಕ್ರಿಸ್ತನಲ್ಲಿರುವ ಮೌಲ್ಯಗಳನ್ನು ಬೆಳೆಸಿಕೊಳ್ಳುತ್ತೇವೆ, ಇದರಿಂದಾಗಿ ನಾವು ಇತರರಿಗೆ ಆತನ ಗುಣಲಕ್ಷಣಗಳನ್ನು ಪ್ರತಿನಿಧಿಸುತ್ತೇವೆ. ನಾವು ಕಲ್ವಾರಿ ಶಿಲುಬೆಯನ್ನು ನೋಡುವಾಗ ನಾವು ನಮ್ಮನ್ನು ಉನ್ನತಿಪಡಿಸುವದಿಲ್ಲ ಬದಲಾಗಿ ಯಾವಾಗಲೂ ನಮ್ಮ ಅಯೋಗ್ಯತೆಯನ್ನು ಮತ್ತು ನಮ್ಮ ರಕ್ಷಣೆಗಾಗಿ ಪರಲೋಕವು ಎಷ್ಟು ಬೆಲೆಯನ್ನು ನೀಡಿದೆ ಎಂಬುದನ್ನು ಗಮನದಲ್ಲಿಟ್ಟುಕೊಳ್ಳುತ್ತೇವೆ; ನಾವು ಕ್ರಿಸ್ತನ ಅದ್ವಿತೀಯ ಪ್ರೀತಿಯನ್ನು ಗ್ರಹಿಸಿಕೊಳ್ಳುತ್ತೇವೆ.

(8) ಪವಿತ್ರಾತ್ಮನ ಮನವರಿಕೆಯಿಂದಾಗಿ ಅಳೆಯಲಾರದ ಆಯಾಮಗಳನ್ನು

ಮತ್ತು ಕ್ರಿಸ್ತನ ಪ್ರೀತಿಯನ್ನು ಗ್ರಹಿಸಿಕೊಳ್ಳಲು ಪ್ರಯತ್ನಿಸುವಾಗ ನಾವು ಯಾವುದರಿಂದ ತುಂಬಲ್ಪಡುತ್ತೇವೆ?

ನೀವು ದೇವರ ಪ್ರೀತಿಯಲ್ಲಿ ನೆಲೆಗೊಂಡು ನಿಂತು ಅದರ ಉದ್ದ ಅಗಲ ಎತ್ತರ ಆಳ ಎಷ್ಟೆಂಬುದನ್ನು ದೇವ ಜನರೆಲ್ಲರೊಂದಿಗೆ ಗ್ರಹಿಸಲೂ ಜ್ಞಾನಕ್ಕೆ ಮೀರುವ ದೇವರ ಪ್ರೀತಿಯನ್ನು ತಿಳಿದುಕೊಳ್ಳಲೂ ಪೂರ್ಣಶಕ್ತರಾಗಿದ್ದು ದೇವರ ಸಂಪೂರ್ಣತೆಯ ಮಟ್ಟಿಗೂ ಪರಿಪೂರ್ಣರಾಗುವ ಹಾಗೆ ನಿಮಗೆ ದಯಪಾಲಿಸಲಿ ಎಂದು ಆತನನ್ನು ಬೇಡಿಕೊಳ್ಳುತ್ತೇನೆ. (ಎಫೆಸ 3:18-19). ಸಂತತಿಯಿಂದ ಸಂತತಿಯವರೆಗೆ ಮಾನವರ ಹೃದಯಗಳ ವಹನ ಸಾಧನದ ಮೂಲಕ ಇಳಿದು ಬಂದ ತಂದೆಯ ಪ್ರೀತಿ, ಮನುಷ್ಯರ ಆತ್ಮದಲ್ಲಿ ಹೃದಯದ ಕೋಮಲತೆಯ ಎಲ್ಲಾ ಬುಗ್ಗೆಗಳನ್ನು, ಅಪರಿಮಿತವಾದದ್ದಕ್ಕೆ ಹೋಲಿಸುವಾಗ ಮಿತಿಯಿಲ್ಲದ ಸಾಗರದ ಚಿಕ್ಕತೊರೆಯಂತೆ ತೆರೆದಿದೆ, ಮುಗಿದುಹೋಗದ ದೇವರ ಪ್ರೀತಿ. ತುಟಿಗಳು ಉಚ್ಚರಿಸಲಾರವು; ಲೇಖನಿ ಅದನ್ನು ಚಿತ್ರಿಸಲಾರದು. ನೀವು ನಿಮ್ಮ ಜೀವಿತದಲ್ಲಿ ಪ್ರತಿದಿನ ಇದನ್ನು ಧ್ಯಾನ ಮಾಡಬಹುದು; ನೀವು ಧೃಢನಿಶ್ಚಯದಿಂದ ಅದನ್ನು ತಿಳಿದುಕೊಳ್ಳಲು ವೇದವಾಕ್ಯವನ್ನು ಸಂಶೋಧಿಸಬಹುದು; ಪರಲೋಕದ

ತಂದೆಯ ಪ್ರೀತಿ ಮತ್ತು ಅನುಕಂಪವನ್ನು ಗ್ರಹಿಸಿಕೊಳ್ಳುವ ಪ್ರಯತ್ನದಲ್ಲಿ ನೀವು ದೇವರು ನಿಮಗೆ ಕೊಟ್ಟಿರುವ  ಪ್ರತಿಯೊಂದನ್ನು ಬಲ ಮತ್ತು ಸಾಮರ್ಥ್ಯಗಳನ್ನು ಆಜ್ಞಾಪಿಸಬಹುದು. ಆದಾಗ್ಯೂ ಅದರಿಂದಾಚೆಗೆ ಅನಂತವಾದದ್ದು ಇದೆ. ನೀವು ಆ ಪ್ರೀತಿಯನ್ನು ಯುಗಯುಗಾಂತರಗಳ ವರೆಗೆ ಅಧ್ಯಯನ ಮಾಡಬಹುದು. ಆದಾಗ್ಯೂ ನೀವು ಎಂದಿಗೂ ಸಂಪೂರ್ಣವಾಗಿ ಲೋಕಕ್ಕಾಗಿ ತನ್ನ ಒಬ್ಬನೇ ಮಗನನ್ನು ನೀಡುವದರಲ್ಲಿ ಇದ್ದ ದೇವರ ಪ್ರೀತಿಯ ಅದರ ಉದ್ದ ಮತ್ತು ಅಗಲ, ಆಳ ಮತ್ತು ಎತ್ತರವನ್ನು ಗ್ರಹಿಸಿಕೊಳ್ಳಲಾರಿರಿ. ನಿತ್ಯತ್ವವು ತಾನೇ ಇದನ್ನು ಸಂಪೂರ್ಣವಾಗಿ ಪ್ರಕಟಿಸಲಾರದು. ಆದಾಗ್ಯೂ ನಾವು ಸತ್ಯವೇದವನ್ನು ಅಧ್ಯಯನ ಮಾಡುತ್ತಿರುವ ಹಾಗೆ ಮತ್ತು ಕ್ರಿಸ್ತನ ಜೀವಿತವನ್ನು ಮತ್ತು ವಿಮೋಚನೆಯ ಯೋಜನೆಯನ್ನು ಧ್ಯಾನ ಮಾಡುತ್ತಿರುವ ಹಾಗೆ, ಈ ಮಹತ್ತರ ಮುಖ್ಯವಿಷಯಗಳು ನಮ್ಮ ತಿಳುವಳಿಕೆಯನ್ನು ಹೆಚ್ಚು ಹೆಚ್ಚಾಗಿ ತೆರೆಯುತ್ತವೆ.

(9) ನಾವು ಆತನು – ಜೀವ ಕೊಡುವ ರೊಟ್ಟಿ ಮತ್ತು ಜೀವಕರವಾದ ನೀರು ಎಂದು ಹುಡುಕುವುದಾದರೆ ಕ್ರಿಸ್ತನು ನಮಗೆ ಏನು ವಾಗ್ದಾನ ಮಾಡಿದ್ದಾನೆ?

ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ. (ಯೋಹಾನ 6:35).

ಆತ್ಮದ ಹಸಿವೆ ಮತ್ತು ನೀರಡಿಕೆಯನ್ನು ತೃಪ್ತಿಪಡಿಸಲು ಯಾವ ಮಾನವ ದೂತನೂ ಒದಗಿಸಲಾರನು. ಆದರೆ ಯೇಸು ಹೇಳುತ್ತಾನೆ, "ಇಗೋ ಬಾಗಿಲಲ್ಲಿ ನಿಂತುಕೊಂಡು ತಟ್ಟುತ್ತಾ ಇದ್ದೇನೆ; ಯಾವನಾದರು ನನ್ನ ಶಬ್ದವನ್ನು ಕೇಳಿ ಬಾಗಿಲನ್ನು ತೆರೆದರೆ ನಾನು ಒಳಗೆ ಬಂದು ಅವನ ಸಂಗಡ ಊಟಮಾಡುವೆನು, ಅವನು ನನ್ನ ಸಂಗಡ ಊಟಮಾಡುವನು." "ಜೀವಕೊಡುವ ರೊಟ್ಟಿ ನಾನೇ; ನನ್ನ ಬಳಿಗೆ ಬರುವವನಿಗೆ ಎಂದಿಗೂ ಹಸಿವೆಯಾಗುವದಿಲ್ಲ, ನನ್ನನ್ನು ನಂಬುವವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ." ಪ್ರಕಟನೆ 3:20; ಯೋಹಾನ 6:35.

ನಮ್ಮ ದೈಹೀಕ ಬಲವನ್ನು ಉಳಿಸಿಕೊಳ್ಳುವದಕ್ಕೆ ನಮಗೆ ಆಹಾರ ಅಗತ್ಯವಾಗಿರುವಂತೆ, ನಮಗೆ ನಮ್ಮ ಆತ್ಮೀಕ ಜೀವಿತ ಮತ್ತು ಬಲವನ್ನು ಉಳಿಸಿಕೊಳ್ಳಲು ಮತ್ತು ದೇವರ ಕಾರ್ಯಗಳನ್ನು ಮಾಡುವದಕ್ಕೆ ಬಲವನ್ನು ಹೊಂದಲು  ಪರಲೋಕದ ರೊಟ್ಟಿ ಅಗತ್ಯವಾಗಿದೆ. ದೇಹವು

ನಿರಂತರವಾಗಿ ಕ್ರಿಸ್ತನೊಂದಿಗೆ ಅನ್ಯೋನ್ಯತೆಯಲ್ಲಿರುವಂತೆ, ಆತನಿಗೆ ಅಧೀನ ಪಡಿಸಿಕೊಳ್ಳುವದು ಮತ್ತು ಸಂಪೂರ್ಣವಾಗಿ ಆತನ ಮೇಲೆ ಅವಲಂಬಿಸಿರುವದು ಅಗತ್ಯವಾಗಿದೆ.

ಆಯಾಸಗೊಂಡ ಪ್ರಯಾಣಿಕನು ಮರಭೂಮಿಯಲ್ಲಿ ಬುಗ್ಗೆಯನ್ನು ಹುಡುಕುವಂತೆ ಮತ್ತು ಅದನ್ನು ಕಂಡುಕೊಳ್ಳುವಾಗ, ಆತನ  ತೀವ್ರವಾದ ದಾಹವನ್ನು ತಣಿಸುತ್ತದೆ, ಅದರಂತೆ ಕ್ರೈಸ್ತರು ದಾಹಗೊಳ್ಳುತ್ತಾರೆ ಮತ್ತು ಶುದ್ಧವಾದ ಜೀವಕರವಾದ ನೀರಿನ ಬುಗ್ಗೆಯಾದ ಕ್ರಿಸ್ತನಿಂದ ಹೊಂದಿಕೊಳ್ಳಬೇಕು.

(10) ಆಯಾಸಗೊಂಡ ಮತ್ತು ಭಾರವಾದ ಹೊರೆಹೊತ್ತಿರುವವರು ಒಂದುವೇಳೆ ಆತನ ಬಳಿಗೆ ಬಂದರೆ ಕ್ರಿಸ್ತನು ಯಾವ ವಾಗ್ದಾನವನ್ನು ಮಾಡಿದ್ದಾನೆ.?

ಎಲ್ಲೈ ಕಷ್ಟಪಡುವವರೇ ಹೊರೆಹೊತ್ತವರೇ, ನೀವೆಲ್ಲರೂ ನನ್ನ ಬಳಿಗೆ ಬನ್ನಿರಿ; ನಾನು ನಿಮಗೆ ವಿಶ್ರಾಂತಿಕೊಡುವೆನು. (ಮತ್ತಾಯ 1:28)

ಯೇಸು ಕಷ್ಟಪಡುವವರನ್ನು ಮತ್ತು ಹೊರೆಹೊತ್ತಿರುವ ಆದಾಮನ ಗಂಡುಮಕ್ಕಳನ್ನು  ಮತ್ತು ಹೆಣ್ಣುಮಕ್ಕಳನ್ನು ತನ್ನ ಬಳಿಗೆ ಬರಲು ಮತ್ತು ತಮ್ಮ ಭಾರವಾದ ಹೊರೆಯನ್ನು

ತನ್ನ ಮೇಲೆ ಹಾಕಲು ಕರೆಯುತ್ತಿದ್ದಾನೆ. ಆದರೆ ಈ ಆಮಂತ್ರಣವನ್ನು ಆಲಿಸುವ ಅನೇಕರು, ವಿಶ್ರಾಂತಿಗಾಗಿ ಹಂಬಲಿಸುತ್ತಿರುವಾಗ, ಕೊರಕಲು ಮಾರ್ಗದಲ್ಲಿ, ತಮ್ಮ ಭಾರಗಳನ್ನು ತಮ್ಮ ಹೃದಯದ ಸಮೀಪಕ್ಕೆ ತಬ್ಬಿಕೊಳ್ಳುತ್ತಾ ಮುನ್ನಡೆಯುತ್ತಾರೆ. ಯೇಸು ಅವರನ್ನು ಪ್ರೀತಿಸುತ್ತಾನೆ ಮತ್ತು ಅವರ ಭಾರವನ್ನು ಮತ್ತು ತನ್ನ ಬಲವಾದ ತೋಳುಗಳಲ್ಲಿ ಅವರನ್ನು ಹೊರಲು ತವಕಿಸುತ್ತಾನೆ. ಅವರಿಂದ ಸಮಾಧಾನ ಮತ್ತು ವಿಶ್ರಾಂತಿಯನ್ನು ಕಳೆದುಕೊಳ್ಳುವ ಭಯ ಮತ್ತು ಅನಿಶ್ಚಿತತೆಯನ್ನು ಆತನು ತೆಗೆದುಹಾಕುತ್ತಾನೆ; ಆದರೆ ಅವರು ಮೊದಲು ಆತನ ಬಳಿಗೆ ಬರಬೇಕು ಮತ್ತು ತಮ್ಮ ಹೃದಯದ ರಹಸ್ಯ ಸಂಕಟಗಳನ್ನು ಆತನ ಮುಂದೆ ಹೇಳಬೇಕು. ಆತನು ತನ್ನ ಪ್ರೀತಿಗೆ ಸಾಕ್ಷಿಯಾಗಿ ತನ್ನ ಜನರ ಆತ್ಮವಿಶ್ವಾಸವನ್ನು ಅಮಂತ್ರಿಸುತ್ತಾನೆ. ಸಂಪತ್ತು ಒದಗಿಸುವ ಎಲ್ಲಾ ಸಮೃದ್ಧಿಗಿಂತ ದೀನ ಮತ್ತು ವಿಶ್ವಾಸವನ್ನು ಇಡುವ ಹೃದಯ ಆತನಿಗೆ ಹೆಚ್ಚು ಅಮೂಲ್ಯವಾಗಿದೆ. ಒಂದುವೇಳೆ ಅವರು ಕೇವಲ ಮಗು ತನ್ನ ತಂದೆತಾಯಿಗಳ ಬಳಿಗೆ ಬರುವ ಸರಳತೆ ಮತ್ತು ವಿಶ್ವಾಸದಿಂದ ಆತನ ಬಳಿಗೆ ಬಂದರೆ, ಆತನ ಹಸ್ತದ ದೈವೀಕ ಸ್ಪರ್ಶ ಅವರಿಗೆ ಅವರ ಭಾರದಿಂದ ಬಿಡುಗಡೆಯನ್ನು ನೀಡುತ್ತದೆ.

ಯೇಸು ನಮ್ಮ ಅನುಕಂಪವುಳ್ಳ ರಕ್ಷಕನಾಗಿದ್ದಾನೆ, ಆತನು ಮಾರ್ಗ, ಸತ್ಯ ಮತ್ತು ಜೀವವಾಗಿದ್ದಾನೆ. ನಾವು ಆತನ ಧಾರಾಳವಾದ ಕರುಣೆಯ ಕೊಡುಗೆಯನ್ನು ಏಕೆ ಸ್ವೀಕರಿಸಬಾರದು ಮತ್ತು ಜೀವಿತವನ್ನು ಏಕೆ ಇಷ್ಟು ಕಠಿಣವಾಗಿ ಮಾಡಿಕೊಳ್ಳಬೇಕು..... ಕ್ರಿಸ್ತನ ಮಾರ್ಗಗಳು ಅಲ್ಹಾದಕರವಾದ ಮಾರ್ಗಗಳಾಗಿವೆ ಮತ್ತು ಆತನ ಎಲ್ಲಾ ಮಾರ್ಗಗಳು ಸಮಾಧಾನದವುಗಳಾಗಿವೆ. ಒಂದುವೇಳೆ ನಾವು ನಮ್ಮ ಪಾದಗಳಿಗೆ ಒರಟಾದ ದಾರಿಗಳನ್ನು ಮಾಡಿಕೊಂಡರೆ ಮತ್ತು ನಮಗಾಗಿ ಈ ಲೋಕದಲ್ಲಿ ಸಂಪತ್ತನ್ನು ಸಂಗ್ರಹಿಸಲು ಭಾರವಾದ ಹೊರೆಯನ್ನು ನಮ್ಮ ಮೇಲೆ ತೆಗೆದುಕೊಂಡರೆ, ಈಗ ನಾವು ಅದನ್ನು ಬದಲಾಯಿಸೋಣ ಮತ್ತು ಯೇಸು ನಮಗೋಸ್ಕರ ಸಿದ್ಧ ಮಾಡಿದ ಮಾರ್ಗವನ್ನು ಅನುಸರಿಸೋಣ.

(11) ಯಾರು ತಮ್ಮ ಆತ್ಮಗಳನ್ನು ಆತನ ಪರಾಂಬರಿಕೆಗೆ ಅಧೀನ ಪಡಿಸುತ್ತಾರೋ ಅವರಿಗೆ ಕ್ರಿಸ್ತನು ಯಾವ ವಾಗ್ದಾನವನ್ನು ನೀಡಿದ್ದಾನೆ?

ಸ್ಥಿರ ಚಿತ್ತವನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ. ಯೆಹೋವನಲ್ಲಿ ಸದಾ ಭಾರವಸವಿಡಿರಿ; ಯಾಹುಯೆಹೋವನು ಶಾಶ್ವತವಾಗಿ ಆಶ್ರಯಗಿರಿಯಾಗಿದ್ದಾನೆ. (ಯೆಶಾಯ 26:3-4)

ಪರಲೋಕವು ಭೂಮಿಯಲ್ಲಿ ಪ್ರಾರಂಭವಾಗಬೇಕು. ಆತನ ವಾಕ್ಯದಿಂದ ಯಾರು ಕ್ರಿಸ್ತನನ್ನು ತೆಗೆದುಕೊಳ್ಳುತ್ತಾರೋ ಮತ್ತು ತಮ್ಮ ಆತ್ಮವನ್ನು ಆತನ ಪರಾಂಬರಿಕೆಗೆ, ತಮ್ಮ ಜೀವಿತಗಳನ್ನು ಆತನ ಅಪ್ಪಣೆಗೆ ಒಪ್ಪಿಸುತ್ತಾರೋ ಅವರು ಸಮಾಧಾನ ಮತ್ತು ಶಾಂತಿಯನ್ನು ಹೊಂದುತ್ತಾರೆ. ಯೇಸು ಅವರನ್ನು ತನ್ನ ಸಾನಿಧ್ಯದಲ್ಲಿ ಸಂತೋಷಪಡಿಸುವಾಗ ಲೋಕದ ಯಾವ ಸಂಗತಿಯೂ ಅವರನ್ನು ದುಃಖಿಗಳನ್ನಾಗಿ ಮಾಡಲಾರದು. ಪರಿಪೂರ್ಣಸಮ್ಮತಿಯಿಂದ ಪರಿಪೂರ್ಣ ವಿಶ್ರಾಂತಿ. ಕರ್ತನು ಹೇಳುತ್ತಾನೆ, "ಸ್ಥಿರ ಚಿತ್ತವನ್ನು ಶಾಂತಿಯಲ್ಲಿ ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ." ಯೆಶಾಯ 26:3.

ನಮ್ಮ ಜೀವಿತಗಳು ; ಆದರೆ ನಾವು ನಮ್ಮನ್ನು ಜ್ಞಾನಿಯಾದ ಪರಿಣಿತ ಕೆಲಸಗಾರನಿಗೆ ಸಮರ್ಪಿಸುವುದಾದರೆ. ಆತನು ಜೀವಿತದ ಮಾದರಿಯನ್ನು ಮತ್ತು ತನಗೆ ಸ್ವಂತಃ ಮಹಿಮೆ ತರುವಂತ ನಡತೆಯನ್ನು ನೀಡುತ್ತಾನೆ, ಕ್ರಿಸ್ತನ ಮಹಿಮೆಯ – ನಡತೆಯನ್ನು ವ್ಯಕ್ತಪಡಿಸುವ ಆ ನಡತೆ ದೇವರ ಪರದೈಸಿನಲ್ಲಿ ಸ್ವೀಕರಿಸಲ್ಪಡುತ್ತದೆ.

ನವೀಕರಿಸಲ್ಪಟ್ಟ ಜನಾಂಗ ಆತನೊಂದಿಗೆ ಬಿಳಿ ವಸ್ತ್ರದಲ್ಲಿ, ಅವರು ಯೋಗ್ಯರಾಗಿರುವದರಿಂದ ನಡೆಯುತ್ತಾರೆ.

ಯೇಸುವಿನ ಮೂಲಕ ನಾವು ವಿಶ್ರಾಂತಿಯಲ್ಲಿ ಪ್ರವೇಶಿಸುತ್ತೇವೆ, ಪರಲೋಕವು ಇಲ್ಲಿಂದ ಪ್ರಾರಂಭವಾಗುತ್ತದೆ. ನಾವು ಆತನ ಆಮಂತ್ರಣಕ್ಕೆ ಪ್ರತಿಕ್ರಿಯಿಸುತ್ತೇವೆ. ಬನ್ನಿರಿ, ನನ್ನಿಂದ ಕಲಿತುಕೊಳ್ಳಿರಿ. ಹೀಗೆ ಬರುವಾಗ ನಾವು ನಿತ್ಯಜೀವವನ್ನು ಪ್ರಾರಂಭಿಸುತ್ತೇವೆ. ಪರಲೋಕವು ಕ್ರಿಸ್ತನ ಮೂಲಕ ದೇವರನ್ನು ಅವಿರತವಾಗಿ ಸಂಧಿಸುವ ಸ್ಥಳವಾಗಿದೆ. ನಾವು ಆಶೀರ್ವಾದದಾಯಕವಾದ ಪರಲೋಕದಲ್ಲಿ ಧೀರ್ಘಕಾಲ ಇರುತ್ತಿರುವ ಹಾಗೆ, ಹೆಚ್ಚು ಇನ್ನೂ ಹೆಚ್ಚು ವೈಭವ ನಮಗಾಗಿ ತೆರೆಯಲ್ಪಡುತ್ತದೆ; ಮತ್ತು ನಾವು ದೇವರನ್ನು ಹೆಚ್ಚಾಗಿ ತಿಳಿದುಕೊಳ್ಳುತ್ತಿರುವ ಹಾಗೆ ನಮ್ಮ ಸಂತೋಷ ಹೆಚ್ಚು ತೀವ್ರವಾಗುತ್ತದೆ.

ಕ್ರಿಸ್ತನು ಬೇಗನೇ ನಮ್ಮನ್ನು ಮನೆಗೆ ಕರೆದೊಯ್ಯಲು ದೇವರರಾಜ್ಯದ ಭಾದ್ಯತೆಯನ್ನು ನೀಡಲು ಬರುತ್ತಾನೆ. ಆತನು ಅಲ್ಲಿ ಇರುವದನ್ನು ಆಯ್ಕೆ ಮಾಡಿಕೊಂಡಿರುವವರಿಗೆ ಸಿದ್ಧಮಾಡುವದಕ್ಕಾಗಿ ಬರುತ್ತಾನೆ ಎಂದು ನಾನು ಕೃತಜ್ಞಳಾಗಿದ್ದೇನೆ.

ದುಂಡು ಸುತ್ತಿರಿ: ಹೌದು  ನಿರ್ಧರಿಸಿಲ್ಲ

ಎಲ್ಲಾ ಆಶೀರ್ವಾದಗಳನ್ನು ತನ್ನ ಬಂಡಿಯಲ್ಲಿ ತರುವ ವಾಗ್ದಾನ ಮಾಡಿದ ಆಶೀರ್ವಾದಗಳನ್ನು ಸ್ವೀಕರಿಸುವದು ಮತ್ತು ನನ್ನ ಜೀವಿತವನ್ನು ಸಂಪೂರ್ಣವಾಗಿ ದೇವರಿಗೆ ಪ್ರತಿಷ್ಟಿಸುವದು ನನ್ನ ನಿರ್ಧಾರವಾಗಿದೆ.
ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ಕ್ರಿಸ್ತನು ನನಗೆ ವಾಗ್ದಾನ ಮಾಡಿದ ಸಮಾಧಾನವನ್ನು ನಾನು ಬಯಸುತ್ತೇನೆ ಮತ್ತು – ಎಲ್ಲಾ ಸಮಾಧಾನವನ್ನು ನಾಶಮಾಡುವವನಿಗೆ ಸ್ವಾರ್ಥವನ್ನು ಅಧೀನಪಡಿಸುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ಕ್ರಿಸ್ತನ ಸೇವೆಗೆ ನನ್ನನ್ನು ನಾನು ಪ್ರತಿಷ್ಟಿಸಿಕೊಳ್ಳುತ್ತೇನೆ ಅದು ನನಗೆ ಲೋಕವು ಕೊಡಲಾರದ ಸಮಾಧಾನವನ್ನು ಅಥವಾ ಲೋಕವು ಕದ್ದೊಯ್ಯಲಾರದ ಸಮಾಧಾನವನ್ನು ಕೊಡುತ್ತದೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

___

___

___

___

___

___

___



## ಪಾಠ 12
## ಕ್ರಿಸ್ತನಲ್ಲಿ ನಮ್ಮ ಮೌಲ್ಯ

(1) ನಮ್ಮನ್ನು ಬಹಳವಾಗಿ ಪ್ರೀತಿ ಮಾಡುವ ಕ್ರಿಸ್ತನು ನಮ್ಮನ್ನು ಅಷ್ಟೊಂದು ದೊಡ್ಡ ಬೆಲೆಯನ್ನು ತೆತ್ತು ನಮ್ಮನ್ನು ತಿರುಗಿ ತಂದಿರುವಾಗ ನಾವು ಯಾವುದರಿಂದ ಆತನಿಗೆ ಮಹಿಮೆಯನ್ನು ತರುವದನ್ನು ಬಯಸಬೇಕು?

ನೀವು ಸ್ವಂತ ಸೊತ್ತಲ್ಲ; ನೀವು  ಕ್ರಯಕ್ಕೆ ಕೊಳ್ಳಲ್ಪಟ್ಟವರು; ಆದಕಾರಣ ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ. (1ಕೊರಿಂಥ 6:20)

ಇಂದು ಮಾನವ ಜೀವಿಗಳು ಎಲ್ಲಿ ನಿಂತುಕೊಳ್ಳುತ್ತಾರೆ . ಕ್ರಿಸ್ತನು ತನ್ನ ಜೀವಿತದ ಮೂಲಕ ನಮ್ಮನ್ನು

ಕೊಂಡುಕೊಂಡಿದ್ದಾನೆ ನಾವು ಆತನಿಗೆ ಸಂಬಂಧಪಟ್ಟವರು. ನಮ್ಮ ಎಲ್ಲಾ ಬಲ, ದೈಹೀಕ, ಮಾನಸಿಕ ಮತ್ತು ಆತ್ಮೀಕ ಆತನಿಗೆ ಸಂಬಂಧಿಸಿವೆ; ಮತ್ತು ಆತನದೇ ಆಗಿರುವದನ್ನು ಆತನಿಂದ ತಡೆಹಿಡಿಯುವದು ದರೋಡೆಯಾಗಿದೆ.

ಕರ್ತನು ನಮ್ಮ ಅಂದಾಜಿಗೆ ಅನುಗುಣವಾಗಿ ನಮ್ಮ ಆತ್ಮಕ್ಕೆ ಬೆಲೆ ಕೊಡುಬೇಕು ಅನ್ನುತ್ತಾನೆ – ಅದನ್ನು ನಾವು ಗ್ರಹಿಸಿಕೊಳ್ಳುವ ಮಟ್ಟಕ್ಕೆ – ಕ್ರಿಸ್ತನು ಅವರ ಮೇಲೆ ಇಟ್ಟಿರುವ – ಶಾಶ್ವತವಾದ ನಾಶನದಿಂದ ಮನುಷ್ಯನನ್ನು ಬಿಡುಗಡೆಗೊಳಿಸಲು ಯೇಸು ಸತ್ತನು. ಆದುರಿಂದ ನಾವು ಕೊಳ್ಳಲ್ಪಟ್ಟ ಸೊತ್ತು ಎಂದು ಪರಿಗಣಿಸಿಕೊಳ್ಳಬೇಕು, “ನೀವು ನಿಮ್ಮ ಸ್ವಂತ ಸೊತ್ತಲ್ಲ” ನೀವು ಕ್ರಯಕ್ಕೆ ಕೊಳ್ಳಲ್ಪಟ್ಟವರು ಆದಾಕಾರಣ ನೀವು ನಿಮ್ಮ ದೇಹದಲ್ಲಿ ದೇವರ ಪ್ರಭಾವವನ್ನು ಪ್ರಕಾಶಪಡಿಸಿರಿ. (1ಕೊರಿಂಥ 6:19-20) ನಮ್ಮ ಮನಸ್ಸು ಮತ್ತು ಆತ್ಮ ಮತ್ತು ದೇಹದ ಎಲ್ಲಾ ಬಲಗಳು ಕರ್ತನವೇ ಆಗಿವೆ. ನಮ್ಮ ಸಮಯವು ಆತನಿಗೆ ಸಂಬಂಧಿಸಿದ್ದು. ನಾವು ಆತನ ಸೇವೆಯನ್ನು ಮಾಡಲು ನಮ್ಮನ್ನು ನಮಗೆ ಸಾಧ್ಯವಿರುವಷ್ಟು ಉತ್ತಮವಾದ ಸ್ಥಿತಿಯಲ್ಲಿ ಇಟ್ಟುಕೊಳ್ಳಬೇಕು. ನಿರಂತರವಾಗಿ ಕ್ರಿಸ್ತನೊಂದಿಗೆ ಸಂಬಂಧವನ್ನು ಇಟ್ಟುಕೊಳ್ಳಬೇಕು ಮತ್ತು ಆತನು

ನಮ್ಮನ್ನು ತನ್ನ ಮೂಲಕ ದೇವರಲ್ಲಿ ನೀತಿವಂತರನ್ನಾಗಿ ಮಾಡಲು ಮಾಡಿದ ಬೆಲೆಯುಳ್ಳ ಬಲಿದಾನವನ್ನು ಪ್ರತಿದಿನ ಪರಿಗಣಿಸಬೇಕು.

(2)ಈ ವಚನದಲ್ಲಿ ಯಾವ ಎರಡು ಸಂಕೇತಗಳನ್ನು ಆತನ ಹಿಂಬಾಲಕರಿಗೆ ಸಂಬಂಧಿಸಿದಂತೆ ಕರ್ತನ ಪ್ರೀತಿಯನ್ನು ವರ್ಣಿಸಲು ಯಾವ ಎರಡು ಸಂಕೇತಗಳನ್ನು ಉಪಯೋಗಿಸಲಾಗಿದೆ?

ಯುವಕನು ಯುವತಿಯನ್ನು ವರಿಸುವಂತೆ ನಿನ್ನ ಮಕ್ಕಳು ನಿನ್ನನ್ನು ವರಿಸುವರು; ವರನು ವಧುವಿನಲ್ಲಿ ಆನಂದಿಸುವಂತೆ, ನಿನ್ನ ದೇವರು ನಿನ್ನಲ್ಲಿ ಆನಂದಿಸುವನು. (ಯೆಶಾಯ 62:5).

ಸತ್ಯವೇದದಲ್ಲಿ ಕ್ರಿಸ್ತನು ಮತ್ತು ಆತನ ಸಭೆಯ ಮಧ್ಯದಲ್ಲಿರುವ ಪವಿತ್ರವಾದ ಮತ್ತು ಕೊನೆಯವರೆಗೆ ಉಳಿಯುವ ಸಂಬಂಧದ ಗುಣಲಕ್ಷಣವನ್ನು ವಿವಾಹದ ಐಕ್ಯತೆ ಪ್ರತಿನಿಧಿಸುತ್ತದೆ. ಕರ್ತನು ತನ್ನ ಜನರನ್ನು ತನ್ನೊಂದಿಗೆ ವಿಧಿಯುಕ್ತವಾದ ಒಡಂಬಡಿಕೆಯಲ್ಲಿ ಸೇರಿಸಿದ್ದಾನೆ. ಅವನು ಅವರ ದೇವರು ಎಂದು ವಾಗ್ದಾನ ಮಾಡಿದ್ದಾನೆ ಮತ್ತು ಅವರನ್ನು ತನ್ನವರು ಮಾತ್ರವೆಂದು ಪ್ರತಿಷ್ಟಿಸಿದ್ದಾನೆ. ಆತನು “ನಾನು ನಿನ್ನನ್ನು ಶಾಶ್ವತವಾಗಿ ವರಿಸುವೆನು; ಹೌದು ನೀತಿನ್ಯಾಯ ಪ್ರೀತಿ ದಯೆಗಳಿಂದ

ನಿನ್ನನ್ನು ವರಿಸುವೆನು, ನಾನು ನಿನ್ನನ್ನು ನಂಬಿಕೆಯಿಂದ ವರಿಸಲು ನೀನು ಯೆಹೋವನಾದ ನನ್ನನ್ನು ತಿಳಿದುಕೊಳ್ಳುವಿ." ಎಂದು ಪ್ರಕಟಿಸುತ್ತಾನೆ, ಹೋಶೇಯ 2:19 ಮತ್ತು ತಿರುಗಿ: "ನಾನು ನಿಮಗೆ ಪತಿ" ಯೆರೆಮೀಯ 3:14 ಮತ್ತು  ಪೌಲನು ಹೊಸ ಒಡಂಬಡಿಕೆಯಲ್ಲಿ ಇವೇ ಪದಗಳನ್ನು ಉಪಯೋಗಿಸುತ್ತಾನೆ, "ಯಾಕಂದರೆ ದೇವರಲ್ಲಿರುವ ಪ್ರೀತಿಯಲ್ಲಿರುವಂಥ ಚಿಂತೆಯಿಂದಲೇ ನಾನು ನಿಮ್ಮ ವಿಷಯದಲ್ಲಿ ಚಿಂತಿಸುತ್ತೇನೆ. ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಒಬ್ಬ ಶುದ್ಧ ಕನ್ನಿಕೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯ ಮಾಡಿದೆನಲ್ಲ" 2ಕೊರಿಂಥ 11: 2.

(3) ಒಂದುವೇಳೆ ನಾವು ಯೇಸು ಕ್ರಿಸ್ತನನ್ನು ನಮ್ಮ ಜೀವೀತದ ಒಡೆಯನೆಂದು ಅನುಮತಿಸಿದ್ದಲ್ಲಿ ವೇದವಾಕ್ಯವು "ನಮ್ಮನ್ನು ಪ್ರೀತಿಸಿದಾತನ ಮೂಲಕ ನಾವು ಏನಾಗುತ್ತೇವೆ ಎಂದು ವಾಗ್ದಾನ ಮಾಡುತ್ತದೆ?

ಆದರೆ ನಮ್ಮನ್ನು ಪ್ರೀತಿಸಿದಾತನ ಮೂಲಕವಾಗಿ ನಾವು ಈ ಎಲ್ಲಾ ವಿಷಯಗಳಲ್ಲಿ ಪೂರ್ಣ ಜಯಶಾಲಿಗಳಾಗುತ್ತೇವೆ. (ರೋಮ 8:37)

ನಮ್ಮ ಬಂಧ ಮಕ್ತತತೆಗೆ ಬೆಲೆಯನ್ನು ನಮ್ಮ ರಕ್ಷಕನು ಸಂದಾಯ ಮಾಡಿದ್ದಾನೆ. ನಮ್ಮಲ್ಲಿ ಯಾರೂ ಸೈತಾನನಿಗೆ ದಾಸರಾಗಬೇಕಿಲ್ಲ. ಕ್ರಿಸ್ತನು ನಮ್ಮ ಎದುರಿನಲ್ಲಿ ನಮ್ಮ ಸರ್ವಶಕ್ತನಾದ ಸಹಾಯಕನಾಗಿ ನಿಲ್ಲುತ್ತಾನೆ. "ಆದದರಿಂದ ಆತನು ಎಲ್ಲಾ ವಿಷಯಗಳಲ್ಲಿ ತನ್ನ ಸಹೋದರರಿಗೆ ಸಮಾನನಾಗಬೇಕಾಗಿ ಬಂತು  ಹೀಗೆ ಆತನು ಜನರ ಪಾಪಗಳನ್ನು ನಿವಾರಣೆ ಮಾಡುವದಕ್ಕಾಗಿ ದೇವರ ಕಾರ್ಯಗಳಲ್ಲಿ ಕರುಣೆಯೂ ನಂಬಿಕೆಯೂ ಉಳ್ಳ ಮಹಾಯಾಜಕನಾದನು. ತಾನೇ ಶೋಧಿಸಲ್ಪಟ್ಟು ಬಾಧೆಯನ್ನು ಅನುಭವಿಸಿರುವದರಿಂದ ಶೋಧಿಸಲ್ಪಡುವವರಿಗೆ ಸಹಾಯ ಮಾಡುವದಕ್ಕೆ ಶಕ್ತನಾಗಿದ್ದಾನೆ. (ಇಬ್ರಿಯ 2:17-18).

ಯಾರು ದೇವರ ಕುಟುಂಬದಲ್ಲಿ ಸೇರಿಸಲ್ಪಟ್ಟಿದ್ದಾರೋ ಅವರು ಪವಿತ್ರಾತ್ಮನ  ಸ್ವ-ಮಧ್ಯಸ್ತಿಕೆಯಿಂದಾಗಿ ಪರಿವರ್ತನೆ ಹೊಂದಿದ್ದಾರೆ ಮತ್ತು ಸ್ವಂತಿಕೆಯ ಮೇಲಿರುವ ಶ್ರೇಷ್ಠವಾದ ಪ್ರೀತಿ ಸ್ವ-ನಿರಾಕರಣೆಗೆ ಮತ್ತು ದೇವರಿಗಾಗಿ ಶ್ರೇಷ್ಠವಾದ ಪ್ರೀತಿಯಾಗಿ ಬದಲಾಗಿದೆ.ಯಾವ ಮನುಷ್ಯನು ಪರಿಶುದ್ಧತೆಯನ್ನು  ಜನ್ಮದ ಹಕ್ಕಾಗಿ ಹೊಂದಿಕೊಳ್ಳುವದಿಲ್ಲ ಅಥವಾ

ಯಾವುದೇ ವಿಧಾನದಿಂದ ಯೋಜನೆಯನ್ನು ಮಾಡಿ ಅವನು ದೇವರಿಗೆ ನಿಷ್ಠೆಯಿಂದ ಇರಲು ಸಾಧ್ಯವಿಲ್ಲ. "ನನ್ನನ್ನು ಬಿಟ್ಟು" ಕ್ರಿಸ್ತನು ಹೇಳುತ್ತಾನೆ "ನೀವು ಏನೂ ಮಾಡಲಾರಿರಿ" (ಯೋಹಾನ 15:5). ಮಾನವನ ನೀತಿವಂತಿಕೆ "ಹೊಲಸು ಬಟ್ಟೆಯಿದ್ದಂತೆ" ಆದರೆ ವಿಮೋಚಕನ ಬಲದಲ್ಲಿ ಎಲ್ಲಾ ಸಂಗತಿಗಳೂ ಸಾಧ್ಯ, ಬಲಹೀನ, ತಪ್ಪು ಮಾಡುವ, ಮನುಷ್ಯ ತನ್ನನ್ನು ಆಕ್ರಮಿಸಿಕೊಳ್ಳುವ ಕೆಟ್ಟತನದ ಮೇಲೆ ಪೂರ್ಣ ಜಯಶಾಲಿಯಾಗುತ್ತಾನೆ.

(4) ಯಾರು ನಿಜವಾಗಿ ಅಬ್ರಹಾಮನ ಸಂತತಿ ಎಂದು ಪರಿಗಣಿಸಲ್ಪಡುತ್ತಾರೆ ಅವರು ಆತ್ಮೀಕವಾಗಿ "ಇಸ್ರಾಯೇಲ್ಯರು"?

ನೀವು ಕ್ರಿಸ್ತನವರಾಗಿದ್ದರೆ ಅಬ್ರಹಾಮನ ಸಂತತಿಯವರೂ ವಾಗ್ದಾನಕ್ಕನು ಸಾರವಾಗಿ ಬಾಧ್ಯರೂ ಆಗಿದ್ದೀರಿ. (ಗಲಾತ್ಯ 3:29).

ಅಬ್ರಹಾಮನು "ದೇವರಲ್ಲಿ ನಂಬಿಕೆಯಿಟ್ಟಿದ್ದರಿಂದ ಅದು ಅವನ ಲೆಕ್ಕಕ್ಕೆ ನೀತಿ ಎಂದು ಎಣಿಸಲ್ಪಟ್ಟಿತು." ಆದುದರಿಂದ ಕೇವಲ ನಂಬಿಕೆಯಿದ್ದವರು ಮಾತ್ರ ಅಬ್ರಹಾಮನ ಸಂತತಿಯವರು. ಮತ್ತು ವೇದವಾಕ್ಯವು ದೇವರು ಅನ್ಯರನ್ನು ಅವರ ನಂಬಿಕೆಯ ಮೂಲಕ

ನೀತಿವಂತರೆಂದು ತೀರ್ಮಾನಿಸುತ್ತಾನೆ. ಈ ರೀತಿಯಾಗಿ ಹೇಳುವದರ ಮೂಲಕ ಆದಾಮನಿಗೆ ಸುವಾರ್ತೆಯು ಮೊದಲೇ ಸಾರಲ್ಪಟ್ಟಿತು "ನಿನ್ನಿಂದಲೇ ಎಲ್ಲಾ ಜನಾಂಗಗಳು ಆಶೀರ್ವಾದ ಹೊಂದುವವು" ಹಾಗಿದ್ದಲ್ಲಿ ಯಾರು ನಂಬಿಕೆಯನ್ನಿಡುತ್ತಾರೋ ಅವರು ಅಬ್ರಹಾಮನಲ್ಲಿ ನಂಬಿಕೆಯನ್ನು ಇಡುವದರ ಮೂಲಕ ಆಶೀರ್ವದಿಸಲ್ಪಡುತ್ತಾರೆ. ಗಲಾತ್ಯ 3:6-9

ಯೆಹೂದ್ಯರು ತಾವು ಅಬ್ರಹಾಮನ ಸಂತಾನದವರು ಎಂದು ಹೇಳಿ ಕೊಳ್ಳುತ್ತಾರೆ ಆದರೆ ಅಬ್ರಹಾಮನು ಮಾಡಿದ ಕಾರ್ಯಗಳನ್ನು ಮಾಡುವದರಲ್ಲಿ ವಿಫಲರಾದದ್ದರಿಂದ ಅವರು ಆತನ ನಿಜವಾದ ಮಕ್ಕಳೆಂದು ಸಿದ್ಧಾಂತಪಡಿಸುವಲ್ಲಿ ವಿಫಲರಾಗಿದ್ದಾರೆ. ಯಾರು ಆತ್ಮೀಕವಾಗಿ ಅವನೊಂದಿಗೆ ಸಾಮರಸ್ಯದಲ್ಲಿರುತ್ತರೋ ಅವರು ನಿಜವಾದ ಸಂತತಿಯವರು ಎಂದು ಗುರುತಿಸಲ್ಪಡುತ್ತಾರೆ.

(5) ಯಾರು ಆತ್ಮೀಕ ಇಸ್ರಾಯೇಲ್ಯರು ಆಗಲು ಆಯ್ಕೆ ಮಾಡಿಕೊಳ್ಳುತ್ತಾರೋ ಅವರಿಗೆ ಕರ್ತನು ಮೂರು ಭಾಗದ ಯಾವ ವಿಮೋಚನೆಯ ಹಕ್ಕನ್ನು ನೀಡಿದ್ದಾನೆ?

ಈಗಲಾದರೋ ಯಾಕೋಬ ವಂಶವೇ, ಇಸ್ರಾಯೇಲ್ ಸಂತಾನವೇ, ನಿನ್ನನ್ನು ಸೃಷ್ಟಿಸಿ ರೂಪಿಸಿದವನಾದ ಹೀಗನ್ನುತ್ತಾನೆ – ಭಯಪಡಬೇಡ, ನಾನು ನಿನ್ನನ್ನು ವಿಮೋಚಿಸಿದೆನಲ್ಲಾ, ನಿನ್ನ ಹೆಸರಿಡಿದು ಕರೆದೆನಲ್ಲಾ; ನೀನು ನನ್ನವನೇ. (ಯೆಶಾಯ 43:1).

ತನ್ನ ಜನರೊಂದಿಗೆ ಕ್ರಿಸ್ತನ ಸಂಬಂಧ, ಇಸ್ರಾಯೇಲ್ಯರಿಗೆ ಕೊಟ್ಟ ಧರ್ಮಶಾಸ್ತ್ರದಲ್ಲಿ ಸುಂದರವಾದ ದೃಷ್ಟಾಂತ ಕೊಡಲ್ಪಟ್ಟಿದೆ. ಬಡತನದ ಮೂಲಕ ಒಬ್ಬ ಇಬ್ರಿಯನು ತನ್ನ ತಂದೆಯ ಸ್ವಾಸ್ತ್ಯದಿಂದ ಬೇರ್ಪಡಲು ಮತ್ತು ತನ್ನನ್ನು ತಾನು ಒಬ್ಬ ಜೀತದಾಳಾಗಿ ಮಾಡಿಕೊಳ್ಳಲು ಇಚ್ಚಿಸಿದನು. ಅವನನ್ನು ಮತ್ತು ಅವನ ಸ್ವಾಸ್ತ್ಯವನ್ನು  ವಿಮೋಚಿಸುವ ಕರ್ತವ್ಯ ಅವನ ಸಮೀಪದ ಸಂಬಂಧಿಯ ಮೇಲೆ ಬಂತು, ನೋಡಿರಿ ಯಾಜಕಕಾಂಡ 25:25, 47-49; ರೂತಳು 2:20; ಹೀಗೆ ನಮ್ಮನ್ನು ಮತ್ತು ನಮ್ಮ ಪಾಪದಿಂದ ಕಳೆದು ಹೋದ ನಮ್ಮ  ಸ್ವಾಸ್ತ್ಯವನ್ನು ವಿಮೋಚಿಸುವ  "ಹತ್ತಿರದ ಸಂಬಂಧಿಯ" ಮೇಲೆ ಬಂತು. ಅದು ನಮ್ಮನ್ನು ವಿಮೋಚಿಸುವದಕ್ಕಾಗಿ ಆತನು ನಮ್ಮ ಸಂಬಂಧಿ ವಿಮೋಚಕನಾದನು. ತಂದೆ ತಾಯಿ ಸಹೋದರ, ಸ್ನೇಹಿತ ಮತ್ತು ಪ್ರಿಯತಮ ನಮ್ಮ ರಕ್ಷಕನಾದ ಕರ್ತನು. "ಹೆದರಬೇಡ" ಎಂದು ಆತನು

ಹೇಳುತ್ತಾನೆ. "ನಿನ್ನನ್ನು ವಿಮೋಚಿಸಿದವನು ನಾನೇ, ನಾನು ನಿನ್ನನ್ನು ನಿನ್ನ ಹೆಸರನ್ನು ಹಿಡಿದು ಕರೆದಿದ್ದೇನೆ, ನೀನು ನನ್ನವನು."ನೀನು ನನ್ನ ದೃಷ್ಟಿಯಲ್ಲಿ ಅಮೂಲ್ಯನೂ ಮಾನ್ಯನೂ ಪ್ರಿಯನೂ ಅಗಿರುವದರಿಂದ ನಾನು ನಿನಗೆ ಬದಲಾಗಿ ಮನುಷ್ಯರನ್ನೂ ನಿನ್ನ ಪ್ರಾಣಕ್ಕೆ ಪ್ರತಿಯಾಗಿ ಜನಾಂಗಗಳನ್ನೂ ಕೊಡುವೆನು." ಯೆಶಾಯ 43:1-4.

ಕ್ರಿಸ್ತನು ತನ್ನ ಸಿಂಹಾಸನದ ಸುತ್ತಲೂ ಇರುವ ಪರಲೋಕ ಜೀವಿಗಳನ್ನು ಪ್ರೀತಿಸುತ್ತಾನೆ. ಆದರೆ ಆತನು ನಮ್ಮನ್ನು ಪ್ರೀತಿಸಿದ ಆ ಮಹಾಪ್ರೀತಿಗೆ ಸರಿಸಮಾನವಾದದ್ದು ಇದೆಯೋ? ನಾವು ಅದನ್ನು ತಿಳಿದುಕೊಳ್ಳಲಾರೆವು, ಆದರೆ ಅದು ಸತ್ಯವಾದದ್ದು ಎಂದು ನಮಗೆ ನಮ್ಮ ಸ್ವಂತ ಅನುಭವದಿಂದ ತಿಳಿದದೆ. ಒಂದುವೇಳೆ ನಾವು ಆತನೊಂದಿಗೆ ಹತ್ತಿರದ ಸಂಬಂಧಿ ಎಂಬ ಸಂಬಂಧವನ್ನು ಇಟ್ಟುಕೊಳ್ಳುವುದಾದರೆ ನಾವು ಎಂಥ ಕೋಮಲತೆಯಿಂದ ನಮ್ಮ ಕರ್ತನ ಸಹೋದರ ಸಹೋದರಿಯರಾಗಿರುವವರನ್ನು ಗೌರವಿಸಬೇಕು! ನಾವು ನಮ್ಮ ದೈವೀಕ ಸಂಬಂಧವನ್ನು ಗುರುತಿಸುವಲ್ಲಿ ಶೀಘ್ರರಾಗಿದ್ದೇವೋ? ದೇವರ ಕುಟುಂಬದಲ್ಲಿ ಸೇರಿಸಲ್ಪಟ್ಟವರಾದ ನಾವು ನಮ್ಮ ತಂದೆಯನ್ನು ಮತ್ತು

ನಮ್ಮ ಬಂಧುಗಳನ್ನು
ಗೌರವಿಸಬೇಕಲ್ಲವೇ?

(6) ಒಂದುವೇಳೆ, ನಿಜವಾದ
ಪಶ್ಚಾತ್ತಾಪದಿಂದ ನಮ್ಮ ಪಾಪಗಳನ್ನು
ಅರಿಕೆ ಮಾಡುವಾಗ ಕ್ರಿಸ್ತನು ಏನು
ಮಾಡುತ್ತಾನೆ ಎಂಬ ಪೂರ್ಣ ವಿಶ್ವಾಸ
ನಮಗಿದೆ?

ನಮ್ಮ ಪಾಪಗಳನ್ನು ಕ್ಷಮಿಸಿಬಿಟ್ಟು
ಸಕಲ ಅನೀತಿಯನ್ನು ಪರಿಹರಿಸಿ
ನಮ್ಮನ್ನು ಶುದ್ಧಿಮಾಡುವನು, ನಾವು
ಪಾಪಮಾಡಲಿಲ್ಲವೆಂದು ಹೇಳಿದರೆ
ಆತನನ್ನು ಸುಳ್ಳುಗಾರನ ನ್ನಾಗಿ
ಮಾಡುತ್ತೇವೆ ಮತ್ತು ಆತನ ವಾಕ್ಯವು
ನಮ್ಮಲ್ಲಿ ಇಲ್ಲ. (1 ಯೋಹಾನ 1:9)

ಅನೇಕರು ಅದು ಉತ್ತಮಗುಣವೇನೋ
ಎಂಬಂತೆ ತಮ್ಮ ಅಯೋಗ್ಯತೆಯಲ್ಲಿ
ನೆಲೆಸಲು ತಮ್ಮ ಮನಸ್ಸನ್ನು
ಅನುಸರಿಸುತ್ತಾರೆ. ಇದು ಅವರು
ಸಂಪೂರ್ಣ ನಂಬಿಕೆಯ
ಭರವಸೆಯೊಂದಿಗೆ  ಯೇಸುವಿನ ಬಳಿಗೆ
ಬರುವದಕ್ಕೆ ಅಡತಡೆಯಾಗಿದೆ. ಅವರು
ತಮ್ಮ ಅಯೋಗ್ಯತೆಯನ್ನು
ತಿಳಿದುಕೊಳ್ಳಬೇಕು ಮತ್ತು – ಅವರ
ಪಾಪಾಧೀನತೆಯಿಂದಾಗಿ -– ತಮ್ಮ
ಅರ್ಹತೆಯಾಗಿರುವ ರಕ್ಷಕನ ಬಳಿಗೆ
ಬರುವ ಅಗತ್ಯತೆ ತಮಗಿದೆ ಎಂದು
ಅರಿತುಕೊಳ್ಳಬೇಕು. ಮತ್ತು ಅವರು
ಪಶ್ಚಾತ್ತಾಪಪಟ್ಟು ಮತ್ತು ತಮ್ಮನ್ನು

ತಾವು ತಗ್ಗಿಸಿಕೊಳ್ಳುವುದಾದರೆ ಆತನು ಅವರ ನೀತಿವಂತಿಕೆಯಾಗುತ್ತಾನೆ. ಅವರ ಅನರ್ಹತೆಯು ಸ್ವಯಂಸಾಕ್ಷಿಯ ಸತ್ಯವಾಗಿದೆ. ಯೇಸು ಕ್ರಿಸ್ತನ ಅರ್ಹತೆ ಖಚಿತವಾದ ಸಂಗತಿಯಾಗಿದೆ, ಹೀಗಿರುವಾಗ ಸಂದೇಹ ಪಡುವ ಪ್ರತಿಯೊಂದು ಆತ್ಮವು ನಿರೀಕ್ಷೆ ಮತ್ತು ಧೈರ್ಯವನ್ನು ತೆಗೆದುಕೊಳ್ಳಲಿ ಯಾಕಂದರೆ ಆತನೊಬ್ಬನೆ ರಕ್ಷಕನಾಗುವ ಯೋಗ್ಯತೆಯನ್ನು ಹೊಂದಿದ್ದಾನೆ. ಅವನ ರಕ್ಷಣೆಯ ಒಂದೇ ನಿರೀಕ್ಷೆ ನಂಬಿಕೆಯಿಂದ ಅರ್ಹನಾದವನನ್ನು ಗಟ್ಟಿಯಾಗಿ ಹಿಡಿದುಕೊಳ್ಳುವದು. ಅದು ಅವನಲಿಲ್ಲ ಆದರೆ ನಮ್ಮ ನೀತಿವಂತಿಕೆಯಾದ ಯೇಸು ಕ್ರಿಸ್ತನ ಮೂಲಕ ಒದಗಿಸಲ್ಪಡುತ್ತದೆ.

(7) ಪಾಪಿಗಳಾದ ನಾವು ನಮ್ಮ ಮಹಿಮೆಯ ನಿರೀಕ್ಷೆ ಕ್ರಿಸ್ತನಲ್ಲಿಯೇ ಎಂದು ತಿಳಿದುಕೊಳ್ಳುವಾಗ ಮತ್ತು ಸ್ವಾರ್ಥಕ್ಕಾಗಿ ಸಾಯುವಾಗ, ಅಪೋಸ್ತಲನಾದ ಪೌಲನಂತೆ ನಾವು ಏನನ್ನು ಸಾರುತ್ತೇವೆ?

ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ

ನಂಬಿಕೆಯಲ್ಲಿಯೇ, ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು. (ಗಲಾತ್ಯ 2:20)

ಕ್ರಿಸ್ತನು, ಅಮೂಲ್ಯ ರಕ್ಷಕನು, ಕ್ರೈಸ್ತರಿಗೆ ಎಲ್ಲವೂ ಆಗಿದ್ದಾನೆ. ಪ್ರತಿಯೊಂದು ಪರಿಶುದ್ಧ ವಿಚಾರವು, ಪ್ರತಿಯೊಂದು ಪರಿಶುದ್ಧ ಬಯಕೆಯು, ದೇವರಂತ ಪ್ರತಿಯೊಂದು  ಉದ್ದೇಶವು, ಬೆಳಕು, ಸತ್ಯವು ಮತ್ತು ಮಾರ್ಗವು ಆದ ಆತನಿಂದ ಬಂದವುಗಳಾಗಿವೆ. ಕ್ರಿಸ್ತನು ಸತ್ಯದ ಆತ್ಮನಿಂದ ಆತನ ಪ್ರತಿನಿಧಿಯಾಗಿ ಜೀವಿಸಬೇಕು ... ಪೌಲನು ಹೇಳುತ್ತಾನೆ,  "ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ; ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ, ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು." (ಗಲಾತ್ಯ 2:20) ... ಭವ್ಯವಾದ ಪ್ರೀತಿಯ ಆವೇಗದ ಅಡಿಯಲ್ಲಿ ಆತನು ವಿಶ್ವದಲ್ಲಿ ನಮ್ಮ ಸ್ಥಾನವನ್ನು ತೆಗೆದುಕೊಂಡನು ಮತ್ತು ಎಲ್ಲಾ ಸಂಗತಿಗಳ ಒಡೆಯನನ್ನು ತನ್ನನ್ನು ಮಾನವ ಕುಟುಂಬದ ಸದಸ್ಯನನ್ನಾಗಿ ನಡೆಸಿಕೊಳ್ಳಲು ಅಮಂತ್ರಿಸಿದನು. ಆತನು ತನ್ನನ್ನು ತಾನು ನಮ್ಮ ಆಸಕ್ತಿಯೊಂದಿಗೆ ಗುರುತಿಸಿಕೊಂಡನು, ಆತನು ತನ್ನ

ಎದೆಯನ್ನು ಮರಣದ ಹೊಡೆತಕ್ಕೆ ಸಹಿಸಿಕೊಂಡನು, ಮನುಷ್ಯನ ಅಪರಾಧವನ್ನು ಮತ್ತು ದಂಡನೆಯನ್ನು ತೆಗೆದುಕೊಂಡನು ಮತ್ತು ಮನುಷ್ಯನ ಪರವಾಗಿ ದೇವರಿಗೆ ಸಂಪೂರ್ಣ ಪ್ರಾಯಶ್ಚಿತ್ತ ಯಜ್ಞವನ್ನು ಅರ್ಪಿಸಿದನು. ತನ್ನ ಪ್ರಾಯಶ್ಚಿತ್ತ ಯಜ್ಞದ ಮೂಲಕ ಆತನಿಗೆ ಮನುಷ್ಯನಿಗೆ ಪರಿಪೂರ್ಣ ನೀತಿವಂತಿಕೆಯನ್ನು ಮತ್ತು ಸಂಪೂರ್ಣ ರಕ್ಷಣೆಯನ್ನು ನೀಡುವ ಅಧಿಕಾರವಿದೆ. ಯಾರ್ಯಾರು ಆತನನ್ನು ಸ್ವಂತ ರಕ್ಷಕನೆಂದು ನಂಬುತ್ತಾರೋ ಅವರು ನಾಶವಾಗುವದಿಲ್ಲ ಆದರೆ ನಿತ್ಯಜೀವವನ್ನು ಹೊಂದುತ್ತಾರೆ.

(8) ದೇವರ ಪ್ರೀತಿಯು ನಮ್ಮೊಳಗೆ ಪರಿಪೂರ್ಣವಾಗಿಸಲ್ಪಟ್ಟಿದೆ ಎಂಬುದು ಏನನ್ನು ಪ್ರಕಟಿಸುತ್ತದೆ?

ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿಯೂ ದೇವರ ಮೇಲಣ ಪ್ರೀತಿಯು ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆಂಬುದನ್ನು ತಿಳಿದುಕೊಳ್ಳುತ್ತೇವೆ. (1ಯೋಹಾನ 2:5).

ಕ್ರಿಸ್ತನಲ್ಲಿ ನೆಲೆಗೊಂಡಿದ್ದವನು ದೇವರ ಪ್ರೀತಿಯಲ್ಲಿ ಪರಿಪೂರ್ಣನಾಗಿದ್ದಾನೆ ಆತನ ಉದ್ದೇಶಗಳು, ಆಲೋಚನೆಗಳು, ಮಾತುಗಳೂ ಮತ್ತು ಕ್ರಿಯೆಗಳು ದೇವರ

ಚಿತ್ತದೊಂದಿಗೆ ಧರ್ಮಶಾಸ್ತ್ರದಲ್ಲಿರುವ ಆತನ ಆಜ್ಞೆಗಳಲ್ಲಿ ವ್ಯಕ್ತಪಡಿಸಿರುವಂತೆ ಸಾಮರಸ್ಯದಲ್ಲಿವೆ. ಕ್ರಿಸ್ತನಲ್ಲಿ ನೆಲೆಗೊಂಡಿರುವ ಮನುಷ್ಯನ ಹೃದಯದಲ್ಲಿ ದೇವರ ಧರ್ಮಶಾಸ್ತ್ರದ ಆಜ್ಞೆಗಳೊಂದಿಗೆ ಹೋರಾಟ ಮಾಡುವಂಥದ್ದು ಏನೂ ಇರುವದಿಲ್ಲ. ಕ್ರಿಸ್ತನ ಆತ್ಮವು ಹೃದಯದಲ್ಲಿರುವಾಗ ಕ್ರಿಸ್ತನ ಗುಣಲಕ್ಷಣಗಳು ಪ್ರಕಟವಾಗುತ್ತವೆ, ಮತ್ತು ಅಲ್ಲಿ ಪ್ರಚೋದನೆಯ ಅಡಿಯಲ್ಲಿ ಸಾತ್ವಿಕತ್ವ ಮತ್ತು ಪರೀಕ್ಷೆಯ ಅಡಿಯಲ್ಲಿ ತಾಳ್ಮೆ ಪ್ರಕಟವಾಗುತ್ತದೆ. "ಚಿಕ್ಕ ಮಕ್ಕಳೇ ಯಾವ ಮನುಷ್ಯನು ನಿಮ್ಮನ್ನು ಮೋಸಗೊಳಿಸದಿರಲಿ; ಯಾರು ನೀತಿವಂತಿಕೆಯನ್ನು ಮಾಡುತ್ತಾರೋ ಅವರು ನೀತಿವಂತರಾಗಿರುತ್ತಾರೆ, ಅವನು ನೀತಿವಂತನಾಗಿರುವಂತೆ" ನೀತಿವಂತಿಕೆಯನ್ನು ದೇವರ ದೊಡ್ಡ ನೈತಿಕ ಅಳತೆಗೋಲಿನ ಮೂಲಕ ವ್ಯಾಖ್ಯಾನಿಸಬಹುದು. ಗುಣಲಕ್ಷಣವನ್ನು ಅಳತೆ ಮಾಡಲು ಬೇರೆ ಯಾವ ಅಳತೆಗೋಲೂ ಇಲ್ಲ.

(7) ಕ್ರಿಸ್ತನ ಸ್ವ-ಬಲಿದಾನದಿಂದ, ಸ್ವ-ತ್ಯಾಗದಿಂದ ಮತ್ತು ವಿಮೋಚಿಸುವ ಪ್ರೀತಿಯಿಂದ ನಾವು ಶಾಶ್ವತವಾದ ವಿಮೋಚನೆಯನ್ನು ಹೊಂದಿಕೊಳ್ಳುವಂತೆ ಆತನು ಏನು ಮಾಡಿದನು?

ಹೋತಗಳ ಮತ್ತು ಹೋರಿಕರಗಳ ರಕ್ತವನ್ನು ತೆಗೆದುಕೊಳ್ಳದೆ ಸ್ವಂತ ರಕ್ತವನ್ನೇ ತೆಗೆದುಕೊಂಡು ನಮಗೋಸ್ಕರ ನಿತ್ಯ ವಿಮೋಚನೆಯನ್ನು ಸಂಪಾದಿಸಿಕೊಂಡವನಾಗಿ ಒಂದೇ ಸಾರಿ ದೇವರ ಸನ್ನಿಧಾನಕ್ಕೆ ಪ್ರವೇಶಿಸಿದನು. (ಇಬ್ರಿಯ 9:12)

ನಮ್ಮ ಚಿಕ್ಕ ಜಗತ್ತು ವಿಶ್ವದ ಪಾಠದ ಪುಸ್ತಕವಾಗಿದೆ. ದೇವರ ಅದ್ಭುತವಾದ ಕೃಪೆಯ ಉದ್ದೇಶ, ವಿಮೋಚಿಸುವ ಪ್ರೀತಿಯ ರಹಸ್ಯ, “ದೇವದೂತರು ಸಹ ನೋಡಲು ಬಯಸುವ” ಮುಖ್ಯ ಉದ್ದೇಶವಾಗಿದೆ, ಮತ್ತು ಇದು ಯುಗಯುಗಾಂತರಗಳಲ್ಲಿ ಅವರ ಅಧ್ಯಯನವಾಗಿದೆ. ವಿಮೋಚಿಸಲ್ಪಟ್ಟವರು ಮತ್ತು ಬಿದ್ದುಹೋದವರು ಕ್ರಿಸ್ತನ ಕ್ರೂಜೆಯಲ್ಲಿ ತಮ್ಮ ಜ್ಞಾನವನ್ನು ಮತ್ತು ಸಂಗೀತವನ್ನು ಕಂಡುಕೊಳ್ಳುತ್ತಾರೆ. ಯೇಸುವಿನ ಮುಖದ ಮೇಲಿರುವ ಪ್ರಕಾಶಿಸುವ ಮಹಿಮೆಯು ಅದು ಸ್ವ- ಬಲಿದಾನದ ಪ್ರೀತಿಯ ಮಹಿಮೆಯಾಗಿದೆ. ಕಲ್ವಾರಿ ಬೆಳಕಿನಲ್ಲಿ ಸ್ವ-ನಿರಾಕರಣೆಯ ನಿಯಮವು ಭೂಮಿ ಮತ್ತು ಆಕಾಶದಲ್ಲಿ ಜೀವಿತದ ನಿಯಮವಾಗಿದೆ ಆ ಪ್ರೀತಿಯು “ತನ್ನ

ಸ್ವಂತಿಕೆಗಾಗಿ ಹುಡುಕಲಿಲ್ಲ" ಅದರ ಮೂಲವು ದೇವರ ಹೃದಯದಲ್ಲಿದೆ.

(10) ನಾವು ಕ್ರಿಸ್ತನ ರಕ್ಷಣೆಯ ಆಶ್ಚರ್ಯಕರವಾದ ಆಮಂತ್ರಣವನ್ನು ಸ್ವೀಕರಿಸುವಾಗ ನಾವು ಯಾವುದರಿಂದ ನಾವು  ರಕ್ಷಣೆ ಹೊಂದಲಿಲ್ಲ ಮತ್ತು ಯಾವುದರಿಂದ ನಾವು  ರಕ್ಷಣೆ ಹೊಂದಿದ್ದೇವೆ?

ನಾವು ಮಾಡಿದ ಪುಣ್ಯ ಕ್ರಿಯೆಗಳ ನಿಮಿತ್ತದಿಂದಲ್ಲ ಆತನ ಕರುಣೆಯಲ್ಲಿಯೇ ಪುನರ್ಜನ್ಮವನ್ನು ಸೂಚಿಸುವ ಸ್ನಾನದ ಮೂಲಕವಾಗಿಯೂ ಪವಿತ್ರಾತ್ಮನು ನಮ್ಮಲ್ಲಿ ನೂತನ ಸ್ವಭಾವವನ್ನು ಉಂಟು ಮಾಡುವದರ ಮೂಲಕವಾಗಿಯೂ ಆತನು ನಮ್ಮನ್ನು ರಕ್ಷಿಸಿದನು. (ತೀತ 3:5).

ದೇವರಲ್ಲಿ ಶ್ರದ್ಧೆಯಿಲ್ಲದವರಿಗೆ ನ್ಯಾಯತೀರಿಸುವಾತನ ಮೇಲೆ ವಿಶ್ವಾಸವನ್ನು ಇಡಬೇಕೆಂದು ದೇವರು ಬಯಸುತ್ತಾನೆ. ಆತನ ಬಹುಮಾನವು ನಮ್ಮ ಯೋಗ್ಯತೆಗೆ ಅನುಸಾರವಾಗಿ ಅಲ್ಲ ಆತನ ಉದ್ದೇಶಕ್ಕೆ ಅನುಗುಣವಾಗಿ ಕೊಡಲ್ಪಡುತ್ತದೆ. "ಅದನ್ನು ಆತನು ನಮ್ಮ ಕರ್ತನಾದ ಕ್ರಿಸ್ತ ಯೇಸುವಿನಲ್ಲಿ ಉದ್ದೇಶಿಸಿದ್ದಾನೆ." ಎಫೆಸ 3:11  "ನಾವು ಮಾಡಿದ ಪುಣ್ಯ ಕ್ರಿಯೆಗಳ ನಿಮಿತ್ತದಿಂದಲ್ಲ ಆತನ

ಕರುಣೆಯಲ್ಲಿಯೇ ನಮ್ಮನ್ನು ರಕ್ಷಿಸಿದನು" ತೀತ 3:5. ಮತ್ತು ಆತನನ್ನು ನಂಬುವವರಿಗೆ ಆತನು "ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು.." ಎಫೆಸ 3:20. ನಿರ್ವಹಿಸಿದ ಕೆಲಸದ ಮೊತ್ತಕ್ಕನುಗುಣವಾಗಿ ಅಲ್ಲ ಅಥವಾ ಕಣ್ಣಿಗೆ ಕಾಣುವ ಅದರ ಪರಿಣಾಮದಿಂದಾಗಿ ಅಲ್ಲ ಆದರೆ ಕೆಲಸ ಮಾಡುವದರಲ್ಲಿ ನಾವು ತೋರಿದ ಉತ್ಸಾಹ ದೇವರ ದೃಷ್ಟಿಯಲ್ಲಿ ಬೆಲೆಯುಳ್ಳದ್ದಾಗಿದೆ. ಯಾರಾರು ಕೊನೆಯ ಗಳಿಗೆಯಲ್ಲಿ ದ್ರಾಕ್ಷೇ ತೋಟಕ್ಕೆ ಬರುತ್ತಾರೋ ಅವರು ಕೆಲಸ ಮಾಡಲು ದೊರೆತ ಅವಕಾಶಕ್ಕಾಗಿ ಕೃತಜ್ಞರು ಆಗಿರುತ್ತಾರೆ. ಅವರ ಹೃದಯಗಳು ತಮ್ಮನ್ನು ಸ್ವೀಕರಿಸಿದಾತನ ವಿಷಯದಲ್ಲಿ ಕೃತಜ್ಞತೆಯಿಂದ ತುಂಬಿರುತ್ತವೆ; ಮತ್ತು ದಿನದ ಮುಕ್ತಾಯದಲ್ಲಿ ಯಜಮಾನನು ಅವರಿಗೆ ಪೂರ್ತಿ ದಿನದ ಸಂಬಳವನ್ನು ನೀಡಿದಾಗ, ಅವರು ಬಹಳವಾಗಿ ಆಶ್ಚರ್ಯಪಟ್ಟರು, ಅವರಿಗೆ ತಾವು ಅಷ್ಟು ಸಂಬಳಕ್ಕೆ ಯೋಗ್ಯರಾಗಿರಲಿಲ್ಲ ಎಂಬುದು ತಿಳಿದಿತ್ತು, ತಮ್ಮ ಯಜಮಾನನು ದಯದಿಂದಾಗಿ ತಮಗೆ ತೋರಿಸಿದ ಕರುಣೆ ಅವರನ್ನು ಸಂತೋಷದಿಂದ ತುಂಬಿಸಿತು. ಅವರು ಯಜಮಾನನ ಒಳ್ಳೇತನವನ್ನು ಅಥವಾ ತಾವು ಹೊಂದಿದ ಧಾರಾಳವಾದ

ಪರಿಹಾರವನ್ನು ಎಂದಿಗೂ ಮರೆಯಲಿಲ್ಲ. ಪಾಪಿಯಾದವನೊಂದಿಗೆ ಸಹ ಹೀಗೆಯೇ ಇರುತ್ತದೆ.ಅವನ ಅಯೋಗ್ಯತೆಯನ್ನು ತಿಳಿದಿದ್ದಾಗ್ಯೂ, ಅವನು ಯಜಮಾನನ ದ್ರಾಕ್ಷೇ ತೋಟವನ್ನು ಕೊನೆಯ ಗಳಿಗೆಯಲ್ಲಿ ಪ್ರವೇಶಿಸಿದನು. ಅವನ ಸೇವೆಯ ಕಾಲಾವಧಿ ಚಿಕ್ಕದಾಗಿತ್ತು. ಅವನು ತಾನು ಬಹುಮಾನಕ್ಕೆ ಯೋಗ್ಯನಲ್ಲ ಎಂದು ಭಾವಿಸಿದ್ದನು. ಆದರೆ ದೇವರು ಕೊನೆಗೆ ಬಂದ ತನ್ನನ್ನು ಸ್ವೀಕರಿಸಿದ್ದರಿಂದ ಅವನು ಸಂತೋಷದಿಂದ ತುಂಬಿದನು. ತಾನು ಕ್ರಿಸ್ತನ ಸಹೋದ್ಯೋಗಿಯಾಗಿರುವ ಸೌಭಾಗ್ಯವನ್ನು ಹೊಂದಿರುವದಕ್ಕಾಗಿ ಅವನು ದೀನತೆಯಿಂದ, ಪ್ರಾಮಾಣಿಕತೆಯ ಆತ್ಮದೊಂದಿಗೆ ಕೆಲಸ ಮಾಡಿದನು. ದೇವರು ಇಂಥ ಉತ್ಸುಕತೆಯನ್ನು ಗೌರವಿಸಲು ಹರ್ಷಿಸುತ್ತಾನೆ.

ಕರ್ತನು ನಾವು ನಮ್ಮ ಬಹುಮಾನದ ಅಳತೆಯ ಕುರಿತು ಪ್ರಶ್ನಿಸದೇ ಆತನಲ್ಲಿ ವಿಶ್ರಾಂತಿಯನ್ನು ಹೊಂದಬೇಕು ಎಂದು ಬಯಸುತ್ತಾನೆ. ಕ್ರಿಸ್ತನು ನಮ್ಮ ಆತ್ಮದಲ್ಲಿ ನೆಲೆಸುವಾಗ ಬಹುಮಾನದ ಆಲೋಚನೆ ಪ್ರಮುಖ ಸ್ಥಾನದಲ್ಲಿ ಇರುವದಿಲ್ಲ. ನಮ್ಮ ಸೇವೆಯನ್ನು ಕ್ರಿಯಾಶೀಲ ಗೊಳಿಸುವ ಪ್ರೇರಣೆ ಇದಲ್ಲ. ಆ ಮುಖ್ಯವಾದ ತಿಳುವಳಿಕೆಯಲ್ಲಿ ನಾವು ಬಹುಮಾನದ ಪರಿಹಾರವನ್ನು

ಗೌರವಿಸುತ್ತೇವೆ ಎಂಬುದು ಸತ್ಯ. ದೇವರು ನಾವು ಆತನು ವಾಗ್ದಾನ ಮಾಡಿದ ಆಶೀರ್ವಾದಗಳನ್ನು ಪ್ರಶಂಶಿಸಬೇಕೆಂದು ಬಯಸುತ್ತಾನೆ. ಆದರೆ ನಾವು ಬಹುಮಾನದ ಕುರಿತು ಉತ್ಸುಕರಾಗಿರಬಾರದು ಅಥವಾ ನಾವು ಮಾಡುವ ಪ್ರತಿಯೊಂದು ಕರ್ತವ್ಯಕ್ಕೆ ಪರಿಹಾರವನ್ನು ಹೊಂದಬೇಕು ಎಂದು ಭಾವಿಸಬಾರದು. ಯಾವುದು ಸರಿಯಾಗಿದೆಯೋ ಅದನ್ನು ಮಾಡುವಾಗ ನಾವು ಬಹುಮಾನಗಳನ್ನು ಹೊಂದಲು ಉತ್ಸುಕರಾಗಿರಬಾರದು ಎಲ್ಲಾ ಲಾಭಗಳನ್ನು ಪರಿಗಣಿಸದೇ ಯಾವುದು ಒಳ್ಳೇಯದೋ ಅದನ್ನು ಮಾಡಬೇಕು. ದೇವರೆಡೆಗೆ ಮತ್ತು ಸಹೋದರರೆಡೆಗೆ ಪ್ರೀತಿ ನಮ್ಮ ಪ್ರೇರಣೆಯಾಗಿರಬೇಕು.

ಆತನ ರಕ್ತದ ಮೂಲಕ ಮತ್ತು ಆತನ ಮೇಲಿನ ನಂಬಿಕೆಯಿಂದ  ನನ್ನಲ್ಲಿರುವ ನೀತಿವಂತಿಕೆಯಿಂದಾಗಿ ನಾನು ಅಬ್ರಹಾಮನ ಆತ್ಮೀಕ ಸಂತತಿಯಾಗಿ ಪರಿಗಣಿಸಲ್ಪಟ್ಟಿದ್ದೇನೆ ಮತ್ತು ನಾವು ಪೂರ್ಣ ಜಯಶಾಲಿಯಾಗುತ್ತೇನೆ ಮತ್ತು ಪಾರಾಗುತ್ತೇನೆ.

ದುಂಡು ಸುತ್ತಿರಿ:ಹೌದು   ನಿರ್ಧರಿಸಿಲ್ಲ

ಕರ್ತನಾದ ಯೇಸು ನನ್ನ ಮೇಲಿರುವ ಆತನ ಮಹಾಪ್ರೀತಿಯಿಂದಾಗಿ ಆತನು ಅಂತಿಮ ಬೆಲೆಯನ್ನು ತೆತ್ತನು ಅದಕ್ಕಾಗಿ

ನಾನು  ವಂದನೆ ಸಲ್ಲಿಸುತ್ತೇನೆ ಮತ್ತು ಸ್ತುತಿಸುತ್ತೇನೆ. ನನ್ನ ಜೀವಿತದ ಪ್ರತಿಯೊಂದು ಭಾಗದಲ್ಲಿ ಆತನಿಗೆ ಮಹಿಮೆ ತರಬೇಕು ಎಂಬುದು ನನ್ನ ಬಯಕೆಯಾಗಿದೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ಆತನು ದೇವರ ಕುಟುಂಬದಲ್ಲಿ ನನ್ನನ್ನು ವಿಮೋಚಿಸುವ ಸಂಬಂಧಿ ವಿಮೋಚಕನಾಗಿ ಇಷ್ಟೊಂದು ಬೆಲೆಯನ್ನು ನೀಡಿರುವದಕ್ಕಾಗಿ ನನ್ನ ಹೃದಯವು ಕ್ರಿಸ್ತನ ಮೇಲೆ ಪ್ರೀತಿಯಿಂದ್ ತುಂಬುತ್ತದೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ನಾನು ಸಂದೇಹಪಡಬಾರದು ಮತ್ತು ನನ್ನ ಉತ್ತಮಗುಣಗಳಲ್ಲಿ ನೆಲೆಸುವದಕ್ಕೆ ಬದಲಾಗಿ ಕ್ರಿಸ್ತನ ಅರ್ಹತೆಯಲ್ಲಿ ನೆಲೆಸುತ್ತೇನೆ ಮತ್ತು ನನ್ನ ನೀತಿವಂತಿಕೆ ಮತ್ತು ರಕ್ಷಕನಾದ ಯೇಸು ಕ್ರಿಸ್ತನು ಒದಗಿಸಿದ ಅರ್ಹತೆಯನ್ನು ನಂಬಿಕೆಯಿಂದ ಹಿಡಿದುಕೊಳ್ಳುತ್ತೇನೆ

ದುಂಡು ಸುತ್ತಿರಿ:ಹೌದು   ನಿರ್ಧರಿಸಿಲ್ಲ



ಪಾಠ 13

# ದೇವರ ಪ್ರೀತಿಯಲ್ಲಿ ನೆಲೆಗೊಳ್ಳುವದು

(1) ದೇವರ ಪ್ರೀತಿಯ ಮೂಲಕ ,ನಾವು ಪ್ರೀತಿಯಲ್ಲಿ ನೆಲೆಗೊಳ್ಳುವದನ್ನು ಆಯ್ದುಕೊಳ್ಳುವಾಗ, ಫಲಿತಾಂಶವೇನು?

ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ ಅದನ್ನು ನಂಬಿದ್ದೇವೆ.ದೇವರು ಪ್ರೀತಿಸ್ವರೂಪಿ; ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ ದೇವರು ಅವನಲ್ಲಿ ನೆಲೆಗೊಂಡಿದ್ದಾನೆ. (1ಯೋಹಾನ 4:16).

ಪ್ರೀತಿಯ ವಾತಾವರಣದಲ್ಲಿ ಯಾವಾಗಲಾದರೂ ನಮ್ಮನ್ನು ನಾವು ನಿರ್ವಹಿಸಿಕೊಳ್ಳುವಾಗ. ನಾವು ದೇವರ ಸಾನಿಧ್ಯದಲ್ಲಿ ನಮ್ಮನ್ನು ನಾವು ನಿರ್ವಹಿಸಿಕೊಳ್ಳುತ್ತಿದ್ದೇವೆ ಎಂಬಂತೆ ತೋರಿಬರುತ್ತದೆ. ಯಾಕಂದರೆ ನಾವು ಪ್ರೀತಿಯಲ್ಲಿ ನೆಲೆಗೊಂಡಿರುತ್ತೇವೆ, ನಾವು

ಪ್ರೀತಿಯಾಗಿರುವ ದೇವರಲ್ಲಿ ನೆಲೆಗೊಂಡಿರುತ್ತೇವೆ (ವ8). ಯಾವಾಗಲೂ ದೇವರೆಡೆಗೆ ಮತ್ತು ಮನುಷ್ಯರೆಡೆಗೆ ಪ್ರೀತಿಯ ಸಾಮ್ರಾಜ್ಯದಲ್ಲಿ ನೆಲೆಗೊಂಡಿರಲು, ವ್ಯತ್ಯಾಸವಾದ ಪ್ರಭಾವದ ಸಮ್ಮುಖದಲ್ಲಿ, ಆತ್ಮೀಕ ತ್ರಾಣಕ್ಕೆ ಕರೆಕೊಡುತ್ತದೆ ಅದು ಕೇವಲ ಕರ್ತನೊಂದಿಗೆ ನಿರಂತರವಾದ ಅನ್ಯೋನ್ಯತೆಯಲ್ಲಿ ಆಧಾರವಾಗಿರುತ್ತದೆ.

ಪ್ರೀತಿ ಸ್ವರೂಪಿಯಾದ ದೇವರೊಂದಿಗೆ ಪರಸ್ಪರ ಅನ್ಯೋನ್ಯತೆಯಲ್ಲಿ ನೆಲೆಯಾಗಿರುವದನ್ನು ರುಚಿ ನೋಡಿದವರೆಲ್ಲರೂ ಬಹುಮಾನವು ಪ್ರಯತ್ನಕ್ಕೆ ಯೋಗ್ಯವಾಗಿದೆ ಎಂದು ತಿಳಿದುಕೊಳ್ಳುತ್ತಾರೆ. ಸೈತಾನನು ಸಹ ಇದನ್ನು ಬಲ್ಲನು, ಅವನು ಜಾಣನಾಗಿದ್ದಾನೆ ಮತ್ತು ಅದನ್ನು ನೇರವಾಗಿ ಅಲ್ಲಗಳೆಯುವ ಪ್ರಯತ್ನವನ್ನು ಮಾಡುವದಿಲ್ಲ. ಬದಲಾಗಿ ಆತನು ಅಷ್ಟೊಂದು ಉತ್ತಮವಲ್ಲದ ಅನೇಕ ಸಂಗತಿಗಳಿಗೆ ಹೊಳೆಯುವ ಬಣ್ಣಗಳನ್ನು ಲೇಪಿಸಿ ನಮ್ಮ ಆಲೋಚನೆಗಳನ್ನು ಅವುಗಳ ಮೇಲೆ ಕೇಂದ್ರಿಕರಿಸುವಂತೆ ಮಾಡುತ್ತಾನೆ, ಅದು ಸಂಕ್ಷಿಪ್ತವಾದ ಕ್ಷಣಗಳಾಗಿರಬಹುದು. ಹೀಗೆ ಒಮ್ಮೆ ಅವನು ನಮ್ಮ ಮನಸ್ಸನ್ನು

ದೇವರಿಂದ ಬೇರೆಕಡೆಗೆ ತಿರುಗಿಸಿದ ಮೇಲೆ, ಅವನು ಅನೇಕಾವರ್ತಿ ನಮ್ಮ ಮನಸ್ಸನ್ನು
ಸ್ವಾರ್ಥ ಮತ್ತು ಇತರರ ಕುರಿತು ಅಪಾಯಕಾರಿ  ಆಲೋಚನೆಗಳತ್ತ ನಡೆಸುವದರಲ್ಲಿ ಯಶಸ್ವಿಯಾಗುತ್ತಾನೆ. ನಾವು ಅದನ್ನು ತಿಳಿದುಕೊಳ್ಳುವ ಮೊದಲೇ ಅಥವಾ ನಮ್ಮ ಅಪಾಯವನ್ನು ಅರಿತುಕೊಳ್ಳುವ ಮೊದಲೇ, ನಾವು ಅಸಮಾಧಾನದೆಡೆಗೆ ನಮ್ಮ ಆಲೋಚನೆಗಳನ್ನು ಹರಿಬಿಡುತ್ತೇವೆ, ಇದರ ಫಲವಾಗಿ ಪ್ರೀತಿ ಮತ್ತು ದೇವರು ಇಬ್ಬರೂ ನಮ್ಮ ಹೃದಯದಿಂದ
ತೆಗೆದುಹಾಕಲ್ಪಡುತ್ತವೆ. ಇದು ಒಂದು ಹಳೆಯ ತಂತ್ರವಾಗಿದೆ, ಆದರೆ ಅದು ಇಂದೂ ಸಹ ಯಶಸ್ವಿಯಾಗುತ್ತಿದೆ.

ನಮ್ಮ ಉತ್ತಮ ರಕ್ಷಣೆ ಉದ್ದೇಶಪೂರ್ವಕವಾಗಿ ಮತ್ತು ನಿರಂತರವಾಗಿ ನಮ್ಮ ಮನಸ್ಸನ್ನು ನಾವು ದೇವರಿಂದ ಹೊಂದಿದ ಆಶೀರ್ವಾದಗಳಲ್ಲಿ
ಆನಂದಿಸುವದಾಗಿದೆ (ಕೀರ್ತನೆ 63:6; 139:17, 18). ದೇವರು ನಮಗಾಗಿ ಏನು ಮಾಡಿದ್ದಾನೆ ಎಂಬುದರ ಜ್ಞಾಪನ , ಆತನೊಂದಿಗೆ ಇರುವ ಅನ್ಯೋನ್ಯತೆ ಯಾವ ಅರ್ಥ ನೀಡುತ್ತದೆ, ನಾವು ಇತರರಿಗೆ ಇದರ ಕುರಿತು ಹೇಳುವಾಗ ನಮ್ಮ ಸಂತೋಷವು ಬಲಗೊಳ್ಳುತ್ತದೆ.

ಇಂಥಹ ಸಾಕ್ಷಿಗಳು ನಮ್ಮ ಸಹೋದರರನ್ನು ಪ್ರೋತ್ಸಾಹಪಡಿಸುತ್ತವೆ ಮತ್ತು ನಮ್ಮ ದೃಢ ನಿಶ್ಚಯವನ್ನು ನಮ್ಮ ಮತ್ತು ಪರಲೋಕದ ಮಧ್ಯದಲ್ಲಿ ಇರುವ ಸಂಬಂಧವನ್ನು ಬಲಪಡಿಸುವದನ್ನು ನಿರ್ವಹಿಸುತ್ತವೆ.

(2) ನಾವು ಇತರರಿಗೆ ತೋರಿಸುವ ಪ್ರೀತಿ ದೇವರೊಂದಿಗೆ ನಮ್ಮ ಸಂಬಂಧದ ಮೇಲೆ ಪ್ರತಿಫಲಿಸುತ್ತದೆ?

ಪ್ರಿಯರೇ, ನಾವು ಒಬ್ಬರನ್ನೊಬ್ಬರು ಪ್ರೀತಿಸೋಣ, ಪ್ರೀತಿಯು ದೇವರಿಂದಾಗಿದೆ ಮತ್ತು ಪ್ರೀತಿ ಮಾಡುವ ಪ್ರತಿಯೊಬ್ಬನೂ ದೇವರಿಂದ ಹುಟ್ಟಿದವನೂ ದೇವರನ್ನು ಬಲ್ಲವನೂ ಆಗಿದ್ದಾನೆ. (1ಯೋಹಾನ 4:7).

ಯಾರ ಹೃದಯದಲ್ಲಿ ಕ್ರಿಸ್ತನು ನೆಲೆಯಾಗಿದ್ದಾನೋ ಆತನ ಜೀವಿತ ಪ್ರಾಯೋಗಿಕ ಒಳ್ಳೇತನವನ್ನು ಪ್ರಕಟಿಸುತ್ತದೆ. ನಡತೆಯು ಶುದ್ಧೀಕರಿಸಲ್ಪಡುತ್ತದೆ, ಉನ್ನತವಾಗುತ್ತದೆ, ಸಮರ್ಥವಾಗುತ್ತದೆ ಮತ್ತು ಮಹಿಮೆಯನ್ನು ಹೊಂದುತ್ತದೆ. ಪರಿಶುದ್ಧವಾದ ಸಿದ್ಧಾಂತ ನೀತಿಯ

ಕಾರ್ಯಗಳೊಂದಿಗೆ ಬೆರೆತುಕೊಳ್ಳುತ್ತದೆ, ಪರಲೋಕದ ತತ್ವಗಳು ಪರಿಶುದ್ಧವಾದ ಅಭ್ಯಾಸದೊಂದಿಗೆ ಸೇರಿಕೊಳ್ಳುತ್ತವೆ.

ಇದು ನಮ್ಮ ಸಹ ಮಾನವರಿಗೆ ನಮ್ಮ ಪ್ರೀತಿಯ ಪರಿಮಳವಾಗಿದೆ, ಅದು ದೇವರೆಡೆಗೆ ಪ್ರೀತಿಯನ್ನು ಪ್ರಕಟಿಸುತ್ತದೆ. ಸೇವೆಯಲ್ಲಿ ತಾಳ್ಮೆ ಆತ್ಮಕ್ಕೆ ವಿಶ್ರಾಂತಿಯನ್ನು ತರುತ್ತದೆ. ಇದು ದೀನತೆ, ಪರಿಶ್ರಮ, ನಂಬಿಗಸ್ತಿಕೆಯಿಂದ ಇಸ್ರಾಯೇಲ್ಯರ ಇತರರ ಶ್ರೇಯೋಭಿವೃದ್ಧಿಗಾಗಿ ಕೆಲಸ ಮಾಡಲು ಪ್ರೋತ್ಸಾಹಿಸುತ್ತದೆ. ದೇವರು ಯಾರು ಕ್ರಿಸ್ತನ ಮಾರ್ಗವನ್ನು ಅನುಸರಿಸಲು ಸಿದ್ಧರಾಗಿದ್ದಾರೊ ಅವರನ್ನು ಎತ್ತಿಹಿಡಿಯುತ್ತಾನೆ ಮತ್ತು ಬಲಪಡಿಸುತ್ತಾನೆ.

ಮನುಷ್ಯನು ನಿತ್ಯಜೀವದವರೆಗೆ ನಂಬಿಕೆಯನ್ನು ಹಿಡಿದಿಕೊಳ್ಳಬಹುದು ಎಂಬುದು ತನ್ನ ಸಹೋದರನ ಮೇಲೆ ಕ್ರಿಸ್ತನಲ್ಲಿರುವಂತ ಪ್ರೀತಿಯನ್ನು ಹೊಂದಿಕೊಳ್ಳದಿದ್ದಲ್ಲಿ ಅತ್ಯಂತ ದೊಡ್ಡ ಮತ್ತು ಅತ್ಯಂತ ಅಪಾಯಕಾರಿ ಮೋಸತನವಾಗಿದೆ. ಯಾರು ದೇವರನ್ನು ಮತ್ತು ತನ್ನ ನೆರೆಯವರನ್ನು ಪ್ರೀತಿಸಿತ್ತಾರೋ  ಅವರು ಬೆಳಕು ಮತ್ತು ಪ್ರೀತಿಯಿಂದ ತುಂಬಿರುತ್ತಾರೆ. ದೇವರು ಅವನೊಂದಿಗಿದ್ದಾನೆ ಮತ್ತು ಅವನ ಸುತ್ತಲೂ ಇದ್ದಾನೆ. ಕ್ರೈಸ್ತರು ತಮ್ಮ

ಸುತ್ತಲೂ ಇರುವವರನ್ನು ಅಮೂಲ್ಯವಾದ ಆತ್ಮಗಳು ಕ್ರಿಸ್ತನು ಇವರಿಗಾಗಿ ಸತ್ತನು ಎಂದು ಪ್ರೀತಿಸುತ್ತಾರೆ. ಪ್ರೀತಿಯಿಲ್ಲದ ಕ್ರೈಸ್ತರು ಎಂಬುದು ಇಲ್ಲ; ಯಾಕಂದರೆ "ದೇವರು ಪ್ರೀತಿ ಸ್ವರೂಪಿಯಾಗಿದ್ದಾನೆ" ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆಯದಿದ್ದಲ್ಲಿ ನಾವು ಆತನನ್ನು ತಿಳಿದಿದ್ದೇವೆ ಎಂದು ನಾವು ಅರಿತಿಲ್ಲ. ನಾನು ಆತನನ್ನು ಅರಿತಿದ್ದೇನೆ ಎಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಂಡು ನಡೆಯದವನು ಸುಳ್ಳುಗಾರನಾಗಿದ್ದಾನೆ ಮತ್ತು ಸತ್ಯವೆಂಬುದು ಆತನಲ್ಲಿ ಇಲ್ಲ.

(3) ಈ ವಚನವು ನಿರಂತರವಾಗಿ ಕರುಣೆ, ಅಳೆಯಲಶಕ್ಯವಾದ ಪ್ರೀತಿ ಮತ್ತು ನಿತ್ಯಜೀವ ಇವುಗಳನ್ನು ಚಿಂತನೆಯೊಂದಿಗೆ ನೋಡುತ್ತದೆ ಎಂದು ಯಾರಿಗೆ ಸಲಹೆಯನ್ನು ನೀಡುತ್ತದೆ?

ನಿತ್ಯಜೀವಕ್ಕಾಗಿ ನಮ್ಮ ಕರ್ತನಾದ ಯೇಸು ಕ್ರಿಸ್ತನ ಕರುಣೆಯನ್ನು ಎದುರುನೋಡುತ್ತಾ ನಿಮ್ಮನ್ನು ದೇವರ ಪ್ರೀತಿಯಲ್ಲಿ ಕಾಪಾಡಿಕೊಳ್ಳಿರಿ (ಯೂದ 1:21).

ಕ್ರಿಸ್ತನ ಚಿಂತನೆಯಲ್ಲಿ ನಾವು ಪ್ರೀತಿಯ ದಡದ ಮೇಲೆ ಸುತ್ತಾಡುತ್ತೇವೆ ಅದು ಅಳಯಲಶಕ್ಯವಾದದ್ದು. ನಾವು ಈ ಪ್ರೀತಿಯ ಕುರಿತು ಹೇಳಲು ಸಾಹಸಪಡುತ್ತೇವೆ ಆದರೆ ಭಾಷೆ ವಿಫಲವಾಗುತ್ತದೆ. ನಾವು

ಭೂಲೋಕದಲ್ಲಿ ಆತನ ಜೀವಿತವನ್ನು, ನಮಗಾಗಿ ಆತನ ಬಲಿದಾನವನ್ನು, ನಮ್ಮ ಮಧ್ಯವರ್ತಿಯಾಗಿ ಪರಲೋಕದಲ್ಲಿ ಆತನ ಕೆಲಸವನ್ನು ಮತ್ತು ಆತನನ್ನು ಪ್ರೀತಿಸುವವರಿಗಾಗಿ ಆತನು ಸಿದ್ಧ ಪಡಿಸುತ್ತಿರುವ ಬಿಡಾರಗಳನ್ನು ನಾವು ಪರಿಗಣಿಸುತ್ತೇವೆ ಮತ್ತು ಕೇವಲ ಉದ್ಗರಿಸುತ್ತೇವೆ, ಓ ಕ್ರಿಸ್ತನ ಪ್ರೀತಿಯ ಎತ್ತರ ಮತ್ತು ಆಳ! ಎಂದು "ನಾವು ದೇವರನ್ನು ಪ್ರೀತಿಸಿದ್ದರಲ್ಲಿಯಲ್ಲ ಆದರೆ ಆತನು ನಮ್ಮನ್ನು ಪ್ರೀತಿಸಿ ನಮ್ಮ ಪಾಪನಿವಾರಣಾರ್ಥವಾಗಿ ತನ್ನ ಮಗನನ್ನು ಕೊಟ್ಟದ್ದರಲ್ಲಿಯೇ ಪ್ರೀತಿಯ ನಿಜಗುಣವು ತೋರಿಬರುತ್ತದೆ." "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಇಟ್ಟಿದ್ದಾನೆ ನೋಡಿರಿ." 1ಯೋಹಾನ 4:10; 3:1.

ಪ್ರತಿಯೊಬ್ಬ ನಿಜವಾದ ಶಿಷ್ಯರಲ್ಲಿ ಈ ಪ್ರೀತಿ, ಹೃದಯವೆಂಬ ವೇದಿಯ ಮೇಲೆ ಉರಿಯುವ ಪವಿತ್ರವಾದ ಬೆಂಕಿಯಾಗಿದೆ, ಭೂಲೋಕದಲ್ಲಿ ದೇವರ ಪ್ರೀತಿಯು ಕ್ರಿಸ್ತನ ಮೂಲಕ ಪ್ರಕಟವಾಯಿತು. ಭೂಲೋಕದಲ್ಲಿ ಆತನ ಮಕ್ಕಳು ದೋಷರಹಿತವಾದ ಜೀವಿತದ ಮೂಲಕ ಈ ಪ್ರೀತಿಯನ್ನು ಪ್ರಕಟಿಸಬೇಕು. ಹೀಗಾಗಿ ಪಾಪಿಗಳು ದೇವರ ಕುರಿಮರಿಯನ್ನು ದೃಷ್ಟಿಸಲು ಕ್ರೂಜೆಯ ಬಳಿಗೆ ನಡೆಸಲ್ಪಡುತ್ತಾರೆ.

(4) ಕರ್ತನಲ್ಲಿ ನೆಲೆಯಾಗಿರುವದರ ಮೂಲಕ ಆತನ ಪ್ರೀತಿಯಲ್ಲಿ ಸಂಪೂರ್ಣವಾಗಿ ನಿಲ್ಲಲು ನಮ್ಮ ಎರಡು ಭಾಗದ ಪಾತ್ರವೇನು?

ಹೀಗಿರಲಾಗಿ ದೇವರಿಗೆ ಒಳಗಾಗಿರಿ ಸೈತಾನನನ್ನು ಎದುರಿಸಿರಿ, ಅವನು ನಿಮ್ಮನ್ನು ಬಿಟ್ಟು ಓಡಿಹೋಗುವನು. (ಯಾಕೋಬ 4:7)

ಈ ಅಮೂಲ್ಯವಾದ ಪದಗಳಲ್ಲಿ ವಿಮೋಚನೆಯ ಎಲ್ಲಾ ಯೋಜನೆಯ ವ್ಯಕ್ತಪಡಿಸಲಾಗಿದೆ. "ದೇವರು ಲೋಕದ ಮೇಲೆ ಎಷ್ಟೋ ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ಎಲ್ಲರೂ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು." ಕ್ರಿಸ್ತನು ತನ್ನ ನೀತಿವಂತಿಕೆ ಪಾಪಿಗಳಿಗೆ ಕೊಡಲ್ಪಡಬೇಕು ಎಂಬ ಉದ್ದೇಶಕ್ಕಾಗಿ ಮತ್ತು ಪಶ್ಚಾತ್ತಾಪ ಮತ್ತು ನಂಬಿಕೆಯ ಮೂಲಕ ಅವರು ಪರಿಶುದ್ಧತೆಯ ಗುಣಲಕ್ಷಣದಲ್ಲಿ ತನ್ನಂತೆ ಆಗಬೇಕೆಂದು ನಿಜವಾಗಿಯೂ ಲೋಕದ ಪಾಪವನ್ನು ಹೊತ್ತುಕೊಂಡನು. ಆತನು ಹೇಳುತ್ತಾನೆ, "ನಾನು ಮನುಷ್ಯನ ಪಾಪದ ಅಪರಾಧವನ್ನು ಹೊತ್ತುಕೊಂಡೆನು. ಪಶ್ಚಾತ್ತಾಪಪಡುವ ಪಾಪಿ ನಿನ್ನ ಮುಂದೆ ನಿರ್ದೋಷಿಯಾಗಿ ನಿಂತುಕೊಳ್ಳ ಬೇಕೆಂದು ಶಿಕ್ಷೆಯನ್ನು

ನಾನು ತೆಗೆದುಕೊಂಡೆನು" ಪಾಪಿಯು ಕ್ರಿಸ್ತನಲ್ಲಿ ನಂಬಿಕೆಯನ್ನು ಇಟ್ಟ ಕ್ಷಣವೇ ಆತನು ದೇವರ ಎದುರಿನಲ್ಲಿ ದಂಡನೆಗೆ ಪಾತ್ರನಾಗುವದಿಲ್ಲ; ಯಾಕಂದರೆ ಕ್ರಿಸ್ತನ ನೀತಿವಂತಿಕೆ ಅವನದಾಗುತ್ತದೆ. ಕ್ರಿಸ್ತನ ಪರಿಪೂರ್ಣ ವಿಧೇಯತೆ ಅವನಿಗೆ ಕೊಡಲ್ಪಡುತ್ತದೆ. ಆದರೆ ಅವನು ದೈವಿಕ ಬಲದೊಂದಿಗೆ ಸಹಕರಿಸಬೇಕು ಮತ್ತು ಪಾಪವನ್ನು ನಿಗ್ರಹಿಸಲು ಮಾನವ ಪ್ರಯತ್ನವನ್ನು ಮಾಡಬೇಕು ಮತ್ತು ಕ್ರಿಸ್ತನಲ್ಲಿ ಸಂಪೂರ್ಣವಾಗಿ ನಿಂತುಕೊಳ್ಳಬೇಕು.

(5) ಆತನೊಂದಿಗೆ ನೆಲೆಯಾಗಿರುವ ಸಂಬಂಧದಲ್ಲಿ ಆತನೊಂದಿಗೆ ಹೊಂದಿಕೊಂಡು ಇರಲು ಕ್ರಿಸ್ತನ ಕೃಪೆಯಿಂದ ಮಾಡಲ್ಪಟ್ಟ ಯಾಕೋಬನು ಕೊಡುವ ಇನ್ನೂ ಮೂರು ಮಾರ್ಗಗಳನ್ನು ಪಟ್ಟಿ ಮಾಡಿರಿ?

ದೇವರ ಸಮೀಪಕ್ಕೆ ಬನ್ನಿರಿ, ಆಗ ಆತನು ನಿಮ್ಮ ಸಮೀಪಕ್ಕೆ ಬರುವನು; ಪಾಪಿಗಳೇ ನಿಮ್ಮ ಕೈಗಳನ್ನು ಶುಚಿಮಾಡಿಕೊಳ್ಳಿರಿ; ಎರಡು ಮನಸ್ಸುಳ್ಳವರೇ, ನಿಮ್ಮ ಹೃದಯಗಳನ್ನು ನಿರ್ಮಲ ಮಾಡಿಕೊಳ್ಳಿರಿ. (ಯಾಕೋಬ 4:8).

(6) ದೇವರ ಮಹಿಮೆಯನ್ನು ದೃಷ್ಟಿಸುತ್ತಾ ಯಾವಾಗಲು

ನೆಲೆಯಾಗಿದ್ದಲ್ಲಿ (ಆತನ ಪ್ರೀತಿಯ ಗುಣಲಕ್ಷಣ) ಕರ್ತನ ಆತ್ಮನಿಂದ ನನ್ನಲ್ಲಿ ಯಾವ ಬದಲಾವಣೆಯಾಗಬೇಕು ಎಂದು ತಿಳಿಸುತ್ತದೆ?

ನಾವೆಲ್ಲರೂ ಮುಸುಕು ತೆಗೆದಿರುವ ಮುಖದಿಂದ ಕರ್ತನ ಪ್ರಭಾವವನ್ನು ದರ್ಪಣದಲ್ಲಿ ಕಾಣಿಸುತ್ತದೋ ಎಂಬಂತೆ ದೃಷ್ಟಿಸುವವರಾಗಿದ್ದು ಪ್ರಭಾವದಿಂದ ಅಧಿಕ ಪ್ರಭಾವಕ್ಕೆ ಹೋಗುತ್ತಾ ಆ ಪ್ರಭಾವದ ಸಾರೂಪ್ಯವುಳ್ಳವರೇ ಆಗುತ್ತೇವೆ; ಇದು ದೇವರಾತ್ಮನಾಗಿರುವ ಕರ್ತನ ಕೆಲಸಕ್ಕನುಸಾರವಾದದ್ದೇ. (2ಕೊರಿಂಥ 3:18).

ದೇವರ ಪ್ರೀತಿಯ ಪ್ರಕಟಿಸುವಿಕೆ, ಆತನ ಕರುಣೆ ಮತ್ತು ಆತನ ಒಳ್ಳೇತನ, ಮತ್ತು ಹೃದಯದಲ್ಲಿ ಪವಿತ್ರಾತ್ಮನ ಕೆಲಸ ಜ್ಞಾನವನ್ನು ನೀಡಲು ಮತ್ತು ನವೀಕರಿಸಲು, ನಂಬಿಕೆಯ ಮೂಲಕ ನಮ್ಮನ್ನು ಇರಿಸುತ್ತದೆ, ಕ್ರಿಸ್ತನೊಂದಿಗೆ ಅಷ್ಟೊಂದು ಸಮೀಪವಾದ ಸಂಬಂಧ,ಆತನ ಗುಣಲಕ್ಷಣದ ಸ್ಪಷ್ಟವಾದ  ಕಲ್ಪನೆ, ನಾವು ಸೈತಾನನ ಚಾತುರ್ಯದ ಮೋಸತನವನ್ನು ಗ್ರಹಿಸುತ್ತೇವೆ. ಕ್ರಿಸ್ತನನ್ನು ನೋಡುವಾಗ ಮತ್ತು ಆತನ ಒಳ್ಳೇತನದ ಮೇಲೆ ನಂಬಿಕೆಯನ್ನು ಇಡುವಾಗ ನಾವು ಬೆಳಕಿನ, ಸಮಾಧಾನದ, ಪವಿತ್ರಾತ್ಮನಲ್ಲಿ ಸಂತೋಷದ ಆಶೀರ್ವಾದಗಳನ್ನು

ಹೊಂದಿಕೊಳ್ಳುತ್ತೇವೆ. ಮತ್ತು ಕ್ರಿಸ್ತನು ನಮಗೆ ಮಾಡಿದ ಮಹತ್ತರ ಸಂಗತಿಗಳಲ್ಲಿ ನಾವು ಉದ್ಗರಿಸಲು ಸಿದ್ಧರಾಗುತ್ತೇವೆ: "ನಾವು ಆತನ ಮಕ್ಕಳೆಂದು ಕರೆಯಲ್ಪಡುವಂತೆ. ನೋಡಿರಿ, ತಂದೆಯು ನಮ್ಮ ಮೇಲೆ ಎಂಥಾ ಪ್ರೀತಿಯನ್ನು ಸುರಿಸಿದ್ದಾನೆ," ಸಹೋದರ ಸಹೋದರಿಯರೇ, ದೃಷ್ಟಿಸಿ ನೋಡುವದರಿಂದ ನಾವು ಬದಲಾಗುತ್ತೇವೆ. ದೇವರ ಮತ್ತು ನಮ್ಮ ರಕ್ಷಕನ ಪ್ರೀತಿಯಲ್ಲಿ ನೆಲೆಸುವದರ ಮೂಲಕ, ದೈವೀಕ ಗುಣಲಕ್ಷಣಗಳ ಪರಿಪೂರ್ಣತೆಯ ಮೇಲೆ ಚಿಂತನೆಯನ್ನು ಮಾಡುವದರ ಮೂಲಕ ಮತ್ತು ನಂಬಿಕೆಯ ಮೂಲಕ ಕ್ರಿಸ್ತನ ನೀತಿವಂತಿಕೆಯನ್ನು ನಮ್ಮದಾಗಿಸಲು ಕೇಳಿಕೊಳ್ಳುವಾಗ, ನಾವು ಅದೇ ಸ್ವರೂಪದಲ್ಲಿ ಪರಿವರ್ತಿಸಲ್ಪಡಬೇಕು. ಎಲ್ಲಾ ಹಿತವಲ್ಲದ ಚಿತ್ರಗಳನ್ನು ಒಟ್ಟಾಗಿ ಸಂಗ್ರಹಿಸುವದು ಬೇಡ – ಅಪರಾಧಗಳು ಮತ್ತು ಭ್ರಷ್ಟತನ ಮತ್ತು ನಿರಾಶೆಗಳು ಸೈತಾನನ ಬಲದ ಸಾಕ್ಷಿಯಾಗಿವೆ— ನಮ್ಮ ನೆನಪಿನ ಗೋಡೆಗಳಲ್ಲಿ ನೇತುಹಾಕಿ, ಅದರ ಕುರಿತು ಮಾತಾಡುತ್ತಾ ಮತ್ತು ನಮ್ಮ ಆತ್ಮವು ಅಧೈರ್ಯದಿಂದ ತುಂಬುವವರೆಗೆ ಶೋಕಿಸುತ್ತೇವೆ.

ಅಧೈರ್ಯಪಟ್ಟುಕೊಳ್ಳುವ ಆತ್ಮ ಕತ್ತಲೆಯ ದೇಹವಾಗಿದೆ, ತಾನು ಮಾತ್ರ ದೇವರ ಬೆಳಕನ್ನು ಸ್ವೀಕರಿಸುವದರಲ್ಲಿ

ವಿಫಲವಾಗುವದಲ್ಲದೇ ಅದನ್ನು ಇತರರಿಗೂ ಸಹ ದೂರಕ್ಕೆ ಸರಿಸಿ ಮುಚ್ಚುವುದಾಗಿದೆ. ಸೈತಾನನು ಮಾನವ ಜೀವಿಯನ್ನು ಅಸಹಾಯಕನನ್ನಾಗಿಸಿ ಮತ್ತು ಎದೆಗುಂದಿಸಿ ತನ್ನ ಜಯದ ಚಿತ್ರಗಳನ್ನು ನೋಡಲು ಇಷ್ಟವುಳ್ಳವನಾಗಿದ್ದಾನೆ.

(7) ನಾವು ಪ್ರೀತಿಸುವಾಗ ಮತ್ತು ದೇವರಿಗೆ ನಮ್ಮ ಚಿತ್ತವನ್ನು ಸಂಪೂರ್ಣವಾಗಿ ಅಧೀನಪಡಿಸುವಷ್ಟು ವಿಶ್ವಾಸವಿಡುವಾಗ ಫಲಿತಾಂಶ ಏನಾಗಿರುತ್ತದೆ?

ಲೋಕವೂ ಅದರ ಆಶೆಯೂ ಗತಿಸಿ ಹೋಗುತ್ತವೆ; ಆದರೆ ದೇವರ ಚಿತ್ತವನ್ನು ನೆರವೇರಿಸುವವನು ಎಂದೆಂದಿಗೂ ಇರುವನು. (1ಯೋಹಾನ 2:17).

ಪರಿಶುದ್ಧವಾದ ಧರ್ಮ ಸಂಕಲ್ಪಕ್ಕೆ ಸಂಬಂಧಿಸಿದ್ದಾಗಿದೆ. ಮನುಷ್ಯನ ಸ್ವಭಾವದಲ್ಲಿ ಸಂಕಲ್ಪವು ಮುಖ್ಯವಾದ ಬಲವಾಗಿದೆ ಎಲ್ಲಾ ಸಾಮರ್ಥ್ಯವನ್ನು ತನ್ನ ಅಡಿಗೆ ತೆಗೆದುಕೊಳ್ಳುತ್ತದೆ. ಅದು ರುಚಿ ಅಥವಾ ಒಲವು ಅಲ್ಲ. ಅದು ನಿರ್ಧರಿಸುವ ಬಲವಾಗಿದೆ, ಅದು ಮನುಷ್ಯರ ಮಕ್ಕಳಲ್ಲಿ ದೇವರಿಗೆ ವಿಧೇಯತೆ ಅಥವಾ ಅವಿಧೇಯತೆಗೆ ನಡೆಸುತ್ತದೆ.

ನೀವು ನಿಮ್ಮ ಮನಸ್ಸಿನ ಅವೇಗವನ್ನು, ಭಾವನೆಗಳನ್ನು ನಿಯಂತ್ರಿಸುವದಿಲ್ಲ. ನೀವು ಇಚ್ಛಿಸುವುದಾದರೆ ನೀವು ನಿಮ್ಮ ಚಿತ್ತವನ್ನು ನಿಯಂತ್ರಿಸಬಹುದು, ಮತ್ತು ನೀವು ನಿಮ್ಮ ಜೀವಿತದಲ್ಲಿ ಸಂಪೂರ್ಣ ಬದಲಾವಣೆಯನ್ನು ತರಬಹುದು. ನಿಮ್ಮ ಚಿತ್ತವನ್ನು ಕ್ರಿಸ್ತನಿಗೆ ಅಧೀನ ಪಡಿಸುವುದರ ಮೂಲಕ ನೀವು ಕ್ರಿಸ್ತನಲ್ಲಿ ದೇವರಿಗೆ ಮರೆಯಾಗಿಡಲ್ಪಡುತ್ತಿರಿ ಮತ್ತು ಎಲ್ಲಾ ರಾಜ್ಯ ಮತ್ತು ಅಧಿಕಾರಗಳಿಗಿಂತ ಉನ್ನತವಾದ ಅಧಿಕಾರ ಕೂಡಲ್ಪಡುತ್ತದೆ. ನೀವು ದೇವರಿಂದ ಬಲವನ್ನು ಹೊಂದುವಿರಿ ಆತನ ಬಲದಲ್ಲಿ ಮತ್ತು ಹೊಸ ಬೆಳಕಿನಲ್ಲಿ, ನಿಮ್ಮನ್ನು ಗಟ್ಟಿಯಾಗಿ ನಿಲ್ಲಿಸುತ್ತದೆ ಜೀವಿಸುವ ನಂಬಿಕೆಯ ಬೆಳಕಿನಲ್ಲಿ ನಿಲ್ಲುವದು ಸಹ ನಿಮಗೆ ಸಾಧ್ಯವಾಗುತ್ತದೆ. ಆದರೆ ದೇವರ ಚಿತ್ತವು ನಿಮ್ಮ ಚಿತ್ತದೊಂದಿಗೆ ಸಹಕರಿಸಬೇಕು.

ಕರ್ತನೊಂದಿಗೆ ಸ್ಥಿರವಾಗಿ ಆತನ ಚಿತ್ತವನ್ನು ಅನುಸರಿಸುವಾಗ, ನೀವು ನಿಮ್ಮ ಪ್ರತಿಯೊಂದು ಭಾವನೆಯನ್ನು .... ಯೇಸುವಿನ ಚಿತ್ತದ ಸಾಮರ್ಥ್ಯಕ್ಕೆ ತರುತ್ತೀರಿ. ಆಗ ನೀವು ನಿಮ್ಮ ಪಾದಗಳು ಗಟ್ಟಿಯಾದ ಬಂಡೆಯ ಮೇಲೆ ನಿಂತಿರುವದನ್ನು ಕಾಣುವಿರಿ. ಅದು ಕೆಲವೊಂದು ಸಮಯದಲ್ಲಿ ನೀವು ಹೊಂದಿರುವ  ಸಂಕಲ್ಪದ ಪ್ರತಿಯೊಂದು ಅಣುವನ್ನು

ತೆಗೆದುಕೊಳ್ಳುತ್ತದೆ. ಆದರೆ ದೇವರು ನಿಮಗಾಗಿ ಕಾರ್ಯ ಮಾಡುವಾತನಾಗಿದ್ದಾನೆ ನೀವು ಗೌರವದ ಪಾತ್ರೆಯಾಗಿ ರೂಪಿಸುವ ಪ್ರಕ್ರಿಯೆಯಲ್ಲಿ ಮುನ್ನಡೆಯುವಿರಿ.

(8) ತಂದೆಯಲ್ಲಿ ಮತ್ತು ಆತನ ಮಗನಾದ ಯೇಸುವಿನಲ್ಲಿರುವ ಪ್ರೀತಿಯು ನಮ್ಮಲ್ಲಿ ನೆಲೆಯಾಗಿರಲು ನಾವು ಏನನ್ನು ತಿಳಿದುಕೊಳ್ಳಬೇಕು?

ನೀವು ಸತ್ಯವನ್ನು ತಿಳಿಯದವರೆಂಬ ಭಾವನೆಯಿಂದಲ್ಲ, ನೀವು ಅದನ್ನು ತಿಳಿದಿರುವದರಿಂದಲೂ ಯಾವ ಸುಳ್ಳೂ ಸತ್ಯದಿಂದ ಹುಟ್ಟಿ ಬರುವದಿಲ್ಲವೆಂಬದನ್ನು ನೀವು ತಿಳಿದವರಾಗಿರುವದರಿಂದಲೂ ನಿಮಗೆ ಬರೆದೆನು. (1ಯೋಹಾನ 2:21)

ನೀವಂತೂ ಯಾವ ಬೋಧನೆಯನ್ನು ಮೊದಲಿನಿಂದ ಕೇಳಿದ್ದಿರೋ ಅದು ನಿಮ್ಮಲ್ಲಿ ನೆಲೆಗೊಂಡಿರಲಿ, ಮೊದಲಿನಿಂದ ನೀವು ಕೇಳಿದ ಬೋಧನೆಯು ನಿಮ್ಮಲ್ಲಿ ನೆಲೆಗೊಂಡಿದ್ದರೆ ನೀವು ಸಹ ಮಗನಲ್ಲಿಯೂ ತಂದೆಯಲ್ಲಿಯೂ ನೆಲೆಗೊಂಡಿರುತ್ತೀರಿ. (1ಯೋಹಾನ 2:24)

ಸತ್ಯವೇದವನ್ನು ಎಷ್ಟು ಅಧ್ಯಯನ ಮಾಡಬೇಕೋ ಅಷ್ಟು ಅಧ್ಯಯನ ಮಾಡುತ್ತಿಲ್ಲ; ಅದನ್ನು ಜೀವಿತದ

ನಿಯಮವನ್ನಾಗಿ ಮಾಡಿಕೊಳ್ಳಲಿಲ್ಲ. ಅದರ ನಿಯಮಗಳನ್ನು ಪ್ರಜ್ಞಾ ಪೂರ್ವಕವಾಗಿ ಅನುಸರಿಸಬೇಕು ಮತ್ತು ಗುಣಲಕ್ಷಣದ ತಳಹದಿಯಾಗಿ ಮಾಡಿಕೊಳ್ಳಬೇಕು, ಅದರಲ್ಲಿ ಯಾವುದೇ ವ್ಯವಹಾರದ ಊಹಾಪೋಹ ಅಥವಾ ಲೌಕೀಕ ಪ್ರಯತ್ನ ಧೃಡವಾದ ಉದ್ದೇಶದ ಮೇಲೆ ಗಂಭೀರವಾಗಿ ಪ್ರಭಾವ ಬೀರುವದಿಲ್ಲ. ಹೀಗೆ ರಚಿಸಲ್ಪಟ್ಟ ಮತ್ತು ದೇವರ ವಾಕ್ಯದ ಮೂಲಕ ಬೆಂಬಲಿಸಲ್ಪಟ್ಟ ಗುಣಲಕ್ಷಣ ವಿಚಾರಣೆಯ ದಿನದವರೆಗೆ, ಕಠಿಣತೆಗಳಲ್ಲಿ ಮತ್ತು ಅಪಾಯಗಳಲ್ಲಿ ನೆಲೆಯಾಗಿರುತ್ತವೆ. ಮನಸಾಕ್ಷಿಗೆ ಜ್ಞಾನೋದಯ ಉಂಟಾಗಿ ಮತ್ತು ಜೀವಿತವು ಪ್ರೀತಿಯ ಮೂಲಕ ಹೃದಯದಲ್ಲಿ ಹೊಂದಿಕೊಂಡ ಸತ್ಯದಲ್ಲಿ ಶುದ್ಧೀಕರಿಸಲ್ಪಟ್ಟು, ಲೋಕದ ಪ್ರಭಾವವನ್ನು ಹೊಂದಿಕೊಳ್ಳುವದಕ್ಕಿಂತ ಮೊದಲೇ. ಶುದ್ಧೀಕರಿಸಲ್ಪಡಬೇಕು.

ಅಗತ್ಯವಾಗಿರುವದು ಏನಂದರೆ ಈ ಸಮಯದಲ್ಲಿ ಕಾರ್ಯದಲ್ಲಿ ತೊಡಗುವ ಪುರುಷರು, ಪ್ರಾಮಾಣಿಕ, ನಿರ್ಧಾರವುಳ್ಳವರು, ತತ್ವಗಳಿಗೆ ಬಂಡೆಯಂತೆ ಧೃಢವಾಗಿರುವವರು ಮತ್ತು ಯಾವುದೇ ತುರ್ತು ಪರಿಸ್ಥಿತಿಗೆ ಸಿದ್ಧರಾಗಿರುವವರ ಅಗತ್ಯತೆಯಿದೆ. ನಾವು ಏಕೆ ಇಷ್ಟು ಬಲಹೀನರಾಗಿದ್ದೇವೆ, ನಮ್ಮ ಮಧ್ಯದಲ್ಲಿ ಯಾಕೆ ಅನೇಕ

ಬೇಜವಾಬ್ದಾರಿಯ ಪುರುಷರು ಇದ್ದಾರೆ, ಅವರು ದೇವರೊಂದಿಗೆ ಸಂಬಂಧವನ್ನು ಹೊಂದದೇ ಇರುವದರಿಂದಲೋ; ಅವರಲ್ಲಿ ರಕ್ಷಕನು ವಾಸಿಸುವಾಗಿಲ್ಲದಿರುವದರಿಂದಲೋ, ಕ್ರಿಸ್ತನ ಪ್ರೀತಿಯನ್ನು ಯಾವಾಗಲೂ ತಾಜಾ ಮತ್ತು ಹೊಸದಾಗಿ ಅನುಭಸಿದ್ದರಿಂದಲೋ ... ಭೂಲೋಕದ ಯಾವುದೇ ಸಂಬಂಧ ಈ ಪ್ರೀತಿಯಷ್ಟು ಬಲವಾಗಿರುವದಿಲ್ಲ, ಇದನ್ನು ಯಾವೂದಕ್ಕೂ ಹೋಲಿಸಲು ಸಾಧ್ಯವಿಲ್ಲ.

(9) ನಾವು ನಿಜವಾಗಿಯೂ ದೇವರ ಪ್ರೀತಿಯಲ್ಲಿ ನೆಲೆಗೊಂಡಿದ್ದರೆ, ನಮ್ಮ ಪ್ರೀತಿಯು ಹೇಗೆ ಪ್ರಕಟವಾಗುತ್ತದೆ? ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೆ?

ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಾಗಲಿ ಬಾಯುಪಚಾರದಿಂದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಿಬರಬೇಕು. (1ಯೋಹಾನ 3: 17-18)

ಪ್ರತಿಯೊಬ್ಬ ವ್ಯಕ್ತಿಯು, ತನ್ನ ಸ್ವಂತ ಕ್ರಿಯೆಯಿಂದ, ಆತನ ಆತ್ಮದಲ್ಲಿ ಆನಂದಿಸುವದನ್ನು ಮತ್ತು ಆತನ ಮಾದರಿಯನ್ನು ಅನುಸರಿಸುವದನ್ನು ನಿರಾಕರಿಸಿ ಕ್ರಿಸ್ತನನ್ನು ತನ್ನಿಂದ ದೂರವಿಡುತ್ತಾನೆ. ಅಥವಾ ಅವನು ಸ್ವ-ನಿರಾಕರಣೆ, ನಂಬಿಕೆ ಮತ್ತು ವಿಧೇಯತೆಯ ಮೂಲಕ ಕ್ರಿಸ್ತನೊಂದಿಗೆ ವೈಯಕ್ತಿಕವಾದ ಐಕ್ಯತೆಯಲ್ಲಿರುತ್ತಾನೆ. ನಮ್ಮಲ್ಲಿ ಪ್ರತಿಯೊಬ್ಬರು ತಮ್ಮಷ್ಟಕ್ಕೆ ಕ್ರಿಸ್ತನನ್ನು ಆಯ್ದುಕೊಳ್ಳಬೇಕು ಯಾಕಂದರೆ ಆತನು ಮೊದಲು ನಮ್ಮನ್ನು ಆಯ್ದುಕೊಂಡಿದ್ದಾನೆ. ಕ್ರಿಸ್ತನೊಂದಿಗೆ ಇರುವ ಈ ಅನ್ಯೋನ್ಯತೆ ಯಾರು ಸ್ವಾಭಾವಿಕವಾಗಿ ಆತನೊಂದಿಗೆ ವೈರತ್ವದಲ್ಲಿರುತ್ತಾರೋ ಅವರಿಂದ ರಚಿಸಲ್ಪಡಬೇಕು. ಇದು ಸಂಪೂರ್ಣವಾದ ಅವಲಂಬನೆಯ ಸಂಬಂಧ, ಅಭಿಮಾನದ ಹೃದಯದ ಮೂಲಕ ಪ್ರವೇಶಿಸಬೇಕು. ಇದು ನಿಕಟವಾಗಿರುವ ಕೆಲಸವಾಗಿದೆ ಮತ್ತು ಕ್ರಿಸ್ತನ ಹಿಂಬಾಲಕರು ಎಂದು ಹೇಳಿಕೊಳ್ಳುವ ಅನೇಕರು ಇದರ ಕುರಿತು ಏನನ್ನೂ ತಿಳಿದಿಲ್ಲ. ಅವರು ಸಾಂಪ್ರದಾಯಿಕವಾಗಿ ಕ್ರಿಸ್ತನನ್ನು ಸ್ವೀಕರಿಸುತ್ತಾರೆ ಆದರೆ ತಮ್ಮ ಹೃದಯಗಳ ಏಕೈಕ ಅರಸನನ್ನಾಗಿ ಅಲ್ಲ.

(10) ನಮ್ಮ ಮೇಲೆ ಆತನಿಗಿರುವ ಮಹಾ ಪ್ರೀತಿಯಿಂದಾಗಿ, ದೇವರು ನಮಗೆ ಏನು

ಕೊಟ್ಟಿದ್ದಾನೆ ಅದನ್ನು ನಾವು ನಮ್ಮ ಹೃದಯದಲ್ಲಿ ನಮ್ಮನ್ನು ಪ್ರೇರೆಪಿಸಲು ಮತ್ತು ಪಾಪದ ಮೇಲೆ ಜಯವನ್ನು ಸಾಧಿಸಲು "ಮರೆ" ಮಾಡಿಕೊಳ್ಳಬಹುದು?

ನಿನಗೆ ವಿರೋಧವಾಗಿ ಪಾಪಮಾಡದಂತೆ ನಿನ್ನ ನುಡಿಗಳನ್ನು ನನ್ನ ಹೃದಯದಲ್ಲಿಟ್ಟುಕೊಂಡಿದ್ದೇನೆ. (ಕೀರ್ತನೆ 119: 11).

ಹೃದಯದಲ್ಲಿರುವ ದೇವರ ವಾಕ್ಯವು ನಮ್ಮನ್ನು ಪ್ರೇರೆಪಿಸುತ್ತದೆ ಮತ್ತು ಕ್ರೂಜೆಯ ಸೈನಿಕರಂತೆ ಉತ್ತಮವಾದ ಹೋರಾಟವನ್ನು ಮಾಡಲು ಸನ್ನಧರನ್ನಾಗಿ ಮಾಡುತ್ತದೆ (ಎಫೆಸ 6:7 ನೋಡಿರಿ). ಅದು ಮನುಷ್ಯನ ಬಿದ್ದು ಹೋದ ಸ್ಥಿತಿಯನ್ನು ಪ್ರಕಟಿಸುತ್ತದೆ, ಸೈತಾನನ ತಂತ್ರ ಮತ್ತು ಹಗೆತನ, ಕ್ರಿಸ್ತನ ರಕ್ಷಿಸುವ ಬಲ ಪವಿತ್ರಾತ್ಮನ ಮೂಲಕ ಪ್ರಯೋಗಿಸಲ್ಪಡುತ್ತದೆ. ಉನ್ನತ ಮಟ್ಟದ ಪುರುಷರು ಅದನ್ನು ಶ್ರದ್ದೆಯ ಮೂಲಕ ತಲುಪಬಹುದು ಮತ್ತು ಜಯಿಸುವವನಿಗೆ ಮಹಿಮೆಯ ಬಹುಮಾನವಿದೆ. ರಕ್ಷಕನು ತಾನೆ ಬರೆದಿಟ್ಟುರುವ ವಾಕ್ಯಗಳನ್ನು ಶೋಧಕನಿಂದ ಶೋಧನೆಗೆ ಒಳಗಾದಾಗ ಉಪಯೋಗಿಸಿದನು (ಮತ್ತಾಯ 4:1-11) ಮನುಷ್ಯನ ಯುದ್ದವನ್ನು ಮನುಷ್ಯನಾಗಿ ಹೋರಾಡಲು ರಕ್ಷಕನಿಗೆ ಇಂಥ ಸಂದರ್ಭಕ್ಕಾಗಿಯೇ

ಪವಿತ್ರಾತ್ಮನು ಪ್ರೇರೆಪಿಸಿದ ವಾಕ್ಯಕ್ಕಿಂತ ತೀವ್ರವಾದ ಆಯುಧವಿರಲಿಲ್ಲ (ಮತ್ತಾಯ 4:4,7, 10). ಇದನ್ನು ಕ್ರೈಸ್ತರಾಗಿ ಕ್ರಿಸ್ತನ ಮಾದರಿಯನ್ನು ಅನುಸರಿಸುವವರು ಮಾತ್ರ, ಅಮೂಲ್ಯವಾದ ದೇವರ ವಾಕ್ಯವನ್ನು ತಾವು ಸ್ವಂತಿಕೆ ಮತ್ತು ಪಾಪದ ಮೇಲೆ ಜಯವನ್ನು ಹೊಂದಲು  ತಮ್ಮ ನೆನಪಿನಲ್ಲಿ ತುಂಬಿಕೊಳ್ಳುತ್ತಾರೆ.

(11) ದೇವರ ಪ್ರೀತಿಯು ನಮ್ಮಲ್ಲಿ ಪರಿಪೂರ್ಣವಾಗಿ ಮಾಡಲ್ಪಟ್ಟಿದೆ ಎಂದು ಮತ್ತು ನಾವು ನಿಜವಾಗಿಯೂ ಆತನಲ್ಲಿ ನೆಲೆಗೊಂಡಿದ್ದೇವೆಂದೂ ನಾವು ಹೇಗೆ ತಿಳಿದುಕೊಳ್ಳುತ್ತೇವೆ?

ಯಾವನಾದರೂ ಆತನ ವಾಕ್ಯವನ್ನು ಕೈಕೊಂಡು ನಡೆದರೆ ಅವನಲ್ಲಿ ನಿಜವಾಗಿಯೂ ದೇವರ ಮೇಲಣ ಪ್ರೀತಿ ಪರಿಪೂರ್ಣವಾಗಿದೆ. ಇದರಿಂದಲೇ ಆತನಲ್ಲಿದ್ದೇವೆ ಎಂಬುದನ್ನು ತಿಳಿದುಕೊಳ್ಳುತ್ತೇವೆ. ಆತನಲ್ಲಿ ನೆಲೆಗೊಂಡವನಾಗಿದ್ದೇನೆಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ. (1ಯೋಹಾನ 2:5-6).

ನಾವು ನಮ್ಮ ವಿಧೇಯತೆಯಿಂದಾಗಿ ರಕ್ಷಣೆಯನ್ನು ಸಂಪಾದಿಸುವದಿಲ್ಲ; ಯಾಕಂದರೆ ರಕ್ಷಣೆಯು ನಂಬಿಕೆಯಿಂದ ಹೊಂದಿಕೊಳ್ಳಬಹುದಾದ ದೇವರು

ಕೊಡುವ ಉಚಿತಾರ್ಥವಾದ ವರವಾಗಿದೆ. ಆದರೆ ವಿಧೇಯತೆ ನಂಬಿಕೆಯ ಫಲವಾಗಿದೆ. "ಪಾಪಗಳನ್ನು ಹೋಗಲಾಡಿಸುವದಕ್ಕಾಗಿ ಕ್ರಿಸ್ತನು ಪ್ರತ್ಯಕ್ಷನಾದನೆಂಬದು ನಿಮಗೆ ಗೊತ್ತಾಗಿದೆ; ಆತನಲ್ಲಿ ಪಾಪವಿಲ್ಲ ಆತನಲ್ಲಿ ನೆಲೆಗೊಂಡಿರುವವನು ಪಾಪಮಾಡುವದಿಲ್ಲ; ಪಾಪಮಾಡುವವನು ಆತನನ್ನು ಕಂಡವನೂ  ಅಲ್ಲ. ತಿಳಿದವನೂ ಅಲ್ಲ." (1ಯೋಹಾನ 3:5, 6).

ಇಲ್ಲಿ ನಿಜವಾದ ಪರೀಕ್ಷೆ ಇದೆ. ಒಂದುವೇಳೆ ನಾವು ಕ್ರಿಸ್ತನಲ್ಲಿ ನೆಲೆಗೊಂಡಿದ್ದರೆ, ದೇವರ ಪ್ರೀತಿ ನಮ್ಮೊಳಗೆ ವಾಸವಾಗಿದ್ದರೆ, ನಮ್ಮ ಭಾವನೆಗಳು, ನಮ್ಮ ಆಲೋಚನೆಗಳು, ನಮ್ಮ ಉದ್ದೇಶಗಳು, ನಮ್ಮ ಕ್ರಿಯೆಗಳು  ಪರಿಶುದ್ಧ ಧರ್ಮಶಾಸ್ತ್ರದಲ್ಲಿ ಹೇಳಿರುವ ನಿಯಮಗಳಿಗೆ ಅನುಸಾರವಾಗಿ ದೇವರ ಚಿತ್ತದೊಂದಿಗೆ ಸಾಮರಸ್ಯದಲ್ಲಿರುತ್ತವೆ. "ಪ್ರಿಯ ಮಕ್ಕಳೇ ನಿಮ್ಮನ್ನು ಸನ್ಮಾರ್ಗದಿಂದ ತಪ್ಪಿಸುವದಕ್ಕೆ ಯಾರಿಗೂ ಅವಕಾಶಕೊಡಬೇಡಿರಿ. ಕ್ರಿಸ್ತನು ಹೇಗೆ ನೀತಿವಂತನಾಗಿದ್ದಾನೋ ಹಾಗೆಯೇ ನೀತಿಯನ್ನನುಸರಿಸುವವನು ನೀತಿವಂತನಾಗಿದ್ದಾನೆ." 1ಯೋಹಾನ 3:7. ನೀತಿವಂತಿಕೆ ದೇವರ ಪರಿಶುದ್ಧ

ಧರ್ಮಶಾಸ್ತ್ರದ ಅಳತೆಗೋಲಿಗೆ ಅನುಸಾರವಾಗಿ, ಸಿನಾಯಿ ಬೆಟ್ಟದಲ್ಲಿ ನೀಡಿದ ಹತ್ತು ಆಜ್ಞೆಗಳಿಗೆ ಅನುಸಾರವಾಗಿ ವ್ಯಾಖ್ಯಾನಿಸಲಾಗಿದೆ.

(12) ನಾವು ಕರ್ತನ ಪ್ರೀತಿಯಲ್ಲಿ ನೆಲೆಗೊಂಡಿದ್ದರೆ ಕ್ಷಣ ಕ್ಷಣಕ್ಕೂ ನಾವು ಯಾವ ವಾಗ್ದಾನವನ್ನು ಕೇಳಿಕೊಳ್ಳಬೇಕು?

ಆತನಲ್ಲಿ ಪಾಪವಿಲ್ಲ ಆತನಲ್ಲಿ ನೆಲೆಗೊಂಡಿರುವವನು ಪಾಪ ಮಾಡುವದಿಲ್ಲ; ಪಾಪ ಮಾಡುವವನು ಆತನನ್ನು ಕಂಡವನೂ ಅಲ್ಲ. ತಿಳಿದವನೂ ಅಲ್ಲ." (1ಯೋಹಾನ 3:6).

"ದೇವರಿಂದ ಹುಟ್ಟಿದವನು ಪಾಪಮಾಡುವದಿಲ್ಲ." ತಾನು ಕ್ರಿಸ್ತನ ರಕ್ತದಿಂದ ಕೊಳ್ಳಲ್ಪಟ್ಟವನು ದೇವರನ್ನು ತನ್ನ ದೇಹ ಮತ್ತು ದೇವರದ್ದೇ ಆಗಿರುವ ಆತ್ಮದಿಂದ  ಮಹಿಮೆಪಡಿಸುವ ಅತ್ಯಂತ ಉದಾತ್ತವಾದ ಆಜ್ಞೆಗೆ ಒಳಪಟ್ಟವನು ಆಗಿದ್ದೇನೆ ಎಂದು ಭಾವಿಸುತ್ತಾನೆ. ಪಾಪದ ಮೇಲಣ ಪ್ರೀತಿ ಮತ್ತು ಸ್ವಾರ್ಥದ ಮೇಲಣ ಪ್ರೀತಿ ಅವನಲ್ಲಿ ನಿಗ್ರಹಿಸಲ್ಪಟ್ಟಿವೆ. ಅವನು ಪ್ರತಿನಿತ್ಯ, "ಆತನ ಉಪಕಾರಗಳಿಗೆ ಬದಲೇನು ಕೊಡಲಿ?" ಎಂದು ಕೇಳಿಕೊಳ್ಳುತ್ತಾನೆ "ದೇವರ ನಾನು ಏನು ಮಾಡಬೇಕೆಂದು ಬಯಸುತ್ತೀ? ನಿಜವಾದ ಕ್ರೈಸ್ತನು ಯಾವಾಗಲೂ

ಕ್ರಿಸ್ತನ ನೊಗವು ನನ್ನ ಕೊರಳಿಗೆ ನೋವನ್ನುಂಟು ಮಾಡುತ್ತಿದೆ ಎಂದು ಎಂದಿಗೂ ದೂರುವದಿಲ್ಲ. ಅವನು ಯೇಸುವಿನ ಸೇವೆಯನ್ನು ನಿಜವಾದ ಸ್ವಾತಂತ್ರ ಎಂದು ಪರಿಗಣಿಸುತ್ತಾನೆ. ದೇವರ ಧರ್ಮಶಾಸ್ತ್ರ ಅವನ ಆನಂದವಾಗಿದೆ. ದೈವೀಕ ಆಜ್ಞೆಗಳನ್ನು ಕೆಳಗೆ ತರಲು ಪ್ರಯತ್ನಿಸುವದಕ್ಕಿಂತ, ಅದರ ಕೊರತೆಗಳನ್ನು ಒಪ್ಪಿಕೊಂಡು ಅವನು ಯಾವಾಗಲೂ ಅವುಗಳ ಪರಿಪೂರ್ಣತೆಯನ್ನು ಹೆಚ್ಚಿಸಲು ಪ್ರಯತ್ನಿಸುತ್ತಾನೆ.

ಆತ್ಮೀಕ ಸಂಬಂಧವನ್ನು ವೈಯಕ್ತಿಕ ನಂಬಿಕೆಯನ್ನು ಅಭ್ಯಾಸಿಸುವದರ ಮೂಲಕ ಮಾತ್ರ ಸ್ಥಾಪಿಸಬಹುದು. ಈ ನಂಬಿಕೆಯು ನಮ್ಮ ಭಾಗಕ್ಕೆ ಶ್ರೇಷ್ಠ ಆದ್ಯತೆಯಾಗಬೇಕು, ಪರಿಪೂರ್ಣವದ ಅವಲಂಬನೆ, ಸಂಪೂರ್ಣವಾದ ಪ್ರತಿಷ್ಟೆ. ನಮ್ಮ ಚಿತ್ತವು ಸಂಪೂರ್ಣವಾಗಿ ದೈವೀಕ ಚಿತ್ತಕ್ಕೆ ಅಧೀನವಾಗಬೇಕು, ನಮ್ಮ ಭಾವನೆಗಳು, ಬಯಕೆಗಳು, ಆಸಕ್ತಿಗಳು ಮತ್ತು ಗೌರವ ಕ್ರಿಸ್ತನ ರಾಜ್ಯದ ಸಮೃದ್ಧಿಯಲ್ಲಿ ಮತ್ತು ಆತನಿಗೆ ಗೌರವವನ್ನು ತರುವ ರೀತಿಯಲ್ಲಿ ಗುರುತಿಸಲ್ಪಡಬೇಕು, ನಾವು ನಿರಂತರವಾಗಿ ಆತನಿಂದ ಕೃಪೆಯನ್ನು ಹೊಂದಿಕೊಳ್ಳುತ್ತೇವೆ ಮತ್ತು ಕ್ರಿಸ್ತನು ನಮ್ಮಿಂದ ಕೃತಜ್ಞತೆಯನ್ನು ಅಪೇಕ್ಷಿಸುತ್ತಾನೆ.

(13) ನಾವು ಕ್ರಿಸ್ತನ ಸಮೀಪಕ್ಕೆ ಎಳೆಯಲ್ಪಡುತ್ತಿರುವ ಹಾಗೆ ಮತ್ತು ನಾವು ಆತನು ನೀಡಿರುವ ಯಾವ ವಾಗ್ದಾನವನ್ನು ಕೇಳಿಕೊಳ್ಳಬೇಕು?

ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡೆಸಿಕೊಂಡು ಯೇಸು ಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುವನೆಂದು ನನಗೆ ಭರವಸವುಂಟು. (ಫಿಲಿಪ್ಪಿ 1:6)

ಕ್ರಿಸ್ತನ ಕ್ಷಮಿಸುವ ಪ್ರೀತಿಯನ್ನು ತಿಳಿದವರು ಇದ್ದಾರೆ ಮತ್ತು ಅವರು ನಿಜವಾಗಿ ದೇವರ ಮಕ್ಕಳಾಗಿರಲು ಬಯಸುತ್ತಾರೆ, ಆದಾಗ್ಯೂ ಅವರು ತಮ್ಮ ಗುಣಲಕ್ಷಣಗಳು ಪರಿಪೂರ್ಣವಾಗಿಲ್ಲ ಎಂದು ಅರಿತಿದ್ದಾರೆ, ತಮ್ಮ ತಪ್ಪಾದ ಜೀವಿತ ಮತ್ತು ಅವರ ಹೃದಯಗಳು ಪವಿತ್ರಾತ್ಮನಿಂದ ನವೀಕರಿಸ ಲ್ಪಟ್ಟಿವೆಯೋ ಎಂದು ಸಂದೇಹ ವ್ಯಕ್ತಪಡಿಸಲು ಸಿದ್ಧರಾಗಿರುತ್ತಾರೆ. ಇಂಥವರಿಗೆ ನಾನು ಹೇಳುತ್ತೇನೆ, ತಿರುಗಿ ನಿರಾಶೆಯಲ್ಲಿ ಬೀಳಬೇಡಿರಿ. ನಾವು ಅನೇಕಾವರ್ತಿ ಯೇಸುವಿನ ಪಾದದಲ್ಲಿ ಮೊಣಕಾಲೂರಬೇಕು ಮತ್ತು ಅಳಬೇಕು ಯಾಕಂದರೆ ನಮ್ಮ ನ್ಯೂನ್ಯತೆಗಳು ಮತ್ತು ತಪ್ಪುಗಳಿಂದಾಗಿ ನಾವು ಧೈರ್ಯಗೆಡಬಾರದು. ನಾವು ವೈರಿಯನ್ನು ಜಯಿಸಿದ್ದಾಗಲೂ, ನಾವು ಹೊರಹಾಕಿಲ್ಲ,ತೊರೆದು ಬಿಟ್ಟಿಲ್ಲ ದೇವರಿಂದ ತಿರಸ್ಕರಿಸಲ್ಪಟ್ಟಿಲ್ಲ, ಇಲ್ಲ

ಕ್ರಿಸ್ತನು ದೇವರ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ, ಆತನು ನನಗಾಗಿ ಮಧ್ಯವರ್ತಿಯಾಗಿ ಪ್ರಾರ್ಥನೆ ಮಾಡುತ್ತಾನೆ ಎಂದು ಪ್ರಿಯ ಯೋಹಾನನು ಹೇಳುತ್ತಾನೆ, "ನನ್ನ ಪ್ರಿಯರಾದ ಮಕ್ಕಳೇ, ನೀವು ಪಾಪಮಾಡದಂತೆ ಈ ಮಾತುಗಳನ್ನು ನಿಮಗೆ ಬರೆಯುತ್ತೇನೆ. ಯಾವನಾದರೂ ಪಾಪಮಾಡಿದರೆ ತಂದೆಯ ಬಳಿಯಲ್ಲಿ ನೀತವಂತನಾದ ಯೇಸು ಕ್ರಿಸ್ತನೆಂಬ ಸಹಾಯಕನು ನಮಗಿದ್ದಾನೆ.1ಯೋಹಾನ 2:1. ಮತ್ತು ಕ್ರಿಸ್ತನ ಮಾತುಗಳನ್ನು ಮರೆಯ ಬೇಡಿರಿ. "ತಂದೆಯು ತಾನೇ ನಿಮ್ಮನ್ನು ಪ್ರೀತಿಸುತ್ತಾನೆ" ಯೋಹಾನ 16:27 ಆತನು ನಿಮ್ಮನ್ನು ತನಗಾಗಿ ಪುನಃಸ್ಥಾಪಿಸಲು ಬಯಸುತ್ತಾನೆ. ತನ್ನ ಸ್ವಂತ ಪವಿತ್ರತೆ ಮತ್ತು ಪರಿಶುದ್ಧತೆ ನಿಮ್ಮಲ್ಲಿ ಪ್ರತಿಫಲಿಸಬೇಕೆಂದು ಬಯಸುತ್ತಾನೆ. ಮತ್ತು ಒಂದುವೇಳೆ ನೀವು ನಿಮ್ಮನ್ನು ಅಧೀನಪಡಿಸಿ ಕೊಳ್ಳುವು ದಾದರೆ  ಈ ಒಳ್ಳೇ ಕೆಲಸವನ್ನು ನಿಮ್ಮಲ್ಲಿ ಪ್ರಾರಂಭಿಸಿದಾತನು ಅದನ್ನು ನಡೆಸಿಕೊಂಡು ಯೆಸು ಕ್ರಿಸ್ತನು ಬರುವ ದಿನದೊಳಗಾಗಿ ಸಿದ್ಧಿಗೆ ತರುತ್ತಾನೆ. ಹೆಚ್ಚು ಆಸಕ್ತಿಯಿಂದ ಪ್ರಾರ್ಥಿಸಿರಿ; ಹೆಚ್ಚು ಸಂಪೂರ್ಣವಾಗಿ ನಂಬಿರಿ, ನಾವು ನಮ್ಮ ಸ್ವಂತ ಬಲದಲ್ಲಿ ಅವಿಶ್ವಾಸವಿಡುವಾಗ, ನಾವು ನಮ್ಮ ವಿಮೋಚಕನ ಬಲದಲ್ಲಿ ವಿಶ್ವಾಸವನ್ನು

ಇಡೋಣ, ಮತ್ತು ನಾವು ಆತನನ್ನು ಸ್ತುತಿಸೋಣ ಆತನು ನಮ್ಮ ನೈತಿಕತ್ಕೆಯ ಆರೋಗ್ಯದಾಯಕನು ಆಗಿದ್ದಾನೆ.

(14) ನಾವು ಕ್ರಿಸ್ತನ ಪ್ರೀತಿಯನ್ನು ಸ್ವೀಕರಿಸುವುದಾದರೆ ಮತ್ತು ಆತನನ್ನು ನಮ್ಮ ಜೀವಿತದಲ್ಲಿ ಅನುಮತಿಸುವುದಾದರೆ ಈ ಪರ್ಯವು ನಮ್ಮ ನಿತ್ಯಜೀವದ ಕುರಿತು ಎಂಥ ಅದ್ಭುತವಾದ ಭರವಸೆಯನ್ನು ನಮಗೆ ನೀಡುತ್ತದೆ?

ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ. ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ. (1ಯೋಹಾನ 5:12-13).

ಮಗನನ್ನು ಹೊಂದಿಕೊಳ್ಳುವದು ಅಂದರೆ ಆತನಲ್ಲಿ ನಂಬಿಕೆ ಇಡುವದು ಆತನ ಹೆಸರು ಸೂಚಿಸುವಂತೆ ಆತನು ನಮಗೆ ಎಲ್ಲವೂ ಆಗುತ್ತಾನೆ; ಒಬ್ಬ ರಕ್ಷಕ, ಒಬ್ಬ ಕರ್ತನು, ನಮ್ಮ ಅರಸನು ಆಗುವದಕ್ಕೆ ಅಭಿಷೇಕಿಸಲ್ಪಟ್ಟವನು (ಯೋಹಾನ 1:12; 5:24 ನೋಡಿರಿ). ಕ್ರಿಸ್ತನು ನಮ್ಮ ಹೃದಯದಲ್ಲಿ ಅತ್ಯಂತ ಶ್ರೇಷ್ಠವಾದ ಗೌರವವನ್ನು ಹೊಂದಿದ

ಅತಿಥಿಯಾಗಿ ವಾಸಿಸುತ್ತಾನೆ ಎಂದರ್ಥ (ಗಲಾತ್ಯ 2:20; ಎಫೆಸ 3:17; ಪ್ರಕಟನೆ 3:20 ನೋಡಿರಿ).

ಪ್ರೀತಿಯ ವಾತಾವರಣದಲ್ಲಿ ಅಂದರೆ ದೇವರ ಸಾನಿಧ್ಯದಲ್ಲಿ ಜೀವಿಸುವದು ನನ್ನ ಬಯಕೆ ಆಗಿದೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ದೇವರು ತನ್ನ ಪ್ರೀತಿಯನ್ನು ನನ್ನೊಳಗೆ ಇರಿಸಬೇಕೆಂಬುದು ನನ್ನ ಬಯಕೆಯಾಗಿದೆ. ಇದರಿಂದಾಗಿ ನಾನು ನಿಜವಾದ ಪ್ರಾಯೋಗಿಕ ವಿಧಾನದಲ್ಲಿ ಇತರರನ್ನು ನಿಜವಾಗಿ ಪ್ರೀತಿಸಬೇಕು. ಪ್ರೀತಿಯ ಪರಿಮಳವು ನನ್ನ ದೀನತೆ, ಪರಿಶ್ರಮ ಮತ್ತು ಪ್ರಾಮಾಣಿಕ ಅನುಕಂಪ ಮತ್ತು ಇತರಿಗಾಗಿ ಸೇವೆಯಲ್ಲಿ ಪ್ರಕಟವಾಗಬೇಕು ಎಂದು ನನ್ನ ಬಯಕೆಯಾಗಿದೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಆತನ ಕರುಣೆಯ ಚಿಂತನೆಯಲ್ಲಿ ಅಳೆಯಲಶಕ್ಯವಾದ ಪ್ರೀತಿಯಲ್ಲಿ ನಾನು ಯಾವಾಗಲೂ ಕ್ರಿಸ್ತನನ್ನು ದೃಷ್ಟಿಸುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ಆತನು ನನಗಾಗಿ ಒದಗಿಸಿದ ನಿತ್ಯಜೀವದ ಬಹುಮಾನಕ್ಕಾಗಿ ಬಹಳ ಕೃತಜ್ಞಳಾಗಿದ್ದೇನೆ

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ನಾನು ನನ್ನ ಚಿತ್ತವನ್ನು ಸಂಪೂರ್ಣವಾಗಿ ಕರ್ತನಿಗೆ ಆತನು ನನ್ನಲ್ಲಿ ವಾಸಿಸುವಂತೆ ಮತ್ತು ಆತನ ನೀತಿವಂತಿಕೆಯನ್ನು ಆತನನ್ನು ಮತ್ತು ಇತರರನ್ನು ಪ್ರೀತಿಸುವದರ ಮೂಲಕ ಜೀವಿಸಲು ಸಮರ್ಪಿಸಿಕೊಳ್ಳುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ



## ಪಾಠ 14
## ದೇವರೆಡೆಗೆ ನಮ್ಮ ಪ್ರೀತಿ

(1) ನಮ್ಮ ರಕ್ಷಣೆಯ ಆನಂದಕ್ಕಾಗಿ ಮತ್ತು ನಮ್ಮ ಪ್ರೀತಿಯನ್ನು ಗೆದ್ದುಕೊಳ್ಳಲು  ಕ್ರಿಸ್ತನು ಏನು ಮಾಡಿದನು?

ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನೂ ಆಗಿರುವ ಯೇಸುವಿನ ಮೇಲೆ ದೃಷ್ಟಿಯಿಟ್ಟು ನಮಗೆ ನೇಮಕವಾದ ಓಟವನ್ನು ಸ್ಥಿರಚಿತ್ತದಿಂದ ಓಡೋಣ. ಆತನು ತನ್ನ ಮುಂದೆ ಇಟ್ಟಿದ್ದ ಸಂತೋಷಕ್ಕೋಸ್ಕರ ಅವಮಾನವನ್ನು ಅಲಕ್ಷಮಾಡಿ ಶಿಲುಬೆಯ ಮರಣವನ್ನು ಸಹಿಸಿಕೊಂಡು ದೇವರ ಸಿಂಹಾಸನದ ಬಲಗಡೆಯಲ್ಲಿ ಆಸನಾರೂಢನಾಗಿದ್ದಾನೆ. (ಇಬ್ರಿಯ 12:2)

ಕಲ್ವಾರಿ ಕ್ರೂಜೆಯು ಅಧಿಕಾರದಿಂದ ನಮ್ಮನ್ನು ವಿನಂತಿಸುತ್ತದೆ, ನಾವು ನಮ್ಮ ರಕ್ಷಕನನ್ನು ಏಕೆ ಪ್ರೀತಿಸಬೇಕು ಎಂಬ ಕಾರಣವನ್ನು ನೀಡುತ್ತದೆ. ಮತ್ತು ನಾವು

ಏಕೆ ಆತನನ್ನು
ಮೊದಲನೆಯವನನ್ನಾಗಿ,
ಕೊನೆಯವನನ್ನಾಗಿ ಮತ್ತು
ಉತ್ತಮನಾದವನನ್ನಾಗಿ
ಪ್ರತಿಯೊಂದರಲ್ಲಿ ಮಾಡಬೇಕು. ನಾವು
ನಮಗೆ ಸಮಂಜಸವಾದ  ಸ್ಥಾನವನ್ನು
ದೀನತೆ ಪಶ್ಚಾತ್ತಾಪದೊಂದಿಗೆ ಕ್ರೂಜೆಯ
ಪಾದದ ಅಡಿಯಲ್ಲಿ ತೆಗೆದುಕೊಳ್ಳಬೇಕು.
, ಇಲ್ಲಿ ನಾವು ನಮ್ಮ ರಕ್ಷಕನ
ವೇದನೆಯನ್ನು, ದೇವಕುಮಾರನು
ನ್ಯಾಯವಂತನು  ಅನ್ಯಾಯ
ಮಾಡುವವರಿಗಾಗಿ ಸಾಯುವದನ್ನು
ನೋಡುತ್ತೇವೆ. ನಾವು ಆತನಿಂದ
ಸಾತ್ವಿಕತೆ ಮತ್ತು ತಗ್ಗಿಸಿಕೊಳ್ಳುವ
ಮನಸ್ಸಿನ ಪಾಠವನ್ನು ಕಲಿಯಬಹುದು.
ಒಂದು ಮಾತಿನಿಂದ ದೂತರ
ದಂಡುಗಳನ್ನು ತನ್ನ ಸಹಾಯಕ್ಕೆ
ಬರಹೇಳುವವನು, ತಮಾಷೆ ಮತ್ತು
ಮೋಜಿಗಾಗಿ, ಹಗೆತನವನ್ನು
ದೂಷಿಸುವದಕ್ಕಾಗಿ. ಆತನು ಪಾಪಕ್ಕಾಗಿ
ತನ್ನನ್ನು ತಾನು ಬಲಿಯಾಗಿ
ಅರ್ಪಿಸಿದನು. ದೂಷಿಸುವಾಗ, ಆತನು
ಭಯಪಡಿಸಲಿಲ್ಲ; ಸುಳ್ಳು
ಆರೋಪವನ್ನು ಹೊರಿಸಿದಾಗ, ಆತನು
ತನ್ನ ಬಾಯಿ ತೆರೆಯಲಿಲ್ಲ. ಆತನು
ಕ್ರೂಜೆಯ ಮೇಲೆ ತನ್ನನ್ನು ಕೊಲೆ
ಮಾಡುವವರಿಗಾಗಿ ಪ್ರಾರ್ಥಿಸಿದನು.
ಆತನು ಅವರಿಗಾಗಿ ಸಾಯುತ್ತಿದ್ದನು;
ಆತನು ಅವರಲ್ಲಿ ಪ್ರತಿಯೊಬ್ಬರಿಗಾಗಿ
ಅನಂತವಾದ ಬೆಲೆಯನ್ನು
ತೆರುತ್ತಿದ್ದನು. ಆತನು ಗುಣಗುಟ್ಟದೆ

ಮನುಷ್ಯನ ಪಾಪದ ದಂಡನೆಯನ್ನು ಅನುಭವಿಸಿದನು. ದೂರಲಾರದಿರುವ ಈ ಬಲಿಪಶು ಯಾರಂದರೆ ದೇವಕುಮಾರನು. ಆತನ ಸಿಂಹಾಸನವು ನಿತ್ಯಕಾಲಕ್ಕೂ ಇರುವಂಥದ್ದು ಮತ್ತು ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ.

ಯಾರು ತಮ್ಮ ಸ್ವಂತ ಸುಖವನ್ನು ನಿಷೇಧಿಸಲಾದ ಸಂತೋಷ ಮತ್ತು ಪಾಪದಿಂದ ಕೂಡಿದ ತೃಪ್ತಿಯನ್ನು ಹುಡುಕುತ್ತಿದ್ದೀರೋ, ಯಾರು ಕ್ರಿಸ್ತನಿಂದ ಚದುರಿಹೋಗಿದ್ದೀರೋ, ಕಲ್ವಾರಿ ಕ್ರೂಜೆಯನ್ನು ನೋಡಿರಿ; ರಾಜವಂಶಸ್ತನಾದ ಬಲಿಪಶುವನ್ನು ನೋಡಿರಿ, ನಿಮ್ಮ ಪರವಾಗಿ ಕಷ್ಟವನ್ನು ಅನುಭವಿಸುತ್ತಿದ್ದಾನೆ, ನಿಮಗೆ ಅವಕಾಶವಿರುವಾಗಲೇ ಜಾಣರಾಗಿರಿ ಮತ್ತು ಜೀವದ ಬುಗ್ಗೆಯನ್ನು ಮತ್ತು ನಿಜವಾದ ಸಂತೋಷವನ್ನು ಹುಡುಕಿರಿ. ಯಾರು ಸ್ವಲ್ಪ ಅನಾನುಕೂಲ ವಾಗುವಾಗ  ಈ ಜೀವಿತದಲ್ಲಿ ಕೆಲವು ಶೋಧನೆಗಳನ್ನು ಎದುರಿಸುವಾಗ ದೂರುವವರಾಗಿದ್ದೀರೋ ಮತ್ತು ಗುಣಗುಟ್ಟುವವರಾಗಿದ್ದೀರೋ, ಬನ್ನಿರಿ. ನಿಮ್ಮ ನಂಬಿಕೆಯನ್ನು ಹುಟ್ಟಿಸುವವನೂ ಪೂರೈಸುವವನು ಆದ ಯೇಸುವನ್ನು ನೋಡಿರಿ, ಆತನು ತನ್ನ ರಾಜಸಿಂಹಾಸನವನ್ನು ಬಿಟ್ಟು, ತನ್ನ ಉನ್ನತವಾದ ಅಧಿಕಾರವನ್ನು ಬಿಟ್ಟು ತನ್ನ ದೈವತ್ವವನ್ನು ಬದಿಗಿಟ್ಟು, ತನ್ನನ್ನು ತಾನು ಮಾನವತ್ವದಲ್ಲಿ

ಧರಿಸಿಕೊಂಡನು. ನಮಗಾಗಿ ಆತನು ತಿರಸ್ಕಾರಕ್ಕೆ ಒಳಗಾದನು ಮತ್ತು ಜಜ್ಜಲ್ಪಟ್ಟನು; ಆತನು ನಮ್ಮನ್ನು ಶ್ರೀಮಂತರನ್ನಾಗಿಸಲು ತಾನು ಬಡವನಾದನು.ನೀವು ಕ್ರಿಸ್ತನ ಕಷ್ಟಾನುಭವವನ್ನು ನಂಬಿಕೆಯ ಕಣ್ಣುಗಳಿಂದ ನೋಡಬಲ್ಲಿರೋ, ನಿಮ್ಮ ಶೋಧನೆಗಳನ್ನು. ನಿಮ್ಮ ವಿಪತ್ತುಗಳ ಕಥೆಯನ್ನು ಹೇಳಿಕೊಳ್ಳುವಿರೋ?

(2) ಯೋಹಾನನು ನಮ್ಮನ್ನು ಏನನ್ನು "ನೋಡುವಂತೆ" ಎಚ್ಚರಿಸುತ್ತಾನೆ. ಮತ್ತು ಅದು ದೇವರನ್ನು ಪ್ರೀತಿಸುವದಕ್ಕೆ ಮೊದಲನೇ ಹೆಜ್ಜೆಯಾಗಿದೆ?

ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ. ನಾವು ಆತನ ಮಕ್ಕಳಾಗಿದ್ದೇವೆ. ಈ ಕಾರಣದಿಂದ ಲೋಕವು ನಮ್ಮನು ತಿಳಿದುಕೊಳ್ಳುವದಿಲ್ಲ! ಅದು ಆತನನ್ನು ತಿಳಿದುಕೊಳ್ಳುವದಿಲ್ಲ. (1ಯೋಹಾನ 3:1).

ದೇವರ ಪ್ರೀತಿಯನ್ನು ವರ್ಣಿಸಲು ಸರಿಯಾದ ಭಾಷೆಯನ್ನು ಹುಡುಕುವಾಗ, ನಾವು ಬಹಳ ನಮ್ರವಾದ, ಬಹಳ ಬಲಹೀನವಾದ, ಮುಖ್ಯವಿಷಯಕ್ಕೆ ಬಹಳ ದೂರವಾದ ಪದಗಳು ಸಿಕ್ಕುತ್ತವೆ ಮತ್ತು ನಾವು ನಮ್ಮ ಲೇಖನಿಯನ್ನು ಬದಿಗಿಟ್ಟು ಹೇಳುತ್ತೇವೆ, "ಇಲ್ಲ, ಅದನ್ನು ವರ್ಣಿಸಲು

ಸಾಧ್ಯವಿಲ್ಲ."ನಾವು ಕೇವಲ ಪ್ರಿಯ ಶಿಷ್ಯರು ಮಾಡಿದಂತೆ ಮಾಡಬಹುದು ಮತ್ತು ಹೇಳಬಹುದು, "ದೇವರ ಮಕ್ಕಳೆಂಬ ಹೆಸರನ್ನು ನಮಗೆ ಕೊಡುವದರಲ್ಲಿ ತಂದೆಯು ಎಂಥಾ ಪ್ರೀತಿಯನ್ನು ನಮ್ಮ ಮೇಲೆ ಇಟ್ಟಿದ್ದಾನೆ ನೋಡಿರಿ." ಈ ಪ್ರೀತಿಯ ವರ್ಣನೆಯನ್ನು ಮಾಡುವ ಪ್ರಯತ್ನ, ನಾವು ತಮ್ಮ ಮೊದಲನೆಯ ಪದವನ್ನು ತೊದಲುನುಡಿಯಲ್ಲಿ ಹೇಳುವ ಬಾಲಕನಂತೆ ನಾವು ಭಾವಿಸುತ್ತೇವೆ. ನಾವು ಮೌನವಾಗಿ ಆರಾಧಿಸಬಹುದು; ಈ ವಿಷಯದಲ್ಲಿ ಮೌನ ಒಂದೇ ವಾಕ್ಚಾತುರ್ಯವಾಗಿದೆ. ಈ ಪ್ರೀತಿಯನ್ನು ವರ್ಣಿಸಲು ಎಲ್ಲಾ ಬಾಷೆಗಳು ಹಿಂದುಳಿದಿವೆ. ಇದು ದೇವರು ಶರೀರಧಾರಿಯಾಗಿರುವದರ ರಹಸ್ಯ ಮತ್ತು ದೈವತ್ವ ಮಾನವತ್ವದಲ್ಲಿ. ಕ್ರಿಸ್ತನು ಸಮಾನಾಂತರವಲ್ಲದ ದೀನತೆಯಲ್ಲಿ ತಗ್ಗಿಸಿಕೊಂಡನು, ದೇವರ ಸಿಂಹಾಸನದಲ್ಲಿ ಆತನ ಘನತೆಯಲ್ಲಿ, ಆತನು ಆತನಲ್ಲಿ ನಂಬುವ ಎಲ್ಲರನ್ನೂ ಘನತೆಗೆ ಏರಿಸುತ್ತಾನೆ, ಆತನೊಂದಿಗೆ ಆತನ ಸಿಂಹಾಸನದಲ್ಲಿ ಕುಳ್ಳಿರಿಸುತ್ತಾನೆ. ನಂಬಿಕೆಯಿಂದ ಯೇಸುವನ್ನು ನೋಡುವವರೆಲ್ಲರು ಪಾಪವು ಮಾಡಿದ ಗಾಯಗಳು ಮತ್ತು ಜಜ್ಜುವಿಕೆ ಆತನಲ್ಲಿ

ಗುಣಹೊಂದುತ್ತವೆ, ನಾವೂ ಸಂಪೂರ್ಣರಾಗಿ ಮಾಡಲ್ಪಡೋಣವೆ.

(3) ದೇವರ ಪ್ರೀತಿಯನ್ನು ಗ್ರಹಿಸಿಕೊಳ್ಳಲು ಮತ್ತು ನಾವು ಆತನ ಪ್ರೀತಿಯಲ್ಲಿ ಬೀಳಲು, ಎರಡನೆಯ ಮತ್ತು ಮೂರನೆಯ ಹಂತ ಯಾವುದು?

ದೇವರು ನಮ್ಮಲ್ಲಿಟ್ಟಿರುವ ಪ್ರೀತಿಯನ್ನು ನಾವು ತಿಳಿದುಕೊಂಡಿದ್ದೇವೆ ಅದನ್ನು ನಂಬಿದ್ದೇವೆ. ದೇವರು ಪ್ರೀತಿಸ್ವರೂಪಿ. ಪ್ರೀತಿಯಲ್ಲಿ ನೆಲೆಗೊಂಡಿರುವವನು ದೇವರಲ್ಲಿ ನೆಲೆಗೊಂಡಿದ್ದಾನೆ, ದೇವರು ಅವನಲ್ಲಿ ನೆಲೆಗೊಂಡಿದ್ದಾನೆ.
(1ಯೋಹಾನ 4:16)

ನಾವು ದೇವರ ಕ್ಷಮಿಸುವ ಪ್ರೀತಿಯನ್ನು ಹೊಂದಿಕೊಳ್ಳಲು ಮತ್ತು ಪಾಲು ತೆಗೆದುಕೊಳ್ಳಲು ಅಗತ್ಯವಿರುವ ಒಂದು ಸಂಗತಿ ಏನಂದರೆ ನಾವು ನಮ್ಮ ಮೇಲಿರುವ ದೇವರ ಪ್ರೀತಿಯನ್ನು ತಿಳಿದುಕೊಳ್ಳಬೇಕು ಮತ್ತು ನಂಬಬೇಕು. 1ಯೋಹಾನ 4:16. ಸೈತಾನನು ತಾನು ಆಜ್ಞಾಪಿಸಬಹುದಾದ ಎಲ್ಲಾ ಮೋಸತನದ ಮೂಲಕ ನಾವು ಆ ಪ್ರೀತಿಯನ್ನು ಗ್ರಹಿಸದಂತೆ ಕಾರ್ಯ ಮಾಡುತ್ತಾನೆ.  ಕೆಲಸಮಾಡುತ್ತಾನೆ. ಆತನು ನಮ್ಮ ತಪ್ಪುಗಳು ಮತ್ತು ಉಲ್ಲಂಘನೆಗಳು ದೇವರಿಗೆ ಬಹಳ ನೋವನ್ನುಂಟು ಮಾಡುತ್ತವೆ ಹೀಗಾಗಿ ದೇವರಿಗೆ ನಮ್ಮ ಪ್ರಾರ್ಥನೆಗಳ ಕುರಿತು

ಗೌರವವಿಲ್ಲ ಮತ್ತು ಆತನು ನಮ್ಮನ್ನು ಆಶೀರ್ವದಿಸುವದಿಲ್ಲ ಮತ್ತು ರಕ್ಷಿಸುವದಿಲ್ಲ ಎಂದು ಯೋಚಿಸುವತ್ತ ನಡೆಸುತ್ತಾನೆ. ನಾವು ನಮ್ಮಲ್ಲಿ ಬಲಹೀನತೆಯನ್ನು ಹೊರತುಪಡಿಸಿ ಯಾವುದು ನಮ್ಮನ್ನು ದೇವರೆಡೆಗೆ ಶಿಫಾರಸ್ಸು ಮಾಡುವದಿಲ್ಲ ಮತ್ತು ಸೈತಾನನು ನಮಗೆ ಇದು ಉಪಯೋಗವಿಲ್ಲ; ನಾವು ನಮ್ಮ ನಡೆತೆಯಲ್ಲಿರುವ ತಪ್ಪುಗಳಿಗೆ ಪರಿಹಾರವನ್ನು ಕಂಡುಕೊಳ್ಳುವದಿಲ್ಲ ಎಂದು ಹೇಳುತ್ತಾನೆ. ನಾವು ದೇವರ ಬಳಿಗೆ ಬರಲು ಪ್ರಯತ್ನಿಸುವಾಗ, ವೈರಿಯು ಪಿಸುಗುಟ್ಟುತ್ತಾನೆ, ಪ್ರಾರ್ಥಿಸುವದು ನಿಮಗೆ ನಿರರ್ಥಕ; ನೀನು ಆ ಕೆಟ್ಟ ಕಾರ್ಯಗಳನ್ನು ಮಾಡಲಿಲ್ಲವೋ? ನೀನು ದೇವರಿಗೆ ವಿರೋಧವಾಗಿ ಪಾಪ ಮಾಡಲಿಲ್ಲವೋ ನೀನು ನಿನ್ನ ಮನಸಾಕ್ಷಿಯನ್ನು ವಿರೋಧಿ ಸಲಿಲ್ಲವೋ?  ಆದರೆ ನಾವು ವೈರಿಗೆ "ಆತನ ಮಗನಾದ ಯೇಸು ಕ್ರಿಸ್ತನ ರಕ್ತ ನಮ್ಮ ಎಲ್ಲಾ ಪಾಪಗಳನ್ನು ತೊಳೆದುಬಿಟ್ಟಿದೆ." 1ಯೋಹಾನ 1: 7" ಎಂದು ಹೇಳಬಹುದು.

ನಾವು ಪಾಪ ಮಾಡಿದ್ದೇವೆ ಎಂದು ಮತ್ತು ಪ್ರಾರ್ಥಿಸಲಾರೆವು ಎಂದು ಭಾವಿಸುವಾಗ, ಆಗಲೇ ಅದು ಪ್ರಾರ್ಥಿಸುವ ಸಮಯ. ಅವಮಾನದಿಂದ ನಾವು ಆಳವಾಗಿ ನಮ್ಮನ್ನು ತಗ್ಗಿಸಿಕೊಳ್ಳುತ್ತೇವೆ, ಆದರೆ

ನಾವು ಪ್ರಾರ್ಥನೆ ಮಾಡಬೇಕು ಮತ್ತು ನಂಬಬೇಕು. “ಕ್ರಿಸ್ತಯೇಸು ಪಾಪಿಗಳನ್ನು ರಕ್ಷಿಸುವದಕ್ಕೋಸ್ಕರ ಈ ಲೋಕಕ್ಕೆ ಬಂದನೆಂಬುದು ನಂಬತಕ್ಕದ್ದಾಗಿಯೂ ಸರ್ವಾಂಗಿಕಾರಕ್ಕೆ ಯೋಗ್ಯ ವಾದದ್ದಾಗಿಯೂ ಅದೆ.” 1ತಿಮೋಥಿ 1:15. ಕ್ಷಮಾಪಣೆ ದೇವರೊಂದಿಗೆ ಮರುಸಂಧಾನ ನಮಗೆ ನಮ್ಮ ಕೆಲಸಗಳಿಗೆ ಬಹುಮಾನವಾಗಿ ಅಲ್ಲ,ಅದು ಪಾಪಿಗಳಾದ ಮನುಷ್ಯರಾದ ನಮ್ಮಲ್ಲಿರುವ ಅರ್ಹತೆಗಳಿಂದ ಸುರಿಸಲ್ಪಡಲಿಲ್ಲ ಬದಲಾಗಿ ಅದು ನಮಗೆ ಒಂದು ವರವಾಗಿದೆ  ಯೇಸು ಕ್ರಿಸ್ತನ ದೋಷರಹಿತವಾದ ನೀತಿವಂತಿಕೆಯ ಆಸ್ತಿವಾರದ  ನಮ್ಮ ಮೇಲೆ ಸುರಿಸಲ್ಪಟ್ಟಿದೆ.

(4) ನಾವು ಆತನನ್ನು ಅನುಮತಿಸುವುದಾದರೆ, ಕ್ರಿಸ್ತನು ನಮ್ಮ ಕಲ್ಲಾದ ಹೃದಯಗಳಿಗೆ ಏನು ಮಾಡುತ್ತೇನೆ ಎಂದು ವಾಗ್ದಾನ ಮಾಡಿದ್ದಾನೆ. ಇದರಿಂದಾಗಿ ನಾವು ಆತನನ್ನು ಮತ್ತು ಇತರರನ್ನು ಪ್ರೀತಿಸುವ ಸಾಮರ್ಥ್ಯವನ್ನು ಹೊಂದಿಕೊಳ್ಳುತ್ತೇವೆ?

ನಾನು ನಿಮಗೆ ಹೊಸ ಮನಸ್ಸನ್ನು ಕೊಟ್ಟು ನಿಮ್ಮಲ್ಲಿ ಹೊಸ ಮನಸ್ಸನ್ನು ನೂತನ ಸ್ವಭಾವವನ್ನು ಹುಟ್ಟಿಸುವೆನು; ಕಲ್ಲಾದ ಹೃದಯವನ್ನು ನಿಮ್ಮೊಳಗಿಂದ ತೆಗೆದು ಮೃದುವಾದ ಹೃದಯವನ್ನು

ನಿಮಗೆ ಕೊಡುವೆನು. (ಯೆಹೆಜ್ಕೇಲ 36:26)

ಯೇಸು ಕ್ರಿಸ್ತನ ಕೃಪೆ ಮಾತ್ರ ನಮ್ಮ ಕಲ್ಲಾದ ಹೃದಯವನ್ನು ಮೃದುವಾಗಿ ಬದಲಾಯಿಸಲು ಮತ್ತು ನಮ್ಮನ್ನು ದೇವರಲ್ಲಿ ಜೀವಿಸುವಂತೆ ಮಾಡಲು ಸಾಧ್ಯ. ಮನುಷ್ಯರು ಲೋಕದ ದೃಷ್ಟಿಯಲ್ಲಿ ದೊಡ್ಡ ಕಾರ್ಯಗಳನ್ನು ಮಾಡಬಹುದು; ಅವರ ಸಾಧನೆಗಳು ಮನುಷ್ಯರ ದೃಷ್ಟಿಯಲ್ಲಿ ಉನ್ನತವಾದ ಅನೇಕ ಕಾರ್ಯಗಳಿರಬಹುದು, ಆದರೆ ಎಲ್ಲಾ ತಲಾಂತುಗಳು, ಎಲ್ಲಾ ಕೌಶಲ್ಯಗಳು, ಲೋಕದ ಎಲ್ಲಾ ಸಾಮರ್ಥ್ಯಗಳು ನಮ್ಮ ಗುಣಲಕ್ಷಣಗಳನ್ನು ಪರಿವರ್ತಿಸಲು ಮತ್ತು ಪಾಪದಿಂದ ಕೂಡಿದ ಕೆಳದರ್ಜೆಯ  ದೇವರ ಮಗುವಾಗಿ ಮತ್ತು ಪರಲೋಕಕ್ಕೆ ಭಾದ್ಯಸ್ಥರನ್ನಾಗಿ ಮಾಡುವದರಲ್ಲಿ ವಿಫಲವಾಗುತ್ತವೆ. ಮನುಷ್ಯರಿಗೆ ಆತ್ಮಕ್ಕೆ ತೀರ್ಪು ಮಾಡುವದಕ್ಕೆ, ಹೃದಯವನ್ನು ಶುದ್ಧೀಕರಿಸುವದಕ್ಕೆ  ಯಾವ ಅಧಿಕಾರವೂ ಇಲ್ಲ. ನೈತೀಕ ರೋಗವನ್ನು ಶ್ರೇಷ್ಠ ವೈದ್ಯನ ಮೂಲಕವಲ್ಲದೇ ಯಾರೂ ಸ್ವಸ್ಥಪಡಿಸಲಾರರು.

ಪರಲೋಕದ ಅತ್ಯಂತ ದೊಡ್ಡ ಬಹುಮಾನ, ತಂದೆಯ ಒಬ್ಬನೇ ಮಗನೂ ಸಹ ಕೃಪೆ ಮತ್ತು ಸತ್ಯದಿಂದ

ತುಂಬಿದವನಾಗಿದ್ದಾನೆ. ಆತನು ಮಾತ್ರ ತಪ್ಪಿಹೋದವರನ್ನು ವಿಮೋಚಿಸಲು ಶಕ್ತನಾಗಿದ್ದಾನೆ. ನಾವು ದೇವರ ಪ್ರೀತಿಯ ಕುರಿತು ಚಿಂತನೆಯನ್ನು ಮಾಡುತ್ತಿರುವ ಹಾಗೆ ಎಂಥ ಕೃತಜ್ಞತೆ, ಎಂಥ ಪ್ರೀತಿ ನಮ್ಮ ಹೃದಯವನ್ನು ತುಂಬಬೇಕು! ಮತ್ತು ಮನುಷ್ಯನನ್ನು ಮೇಲಕ್ಕೆ ಎತ್ತಬೇಕು ಮತ್ತು ಪುನಃಸ್ಥಾಪಿಸಬೇಕು ಎಂದು  ಯೇಸು ತೆಗೆದುಕೊಂಡ ಅಪಾಯವನ್ನು ನಾವು ಧ್ಯಾನ ಮಾಡುವಾಗ ನಮ್ಮ ಹೃದಯವು ಮೃದುವಾಗಬೇಕು ಮತ್ತು ಅಧೀನವಾಗಬೇಕು. ಲೋಕದ ವಿಮೋಚಕನು ಈ ಲೋಕದ ಸಕಲ ಪಾಪವನ್ನು ಸಮವ್ಯಾಪಕವಾಗಿ ಮಾಡಲು ಕಷ್ಟವನ್ನು ಸಹಿಸಿದನು. ಕಲ್ವಾರಿ ಕ್ರೂಜೆಯ ಮೇಲೆ ಕ್ರಿಸ್ತನ ಬಲಿದಾನ ಪಾಪದ ಎಲ್ಲಾ ಅತೀರೇಕವಾದ ಬಲವನ್ನು ಮೀರಿದ್ದಾಗಿದೆ; ಹೃದಯದ ಮೇಲೆ ಪಾಪದ ಭಾವನೆಯ ಒತ್ತಡ ಬೀಳುವಾಗ ಮತ್ತು ಭಾರವು ತಾಳಲಾರದ ಷ್ಟಾಗುವಾಗ, ಯೇಸುವು ಆತನನ್ನು ದೃಷ್ಟಿಸಲು ಮತ್ತು ಜೀವಿಸಲು ಆಮಂತ್ರಿಸುತ್ತಾನೆ. ಕ್ರಿಸ್ತನಲ್ಲಿ ಆತ್ಮವನ್ನು ಶುದ್ದೀಕರಿಸುವ ಬಲವಿದೆ, “ಬನ್ನಿರಿ ವಾದಿಸುವ ಎಂದು ಯೆಹೋವನು ಅನ್ನುತ್ತಾನೆ; ನಿಮ್ಮ ಪಾಪಗಳು ಕಡು ಕೆಂಪಾಗಿದ್ದರೂ ಹಿಮದ ಹಾಗೆ ಬಿಳುಪಾಗುವವು; ಕಿರುಮಂಜಿ ಬಣ್ಣವಾಗಿದ್ದರೂ ಉಣ್ಣೆಯಂತೆ ಬೆಳ್ಳಗಾಗುವವು.”

(5)ನಾವು ಧೃಢ ನಿಶ್ಚಯದಿಂದ ದೇವರನ್ನು ಹುಡುಕುವುದಾದರೆ ಯಾವ ವಾಗ್ದಾನವನ್ನು ನಾವು ಕೇಳಿಕೊಳ್ಳಬಹುದು?

ನನ್ನನ್ನು ಪ್ರೀತಿಸುವವರನ್ನು ನಾನು ಪ್ರೀತಿಸುತ್ತೇನೆ, ಆತುರದಿಂದ ಹುಡುಕುವವರು ನನ್ನನ್ನು ಕಂಡುಕೊಳ್ಳುವರು. (ಜ್ಞಾನೋಕ್ತಿ 8:17) .

ನನ್ನನ್ನು ಬೇಗನೇ ಹುಡುಕಿರಿ. ಇದರ ಅರ್ಥ ಬೆಳಗಿನ ಜಾವದಲ್ಲಿಯೇ ಪರಿಶ್ರಮದಿಂದ ಹುಡುಕುವುದಕ್ಕಾಗಿ ಕೇಳುವವನಂತೆ ನನ್ನನ್ನು ಹುಡುಕಿರಿ. ಲೋಕದ ಸಂಗತಿಗಳು ನಮ್ಮ ಗಮನವನ್ನು ಬೇರೆಕಡೆಗೆ ತಿರುಗಿಸುವದರಿಂದ ಮತ್ತು ಮನುಷ್ಯನ ಹೃದಯವು ಮೋಸಕರವಗಿರುವದರಿಂದ ಎದ್ದು ನನ್ನನು ನಿಜವಾದ ಜ್ಞಾನ ಮತ್ತು ದೇವರೊಂದಿಗೆ ನಿಜವಾದ ಸಂಬಂಧವನ್ನು ನಿರ್ವಹಿಸಲು ಸತತ ಪರಿಶ್ರಮ ಅಗತ್ಯವಾಗಿದೆ.
(6) ಕಾಣಿಕೆ ಮತ್ತು ಯಜ್ಞಗಳಿಗಿಂತ ದೇವರ ದೃಷ್ಟಿಯಲ್ಲಿ ಯಾವುದು ಹೆಚ್ಚು, ಅದು ನಮ್ಮ ಉನ್ನತವಾದ ಕರೆಯುವಿಕೆ ಮತ್ತು ಸೌಭಾಗ್ಯವೋ?

ಆತನನ್ನು ಪೂರ್ಣ ಮನಸ್ಸಿನಿಂದಲೂ ಪೂರ್ಣ ಬುದ್ಧಿಯಿಂದಲೂ ಪೂರ್ಣ ಶಕ್ತಿಯಿಂದಲೂ ಪ್ರೀತಿಸುವದು ಮತ್ತು ತನ್ನನ್ನು ಪ್ರೀತಿಸಿಕೊಳ್ಳುವಂತೆ ತನ್ನ

ನೆರೆಯವನನ್ನೂ ಪ್ರೀತಿಸುವದು ಇವೆರಡೂ ಎಲ್ಲಾ ಸರ್ವಾಂಗ ಹೋಮಗಳಿಗಿಂತಲೂ ಎಲ್ಲಾ ಯಜ್ಞಗಳಿಗಿಂತಲೂ ಹೆಚ್ಚಿನವು ಅಂದನು. (ಮಾರ್ಕ 12:33).

ಇಲ್ಲಿ ಹೇಳಿದಂತೆ ಮತ್ತು ಸೂಚಿಸಿದಂತೆ ದೇವರನ್ನು ಪ್ರೀತಿಸುವದು ಆತನ ಸೇವೆಗೆ ತನ್ನನ್ನು ಸಂಪೂರ್ಣವಾಗಿ ಪ್ರತಿಷ್ಟಿಸಿಕೊಳ್ಳುವದು, ಮಮತೆಗಳು, ಜೀವಿತ, ದೈಹೀಕ ಬಲಗಳು ಮತ್ತು ಬುದ್ಧಿವಂತಿಕೆ. ಇಂಥ "ಪ್ರೀತಿ" ಅದು "ಧರ್ಮಶಾಸ್ತ್ರವನ್ನು ನೆರವೇರಿಸುವದಾಗಿದೆ." (ರೋಮ 13:10), ಒಬ್ಬ ವ್ಯಕ್ತಿಯು ಕ್ರಿಸ್ತನ ಕೃಪೆಯಿಂದ ಕ್ರಿಸ್ತನ "ಆಜ್ಞೆಗಳನ್ನು" "ಕೈಕೊಂಡು: ನಡೆಯಲು ನಿರ್ಧರಿಸುವಾಗ ಅವನು ನೆಲೆಗೊಳ್ಳುವ ಪ್ರೀತಿಯ ವಿಧ ಇದಾಗಿರುತ್ತದೆ. (ಯೋಹಾನ 14:15; 15:9-10). ದೇವರು ತನ್ನ ಮಗನನ್ನು ಲೋಕದಲ್ಲಿ ವಿಶಿಷ್ಟವಾದ ಉದ್ದೇಶದೊಂದಿಗೆ ಕಳುಹಿಸುವಾಗ ನಮಗೆ ಧರ್ಮಶಾಸ್ತ್ರವನ್ನು ಈ ಅರ್ಥದಲ್ಲಿ ಮತ್ತು ಉತ್ಸಾಹದಿಂದ ಕೈಕೊಂಡು ನಡೆಯಲು ಸಾಧ್ಯವಾಗುವಂತೆ ಮಾಡಿದನು.  ಈ ಮೂಲಕವಾಗಿ "ಧರ್ಮಶಾಸ್ತ್ರದ ನೀತಿವಂತಿಕೆಯನ್ನು" ನೆರವೇರಿಸಬೇಕು. (ರೋಮ 8:3, 4), ದೇವರನ್ನು ನಿಜವಾಗಿ "ತಿಳಿದವರು" ಆತನ ಆಜ್ಞೆಗಳನ್ನು ಕೈಕೊಂಡು ನಡೆಯುತ್ತಾರೆ ಯಾಕಂದರೆ

ದೇವರ “ಪ್ರೀತಿ” ಅವರಲ್ಲಿ ಪರಿಪೂರ್ಣವಾಗಿರುತ್ತದೆ (1ಯೋಹಾನ 2:4-6).

ಅನಂತನಾದವನನ್ನು, ಸರ್ವಜ್ಞನನ್ನು ಪೂರ್ಣ ಶಕ್ತಿ ಮತ್ತು ಮನಸ್ಸು ಮತ್ತು ಹೃದಯದಿಂದ ಅಂದರೆ ಪ್ರತಿಯೊಂದು ಬಲದ ಉನ್ನತವಾದ ಬೆಳವಣಿಗೆ ಪ್ರೀತಿಸುತ್ತೇನೆ. ಇದರ ಅರ್ಥಸಂಪೂರ್ಣ ವ್ಯಕ್ತಿತ್ವದಿಂದ – ದೇಹ ಮನಸ್ಸು ಆತ್ಮದಿಂದ ಸಹ – ದೇವರ ಸ್ವರೂಪವು ಪುನಃಸ್ಥಾಪಿಸಲ್ಪಡಬೇಕು.

(7)ಕ್ರಿಸ್ತನ ಆಶ್ಚರ್ಯಕರವಾದ ಬಲಿದಾನಕ್ಕೆ ಪ್ರತಿಯಾಗಿ ನಮ್ಮ ಪ್ರೀತಿಯ ಶ್ರೇಷ್ಠ ಪ್ರದರ್ಶನ ಯಾವುದು?

ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು, ನನ್ನನ್ನು ಪ್ರೀತಿಸುವವನು ನನ್ನ ತಂದೆಗೆ ಪ್ರಿಯನಾಗಿರುವನು; ನಾನು ಅವನನ್ನು ಪ್ರೀತಿಸಿ ಅವನಿಗೆ ಕಾಣಿಸಿಕೊಳ್ಳುವೆನು. (ಯೋಹಾನ 14:21).

ಕ್ರಿಸ್ತನು ತನ್ನ ಜನರು ದೇವರ ಆಜ್ಞೆಗಳಿಗೆ ವಿಧೇಯರಾಗುವದಕ್ಕೆ ಪ್ರಾಮುಖ್ಯತೆಯ ಭಾರವನ್ನು ಸೇರಿಸುತ್ತಾನೆ. ಅವರು ಅವುಗಳ ಕುರಿತು ಬುದ್ಧಿವಂತಿಕೆಯ ತಿಳುವಳಿಕೆಯನ್ನು ಹೊಂದಿರಬೇಕು

ಮತ್ತು ಅವುಗಳನ್ನು ತಮ್ಮ ದಿನನಿತ್ಯದ ಜೀವಿತದಲ್ಲಿ ತರಬೇಕು. ಮನುಷ್ಯನು ದೇವರ ಆಜ್ಞೆಗಳನ್ನು ಅವನು ಕ್ರಿಸ್ತನಲ್ಲಿ ಕ್ರಿಸ್ತನು ಅವನಲ್ಲಿ ಇರದ ಹೊರತು ಕೈಕೊಂಡು ನಡೆಯಲಾರನು, ಮತ್ತು ಆತನ ಆಜ್ಞೆಗಳ ಬೆಳಕಿನಲ್ಲಿ, ಅದರಲ್ಲಿ ಒಂದನ್ನಾದರೂ ಗೌರವಿಸದೇ ಹೋದಲ್ಲಿ ಅವನಿಗೆ ಕ್ರಿಸ್ತನಲ್ಲಿ ಇರಲು ಸಾಧ್ಯವಿಲ್ಲ, ದೇವರಿಂದ ಕಳುಹಿಸಲ್ಪಟ್ಟವನ ಮೇಲೆ ಅವರಿಗಿರುವ ಪ್ರೀತಿ ಸಾಕ್ಷಿಯಾಗಿದೆ.
ದೇವರ ಆಜ್ಞೆಗಳನ್ನು ಕೈಕೊಂಡು ನಡೆಯದವನು ದೇವರನ್ನು ಪ್ರೀತ್ರಿಸಲಾರನು. ದೇವರ ಒಬ್ಬನೇ ಮಗನಾಗಿರುವ ಆತನನ್ನು ಪ್ರೀತಿಸದಿರುವ ಯಾರೂ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದಿಲ್ಲ. ಹ್ಯಾಗೂ ಖಚಿತವಾಗಿ; ಅವರು ಆತನನ್ನು ಪ್ರೀತಿಸಿದ್ದಲ್ಲಿ, ಅವರು ತಮ್ಮ ಪ್ರೀತಿಯನ್ನು ವಿಧೇಯತೆಯಲ್ಲಿ ವ್ಯಕ್ತಪಡಿಸುತ್ತಾರೆ. ಕ್ರಿಸ್ತನನ್ನು ಪ್ರೀತಿಸುವ ಎಲ್ಲರೂ ತಂದೆಯಿಂದ ಪ್ರೀತಿಸಲ್ಪಡುತ್ತಾರೆ; ಮತ್ತು ಆತನು ತನ್ನನ್ನು ತಾನು ಅವರಿಗೆ ಪ್ರಕಟಿಸಿಕೊಳ್ಳುತ್ತಾನೆ. ಅವರ ಎಲ್ಲಾ ತುರ್ತುಸ್ಥಿತಿಯಲ್ಲಿ ಮತ್ತು ಕಳವಳಗಳಲ್ಲಿ ಅವರಿಗೆ ಯೇಸು ಕ್ರಿಸ್ತನಲ್ಲಿ ಒಬ್ಬ ಸಹಾಯಕನು ಇದ್ದಾನೆ.

ಜೀವಿಸುವ ನಂಬಿಕೆಯು ಬಂಗಾರದ ದಾರಗಳಂತೆ ಚಿಕ್ಕ ಕರ್ತವ್ಯಗಳ

ನಿರ್ವಹಣೆಯಲ್ಲಿ ಸಹ ಹರಿದುಬರಲಿ.ಆಗ ದಿನನಿತ್ಯದ ಎಲ್ಲಾ ಕೆಲಸ ಕ್ರಿಸ್ತೀಯ ಬೆಳವಣಿಗೆಯನ್ನು ಪ್ರೋತ್ಸಾಹಿಸುತ್ತದೆ. ಅಲ್ಲಿ ನಿರಂತರವಾಗಿ ಯೇಸುವನ್ನು ದೃಷ್ಟಿಸಲಾಗುತ್ತದೆ. ಆತನ ಮೇಲಿರುವ ಪ್ರೀತಿ ಅವರು ಕೈಕೊಳ್ಳುವ ಎಲ್ಲಾದರಲ್ಲಿ ಪ್ರಾಮುಖ್ಯವಾದ ಬಲವಾಗಿರುತ್ತದೆ. ಹೀಗೆ ನಮ್ಮ ತಲಾಂತುಗಳ ಸರಿಯಾದ ಉಪಯೋಗ ದಿಂದ  ನಾವು ಬಂಗಾರದ ಸರಪಳಿಯೊಂದಿಗೆ ಉನ್ನತವಾದ ಲೋಕದೊಂದಿಗೆ ಜೋಡಿಸಿ ಕೊಳ್ಳಬಹುದು. ಇದು ನಿಜವಾದ ಶುದ್ದೀಕರಣ ಯಾಕಂದರೆ ಶುದ್ದೀಕರಣ ದಿನನಿತ್ಯದ ಕರ್ತವ್ಯಗಳಲ್ಲಿ ಆನಂದದಿಂದ  ದೇವರ ಚಿತ್ತಕ್ಕೆ ಸಂಪೂರ್ಣ ವಿಧೇಯರಾಗುವದರ ಮೂಲಕ ನಿರ್ವಹಿಸುವದನ್ನು ಒಳಗೊಂಡಿರುತ್ತದೆ.

ಹೃದಯದಲ್ಲಿ ದೇವರಿಗೆ ವಿಧೇಯರಾಗುವ ಪ್ರಯತ್ನಗಳನ್ನು ಈ ದಿಶೆಯಲ್ಲಿ ನಡೆಸುವಾಗ ಯೇಸು ಈ ಪ್ರವೃತ್ತಿಯನ್ನು ಮತ್ತು ಪ್ರಯತ್ನಗಳನ್ನು ಮನುಷ್ಯನ ಉತ್ತಮವಾದ ಸೇವೆಯಾಗಿ ಸ್ವೀಕರಿಸುತ್ತಾನೆ ಮತ್ತು ಆತನು ತನ್ನ ಸ್ವಂತ ದೈವೀಕ ಒಳ್ಳೇತನದಿಂದ ಕೊರತೆಗಳನ್ನು ಮುಚ್ಚುತ್ತಾನೆ.

(8) ನಮ್ಮಷ್ಟಕ್ಕೆ ನಾವೇ ಅಜ್ಞೆಗಳನ್ನು ಕೈಕೊಂಡು ನಡೆಯುವದು ಮತ್ತು ನಮ್ಮ ಸ್ವಾಭ್ಭಾವಿಕ ಒಲವು ಅವಿಧೇಯತೆಯ ಕಡೆಗೆ, ಪ್ರೀತಿ ಮತ್ತು ನಂಬಿಕೆಯಲ್ಲಿ ನಾವು ಪರಿವರ್ತಿಸುವ ಆತನ ಬಲಕ್ಕೆ ಅಧೀನರಾಗುವಾಗ ದೇವರು ಏನು ಮಾಡುತ್ತಾನೆ?

ಆ ದಿನ ಬಂದ ಮೇಲೆ ನಾನು ಇಸ್ರಾಯೇಲ್ ವಂಶದವರೊಂದಿಗೆ ಮಾಡಿಕೊಳ್ಳುವ ಒಡಂಬಡಿಕೆಯು ಹೀಗಿರುವದು ನನ್ನ ಆಜ್ಞೆಗಳನ್ನು ಅವರ ಮನಸ್ಸಿನಲ್ಲಿ ಇಡುವೆನು. ಅವರ ಹೃದಯದ ಮೇಲೆ ಅವುಗಳನ್ನು ಬರೆಯುವೆನು; ನಾನು ಅವರಿಗೆ ದೇವರಾಗಿರುವೆನು, ಅವರು ನನಗೆ ಪ್ರಜೆಯಾಗಿರುವರು; (ಇಬ್ರಿಯ 8:10).

ಎಲ್ಲಾ ಸ್ವಾರ್ಥವನ್ನು, ಹೃದಯದ ಅಹಂಕಾರವನ್ನು, ಪ್ರತಿಯೊಂದು ವಿಧದ ಅಪ್ರಾಮಾಣಿಕತೆಯನ್ನು, ಪ್ರತಿಯೊಂದು ರಹಸ್ಯವನ್ನು ಅಥವಾ ಉಲ್ಲಂಘನೆಯನ್ನು ದೇವರು ದಂಡಿಸುತ್ತಾನೆ ಎಂಬ ನಿಯಮವಿದೆ. ಸ್ವಾಭಾವಿಕ ಹೃದಯವು ಆತನ ಆಜ್ಞೆಗಳನ್ನು ಪ್ರೀತಿಸುವ ಪ್ರವೃತ್ತಿಯನ್ನು ಅಥವಾ ಅದರ ಅಗತ್ಯತೆಗಳಿಗೆ ವಿಧೇಯರಾಗುವದಿಲ್ಲ, “ಅದು ದೇವರ ಧರ್ಮಶಾಸ್ತ್ರಕ್ಕೆ ನಿಜವಾಗಿಯೂ ಒಳಪಡುವದೂ ಇಲ್ಲ” ಆದರೆ ಕ್ರಿಸ್ತನಲ್ಲಿ ಯಥಾರ್ಥ ನಂಬಿಕೆ

ಹೃದಯವನ್ನು ಪರಿವರ್ತಿಸುತ್ತದೆ ಅದು ದೇವರ ಧರ್ಮಶಾಸ್ತ್ರದಲ್ಲಿ ಆನಂದಿಸುವವರೆಗೆ ಧರ್ಮದೆಡೆಗೆ ವರ್ತನೆಯಲ್ಲಿ ಪರಿವರ್ತನೆ ತರುವ ಕೆಲಸ ಮಾಡುತ್ತದೆ. ಯಾವ ಮನುಷ್ಯನು ಧರ್ಮಶಾಸ್ತ್ರದೆಡೆಗೆ ವೈರತ್ವವನ್ನು ಬೆಳೆಸುತ್ತಾನೋ ಅವನು ದೇವರ ಪರಿವರ್ತಿಸುವ ಬಲಕ್ಕೆ ಅಧೀನಪಡಿಸಿಕೊಳ್ಳುವದಿಲ್ಲ. ಆಜ್ಞೆಗಳನ್ನು ಕೈಕೊಂಡು ನಡೆಯುವದು ನಮ್ಮ ವೈಯಕ್ತಿಕ ಪ್ರೀತಿಯ ಪ್ರಾಮಾಣಿಕತೆಯನ್ನು ಸಿದ್ಧಾಂತಪಡಿಸುತ್ತದೆ, ಎಂದು ಯೋಹಾನನು ಹೇಳುತ್ತಾನೆ." ದೇವರ ಮೇಲಣ ಪ್ರೀತಿ ಏನಂದರೆ, ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ; ಆತನ ಆಜ್ಞೆಗಳು ಭಾರವಾದವುಗಳಲ್ಲ."

(9) ನಮ್ಮ "ಧರ್ಮ" ಕೇವಲ ವಿಧಿಗಳನಲ್ಲ ಪ್ರೀತಿಯನ್ನು ಆಧರಿಸಿರುವಾಗ ಮತ್ತು ಆತನ ಕೃಪೆಯಿಂದ , ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುತ್ತೇವೆ, ಹೀಗಿರುವಾಗ ನಾವು ನಿರಂತರವಾಗಿ ಎಲ್ಲಿ ನೆಲೆಗೊಂಡಿರುತ್ತೇವೆ?

ನಾನು ನನ್ನ ತಂದೆಯ ಆಜ್ಞೆಗಳನ್ನು ಕೈಕೊಂಡು ನಡೆದು ಆತನ ಪ್ರೀತಿಯಲ್ಲಿ ನೆಲೆಗೊಂಡಿರುವ ಮೇರೆಗೆ ನೀವು ನನ್ನ

ಆಜ್ಞೆಗಳನ್ನು ಕೈಕೊಂಡು ನಡೆದರೆ ನನ್ನ ಪ್ರೀತಿಯಲ್ಲಿ ನೆಲೆಗೊಂಡಿರುವಿರಿ. (ಯೋಹಾನ 15:10).

ನಿಜವಾದ ಧರ್ಮ (ಸಂಬಂಧಗಳನ್ನು ಆಧರಿಸಿದೆ) ಮನುಷ್ಯನನ್ನು ದೇವರ ಧರ್ಮಶಾಸ್ತ್ರದೊಂದಿಗೆ ಸಾಮರಸ್ಯದಲ್ಲಿ ತರುತ್ತದೆ, ದೈಹೀಕ, ಮಾನಸಿಕ ಮತ್ತು ನೈತೀಕ. ಅದು ಸ್ವ-ನಿಗ್ರಹ, ಪ್ರಸನ್ನತೆ ಮತ್ತು ಪಾನಸಂಮಯವನ್ನು ಬೋಧಿಸುತ್ತದೆ. ಧರ್ಮವು ಮನಸ್ಸನ್ನು ಬಲಪಡಿಸುತ್ತದೆ, ರುಚಿಯನ್ನು ನವೀಕರಿಸುತ್ತದೆ ಮತ್ತು ನ್ಯಾಯತೀರ್ಪನ್ನು ಶುದ್ದೀಕರಿಸುತ್ತದೆ, ಅದು ಆತ್ಮವನ್ನು ಪರಲೋಕದ ಪರಿಶುದ್ಧತೆಯಲ್ಲಿ ಪಾಲುಗಾರನನ್ನಾಗಿಸುತ್ತದೆ. ದೇವರ ಪ್ರೀತಿಯಲ್ಲಿ ನಂಬಿಕೆ ಮತ್ತು ಒದಗಿಸುವಿಕೆ ನಮ್ಮ ಹೊರೆಯನ್ನು ಮತ್ತು ವ್ಯಾಕುಲತೆಯನ್ನು ಮತ್ತು ಚಿಂತೆಯನ್ನು ಹಗುರಮಾಡುತ್ತದೆ. ಅದು ಹೃದಯವನ್ನು ಉನ್ನತವಾದ ಅಥವಾ ವಿನೀತವಾದ ಸಂತೋಷದಿಂದ ಮತ್ತು ತೃಪ್ತಿಯಿಂದ ತುಂಬಿಸುತ್ತದೆ ಧರ್ಮವು ನೇರವಾಗಿ ಆರೋಗ್ಯವನ್ನು ನೀಡುತ್ತದೆ, ದೀರ್ಘಜೀವಿತ ಮತ್ತು ತನ್ನ ಎಲ್ಲಾ ಆಶೀರ್ವಾದದೊಂದಿಗೆ ನಮ್ಮ ಸಂತೋಷವನ್ನು ಹೆಚ್ಚಿಸುತ್ತದೆ. ಅದು ಆತ್ಮದಲ್ಲಿ ಎಂದಿಗೂ ವಿಫಲವಾಗದ ಸಂತೋಷಕ್ಕೆ ನಡೆಸುತ್ತದೆ.

ಇಷ್ಟನ್ನು ಕ್ರಿಸ್ತನನ್ನು ಆರಿಸಿ ಕೊಳ್ಳದವರು ಅರಿತುಕೊಳ್ಳುತ್ತಾರೋ ಅಥವಾ ಅವರು ಇನ್ನೂ ತಮಗಾಗಿ ಹುಡುಕುತ್ತಿರುವ ಇನ್ನೂ ವಿಶಾಲವಾದ ಉತ್ತಮತೆಯನ್ನು ನೀಡುವದಕ್ಕಿದೆಯೋ, ಮನುಷ್ಯನು ಅತ್ಯಂತ ದೊಡ್ಡದಾದ ಗಾಯವನ್ನು ಮತ್ತು ಅನ್ಯಾಯವನ್ನು ತನ್ನ ಸ್ವಂತ ಆತ್ಮಕ್ಕೆ ದೇವರ ಚಿತ್ತಕ್ಕೆ ವ್ಯತ್ಯಾಸವಾದ ಆಲೋಚನೆಗಳನ್ನು ಮತ್ತು ಕಾರ್ಯಗಳ ಮೂಲಕ ಮಾಡಿಕೊಳ್ಳುತ್ತಿದ್ದಾನೆ. ಯಾವುದು ಉತ್ತಮವಾದದ್ದು ಎಂದು ತಿಳಿದಿರುವ ಮತ್ತು ತಾನು ಸೃಷ್ಟಿಸಿದ ಜೀವಿಗಳಿಗೆ ಒಳ್ಳೆಯದನ್ನು ಯೋಜಿಸುವ ಆತನನ್ನು ತೊರೆದುಬಿಟ್ಟ ಮಾರ್ಗದಲ್ಲಿ ಯಾವ ನಿಜವಾದ ಸಂತೋಷವೂ ಕಂಡು ಬರುವದಿಲ್ಲ. ಉಲ್ಲಂಘನೆಯ ಮಾರ್ಗ ಸಂಕಟ ಮತ್ತು ನಾಶನಕ್ಕೆ ನಡೆಸುತ್ತದೆ; ಆದರೆ ಜ್ಞಾನದ “ಆಕೆಯ ದಾರಿಗಳು ಸುಖಕರವಾಗಿವೆ, ಆಕೆಯ ಮಾರ್ಗಗಳೆಲ್ಲಾ ಸಮಾಧಾನವೇ.” ಜ್ಞಾನೋಕ್ತಿ 3:17.

(10) ನಮ್ಮ ಸ್ವಂತ ಸಾಮರ್ಥ್ಯದಲ್ಲಿ ನಮಗೆ ಪ್ರೀತಿಸುವ ಸಾಮರ್ಥ್ಯ ಇರುವದಿಲ್ಲ, ನಾವು ದೇವರನ್ನು ಅನುಮತಿಸುವುದಾದರೆ ದೇವರು ಏನು ಮಾಡುತ್ತಾನೆ?

ನಿಮ್ಮ ದೇವರಾದ ಯೆಹೋವನು ನಿಮ್ಮ ಮತ್ತು ನಿಮ್ಮ ಸಂತತಿಯವರ

ಹೃದಯಕ್ಕೆ ಸುನ್ನತಿ ಮಾಡುವನು. ಆಗ ನೀವು ಆತನನ್ನು ಸಂಪೂರ್ಣವಾದ ಹೃದಯದಿಂದಲೂ ಮನಸ್ಸಿನಿಂದಲೂ ಪ್ರೀತಿಸಿ ಬದುಕಿಕೊಳ್ಳುವಿರಿ. (ಧರ್ಮೋಪದೇಶಕಾಂಡ 30:6)

ಹೃದಯವನ್ನು ಸುನ್ನತಿ ಮಾಡಿಸಿಕೊಳ್ಳುವದು ಅಂದರೆ ಒಬ್ಬನು ತನ್ನ ಆತ್ಮೀಕ ಮನವರಿಕೆಯನ್ನು ತೀವ್ರಗೊಳಿಸುವದು ಮತ್ತು ತನ್ನ ಮನಸಾಕ್ಷಿಯನ್ನು ಮೃದು ಗೊಳಿಸುವದು.

ದೇವರು ಹೃದಯಕ್ಕೆ ಸುನ್ನತಿ ಮಾಡುವಾತನಾಗಿದ್ದಾನೆ, ಪ್ರಾರಂಭದಿಂದ ಅಂತ್ಯದವರೆಗೆ ಅದು ದೇವರ ಕೆಲಸವಾಗಿದೆ. ನಶಿಸಿಹೋಗುತ್ತಿರುವ ಪಾಪಿ ಹೇಳಬಹುದು, “ನಾನು ತಪ್ಪಿಹೋದ ಪಾಪಿ; ಆದರೆ ಕ್ರಿಸ್ತನು ತಪ್ಪಿಹೋದವರನ್ನು ಹುಡುಕಿ ರಕ್ಷಿಸುವದಕ್ಕಾಗಿ ಬಂದನು. ಆತನು ಹೇಳುತ್ತಾನೆ, “ನಾನು ನೀತಿವಂತರನ್ನು ಕರೆಯುವದಕ್ಕೆ ಬಂದವನಲ್ಲ ಪಾಪಿಗಳನ್ನು ಕರೆಯುವದಕ್ಕೆ ಬಂದವನು ಅಂದನು.” (ಮಾರ್ಕ 2:17). ನಾನು ಪಾಪಿ ಮತ್ತು ಆತನು ನನ್ನನ್ನು ರಕ್ಷಿಸಲು ಕಲ್ವಾರಿ ಕ್ರೂಜೆಯ ಮೇಲೆ ಸತ್ತನು. ನಾನು ಇನ್ನೊಂದು ಕ್ಷಣ ರಕ್ಷಣೆಯಿಲ್ಲದೇ ಇರಲಾರೆನು. ಆತನು ಸತ್ತನು ಮತ್ತು ನನ್ನನ್ನು

ನೀತಿವಂತನೆಂದು
ನಿರ್ಣಯಿಸುವದಕ್ಕಾಗಿ ತಿರುಗಿ ಎದ್ದನು
ಮತ್ತು ಆತನು ಈಗ ನನ್ನನ್ನು
ರಕ್ಷಿಸುತ್ತಾನೆ. ಆತನು ವಾಗ್ದಾನ ಮಾಡಿದ
ಕ್ಷಮಾಪಣೆಯನ್ನು ನಾನು
ಸ್ವೀಕರಿಸುತ್ತೇನೆ."

11) ದೇವರ ಪರಲೋಕದ ಪ್ರೀತಿಯ
ತತ್ವವು ನಮ್ಮ ಹೃದಯವನ್ನು
ತುಂಬುವಾಗ, ಮತ್ತು ಆತನ ಆತ್ಮನ
ಮೂಲಕ ನಾವು ಆತನ ಆಜ್ಞೆಗಳನ್ನು
ಕೈಕೊಂಡು ನಡೆಯುವಾಗ, ನಾವು ಆತನ
ಮಕ್ಕಳನ್ನು ಹೇಗೆ ನಡೆಸಿಕೊಳ್ಳುತ್ತೇವೆ?

ನಾವು ದೇವರ ಮಕ್ಕಳನ್ನು
ಪ್ರೀತಿಸುತ್ತೇವೆಂಬುದನ್ನು ದೇವರನ್ನು
ಪ್ರೀತಿಸಿ ಆತನ ಆಜ್ಞೆಗಳನ್ನು
ಅನುಸರಿಸುವದರಿಂದಲೇ
ತಿಳಿದುಕೊಳ್ಳುತ್ತೇವೆ. (1 ಯೋಹಾನ 5:2)

ಯಾವಾಗ ಪರಲೋಕದ ತತ್ವಗಳ
ಶಾಶ್ವತವಾದ ಪ್ರೀತಿ ನಮ್ಮ
ಹೃದಯವನ್ನು ತುಂಬುತ್ತದೊ, ಅದು
ಇತರರೆಡೆಗೆ ಹರಿದು ಬರುತ್ತದೆ,
ಅವರಿಂದ ಮೆಚ್ಚಿಗೆಯು
ಹೊಂದಿದ್ದರಿಂದಲ್ಲ, ಆದರೆ ಪ್ರೀತಿಯು
ಕ್ರಿಯೆಯ ಮೂಲವಾಗಿದೆ ಮತ್ತು
ನಡೆತೆಯನ್ನು ನವೀಕರಿಸುತ್ತದೆ,
ಬಯಕೆಗಳನ್ನು ನಿಯಂತ್ರಿಸುತ್ತದೆ,
ದಾಹಗಳನ್ನು ನಿಯಂತ್ರಿಸುತ್ತದೆ,
ವೈರತ್ವವನ್ನು ಶಾಂತಪಡಿಸುತ್ತದೆ ಮತ್ತು

ಮಮತೆಯನ್ನು ಉನ್ನತಿಗೇರಿಸುತ್ತದೆ. ಈ ಪ್ರೀತಿಯು "ನಾನು ಮತ್ತು ನನ್ನ" ಎಂದು ಸೇರಿಸಿಕೊಳ್ಳಲು ಒಪ್ಪಂದ ಮಾಡಿಕೊಳ್ಳುವದಲ್ಲ. ಆದರೆ ಅದು ಲೋಕದಷ್ಟು ವಿಶಾಲವಾಗಿದೆ ಮತ್ತು ಆಕಾಶದಷ್ಟು ಎತ್ತರವಾಗಿದೆ ಇದು ಕೆಲಸಗಾರರಾದ ದೇವದೂತರೊಂದಿಗೆ ಸಾಮರಸ್ಯದಲ್ಲಿರುತ್ತದೆ. ಈ ಪ್ರೀತಿ, ಆತ್ಮದಲ್ಲಿ ಆನಂದಿಸುವದಾಗಿದೆ, ಸಪೂರ್ಣ ಜೀವಿತದಲ್ಲಿ ಸಿಹಿಯನ್ನು ತರುತ್ತದೆ ಮತ್ತು ತನ್ನ ಸುತ್ತಲೂ ನವೀಕರಿಸುವ ಪ್ರಭಾವವನ್ನು ಬೀರುತ್ತದೆ. ಇದನ್ನು ಹೊಂದಿಕೊಳ್ಳಲು, ನಾವು ಸಂತೋಷದಿಂದ ಇರುವದನ್ನು ಬಿಟ್ಟರೆ ಏನೂ ಮಾಡಲಾರೆವು, ಅದೃಷ್ಟ ನಗುತ್ತಿರಲಿ ಅಥವಾ ಮೋರೆ ಗಂಟಿಕ್ಕಿರಲಿ. ನಾವು ಪೂರ್ಣ ಹೃದಯದಿಂದ ದೇವರನ್ನು ಪ್ರೀತಿಸುವುದಾದರೆ ನಾವು ಆತನ ಮಕ್ಕಳನ್ನು ಸಹ ಪ್ರೀತಿಸಬೇಕು. ಈ ಪ್ರೀತಿ ದೇವರ ಆತ್ಮವಾಗಿದೆ. ಇದು ಪರಲೋಕದ ಶೃಂಗಾರವಾಗಿದೆ ಅದು ಆತ್ಮಕ್ಕೆ ನಿಜವಾದ ಘನತೆ ಮತ್ತು ಗೌರವವನ್ನು ನೀಡುತ್ತದೆ.

(12) ನಾವು ದೇವರನ್ನು ನಿಜವಾಗಿ ಪ್ರೀತಿಸುವಾಗ ಮತ್ತು ಆತನ ಆಜ್ಞೆಗಳಿಗೆ ವಿಧೇಯರಾಗುವಾಗ ಅದು ತರುವ ಸಂತೋಷವನ್ನು ಅನುಭವಿಸುವಾಗ ಯಾವ ಮೂರು ಸಂಗತಿಗಳನ್ನು ಮಾಡುವ ಬಯಕೆ ಉಂಟಾಗುತ್ತದೆ?

ನನ್ನ ಉಪದೇಶವನ್ನು ಕಣ್ಣುಗುಡ್ಡಿನಂತೆ ಪಾಲಿಸು ನನ್ನ ಆಜ್ಞೆಗಳನ್ನು ಕೈಕೊಂಡು ಬಾಳು, ಅವುಗಳನ್ನು ನಿನ್ನ ಬೆರಳುಗಳಿಗೆ ಉಂಗುರವಾಗಿ ಇಟ್ಟುಕೋ, ಹೃದಯದ ಹಲಗೆಯಲ್ಲಿ ಬರೆ. (ಜ್ಞಾನೋಕ್ತಿ 7:2-3)

ದೇವರ ಆಜ್ಞೆಗಳನ್ನು ಕೈಕೊಂಡು ನಡೆಯುವ ಪ್ರಯತ್ನವನ್ನು ಒಂದು ವಿಧದ ಋಣ ಎಂಬಂತೆ ಮಾಡುವ ಮನುಷ್ಯನು—ಆತನು ಹೀಗೆ ಮಾಡುವದು ಅಗತ್ಯವಾಗಿರುವದರಿಂದ—ಅವನು ಎಂದಿಗೂ ವಿಧೇಯತೆಯ ಆನಂದದಲ್ಲಿ ಪ್ರವೇಶಿಸುವದಿಲ್ಲ. ಅವನು ವಿಧೇಯನಾಗುವದಿಲ್ಲ. ದೇವರ ಬೇಡಿಕೆಗಳು ಭಾರವಾಗಿ ತೋರಿಬರುವಾಗ ಅವರು ಮಾನವನ ಪ್ರವೃತ್ತಿಯಿಂದಾಗಿ, ಒಳದಾರಿಯನ್ನು ಹಿಡಿಯತ್ತಾರೆ, ಅದು ಕ್ರಿಸ್ತೀಯ ಜೀವಿತವಲ್ಲ ಎಂದು ನಾವು ತಿಳಿದಿದ್ದೇವೆ. ನಿಜವಾದ ವಿಧೇಯತೆ  ನಮ್ಮೊಳಗೆ ಇರುವ ತತ್ವ ಹೆಚ್ಚಿನ ಕಾರ್ಯಮಾಡುತ್ತದೆ. ಅದು ನೀತಿವಂತಿಕೆ, ದೇವರ ಧರ್ಮಶಾಸ್ತ್ರದ ಪ್ರೀತಿ ಯಿಂದ ಉಕ್ಕುತ್ತವೆ. ಎಲ್ಲಾ ನೀತಿವಂತಿಕೆಯ ತಿರುಳು ನಮ್ಮ ವಿಮೋಚಕನೆಡೆಗೆ ಇರುವ ಶ್ರದ್ಧೆ. ಇದು ನಮ್ಮನ್ನು ಸರಿಯಾದದ್ದರ ಕಡೆಗೆ ನಡೆಸುತ್ತದೆ ಯಾಕಂದರೆ ಅದು ಸರಿಯಾಗಿದೆ – ಯಾಕಂದರೆ ಸರಿಯಾದ

ಕಾರ್ಯಗಳನ್ನು ಮಾಡುವದು ದೇವರಿಗೆ ಮೆಚ್ಚಿಕೆಯಾಗಿದೆ.

ದೇವರ ವಿಶಿಷ್ಟವಾದ ಬೇಡಿಕೆಗಳಿಂದ ದೂರವಾಗಿ ಮತ್ತು ತನ್ನದೇ ಆದ ಅಳತೆಗೋಲನ್ನು ಸ್ಥಾಪಿಸಿಕೊಂಡು ಅದನ್ನು ನಾನು ಸುರಕ್ಷಿತವಾಗಿ ಅನುಸರಿಸಬಹುದು ಎಂದುಕೊಂಡು ಯಾವ ಮನುಷ್ಯನು ಸಂತೋಷದಿಂದ ಇರಲಾರನು. ಆಗ ವೈವಿಧ್ಯಮಯವಾದ ಅಳತೆಗೋಲುಗಳು ಬೇರೆಬೇರೆ ಮನಸ್ಸುಗಳಿಗೆ ಹೊಂದಿಕೆಯಾಗುವಂತೆ ಇರಬೇಕಾಗುತ್ತದೆ ಮತ್ತು  ಆಡಳಿತವು ದೇವರ ಹಸ್ತದಿಂದ ತೆಗೆಯಲ್ಪಟ್ಟು ಮಾನವ ಜೀವಿಗಳು ಸರಕಾರವನ್ನು ಹಿಡಿತದಲ್ಲಿಟ್ಟುಕೊಳ್ಳಲಿ, ಸ್ವಾರ್ಥದ ನಿಯಮ ರಚಿಸಲಾಗಿದೆ, ಮನುಷ್ಯನ ಚಿತ್ತ ಶ್ರೇಷ್ಠವಾಗಿ ಮಾಡಲ್ಪಟ್ಟಿದೆ ಮತ್ತು ಯಾವಾಗ ಉನ್ನತವಾದ ಮತ್ತು ಪರಿಶುದ್ಧವಾದ ದೇವರ ಚಿತ್ತವನ್ನು ವಿಧೇಯರಾಗಬೇಕೆಂದು, ಮರ್ಯಾದೆ ಕೊಡಬೇಕು ಮತ್ತು ಗೌರವಿಸಬೇಕು ಎಂದು ಮಂಡಿಸಿರುವಾಗ ಮಾನವನ ಚಿತ್ತವು ತನ್ನದೇ ಆದ ಮಾರ್ಗವನ್ನು ಬಯಸುತ್ತದೆ... ತನ್ನ ಸ್ವಂತ ಪ್ರೇರೆಪಣೆಯನ್ನು ಮಾಡುವದಾಗಿದೆ ಮತ್ತು ಅಲ್ಲಿ ಮಾನವನ ಮತ್ತು ದೈವೀಕ ದೂತರು ಮಧ್ಯದಲ್ಲಿ ವಾದವಿವಾದ ಇರುತ್ತದೆ.

(13) ಪ್ರೀತಿಯಿಂದಾಗಿ ಮತ್ತು ಪವಿತ್ರಾತ್ಮನ ಬಲದಿಂದ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವಾಗ ನಮಗೆ ವಾಗ್ದಾನ ಮಾಡಿದ ಆಶೀರ್ವಾದಗಳು ಯಾವವು?

ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಧನ್ಯರು; ಅವರಿಗೆ ಜೀವ ವೃಕ್ಷದ ಹಕ್ಕು ಇರುವದು; ಅವರು ಬಾಗಿಲುಗಳಿಂದ ಆ ಪಟ್ಟಣದೊಳಗೆ ಸೇರುವರು. (ಪ್ರಕಟನೆ 22:14).

ಲೋಕದ ವಿಮೋಚಕನು ನನ್ನೊಂದಿಗೆ ಮಾತಾಡುತ್ತಿದ್ದಾನೆ; ಆತನು ಹೇಳುವದನ್ನು ಕೇಳೋಣ; "ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವವರು ಧನ್ಯರು, ಅವರಿಗೆ ಜೀವ ವೃಕ್ಷದ ಹಕ್ಕು ಇರುವದು; ಅವರು ಬಾಗಿಲುಗಳಿಂದ ಆ ಪಟ್ಟಣದೊಳಗೆ ಸೇರುವರು." (ಪ್ರಕಟನೆ 22:14),ಆತನ ವಾಕ್ಯದಲ್ಲಿ ಆತನ ಬೇಡಿಕೆಗಳನ್ನು ನೋಡುವವರು ಮತ್ತು ಅದಕ್ಕೆ ವಿಧೇಯರಾಗದೇ ಇರುವವರು, ತಮ್ಮ ನಿರ್ಲಕ್ಷತನಕ್ಕೆ ಕಾರಣ ನೀಡುವವರು ಅಥವಾ ದೇವರ ಬೇಡಿಕೆಗಳಿಗೆ ಇಚ್ಛಾಪೂರ್ವಕವಾದ ಅಗೌರವ ತೋರಿಸುವವರು, ತಮ್ಮ ಕ್ರಿಯೆಯ ಮೂಲಕ ಸಾಕ್ಷೀಕರಿಸುತ್ತಾರೆ ಮತ್ತು ಅವರು ವಿಧೇಯತೆಯ ಶರತ್ತಿನ ಮೇಲಿರುವ  ಆಶೀರ್ವಾದದಾಯಕವಾದ ವಾಗ್ದಾನವನ್ನು ಅಪ್ಪಿಕೊಂಡವರಲ್ಲ.

ಅವರು ಜೀವ ವೃಕ್ಷಕ್ಕೆ ಹಕ್ಕನ್ನು ಹೊಂದಿದವರಲ್ಲ, ಆದರೆ ಅವರು ಇಚ್ಛಾಪೂರ್ವಕವಾಗಿ ದೇವರ ಧರ್ಮಶಾಸ್ತ್ರವನ್ನು ಉಲ್ಲಂಘಿಸುವವರಾಗಿದ್ದಾರೆ. ಅಂಥವರಿಗೆ ಯೇಸು "ಅಧರ್ಮಮಾಡುವ ನೀವೆಲ್ಲರೂ ನನ್ನ ಕಡೆಯಿಂದ ಹೊರಟುಹೋಗಿರಿ ಎಂದು ನಿಮಗೆ ಹೇಳುತ್ತೇನೆ. (ಲೂಕ 13:27).

(14) ನಾವು ನಮ್ಮ ಪರಲೋಕದ ತಂದೆಯ ಮತ್ತು ನಮ್ಮ ರಕ್ಷಕನಾದ ಯೇಸು ಕ್ರಿಸ್ತನ ಪ್ರೀತಿಯನ್ನು ಒಮ್ಮೆ ತಿಳಿದುಕೊಂಡು ಅನುಭವಿಸಿದ ಮೇಲೆ, ಅರಸನಾದ ದಾವೀದನಂತೆ ನಮ್ಮ ಸಾಕ್ಷಿ ಮತ್ತು ನಮ್ಮ ಹಾಡು ಯಾವುದು?

ಯೆಹೋವನು ಮಾಡಿದ ನ್ಯಾಯವಾದ ತೀರ್ಪಿಗಾಗಿ ನಾನು ಆತನನ್ನು ಕೊಂಡಾಡುವೆನು. ಪರಾತ್ಪರ ದೇವರಾದ ಯೆಹೋವನ ನಾಮವನ್ನು ಸಂಕೀರ್ತಿಸುವೆನು. ( ಕೀರ್ತನೆ 7:17).

ಜೀವವನ್ನು ಕೊಡುವ  ಕ್ರಿಸ್ತನಲ್ಲಿರುವ ಕ್ರಿಯಾಶೀಲವಾದ ಜೀವಿಸು ನಂಬಿಕೆಯಲ್ಲಿ ವಿಶ್ರಾಂತಿಯಿಂದ ಇರುವದು ನಮ್ಮ ಸೌಭಾಗ್ಯವಾಗಿದೆ. ಎಲ್ಲಾ ಪವಿತ್ರ ಜೀವಿಗಳೊಂದಿಗೆ ಗ್ರಹಿಸಿಕೊಳ್ಳುವದು  ನಮ್ಮ ಸೌಭಾಗ್ಯವಾಗಿದೆ. ದೇವರ ಪ್ರೀತಿಯ ಉದ್ದ ಮತ್ತು ಆಳ ಮತ್ತು ಎತ್ತರವನ್ನು

ತಿಳಿದುಕೊಳ್ಳುವದು ಎಲ್ಲಾ ಗ್ರಹಿಕೆಯನ್ನು ಮೀರುವ ಜ್ಞಾನವನ್ನು ಮತ್ತು ದೇವರ ಪರಿಪೂರ್ಣತೆಯಿಂದ ತುಂಬುವದು ನಮ್ಮ ಸೌಭಾಗ್ಯವಾಗಿದೆ. ಕ್ರಿಸ್ತನಲ್ಲಿ ಸರ್ವಸಂಪೂರ್ಣತೆಯು ವಾಸವಾಗಿದೆ ಎಂಬುದರ ಕುರಿತು ಚಿಂತನೆ ಮಾಡೋಣ. ನಮ್ಮ ಸ್ವಂತ ರಕ್ಷಕನೆಂದು ಆತನನ್ನು ದೃಷ್ಟಿಸುವಾಗ ನಾವು ಆತನ ರಕ್ಷಿಸುವ ಪ್ರೀತಿಯ ಮೌಲ್ಯವನ್ನು ಪ್ರಶಂಶಿಸುತ್ತೇವೆ. ನಾವು ಮಾಡುವದಕ್ಕಿಂತ ಹೆಚ್ಚಾಗಿ ಯೇಸುವಿನ ಕುರಿತು ಯೋಚಿಸಬೇಕು. ನಮ್ಮ ಹೃದಯಗಳಲ್ಲಿ ಆತನ ಸ್ತುತಿ ಇರಬೇಕು. ನಮ್ಮ ಮೇಲೆ ಅಷ್ಟು ಸಮೃದ್ಧಿಯಾಗಿ ವ್ಯಕ್ತಪಡಿಸಿದ ಆತನ ಪ್ರೀತಿಯ ಕುರಿತು ನಾವು ಮಾತಾಡಬೇಕು  ನಮಗೆ ಆತನನ್ನು ನಮ್ಮ ಹೃದಯ ಮತ್ತು ಆತ್ಮ ಮತ್ತು ಧ್ವನಿ, ಹೇಳಿಕೆಯಿಂದ  ಸ್ತುತಿಸಲು ಎಲ್ಲಾ ಕಾರಣಗಳಿವೆ, ಆತನ ತನ್ನ ಮಹಾ ಪ್ರೀತಿಯಿಂದ ನನ್ನನ್ನು ಪ್ರೀತಿಸಿರು ವದಕ್ಕಾಗಿ ನಾನು ಕರ್ತನನ್ನು ಸ್ತುತಿಸುತ್ತೇನೆ.

ಆತನನ್ನು ಘನಪಡಿಸಿರಿ, ಕಲ್ವಾರಿಯ ಕ್ರಿಸ್ತನನ್ನು; ಆತನನ್ನು ಘನಪಡಿಸಿರಿ, ಲೋಕವು ಆತನನ್ನು ದೃಷ್ಟಿಸಲಿ ಕ್ಕಾಗುವಂತೆ. ಆತನ ಒಳ್ಳೇತನವನ್ನು ಮಾತಾಡಿರಿ, ಆತನ ಪ್ರೀತಿಯನ್ನು ಹಾಡಿರಿ. ಮತ್ತು ಆತನಿಗೆ ನಿಮ್ಮ ಹೃದಯದಿಂದ ಕೃತಜ್ಞತಾ ಸ್ತುತಿ ಸಲ್ಲಿಸಿರಿ.

ನಾನು ಸಂತೋಷಿಸುತ್ತೇನೆ ಮತ್ತು ಆಶೀರ್ವಾದಿಸಲ್ಪಟ್ಟವನಾಗಿದ್ದೇನೆ ನಮ್ಮ ರಕ್ಷಣೆಯ ಸಂತೋಷಕ್ಕಾಗಿ ಕ್ರಿಸ್ತನು ಕ್ರೂಜೆಯನ್ನು ಸಹಿಸಿದನು. ಆತನು ನನ್ನ ಪ್ರೀತಿಯನ್ನು ಗೆದ್ದಿದ್ದಾನೆ ಮತ್ತು ನಾನು ಆತನನ್ನು ಎಲ್ಲಾದರಲ್ಲಿಯೂ ಮೊದಲನೆಯವನು ಕೊನೆಯವನು ಮತ್ತು ಉತ್ತಮ ನಾದವನನ್ನಾಗಿ ಮಾಡಿಕೊಳ್ಳಲು ಬಯಸುತ್ತೇನೆ.

ನನ್ನ ಕಣ್ಣುಗಳು ತಂದೆಯು ನನ್ನ ಮೇಲೆ ಸುರಿಸಿದ ಪ್ರೀತಿಯ ವಿಧವನ್ನು ಮತ್ತು ಆತನು ನನ್ನನ್ನು ತನ್ನ ಮಗುವೆಂದು ಸ್ವೀಕರಿಸಿರುವ ಅದ್ಭುತವಾದ ಸತ್ಯವನ್ನು ಸ್ಪಷ್ಟವಾಗಿ "ನೋಡಲು" ಪ್ರಾರ್ಥಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನಾನು ನಿಜವಾಗಿಯೂ ಆತನ ಪ್ರೀತಿಯನ್ನು ತಿಳಿದುಕೊಳ್ಳಲು ಮತ್ತು ನಂಬಲು ಮತ್ತು ಆತನ ಆಶ್ಚರ್ಯಕರವಾದ ಪ್ರೀತಿಯನ್ನು ಇತರರಿಗೆ ತಿಳಿಸಲು ಆತನು ನನಗೆ ಶಬ್ದಗಳನ್ನು ನೀಡುವಂತೆ ಪ್ರಾರ್ಥಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನನ್ನ ಕಲ್ಲಾದ ಹೃದಯವನ್ನು ನನ್ನಿಂದ ತೆಗೆದು ಪ್ರತಿಯಾಗಿ ಪ್ರೀತಿಯ ಹೃದಯವನ್ನು ಕೊಡುತ್ತೇನೆ ಎಂಬ ಕರ್ತನ ವಾಗ್ದಾನವನ್ನು ನಾನು ಕೇಳಿಕೊಳ್ಳುತ್ತೇನೆ.ಇದರಿಂದಾಗಿ ನಾನು ಆತನನ್ನು ಮತ್ತು ಇತರರನ್ನು ಪ್ರೀತಿಸುವ ಸಾಮರ್ಥ್ಯವನ್ನು ಹೊಂದಿಕೊಳ್ಳುತ್ತೇನೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ನಾನು ನನ್ನ ಹೃದಯವನ್ನು ಆತನಿಗೆ ಪ್ರತಿಷ್ಟಿಸುತ್ತೇನೆ ಮತ್ತು ನನ್ನ ಪೂರ್ಣ ಆತ್ಮ, ಶಕ್ತಿ ಮತ್ತು ಮನಸ್ಸಿನಿಂದ ಆತನನ್ನು ಹುಡುಕುತ್ತೇನೆ, ನನ್ನನ್ನು ಸಂಪೂರ್ಣ ವ್ಯಕ್ತಿತ್ವವನ್ನು, ಮಮತೆ, ಜೀವಿತ, ದೈಹೀಕ ಬಲಗಳು ಮತ್ತು ಬುದ್ಧಿವಂತಿಕೆಯನ್ನು ಆತನ ಸೇವೆಗೆ ನೀಡುತ್ತೇನೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ದೇವರ ಕೃಪೆಯಿಂದ ಆತನೊಂದಿಗೆ ಇರುವ ಸಂಬಂಧದ ಮೂಲಕ ಹೊಂದಿಕೊಳ್ಳುವ ನಿಜವಾದ ಧರ್ಮವನ್ನು ಅನುಭವಿಸಿದ್ದೇನೆ. ಅದರ ಫಲವಾಗಿ ಆತನ ನಿರಂತರವಾದ ಪ್ರಸನ್ನತೆ ನನ್ನ ಜೀವಿತದಲ್ಲಿ ನೆಲೆಗೊಂಡಿದೆ. ನಾನು ದೇವರ ಧರ್ಮಶಾಸ್ತ್ರದೊಂದಿಗೆ ಸಾಮರಸ್ಯದಿಂದ ಇರಲು ಬಯಸುತ್ತೇನೆ

ಮತ್ತು ಆತನ ಆಜ್ಞೆಗಳಿಗೆ ವಿಧೇಯನಾಗುವದು ನನ್ನ ಸಂತೋಷವಾಗಿದೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಆತನು ನನ್ನನ್ನು ಮತ್ತು ಆತನ ವೈಭವದ ರಾಜ್ಯಕ್ಕೆ ನಂಬಿಗಸ್ತರಾದ ಎಲ್ಲರನ್ನೂ ಆಮಂತ್ರಿಸಲು ಪಟ್ಟಣದ ಬಾಗಿಲುಗಳನ್ನು ತೆರೆಯುವ ದಿನವನ್ನು ಎದುರುನೋಡುತ್ತೇನೆ

ದುಂಡು ಸುತ್ತಿರಿ:ಹೌದು ನಿರ್ಧರಿಸಿಲ್ಲ



ಪಾಠ 15
ದೇವರ ಪ್ರೀತಿಯ ಬಲವನ್ನು ಹೊಂದಿಕೊಳ್ಳುವದು

(1) ಯಾವ ದೈವೀಕ ಮತ್ತು ಬಲವಾದ ಬಹುಮಾನವನ್ನು ದೇವರು ನಮ್ಮ ಮೇಲೆ ಸುರಿಸಿದ್ದಾನೆ ಮತ್ತು ನಾವು ಅನುಮತಿಸುವಾಗ ನಮ್ಮ ನಡೆತೆಯನ್ನು ಮಾರ್ಪಡಿಸಿ, ನಮ್ಮ ಬಯಕೆಗಳನ್ನು ನಿಯಂತ್ರಿಸಿ ಮತ್ತು ನಮ್ಮನ್ನು ಆತನನ್ನು ಮತ್ತು ಇತರರನ್ನು ಪ್ರೀತಿಸಲು ಸಮರ್ಥರನ್ನಾಗಿ ಮಾಡುತ್ತಾನೆ?

ದೇವರು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ. (1 ಯೋಹಾನ 4:19).

ದೇವರೆಡೆಗೆ ಶ್ರೇಷ್ಠವಾದ ಪ್ರೀತಿ ಮತ್ತು ಒಬ್ಬರಿಗೊಬ್ಬರು ನಿಸ್ವಾರ್ಥವಾದ ಪ್ರೀತಿ ಇದು ನಮ್ಮ ಪರಲೋಕದ ತಂದೆಯಾದ

ದೇವರು ನಮ್ಮ ಮೇಲೆ ಸುರಿಸುವ ಉತ್ತಮವಾದ ಬಹುಮಾನವಾಗಿದೆ. ಪ್ರೀತಿಯು ಒಂದು ಬಯಕೆಯಲ್ಲ ಬದಲಾಗಿ ಒಂದು ತತ್ವವಾಗಿದೆ, ಉನ್ನತವಾದ ಬಲವಾಗಿದೆ. ಪ್ರತಿಷ್ಟೆಯಿಲ್ಲದ ಹೃದಯ ಇದನ್ನು ಹುಟ್ಟಿಸುವದಿಲ್ಲ ಅಥವಾ ಉತ್ಪಾದಿಸುವದಿಲ್ಲ. ಯಾವ ಹೃದಯದಲ್ಲಿ ಯೇಸು ಆಳುತ್ತಾನೋ ಅಲ್ಲಿ ಇದು ಕಂಡುಬರುತ್ತದೆ. "ಆತನು ಮೊದಲು ನಮ್ಮನ್ನು ಪ್ರೀತಿಸಿದ್ದರಿಂದ ನಾವು ಪ್ರೀತಿಸುತ್ತೇವೆ." ದೈವೀಕ ಕೃಪೆಯಿಂದ ನವೀಕರಿಸಲ್ಪಟ್ಟ ಹೃದಯದಲ್ಲಿ ಪ್ರೀತಿಯು ಕ್ರಿಯೆಯನ್ನು ಆಳುವ ತತ್ವವಾಗಿರುತ್ತದೆ. ಅದು ನಡೆತೆಯನ್ನು ಮಾರ್ಪಡಿಸುತ್ತದೆ, ಬಯಕೆಗಳನ್ನು ನಿಯಂತ್ರಿಸುತ್ತದೆ, ದಾಹಗಳನ್ನು ನಿಯಂತ್ರಣದಲ್ಲಿ ಇಡುತ್ತದೆ. ಈ ಪ್ರೀತಿಯು ಆತ್ಮದಲ್ಲಿ ಆನಂದಿಸುತ್ತದೆ, ಜೀವಿತವನ್ನು ರುಚಿಗೊಳಿಸುತ್ತದೆ ಮತ್ತು ಸುತ್ತಲೂ ಇರುವವರ ಮೇಲೆ ನವೀಕರಿಸುವ ಪ್ರಭಾವವನ್ನು ಸುರಿಸುತ್ತದೆ.

(2) ಪರಿಶುದ್ಧವಾದ ಪ್ರೀತಿ ರಕ್ತ ಮತ್ತು ಆತ್ಮದೊಂದಿಗೆ ಸೇರಿಕೊಂಡು ಯಾವುದನ್ನು ಮಾಡಲು ಬಲವನ್ನು ನೀಡುತ್ತದೆ?

ದ್ವೇಷವು ಜಗಳವನ್ನೆಬ್ಬಿಸುತ್ತದೆ; ಪ್ರೀತಿಯು ಪಾಪಗಳನ್ನೆಲ್ಲಾ ಮುಚ್ಚುತ್ತದೆ (ಜ್ಞಾನೋಕ್ತಿ 10:12).

ಪ್ರೀತಿ ಬಲ ಆಗಿದೆ, ಬೌದ್ಧಿಕ ಮತ್ತು ನೈತೀಕ ಬಲವನ್ನು ಈ ತತ್ವ ಒಳಗೊಂಡಿದೆ ಮತ್ತು ಅದರಿಂದ ಪ್ರತ್ಯೇಕಿಸಲು ಸಾಧ್ಯವಿಲ್ಲ. ಸಂಪತ್ತಿನ ಬಲವು ಭ್ರಷ್ಟಗೊಳಿಸುವ ಮತ್ತು ನಾಶಮಾಡವ ಪ್ರವೃತ್ತಿಯನ್ನು ಹೊಂದಿರುತ್ತದೆ; ಒತ್ತಡದ ಬಲ ನೋವನ್ನು ತರುವಲ್ಲಿ ಬಲವಾಗಿರುತ್ತದೆ; ಆದರೆ ಪರಿಶುದ್ಧವಾದ ಪ್ರೀತಿಯ ಅತ್ಯುತ್ತಮವಾದ ಮೌಲ್ಯ ಒಳ್ಳೇತನದಲ್ಲಿ ತನ್ನ ಸಾಮರ್ಥ್ಯವನ್ನು ಹೊಂದಿದೆ ಮತ್ತು ಒಳ್ಳೇದನ್ನು ಮಾಡುವದನ್ನು ಬಿಟ್ಟು ಬೇರೆ ಯಾವುದನ್ನೂ ಮಾಡುವದಿಲ್ಲ. ಪರಿಶುದ್ಧವಾದ ಪ್ರೀತಿಯಿಂದ ಏನೇ ಮಾಡಿದರೂ, ಅದು ಬಹಳ ಚಿಕ್ಕದಾಗಿದ್ದರೂ  ಮನುಷ್ಯರ ದೃಷ್ಟಿಯಲ್ಲಿ ತಿರಸ್ಕರಣೀಯವಾಗಿದ್ದರೂ, ಅದು ಸಂಪೂರ್ಣವಾಗಿ ಫಲದಾಯಕವಾಗಿರುತ್ತದೆ; ದೇವರು ಕೆಲಸದ ಮೊತ್ತವನ್ನು ನೋಡುವದಿಲ್ಲ ಬದಲಾಗಿ ಎಷ್ಟು ಪ್ರೀತಿಯಿಂದ ಕೆಲಸ ಮಾಡುತ್ತಾನೆ ಎಂಬುದನ್ನು ನೋಡುತ್ತಾನೆ ಮತ್ತು ಗೌರವಿಸುತ್ತಾನೆ. ಪರಿವರ್ತನೆ ಹೊಂದದಿರುವ ಹೃದಯ ಈ ಪರಲೋಕದ ಬೆಳವಣಿಗೆಯ ಗಿಡವನ್ನು ಹುಟ್ಟಿಸುವದಿಲ್ಲ ಇಲ್ಲವೇ ಉತ್ಪಾದಿಸುವದಿಲ್ಲ, ಎಲ್ಲಿ ಕ್ರಿಸ್ತನು ಆಳುತ್ತಾನೋ ಅಲ್ಲಿ ಮಾತ್ರ ಸಮೃದ್ಧಿಯಾಗಿ ಬೆಳೆಯುತ್ತದೆ.

ಕ್ರಿಸ್ತನ ಪ್ರೀತಿ ಆಳವಾದದ್ದು ಮತ್ತು ಶ್ರದ್ದೆಯಿಂದ ಕೂಡಿದ್ದು ಅದನ್ನು ಸ್ವೀಕರಿಸುವವರೆಲ್ಲರಲ್ಲಿ ಜವಾಬ್ದಾರಿಯಿಲ್ಲದ ತೊರೆಯಂತೆ ಹರಿಯುತ್ತದೆ. ಆತನ ಪ್ರೀತಿಯಲ್ಲಿ ಸ್ವಾರ್ಥವಿಲ್ಲ. ಪರಲೋಕದಲ್ಲಿ ಜನಿಸಿದ ಈ ಪ್ರೀತಿಯು ನಿಮ್ಮ ಹೃದಯದಲ್ಲಿ ನೆಲೆಯಾಗಿರುವ ತತ್ವವಾಗಿದ್ದಲ್ಲಿ, ಅದು ತನ್ನನ್ನೇ ತಾನು ತಿಳಿಯಪಡಿಸುತ್ತದೆ, ಕೇವಲ ಪವಿತ್ರವಾದ ಸಂಬಂಧದಲ್ಲಿ ಬಹಳ ಪ್ರೀತಿಪಾತ್ರರಾಗಿರುತ್ತಾರೋ ಅವರಿಗೆ ಮಾತ್ರವಲ್ಲ ಬದಲಾಗಿ ನಮ್ಮ ಸಂಪರ್ಕದಲ್ಲಿ ಬರುವವರೆಲ್ಲರಿಗೂ. ಅದು ನಮ್ಮನ್ನು ಗಮನಕೊಡುವ ಚಿಕ್ಕ ಕಾರ್ಯಗಳನ್ನು ಮಾಡುವತ್ತ ನಡೆಸುತ್ತದೆ, ದಯೆಯ ಕಾರ್ಯಗಳನ್ನು ನಮ್ರವಾಗಿ ಮಾತಾಡಲು, ನಿಜವಾದ, ಪ್ರೋತ್ಸಾಹ ತರುವ ಮಾತುಗಳನ್ನು ಮಾತಾಡಲು ರಿಯಾಯತಿಯನ್ನು ನೀಡುತ್ತದೆ. ಅದು ನಮ್ಮನ್ನು ಯಾರ ಹೃದಯಗಳು ಕರುಣೆಗಾಗಿ ಹಸಿದಿದ್ದಾವೋ ಅವರಿಗೆ ಕರುಣೆ ತೋರಿಸುವತ್ತ ನಡೆಸುತ್ತದೆ.

(3) ಯಾವ ಮೂರು ಸಂಗತಿಗಳನ್ನು ನಮಗೆ ಕೊಡಲು ದೇವರು ತವಕಪಡುವವನಾಗಿದ್ದಾನೆ ಇದರಿಂದಾಗಿ ನಾವು ಕ್ರಿಸ್ತನ ಸ್ವರೂಪವನ್ನು ಪ್ರತಿಬಿಂಬಿಸಬೇಕು ಮತ್ತು ಲೋಕಕ್ಕೆ ಆತನ ಗುಣಲಕ್ಷಣಗಳನ್ನು ಪ್ರಕಟಿಸಬೇಕು?

ದೇವರು ನಮಗೆ ಕೊಟ್ಟಿರುವ ಆತ್ಮವು ಬಲ ಪ್ರೀತಿ ಮತ್ತು ಶಿಕ್ಷಣದ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ. (2 ತಿಮೋಥಿ 1:7)

ಯಾವಾಗಲಾದರೂ ಮನುಷ್ಯನು ರಕ್ಷಕನ ಆಮಂತ್ರಣವನ್ನು ತಿರಸ್ಕರಿಸುವಾಗ, ಅವರು ತಮ್ಮನ್ನು ತಾವು ಸೈತಾನನಿಗೆ ಅಧೀನಪಡಿಸಿ ಕೊಳ್ಳುತ್ತಾರೆ. ಜೀವಿತದಲ್ಲಿ, ಮನೆಯಲ್ಲಿ, ವ್ಯವಹಾರದಲ್ಲಿ ಮತ್ತು ಸಭೆಯಲ್ಲಿ ಸಹ ಪ್ರತಿಯೊಂದು ಭಾಗದಲ್ಲಿ ಅಸಂಖ್ಯಾತ ಜನರು, ಇಂದು ಇದನ್ನು ಮಾಡುತ್ತಿದ್ದಾರೆ. ಯಾಕಂದರೆ ಇದರಿಂದಾಗಿ ಹಿಂಸೆ ಮತ್ತು ಅಪರಾಧ ಭೂಮಿಯ ಮೇಲೆ ಅತಿಹೆಚ್ಚಾಗಿ ಹರಡಿಕೊಂಡಿವೆ ಮತ್ತು ನೈತಿಕ ಕತ್ತಲು ಮರಣದ ಮೋಡದಂತೆ ಮನುಷ್ಯರ ವಾಸಸ್ಥಾನಗಳ ಮೇಲೆ ಮುಸುಕಿ ಕೊಂಡಿದೆ. ಹೊರಗೆ ಚೆನ್ನಾಗಿ ಕಾಣುವ ಆತನ ಸೈತಾನನ ಶೋಧನೆಗಳು ಮನುಷ್ಯರನ್ನು ಅತ್ಯಂತ ಕೆಟ್ಟದ್ದರಿಂದ ಕೆಟ್ಟದ್ದಕ್ಕೆ ನಡೆಸುತ್ತಿವೆ, ಇನ್ನೂ ಸಂಪೂರ್ಣವಾಗಿ ದುಷ್ಟತನ ಮತ್ತು ನಾಶನ ಅದರ ಫಲವಾಗಿವೆ. ಆತನ ಬಲದ ಮುಂದೆ ಒಂದೇ ರಕ್ಷಾಕವಚ ಯೇಸುವಿನ ಸಾನಿಧ್ಯದಲ್ಲಿ ದೊರೆಯುತ್ತದೆ. ಮನುಷ್ಯರ ಮತ್ತು ದೇವದೂತರ  ಎದುರಿನಲ್ಲಿ ಸೈತಾನನು ಮನುಷ್ಯರ ವೈರಿಯಾಗಿ ಮತ್ತು ನಾಶಕನಾಗಿ ಪ್ರಕಟಿಸಿಕೊಂಡಿದ್ದಾನೆ,

ಕ್ರಿಸ್ತನು ಮನುಷ್ಯನ ಸ್ನೇಹಿತ ಮತ್ತು ವಿಮೋಚಕನಾಗಿ. ಆತನ ಆತ್ಮ ಮನುಷ್ಯನಲ್ಲಿ ನಡೆತೆಯನ್ನು ಬಲಪಡಿಸುತ್ತದೆ ಮತ್ತು ಅವನ ಸ್ವರೂಪಕ್ಕೆ ಗೌರವವನ್ನು ನೀಡುತ್ತದೆ. ಅದು ಮನುಷ್ಯನನ್ನು ದೇಹ ಮತ್ತು ಆತ್ಮ ಮತ್ತು ಮನಸ್ಸು ದೇವರ ಮಹಿಮೆಗಾಗಿ ಬೆಳೆಯುವಂತೆ ಮಾಡುತ್ತದೆ, ಯಾಕಂದರೆ ದೇವರು ನಮಗೆ ಕೊಟ್ಟಿರುವ ಆತ್ಮವು  ಬಲ ಪ್ರೀತಿ ಮತ್ತು ಶಿಕ್ಷಣದ ಆತ್ಮವೇ ಹೊರತು ಹೇಡಿತನದ ಆತ್ಮವಲ್ಲ." 2 ತಿಮೋಥಿ 1:7, ಆತನು ನಮ್ಮನ್ನು "ಮಹಿಮೆಯನ್ನು ಹೊಂದಿಕೊಳ್ಳಲು" ಕರೆದಿದ್ದಾನೆ, "ಆತನ ಮಗನ ಸಾರೂಪ್ಯಕ್ಕೆ ಬೆಳೆದುಬರಲು" 2ಥೆಸಲೋನಿಕ 2:14; ರೋಮ 8:29.

(4) ಒಮ್ಮೆ ಪ್ರೀತಿಯ ಬಹುಮಾನವನ್ನು ಸ್ವೀಕರಿಸಿದ ಮೇಲೆ ಮತ್ತು ಅದನ್ನು ಪ್ರಾಮಾಣಿಕತೆಯಿಂದ ಅಭ್ಯಾಸಿಸಿದ ಮೇಲೆ ಕೆಟ್ಟತವು ಬಲವಾದ ಪ್ರವಾಹದಂತೆ ಹರಿದುಬರುವಾಗ ಅವು ನಮಗೆ ಏನನ್ನು ಮಾಡುವದಿಲ್ಲ?

ಜಲರಾಶಿಗಳು ಪ್ರೀತಿಯನ್ನು ನಂದಿಸಲಾರವು, ಪ್ರವಾಹಗಳಿಗೂ ಅದನ್ನು ಮುಳುಗಿಸುವ ಶಕ್ತಿಯಿಲ್ಲ, ಒಬ್ಬನು ತನ್ನ ಮನೆಮಾರನ್ನೆಲ್ಲಾ ಕೊಟ್ಟು ಪ್ರೀತಿಯನ್ನು ಪಡೆಯಲು ಯತ್ನಿಸಿದರೆ ಕೇವಲ ತಿರಸ್ಕಾರಕ್ಕೆ ಗುರಿಯಾಗುವನು. (ಪರಮಗೀತ 8:7).

ಪ್ರೀತಿಯು ಕ್ರಿಯೆಯಿಲ್ಲದೆ ಜೀವಿಸುವದಿಲ್ಲ ಮತ್ತು ಕ್ರಿಯೆಗಳು ಹೆಚ್ಚುವಾಗ, ಬಲ ಹೊಂದುತ್ತದೆ ಮತ್ತು ವಿಸ್ತರಿಸುತ್ತದೆ. ಪ್ರೀತಿಯು ವಾದವಿವಾದಗಳು ಮತ್ತು ಅಧಿಕಾರ ಬಲಹೀನವಾಗುವಾಗ ಜಯವನ್ನು ಹೊಂದುತ್ತದೆ. ಪ್ರೀತಿಯು ಲಾಭಕ್ಕಾಗಿ ಕೆಲಸಮಾಡುವದಿಲ್ಲ ಇಲ್ಲವೇ ಬಹುಮಾನಕ್ಕಾಗಿ; ಆದಾಗ್ಯೂ ದೇವರು ಪ್ರೀತಿಯ ಪ್ರತಿಯೊಂದು ಕಾರ್ಯಕ್ಕೆ ಆ ದೊಡ್ಡ ಲಾಭ ಖಚಿತವಾದ ಫಲಿತಾಂಶವಾಗಿ ಅಭಿಷೇಕಿಸಿದ್ದಾನೆ. ಅದು ತನ್ನ ಸ್ವರೂಪದಲ್ಲಿ ಪಸರಿಸುವಂಥದ್ದು ಮತ್ತು ಕಾರ್ಯ ನಿರ್ವಹಣೆಯಲ್ಲಿ ಶಾಂತವಾಗಿರುವಂಥದ್ದಾಗಿದೆ, ಆದಾಗ್ಯೂ ದೊಡ್ಡ ಕೆಟ್ಟತನವನ್ನೂ ಜಯಿಸುವ ಉದ್ದೇಶದಲ್ಲಿ ಬಲವುಳ್ಳದ್ದೂ ಮತ್ತು ಭವ್ಯವಾದದ್ದು ಆಗಿದೆ. ಇದು ಕರಗುವಂಥದ್ದು ಮತ್ತು ತನ್ನ ಪ್ರಭಾವದಿಂದ ಪರಿವರ್ತಿಸುವಂಥದ್ದು ಆಗಿದೆ. ಮತ್ತು ಪಾಪಿಗಳ ಜೀವಿತಗಳನ್ನು ಕೈಗೆ ತೆಗೆದುಕೊಳ್ಳುತ್ತದೆ ಮತ್ತು ಯಾವಾಗಲಾದರೂ ಇತರ ಮಾರ್ಗಗಳು ಜಯಹೊಂದದಿರುವಾಗ ಅವರ ಹೃದಯಗಳ ಮೇಲೆ ಪರಿಣಾಮ ಬೀರುತ್ತದೆ.

ಯಾವಾಗಲಾದರೂ ಬೌದ್ಧಿಕ ಬಲ, ಅಧಿಕಾರ ಅಥವಾ ಒತ್ತಡವನ್ನು ತೊಡಗಿಸುವಾಗ ಮತ್ತು ಪ್ರೀತಿಯು

ಪ್ರಕಟವಾಗಿ ಇರದಿರುವಾಗ, ನಾವು ಯಾರನ್ನು ತಲುಪಲು ಬಯಸುತ್ತೇವೋ ಮಮತೆ ಮತ್ತು ಸಂಕಲ್ಪ ಹಿಮ್ಮೆಟ್ಟಿಸುವ ರಕ್ಷಣಾ ಸ್ಥಾನವನ್ನು ವಹಿಸಿಕೊಳ್ಳುತ್ತೇವೆ ಮತ್ತು ಅವರ ತಡೆಗಟ್ಟುವ ಅವರ ಬಲವು ಹೆಚ್ಚಳವಾಗುತ್ತದೆ. ಯೇಸು ಸಮಾಧಾನದ ಪ್ರಭುವಾಗಿದ್ದಾನೆ. ಆತನು ಪ್ರತಿರೋಧ ಶಕ್ತಿ ಮತ್ತು ಅಧಿಕಾರ ತನಗೆ ಅಧೀನಪಡಿಸಿಕೊಳ್ಳಲು ಈ ಲೋಕಕ್ಕೆ ಬಂದನು. ಜ್ಞಾನ ಮತ್ತು ಬಲವನ್ನು ಆತನು ಆಜ್ಞಾಪಿಸಬಹುದು ಆದರೆ ಆತನು ಕೆಟ್ಟತನವನ್ನು ಜಯಿಸಲು ಉಪಯೋಗಿಸಿಕೊಳ್ಳುವ ಮಾರ್ಗಗಳು ಜ್ಞಾನ ಮತ್ತು ಪ್ರೀತಿಯ ಬಲ. ನಿಮ್ಮ ಪ್ರಸ್ತುತ ಕಾರ್ಯದಿಂದ ದೇವರು ನಿಮಗೆ ಅದೇ ಕ್ಷೇತ್ರದಲ್ಲಿ ಇನ್ನೊಂದು ಕಾರ್ಯವನ್ನು ನೀಡಲು ಸಮರ್ಥರನ್ನಾಗಿ ಕಾಣುವವರೆಗೆ ನಿಮ್ಮ ಆಸಕ್ತಿಯನ್ನು ವಿಭಾಗಿಸಲು ಯಾವುದೇ ವಿಧದ ಕಷ್ಟವನ್ನು ತೆಗೆದು ಕೊಳ್ಳುವದಿಲ್ಲ. ಸಂತೋಷಕ್ಕಾಗಿ ಹುಡುಕಬೇಡಿರಿ, ಅದನ್ನು ಹುಡುಕುವದರ ಮೂಲಕ ಅದು ಸಿಕ್ಕುವಂಥದಲ್ಲ. ನಿಮ್ಮ ಕರ್ತವ್ಯವನ್ನು ಮಾಡುತ್ತಾ ಹೋಗಿರಿ, ನಿಮ್ಮ ಎಲ್ಲಾ ಕೆಲಸಗಳಲ್ಲಿ ಪ್ರಾಮಾಣಿಕತೆ ಇರಲಿ, ದೀನತೆಯಿಂದ ಹೊದಿಸಲ್ಪಟ್ಟವರಾಗಿರಿ.

(5) ಒಮ್ಮೆ ನಾವು ನಮ್ಮೊಳಗೆ  ಕ್ರಿಸ್ತನ ಪ್ರೀತಿಯನ್ನು ಅನುಭವಿಸಿದ ಮೇಲೆ ಮತ್ತು ಹೆಚ್ಚಾಗಿ ಹುಡುಕುವಾಗ, ಆತನು

ಪ್ರೀತಿಸುವ ನಮ್ಮ ಸಾಮರ್ಥ್ಯವನ್ನು ಎಷ್ಟು ಹೆಚ್ಚಿಸುತ್ತಾನೆ?

ನಮ್ಮಲ್ಲಿ ಕಾರ್ಯಸಾಧಿಸುವ ತನ್ನ ಶಕ್ತಿಯ ಪ್ರಕಾರ ನಾವು ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು ಮಾಡಲು... (ಎಫೆಸ 3:20).

“ಕೊಡಿರಿ ಆಗ ನಿಮಗೂ ಕೊಡುವರು” (ಲೂಕ 6:38); ದೇವರ ವಾಕ್ಯವು ಇದಾಗಿರುತ್ತದೆ, “ಉದ್ಯಾನಗಳಿಗೆ ಹಾಯುವ ಬುಗ್ಗೆ, ಉಕ್ಕುತ್ತಿರುವ ಬಾವಿ ಲೆಬನೋನಿನಿಂದ ಹರಿಯುವ ಪ್ರವಾಹ ಇವೆಲ್ಲವೂ ನಿನ್ನಲ್ಲಿವೆ.” (ಪರಮಗೀತ 4:15). ಒಮ್ಮೆ ಕ್ರಿಸ್ತನ ಪ್ರೀತಿಯನ್ನು ರುಚಿನೋಡಿದ ಹೃದಯ ನಿರಂತರವಾಗಿ ಆಳವಾದ ಪ್ರವಾಹಕ್ಕಾಗಿ ಕೂಗಿಕೊಳ್ಳುತ್ತದೆ ಮತ್ತು ನೀವು ಪಾಲುತೆಗೆದುಕೊಳ್ಳುತ್ತಿರುವ ಹಾಗೆ ವಿಫುಲವಾದ ಮತ್ತು ಹೆಚ್ಚಾದ ಸಮ್ಮುದ್ಧಿಯ ಅಳತೆಯಲ್ಲಿ ಹೊಂದಿಕೊಳ್ಳುವಿರಿ. ಆತ್ಮಕ್ಕೆ ದೇವರ ಪ್ರತಿಯೊಂದು ಪ್ರಕಟನೆ ತಿಳಿದುಕೊಳ್ಳುವ ಮತ್ತು ಪ್ರೀತಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಹೃದಯದ ನಿರಂತರವಾದ ಕೂಗು “ನಿನ್ನಿಂದ ಇನ್ನೂ ಹೆಚ್ಚಾಗಿ” ಮತ್ತು ಆತ್ಮನ ಉತ್ತರ ಯಾವಾಗಲೂ “ಇನ್ನೂ ಹೆಚ್ಚು” ರೋಮ 5: 9, 10. ಯಾಕಂದರೆ

ನಮ್ಮ ದೇವರು ನಾವು “ಬೇಡುವದಕ್ಕಿಂತಲೂ ಯೋಚಿಸುವದಕ್ಕಿಂತಲೂ ಅತ್ಯಧಿಕವಾದದ್ದನ್ನು” ಎಫೆಸ 3:20 ಮಾಡುವದರಲ್ಲಿ ಹರ್ಷಿಸುತ್ತಾನೆ. ನಾಶವಾಗುತ್ತಿರುವ ಮಾನವ ಕುಲದ ರಕ್ಷಣೆಗಾಗಿ ತನ್ನನ್ನು ಬರಿದುಮಾಡಿಕೊಂಡ ಯೇಸು, ಪವಿತ್ರಾತ್ಮನನ್ನು ಯಾವುದೇ ಮೇರೆ ಇಲ್ಲದೇ ದಯಪಾಲಿಸಿದ್ದಾನೆ, ಇದರಿಂದಾಗಿ ಅದು ಕ್ರಿಸ್ತನ ಪ್ರತಿಯೊಬ್ಬ ಹಿಂಬಾಲಕರಿಗೆ ಸಂಪೂರ್ಣ ಹೃದಯವನ್ನು ಆತನು ವಾಸಿಸಲು ಅಧೀನಪಡಿಸುವಾಗ ದೊರೆಯುತ್ತದೆ, ನಮ್ಮ ಕರ್ತನು ತಾನೇ ಅಪ್ಪಣೆಕೊಟ್ಟಿದ್ದಾನೆ, “ಆತ್ಮನಿಂದ ತುಂಬಿದವರಾಗಿರಿ” (ಎಫೆಸ 5:18), ಈ ಅಪ್ಪಣೆ ಅದರ ನೆರವೇರಿಕೆಯ ವಾಗ್ದಾನ ಸಹ ಆಗಿದೆ. ಕ್ರಿಸ್ತನಲ್ಲಿ,”ಸರ್ವ ಸಂಪೂರ್ಣತೆ  ವಾಸವಾಗುತ್ತದೆ” ಮತ್ತು “ನೀವು ಆತನಲ್ಲಿದ್ದುಕೊಂಡೇ ಪರಿಪೂರ್ಣತೆಯನ್ನು ಹೊಂದಿ ದವರಾಗಿದ್ದೀರಿ.”ಕೊಲಸ್ಸೆ 1:19; 2:10.

(6) ವಿಮೋಚನೆಯ  ಪ್ರೀತಿಯ ಬಲವು ನಮ್ಮ ಹೃದಯಗಳಲ್ಲಿ ತುಂಬುವಾಗ ಮತ್ತು ನಮ್ಮ ಪ್ರತಿಯೊಂದು ಉದ್ದೇಶವನ್ನು ನಿಯಂತ್ರಿಸುವಾಗ ನಾವು ಯಾವ ವಾಗ್ದಾನವನ್ನು ಹೊಂದಿಕೊಳ್ಳಲು ವಿಶ್ವಾಸವಿಡಬೇಕು?

ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ. (1ಯೋಹಾನ 5:14-15)

ಯೋಹಾನನು ವಿಶ್ವಾಸಿಗಳನ್ನು ಪ್ರೀತಿಯ ಆತ್ಮನನ್ನು ಅಭ್ಯಾಸಿಸುವದರ ಮೂಲಕ ಹೊಂದಿಕೊಳ್ಳುವ ಉನ್ನತವಾದ ಸೌಭಾಗ್ಯಗಳನ್ನು ತಿಳಿದುಕೊಳ್ಳುವ ಸಾಹಸದತ್ತ ನಡೆಸುತ್ತಾನೆ. ವಿಮೋಚನೆಯ ಈ ಬಲವು, ಹೃದಯಗಳನ್ನು ತುಂಬಿ ಪ್ರತಿಯೊಂದು ಇತರ ಉದ್ದೇಶವನ್ನು ನಿಯಂತ್ರಿಸುತ್ತದೆ ಮತ್ತು ಅದನ್ನು ಹೊಂದಿ ಕೊಂಡವರನ್ನು ಲೋಕದ ಭ್ರಷ್ಟತೆಯ ಪ್ರಭಾವದಿಂದ ಮೇಲಕ್ಕೆ ಎತ್ತುತ್ತದೆ. ಈ ಪ್ರೀತಿಯು ಸಂಪೂರ್ಣ ಪ್ರಭಾವವನ್ನು ಅನುಮತಿಸುವಾಗ ಜೀವಿತದಲ್ಲಿ ಪ್ರೇರೆಪಣೆಯ ಬಲವಾಗುತ್ತದೆ, ದೇವರಲ್ಲಿ ಅವರ ವಿಶ್ವಾಸ ಮತ್ತು ಧೃಢವಿಶ್ವಾಸ ಮತ್ತು ಆತನು ಅವರೊಂದಿಗೆ ವ್ಯವಹರಿಸುವದು ಸಂಪೂರ್ಣವಾಗುತ್ತದೆ. ಆಗ ಅವರು

ಆತನ ಬಳಿಗೆ ಸಂಪೂರ್ಣವಾದ ನಂಬಿಕೆ ವಿಶ್ವಾಸದಿಂದ ಆತನಿಂದ ನಾವು ಪ್ರಸ್ತುತ ಮತ್ತು ನಿತ್ಯಕಾಲಕ್ಕೂ ಒಳ್ಳೇಯದನ್ನು ಅಗತ್ಯವಿರುವ ಎಲ್ಲವನ್ನೂ ಹೊಂದಿಕೊಳ್ಳುತ್ತೇವೆ ಎಂಬದನ್ನು ತಿಳಿದುಕೊಂಡು ಬರುತ್ತಾರೆ. "ಹೀಗೆ ನಮ್ಮ ಪ್ರೀತಿಯು ಪರಿಪೂರ್ಣವಾಗುತ್ತದೆ." ಅವನು ಬರೆದಿದ್ದಾನೆ "ನಾವು ನ್ಯಾಯತೀರ್ಪಿನ ದಿನದಲ್ಲಿ ಧೈರ್ಯವನ್ನು ಹೊಂದಿಕೊಳ್ಳುತ್ತೇವೆ: ಯಾಕಂದರೆ ಆತನು ಇರುವದರಿಂದ ನಾವು ಸಹ ಈ ಲೋಕದಲ್ಲಿ ಇದ್ದೇವೆ. ಪ್ರೀತಿಯಲ್ಲಿ ಭಯವಿಲ್ಲ; ಪರಿಪೂರ್ಣ ಪ್ರೀತಿಯು ಎಲ್ಲಾ ಭಯವನ್ನು ತೆಗೆದುಹಾಕುತ್ತದೆ." ಈ ಧೃಢ ವಿಶ್ವಾಸವನ್ನು ನಾವು ಆತನಲ್ಲಿ ಹೊಂದಿದ್ದೇವೆ. "ಒಂದುವೇಳೆ ನಾವು ಆತನ ಚಿತ್ತಕ್ಕೆ ಅನುಗುಣವಾಗಿ ಏನಾದರೂ ಬೇಡಿಕೊಂಡರೆ, ಆತನು ನಮ್ಮನ್ನು ಆಲಿಸುತ್ತಾನೆ ಮತ್ತು ಆತನು ನಮ್ಮನ್ನು ಆಲಿಸುತ್ತಾನೆಂದು ನಾವು ತಿಳಿದಿದ್ದರೆ... ನಾವು ಆತನಲ್ಲಿ ಬೇಡಿದ ಬಿನ್ನಹವನ್ನು ಹೊಂದಿದ್ದೇವೆ ಎಂದು ನಮಗೆ ತಿಳಿದದೆ."

(7) ಕ್ರಿಸ್ತನ ಪ್ರೀತಿ ನಮ್ಮ ಮೂಲಕ ಇತರರಿಗೆ ಹರಿದು ಬರಬೇಕಾದರೆ ಪೌಲನಂತೆ ನಮ್ಮ ಕುರಿತು ನಮ್ಮ ಸಾಕ್ಷಿ ಏನಾಗಿರಬೇಕು?

ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ. ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು. (ಗಲಾತ್ಯ 2:20).

ಹೃದಯದಲ್ಲಿ ಕ್ರಿಸ್ತನ ಪ್ರೀತಿ ಅಗತ್ಯವಾಗಿದೆ. ಸ್ವಾರ್ಥವನ್ನು ಕ್ರೂಜೆಗೆ ಹಾಕುವದು ಅವಶ್ಯವಾಗಿದೆ. ಸ್ವಾರ್ಥವು ಕ್ರಿಸ್ತನಲ್ಲಿ ಒಂದಾಗುವಾಗ, ನಿಜವಾದ ಪ್ರೀತಿ ಸ್ವಯಂಪ್ರೇರಿತವಾಗಿ ಉಕ್ಕುತ್ತದೆ. ಇದು ಒಂದು ಭಾವನೆ ಅಥವಾ ಒಂದು ಬಯಕೆ ಅಲ್ಲ ಬದಲಾಗಿ ಶುದ್ಧೀಕರಿಸಲ್ಪಟ್ಟ ಸಂಕಲ್ಪದ ನಿರ್ಧಾರವಾಗಿದೆ. ಇದು ಭಾವನೆಯನ್ನು ಒಳಗೊಂಡಿರುವದಿಲ್ಲ, ಬದಲಾಗಿ ಸಂಪೂರ್ಣ ಹೃದಯ, ಆತ್ಮ ಮತ್ತು ಗುಣಲಕ್ಷಣದ ಪರಿವರ್ತನೆಯನ್ನು ಒಳಗೊಂಡಿರುತ್ತದೆ, ಅದು ಸ್ವಾರ್ಥಕ್ಕಾಗಿ ಸತ್ತದ್ದು ಮತ್ತು ದೇವರಿಗಾಗಿ ಜೀವಿಸುವಂಥದ್ದು ಆಗಿರುತ್ತದೆ. ನಮ್ಮ ಕರ್ತನು ಮತ್ತು ರಕ್ಷಕನು ನಮಗೆ ನಮ್ಮನ್ನೇ ತನಗೆ ಕೊಡು ಎಂದು ಕೇಳುತ್ತಿದ್ದಾನೆ. ಸ್ವಾರ್ಥವನ್ನು ದೇವರಿಗೆ ಅಧೀನಪಡಿಸುವದು ಇದನ್ನೇ ಆತನು ನಮ್ಮಿಂದ ಬಯಸುತ್ತಾನೆ, ನಮ್ಮನ್ನು ನಾವು ಆತನಿಗೆ ಸರಿತೋರಿದ್ದರಲ್ಲಿ ಕೆಲಸ

ಮಾಡಲು ಒಪ್ಪಿಸಿಕೊಡಬೇಕು . ನಾವು ಅಧೀನಪಡಿಸಿಕೊಳ್ಳುವ  ಈ ಹಂತಕ್ಕೆ ಬರುವವರೆಗೆ ನಾವು ಎಲ್ಲಿಯೂ ಸಂತೋಷದಿಂದ ಪ್ರಯೋಜನ ಪೂರ್ವಕವಾಗಿ ಅಥವಾ ಯಶಸ್ವಿಯಾಗಿ ಕೆಲಸ ಮಾಡುವದಿಲ್ಲ.

ನಿಜವಾದ ಶುದ್ಧೀಕರಣ ವಿಶ್ವಾಸಿಗಳನ್ನು ಕ್ರಿಸ್ತನೊಂದಿಗೆ ಮತ್ತು ಪರಸ್ಪರ ಕೋಮಲವಾದ ಕರುಣೆಯ ಬಂಧದಲ್ಲಿ ಐಕ್ಯತೆಯಲ್ಲಿ ಇರಿಸುತ್ತದೆ.  ಈ ಐಕ್ಯತೆಯು ನಿರಂತರವಾಗಿ ಹೃದಯದಲ್ಲಿ ಕ್ರಿಸ್ತನಂತ ಪ್ರೀತಿಯ ವಿಪುಲವಾದ ವಿದ್ಯುತ್ತ ಪ್ರವಾಹದಂತೆ ಹರಿಯುತ್ತದೆ, ಮತ್ತು ಅದು ತಿರುಗಿ ಪರಸ್ಪರರ ಕಡೆಗೆ ಹರಿಯುತ್ತದೆ.

(8) ನಾವು ಸ್ವಾರ್ಥಕ್ಕಾಗಿ ಸಾಯುವದನ್ನು ಆಯ್ದುಕೊಳ್ಳುವಾಗ, ನಮ್ಮ ಹೃದಯದಲ್ಲಿ ಯಾರು ವಾಸಿಸುತ್ತಾರೆ ಇದರಿಂದಾಗಿ ನಾವು ನಿಜವಾಗಿಯೂ ಇತರರನ್ನು ಪ್ರೀತಿಸಬಹುದು?

ಕ್ರಿಸ್ತನೊಂದಿಗೆ ಶಿಲುಬೆಗೆ ಹಾಕಿಸಿಕೊಂಡವನಾಗಿದ್ದೇನೆ; ಇನ್ನು ಜೀವಿಸುವವನು ನಾನಲ್ಲ, ಕ್ರಿಸ್ತನು ನನ್ನಲ್ಲಿ ಜೀವಿಸುತ್ತಾನೆ. ಈಗ ಶರೀರದಲ್ಲಿರುವ ನಾನು ಜೀವಿಸುವದು ಹೇಗಂದರೆ ದೇವಕುಮಾರನ ಮೇಲಣ ನಂಬಿಕೆಯಲ್ಲಿಯೇ. ಆತನು ನನ್ನನ್ನು

ಪ್ರೀತಿಸಿ ನನಗೋಸ್ಕರ ತನ್ನನ್ನು ಒಪ್ಪಿಸಿಬಿಟ್ಟನು. (ಗಲಾತ್ಯ 2:10).

ಪ್ರೀತಿಯು ಒಳ್ಳೇತನದ ತಳಹದಿ. ನಮ್ಮ ವೃತ್ತಿ ಯಾವುದೇ ಆಗಿರಲಿ ಅವನಿಗೆ ತನ್ನ ಸಹೋದರನ ಮೇಲೆ ಸ್ವಾರ್ಥರಹಿತವಾದ ಪ್ರೀತಿ ಇಲ್ಲದಿದ್ದಲ್ಲಿ ಅವನು ತನ್ನ ದೇವರ ಮೇಲೆ ಪರಿಶುದ್ಧವಾದ ಪ್ರೀತಿ ಇರುವದಿಲ್ಲ. ನಾವು ಇತರರನ್ನು ಪ್ರೀತಿಸಲು ಪ್ರಯತ್ನಿಸುವದರ ಮೂಲಕ ಎಂದಿಗೂ ಈ ಸ್ಥಾನಕ್ಕೆ ಬರಲಾರೆವು. ಅವಶ್ಯವಾದದ್ದು ಯಾವುದೇಂದರೆ ಹೃದಯದಲ್ಲಿ ಕ್ರಿಸ್ತನಲ್ಲಿರುವ ಪ್ರೀತಿ. ಸ್ವಾರ್ಥವು ಕ್ರಿಸ್ತನಲ್ಲಿ ಲೀನವಾಗುವಾಗ ಪ್ರೀತಿಯು ಸ್ವಯಂಸ್ಪೂರ್ತಿಯಿಂದ ಉಕ್ಕುತ್ತದೆ. ಕ್ರಿಸ್ತೀಯ ಗುಣಲಕ್ಷಣದ ಸಂಪೂರ್ಣತೆ ಯಾವಾಗ ನಾವು ಸಹಾಯಮಾಡಲು ಮತ್ತು ಇತರರನ್ನು ಆಶೀರ್ವದಿಸುವ ಬಯಕೆ ನಮ್ಮೊಳಗೆ ನಿರಂತರವಾಗಿ ಉಕ್ಕುತ್ತದೋ— ಯಾವಾಗ ಪರಲೋಕದ ಬೆಳಕು ನಮ್ಮ ಹೃದಯವನ್ನು ತುಂಬಿಕೊಳ್ಳುತ್ತದೋ ಆಗ ಅದು ದಯೆಯ ರೂಪದಲ್ಲಿ ಪ್ರಕಟವಾಗುತ್ತದೆ.

(9) ಒಂದುವೇಳೆ ನಾವು ನಂಬಿಕೆಯಲ್ಲಿ ನಡೆಯುತ್ತಿದ್ದಲ್ಲಿ, ನಶಿಸಿಹೋಗುವ ಆತ್ಮಗಳಿಗೆ ನಾವು ಪ್ರದರ್ಶಿಸುವ ಅನೇಕ ಫಲಗಳಲ್ಲಿ ಪ್ರಥಮವಾದದ್ದು ಯಾವುದು?

ಆದರೆ ದೇವರಾತ್ಮನಿಂದುಂಟಾಗುವ ಫಲವೇನಂದರೆ – ಪ್ರೀತಿ, ಸಂತೋಷ, ಸಮಾಧಾನ, ದೀರ್ಘಶಾಂತಿ, ದಯೆ, ಉಪಕಾರ, ನಂಬಿಕೆ, ಸಾದುತ್ವ, ಶಮೆದಮೆ ಇಂಥವುಗಳೇ. ಇಂಥವುಗಳನ್ನು ಯಾವ ಧರ್ಮಶಾಸ್ತ್ರವು ಆಕ್ಷೇಪಿಸುವದಿಲ್ಲ. (ಗಲಾತ್ಯ 5:22-23).

ದೇವರು ನಿಮಗೆ ಒಂದು ಕೈಯಲ್ಲಿ ನಂಬಿಕೆಯನ್ನು, ಆತನ ಭವ್ಯವಾದ ತೋಳುಗಳನ್ನು ಹಿಡಿದುಕೊಳ್ಳಲು ಮತ್ತು
ಇನ್ನೊಂದು ಕೈಯಲ್ಲಿ ಪ್ರೀತಿಯನ್ನು, ನಶಿಸಿಹೋಗುವ ಆತ್ಮಗಳನ್ನು ತಲುಪಲು ನೀಡುತ್ತಾನೆ. ಆತನನ್ನು ಹಿಂಬಾಲಿಸಿರಿ. ಶರೀರದ ಸ್ವಭಾವಗಳ ಹಿಂದೆ ಹೋಗಬೇಡಿರಿ ಬದಲಾಗಿ ಆತ್ಮನನ್ನು ಅನುಸರಿಸಿರಿ. ಆತನು ನಡೆದಂತೆ ನೀವೂ ನಡೆಯಿರಿ. ಇದು ದೇವರ ಚಿತ್ತ,, ನಿಮ್ಮ ಶುದ್ದೀಕರಣವು ಸಹ, ನೀವು ನಿರ್ವಹಿಸಬೇಕಾದ ಕಾರ್ಯವೇನಂದರೆ ನಿಮ್ಮ ಜೀವಿತವನ್ನು ತನ್ನ ಮಹಿಮೆಗಾಗಿ ಕಾಯುವಾತನ ಚಿತ್ತವನ್ನು ಮಾಡುವದು. ಒಂದುವೇಳೆ ನಿಮಗೋಸ್ಕರ ನೀವು ಪಡುವ ಶ್ರಮೆಯು, ನಿಮಗೆ ಯಾವ ಲಾಭವನ್ನೂ ತರಲಿಕ್ಕಿಲ್ಲ. ಇತರರ ಒಳಿತಿಗಾಗಿ ಪಡುವ ಶ್ರಮೆಯು, ಅದು ಕಡಿಮೆ ಸ್ವ-ಚಿಂತೆಯನ್ನು ಮಾಡುವದು ಮತ್ತು

ಹೆಚ್ಚಾಗಿ ದೇವರಿಗಾಗಿ ಎಲ್ಲವನ್ನು ಸಮರ್ಪಿಸುವಲ್ಲಿ ಉತ್ಸುಕರಾಗಿರುವದು.

(10) ನಮಗೆ ಪ್ರೀತಿಯ ಆತ್ಮವು ಕೊಡಲ್ಪಟ್ಟ ನಂತರ ಕ್ರಿಸ್ತನಂತ ಯಾವ ವಿಧಾನಗಳನ್ನು ಜನರನ್ನು ತಲುಪಲು ಯಶಸ್ವಿಯಾಗುತ್ತವೆ?

ಕಡೆಗೆ ನೀವೆಲ್ಲರೂ ಏಕಮನಸ್ಸುಳ್ಳವರಾಗಿರಿ; ಪರರ ಸುಖದುಃಖಗಳಲ್ಲಿ ಸೇರುವವರಾಗಿರಿ; ಅಣ್ಣ ತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ; ಕರುಣೆಯೂ ದೀನಭಾವವೂ ಉಳ್ಳವರಾಗಿರಿ. (1ಪೇತ್ರ 3:8)

ಕ್ರಿಸ್ತನ ವಿಧಾನ ಮಾತ್ರ ಜನರನ್ನು ತಲುಪವಲ್ಲಿ ನಿಜವಾದ ಜಯವನ್ನು ನೀಡುತ್ತದೆ. ರಕ್ಷಕನು ಮನುಷ್ಯರೊಂದಿಗೆ ಅವರಿಗೆ ಒಳ್ಳೇದನ್ನು ಮಾಡುವ ಒಬ್ಬನಂತೆ ಬೆರೆತನು. ಆತನು ಅವರಿಗೆ ತನ್ನ ಕರುಣೆಯನ್ನು ತೋರಿಸಿದನು, ಅವರ ಅಗತ್ಯತೆಗಳನ್ನು ಪೂರೈಸಿದನು, ಮತ್ತು ಅವರ ವಿಶ್ವಾಸವನ್ನು ಗೆದ್ದುಕೊಂಡನು. ನಂತರ ಆತನು ಅವರಿಗೆ “ನನ್ನನ್ನು ಹಿಂಬಾಲಿಸಿರಿ” ಎಂದು ಹೇಳಿದನು.

ವೈಯಕ್ತಿಕವಾದ ಪ್ರಯತ್ನಗಳಿಂದ ಜನರ ಬಳಿಗೆ ಬರುವದು ಅಗತ್ಯವಾಗಿದೆ. ಪ್ರಸಂಗಕ್ಕೆ ಕಡಿಮೆ ಸಮಯವನ್ನು ನೀಡಿ, ಹೆಚ್ಚು ಸಮಯವನ್ನು ವೈಯಕ್ತಿಕ

ಸೇವೆಯಲ್ಲಿ ಕಳೆಯುವುದಾದರೆ ಮಹತ್ತರ ಫಲಿತಾಂಶಗಳನ್ನು ನೋಡಬಹುದು. ಬಡವರಿಗೆ ಬಿಡುಗಡೆ, ರೋಗಿಗಳಿಗೆ ಉಪಚಾರ, ದುಃಖದಲ್ಲಿ ಮತ್ತು ಅಗಲಿಕೆಯ ನಷ್ಟದಲ್ಲಿರುವವರಿಗೆ ಸಂತೈಸುವಿಕೆ, ಅಜ್ಞಾನಿಗಳಿಗೆ ಬೋಧಿನೆ, ಅನುಭವವಿಲ್ಲದವರಿಗೆ ಸಮಾಲೋಚನೆ. ನಾವು ಅಳುವವರೊಂದಿಗೆ ಅಳಬೇಕು ಮತ್ತು ಸಂತೋಷಪಡುವವರೊಂದಿಗೆ ಸಂತೋಷಪಡಬೇಕು, ಧೃಢ ವಿಶ್ವಾಸದ ಬಲದೊಂದಿಗೆ  ಪ್ರಾರ್ಥನೆಯ ಬಲ, ದೇವರ ಪ್ರೀತಿಯ ಬಲ, ಈ ಕಾರ್ಯವು ಫಲವಿಲ್ಲದೇ ಇರುವದಿಲ್ಲ.

(11) ಯಾವ ಮಹತ್ತರವಾದ ಮತ್ತು ಅಮೂಲ್ಯವಾದ ವಾಗ್ದಾನವನ್ನು ನಾವು ಹೊಂದಿಕೊಳ್ಳಬೇಕು, ಇದರಿಂದಾಗಿ ನಾವು ಕ್ರಿಸ್ತನಂತೆ ಶುದ್ಧೀಕರಿಸಲ್ಪಟ್ಟ ಪ್ರೀತಿಯೊಂದಿಗೆ ಇತರರನ್ನು ಪ್ರೀತಿಸಬಹುದು?

ನೀವು ಲೋಕದಲ್ಲಿ ದುರಾಶೆಯಿಂದುಂಟಾದ ಕೆಟ್ಟತನಕ್ಕೆ ತಪ್ಪಿಸಿಕೊಂಡು ದೈವ ಸ್ವಭಾವದಲ್ಲಿ ಪಾಲನ್ನು ಹೊಂದಿದವರಾಗಿರಬೇಕೆಂಬ ಉದ್ದೇಶದಿಂದ ದೇವರು ತನ್ನ ಪ್ರಭಾವ ಗುಣಾತಿಶಯಗಳಿಂದ ಅಮೂಲ್ಯವಾಗಿಯೂ ಉತ್ಕೃಷ್ಟವಾಗಿಯೂ ಇರುವ ವಾಗ್ದಾನಗಳನ್ನು ನಮಗೆ ದಯಪಾಲಿಸಿದ್ದಾನೆ. (2ಪೇತ್ರ 1:4)

ಒಬ್ಬರನ್ನೊಬ್ಬರು ಪ್ರೀತಿಸಿರಿ .... ಈ ಪ್ರೀತಿಯನ್ನು ನಿಜವಾಗಿಯೂ ಬೆಳೆಸಿಕೊಂಡಿದ್ದಲ್ಲಿ, ಮಿತಿಯುಳ್ಳದ್ದು ಮಿತಿಯುಳ್ಳದ್ದರೊಂದಿಗೆ ಬೆರೆತುಕೊಳ್ಳುತ್ತದೆ ಮತ್ತು  ಎಲ್ಲವೂ ಅಪರಿಮಿತವಾದದ್ದರ ಮೇಲೆ ಕೇಂದ್ರಿಕರಿಸುತ್ತವೆ. ಮಾನವತೆಯು ಮಾನವತೆಯೊಂದಿಗೆ ಐಕ್ಯವಾಗುತ್ತದೆ; ಮತ್ತು ಎಲ್ಲವೂ ಒಂದಾಗಿ ಅಪರಿಮಿತವಾದ ಪ್ರೀತಿಯೊಂದಿಗೆ ಒಂದಾಗುತ್ತವೆ. ಒಬ್ಬರ ಮೇಲೆ ಒಬ್ಬರಿಗೆ ಇರುವ  ಶುದ್ಧೀಕರಿಸಲ್ಪಟ್ಟ ಪ್ರೀತಿ ಪವಿತ್ರವಾದದ್ದು, ಈ ಮಹತ್ತರವಾದ ಕಾರ್ಯದಲ್ಲಿ ಒಬ್ಬರ ಮೇಲೆ ಒಬ್ಬರಿಗೆ ಇರುವ ಕ್ರಿಸ್ತೀಯ ಪ್ರೀತಿ—ಬಹಳ ಉನ್ನತವಾದದ್ದು, ಹೆಚ್ಚು ಸ್ಥಿರವಾದದ್ದು,ಹೆಚ್ಚುಗೌರವಪೂರ್ಣವಾದದ್ದು, ಹೆಚ್ಚು ನಿಸ್ವಾರ್ಥವಾದದ್ದು. ಸುರಕ್ಷಿತವಾಗಿರುವ ಕ್ರಿಸ್ತೀಯ ಕೋಮಲತೆಯಲ್ಲಿ ಕಂಡುಬರುವದಕ್ಕಿಂತೆ ಹೆಚ್ಚಿನದಾಗಿದೆ, ಕ್ರಿಸ್ತೀಯ ಔದಾರ್ಯ ಮತ್ತು ಸಭ್ಯತೆ ಮತ್ತು ದೇವರನ್ನು ಅಪ್ಪಿಕೊಳ್ಳುವದರಲ್ಲಿ ಮಾನವನ ಸಹೋದರತ್ವವನ್ನು ಆಲಂಗಿಸಿಕೊಳ್ಳುವದು, ದೇವರು ನೀಡಿದ ಮಾನವನ ಹಕ್ಕುಗಳನ್ನು ಗೌರವದಿಂದ ಸ್ವೀಕರಿಸುವದು. ಈ ಗೌರವವನ್ನು ಕ್ರೈಸ್ತರು ದೇವರ ಗೌರವ ಮತ್ತು ಮಹಿಮೆಗಾಗಿ ಯಾವಾಗಲೂ ಬೆಳೆಸಿಕೊಳ್ಳಬೇಕು.

ಕ್ರಿಸ್ತನು ಪ್ರೀತಿಸಿದಂತೆ ಪ್ರೀತಿಸುವದು ಎಂದರೆ ಎಲ್ಲಾ ಸಮಯದಲ್ಲಿ ಮತ್ತು ಎಲ್ಲಾ ಸ್ಥಳಗಳಲ್ಲಿ ನಿಸ್ವಾರ್ಥವನ್ನು, ಕರುಣೆಯ ಪದಗಳ ಮತ್ತು ಮಧುರವಾದ ನೋಟದ ಮೂಲಕ ಪ್ರಕಟಿಸುವದು. ಯಾರು ಇದನ್ನು ನೀಡುತ್ತಾರೋ ಅವರು ಇದಕ್ಕೆ ಯಾವ ಬೆಲೆಯನ್ನು ತೆರಬೇಕಾಗಿಲ್ಲ, ಆದರೆ ಅವರು ತಮ್ಮ ಹಿಂದೆ ಆತ್ಮವನ್ನು ಸುತ್ತಿಕೊಳ್ಳುವ ಪರಿಮಳವನ್ನು ಬಿಟ್ಟುಹೋಗುತ್ತಾರೆ. ಅದರ ಪರಿಣಾಮವನ್ನು ಎಂದಿಗೂ ಅಂದಾಜುಮಾಡಲು ಸಾಧ್ಯವಿಲ್ಲ. ಅವು ಸ್ವೀಕರಿಸುವವರಿಗೆ ಮಾತ್ರ ಆಶೀರ್ವಾದದಯಕವಾಗಿಲ್ಲ, ಕೊಡುವವರಿಗೆ ಸಹ ಯಾಕೆಂದರೆ ಅವರು ಅವನ ಮೇಲೆ ಯಥಾರ್ಥವಾದ ಪ್ರೀತಿಯಿಂದ ಪ್ರತಿಕ್ರಿಯಿಸುತ್ತಾರೆ ಇದು ಪರಲೋಕ ಮೂಲದ ಅಮೂಲ್ಯವಾದ ವಿಶೇಷಗುಣವಾಗಿದೆ, ಅದನ್ನು ಇತರರಿಗೆ ಎಷ್ಟು ಕೊಡುತ್ತೇವೋ ಅದೇ ಪ್ರಮಾಣದಲ್ಲಿ ಹಂಚಿಕೊಳ್ಳುತ್ತದೆ.

ಕ್ರಿಸ್ತನ ಪ್ರೀತಿ ಆಳವಾದದ್ದು ಮತ್ತು ಶ್ರದ್ಧೆಯುಳ್ಳದ್ದು, ಯಾರಾರೂ ಸ್ವೀಕರಿಸುತ್ತಾರೋ ಅವರೆಡೆಗೆ ನಿಗ್ರಹಿಸಲಾರದ ತೊರೆಯಂತೆ ಹರಿಯುತ್ತದೆ. ಆತನ ಪ್ರೀತಿಯಲ್ಲಿ ಸ್ವಾರ್ಥವಿಲ್ಲ.ಪರಲೋಕದಿಂದ ಜನಿಸಿದ ಈ ಪ್ರೀತಿಯಲ್ಲಿ ಹೃದಯದಲ್ಲಿ ನೆಲೆಗೊಳ್ಳುವ ತತ್ವವಿದ್ದಲ್ಲಿ, ಅದು

ತನ್ನನ್ನು ತಾನೇ ತಿಳಿಯಪಡಿಸುತ್ತದೆ, ಪವಿತ್ರ ಸಂಬಂಧದಲ್ಲಿ ಹೆಚ್ಚು ಪ್ರೀತಿಯಿಂದ ಹಿಡಿದುಕೊಳ್ಳುವವರಿಗೆ ಮಾತ್ರವಲ್ಲ,ನಾವು ಸಂರ್ಪಕದಲ್ಲಿ ಬರುವ ಎಲ್ಲರೊಂದಿಗೂ . ಇದು ನಮ್ಮನ್ನು ಗಮನ ನೀಡುವ ಚಿಕ್ಕ ಕ್ರಿಯೆಗಳನ್ನು ಸುರಿಸುವತ್ತ ನಡೆಸುತ್ತದೆ, ರಿಯಾಯತಿಯನ್ನು ನೀಡಲು, ದಯೆಯ ಕಾರ್ಯಗಳನ್ನು ಮಾಡಲು, ಕೋಮಲತೆಯಿಂದ ಮಾತಾಡಲು, ಸತ್ಯವಾದ ಪ್ರೋತ್ಸಾಹದ ಪದಗಳನ್ನು ಮಾತಾಡಲು. ಅದು ನಮ್ಮನ್ನು ಯಾರ ಹೃದಯವು ಕರುಣೆಯ ಹಸಿವೆಯಿಂದ ತುಂಬಿದೆಯೋ ಅವರಿಗೆ ಕರುಣೆಯನ್ನು ತೋರಿಸುವತ್ತ ನಡೆಸುತ್ತದೆ.

ಸಂಪತ್ತಿನ ಬಲವು ಕಲುಷಿತಗೊಳಿಸುತ್ತದೆ ಎಂದು ನಾನು ಅರಿತಿದ್ದೇನೆ; ಒತ್ತಡದ ಬಲ ನೋವನ್ನು ತರಬಹುದು, ಆದರೆ ಪ್ರೀತಿಯ ಬಲ ಕೇವಲ ಒಳ್ಳೇಯು ಫಲವನ್ನು ನೀಡುತ್ತದೆ. ನನ್ನ ಜೀವಿತದಲ್ಲಿ ಇಂಥ ಬಲವನ್ನು ನಾನು ಬಯಸುತ್ತೇನೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ಪ್ರೀತಿ ಒಂದು ಬಯಕೆಯಲ್ಲ ಆದರೆ ದೈವೀಕ ತತ್ವವಾಗಿದೆ ಅದು ಯೇಸುವಿನ ಆಡಳಿತ ಇರುವಲ್ಲಿ ಮಾತ್ರ ಹಾಜರಿರುತ್ತದೆ. ಪರಿವರ್ತನೆ ಇಲ್ಲದ ಹೃದಯ ಅದನ್ನು ಹುಟ್ಟಿಸಲಾರದು

ಅಥವಾ ಉತ್ಪಾದಿಸಲಾರದು. ನಾನು ಕ್ರಿಸ್ತನು ನನ್ನ ಜೀವಿದಲ್ಲಿ ಸರ್ವಶ್ರೇಷ್ಠನಾಗಿರಬೇಕು ಎಂದು ಬಯಸುತ್ತೇನೆ.

ದುಂಡು ಸುತ್ತಿರಿ:ಹೌದು    ನಿರ್ಧರಿಸಿಲ್ಲ

ನಾನು ಕ್ರಿಸ್ತನ ಪ್ರೀತಿ ನನ್ನ ಹೃದಯದಲ್ಲಿ ಆಳ್ವಿಕೆ ಮಾಡಬೇಕಾದರೆ ಸ್ವಾರ್ಥವನ್ನು ಕ್ರೂಜೆಗೆ ಹಾಕಬೇಕು ಎಂಬುದನ್ನು ನಾನು ಅರಿತಿದ್ದೇನೆ. ನಾನು ಶುದ್ದೀಕರಿಸಲ್ಪಟ್ಟ ಸಂಕಲ್ಪಕ್ಕಾಗಿ ಪ್ರಾರ್ಥಿಸುತ್ತೇನೆ ಇದರಿಂದಾಗಿ ನನ್ನ ಜೀವಿತವು ಕ್ರಿಸ್ತನಲ್ಲಿ ಮತ್ತು ಆತನ ನಿಜವಾದ ಪ್ರೀತಿಯು ಸ್ವಯಂ ಸ್ಪೂರ್ತಿಯಿಂದ  ಉಕ್ಕುತ್ತದೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ

ದೇವರ ಭವ್ಯವಾದ ತೋಳುಗಳು ನನ್ನನ್ನು ಒಂದು ಹಸ್ತದಲ್ಲಿ ನಂಬಿಕೆಯೊಂದಿಗೆ ಹಿಡಿದುಕೊಳ್ಳುವಂತೆ; ಮತ್ತು ಇನ್ನೊಂದು ಕೈಯಲ್ಲಿ ನಿರಂತರವಾಗಿ ನಶಿಸಿಹೋಗುವ ಆತ್ಮಗಳನ್ನು ಪ್ರೀತಿಯಿಂದ ತಲುಪುವಂತೆ  ಪ್ರತಿನಿತ್ಯದ ಮನವರಿಕೆ ಮತ್ತು ಜ್ಞಾನಕ್ಕಾಗಿ ನಾನು ಪ್ರಾರ್ಥಿಸುತ್ತೇನೆ.

ದುಂಡು ಸುತ್ತಿರಿ: ಹೌದು    ನಿರ್ಧರಿಸಿಲ್ಲ



## ಪಾಠ 16
## ಹೇಗೆ ಪ್ರೀತಿಸಬೇಕು ಎಂಬುದಕ್ಕೆ ಕ್ರಿಸ್ತನ ಮಾದರಿ

(1) ಇತರರನ್ನು ಹೇಗೆ ಪ್ರೀತಿಸಬೇಕು ಮತ್ತು ಅವರನ್ನು ಕ್ರಿಸ್ತನ ಬಳಿಗೆ ಹೇಗೆ ಆಕರ್ಷಿತರನ್ನಾಗಿ ಮಾಡಬೇಕು ಎಂಬುದಕ್ಕೆ ನಾವು  ಯಾರನ್ನು ಮಾದರಿಯಾಗಿ ನೋಡಬೇಕು? ಇದಕ್ಕಾಗಿಯೇ ನೀವು ಕರೆಯಲ್ಪಟ್ಟಿರಿ; ಕ್ರಿಸ್ತನು ಸಹ ನಮಗೋಸ್ಕರ ಬಾಧೆಯನ್ನನುಭವಿಸಿ, ನೀವು ತನ್ನ ಹೆಜ್ಜೆಯ ಜಾಡಿನಲ್ಲಿ ನಡೆಯಬೇಕೆಂದು ಮಾದರಿಯನ್ನು ತೋರಿಸಿ ಹೋದನು. (1ಪೇತ್ರ 2:21)

ಯೇಸು, ನಮ್ಮ ಒಡೆಯನು, ನಾವು ನಿತ್ಯತ್ವದ ಐಶ್ವರ್ಯವನ್ನು ಹೊಂದಿಕೊಳ್ಳುವಂತೆ ಆತನು ಬಡವನಾದನು; ನಮಗೆ ಜೀವವನ್ನು ನೀಡುವದಕ್ಕಾಗಿ ಆತನು ಸತ್ತನು, ನಿತ್ಯವಾದ ಜೀವಿತ. ನಾವು ಆತನ ಮಾದರಿಯನ್ನು ಅನುಸರಿಸಬೇಕಲ್ಲವೇ, ಮತ್ತು ಇತರರಿಗಾಗಿ ಆತನು ನಮಗೆ ಮಾಡಿದಂತೆ ಸಾಧ್ಯವಿರುವಷ್ಟು ಮಾಡಬೇಕಲ್ಲವೇ? ಹೀಗೆ ಮಾಡುವದರಿಂದ, ನಮ್ಮ ಸ್ವಂತ ನಡತೆ ಶಿಸ್ತಿಗೆ ಒಳಪಡುತ್ತದೆ ಮತ್ತು ಸುಧಾರಿಸುತ್ತದೆ, ನಮ್ಮ ನಂಬಿಕೆಯು ಬಲಗೊಳ್ಳುತ್ತದೆ, ನಮ್ಮ ದಾಹವು ಹೆಚ್ಚು ಸ್ಥಿರವಾಗುತ್ತದೆ ಮತ್ತು ಶ್ರದ್ಧೆಯಿಂದ ತುಂಬಿರುತ್ತದೆ. ದೇವರೆಡೆಗೆ ನಮ್ಮ ಪ್ರೀತಿ ಮತ್ತು ಸತ್ಯ ಮತ್ತು ಕ್ರಿಸ್ತನು ಯಾರಿಗಾಗಿ ಸತ್ತನೋ ಆ ಆತ್ಮಗಳ ಕುರಿತು ತೀವ್ರವಾಗುತ್ತದೆ ಮತ್ತು ನಮ್ಮ ಶ್ರಮದಿಂದಾಗಿ ಅಮೂಲ್ಯ ಆತ್ಮಗಳು ರಕ್ಷಿಸಲ್ಪಡುತ್ತವೆ. ಕ್ರಿಸ್ತನಿಗಾಗಿ ಆತ್ಮಗಳನ್ನು ಹುಡುಕುವದು ಮತ್ತು ಆಕರ್ಷಿಸುವ ಎಂಥಹ ಮಹತ್ತರವಾದ ಮತ್ತು ಘನತೆಯನ್ನು ತರುವ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದೇವೆ. ಈ ಕಾರ್ಯವು ಅನೇಕಾವರ್ತಿ ಸಾಮಾನ್ಯ ಪುರುಷರು ಮತ್ತು ಸ್ತ್ರೀಯರಿಂದ ಯಶಸ್ವಿಯಾಗಿ ಮಾಡಲಾಗಿದೆ, ಹೆಚ್ಚು ವಿದ್ಯಾವಂತರು, ವಾಕ್ಚಾತುರ್ಯ ವುಳ್ಳವರು ಅಥವಾ ಶ್ರೀಮಂತರು ಅಲ್ಲ ಬದಲಾಗಿ ನಿಜವಾದ

ಮತ್ತು ನಂಬಿಗಸ್ತರಾದ ತಮ್ಮ ಕೆಲಸವನ್ನು ಸರಳವಾಗಿ ಮಾಡುವವರಿಂದ ಮಾಡಲಾಗಿದೆ. ಈ ರೀತಿಯಲ್ಲಿ ಒಂದು ಆತ್ಮವನ್ನು ತಲುಪಿದ್ದಲ್ಲಿ, ಅದಕ್ಕೆ ಪ್ರತಿಯಾಗಿ ಕ್ರಿಸ್ತನ ಸೇವೆಯಲ್ಲಿ ಅದು ಸೈನ್ಯವನ್ನೇ ತರುತ್ತದೆ, ಆದರೆ ಪ್ರತಿಯೊಬ್ಬ ಕೆಲಸಗಾರನು ಸಂಪೂರ್ಣವಾಗಿ ಮತ್ತು ನಿರಂತರವಾಗಿ ಯೇಸು ಕ್ರಿಸ್ತನ ಮೇಲೆ ಜ್ಞಾನ ಮತ್ತು ಬಲಕ್ಕಾಗಿ ಅವಲಂಬಿಸಬೇಕು.

(2) ಇತರರೊಂದಿಗೆ ನಮ್ಮ ಸಂವಹನ ಕ್ಕೆ ಸಂಬಂಧಿಸಿದಂತೆ ಕ್ರಿಸ್ತನು ಯಾವ ತತ್ವಗಳು ಮತ್ತು ಮಾದರಿಯನ್ನು ನೀಡಿದ್ದಾನೆ?

ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ; ಏನಂದರೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬುದೇ. (ಯೋಹಾನ 13:34)

ಕ್ರಿಸ್ತನು ಆದಿ ಅಪೊಸ್ತಲರಿಗೆ ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ ಎಂದು ಅಪ್ಪಣೆಕೊಟ್ಟಿದ್ದಾನೆ. ಹೀಗೆ ಅವರು ಲೋಕಕ್ಕೆ ತಮ್ಮೊಳಗೆ ಮಹಿಮೆಯ ನಿರೀಕ್ಷೆಯನ್ನು ತುಂಬಿದ್ದಾನೆ ಎಂದು

ಸಾಕ್ಷಿ ಹೇಳಬೇಕು. "ನಾನು ನಿಮಗೆ ಒಂದು ಹೊಸ ಆಜ್ಞೆಯನ್ನು ಕೊಡುತ್ತೇನೆ;" ಆತನು ಹೇಳುತ್ತಾನೆ "ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕು; ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಬೇಕು ಎಂಬುದೇ. ಯೋಹಾನ 13:34. ಈ ಮಾತುಗಳನ್ನು ಹೇಳುವ ಸಮಯದಲ್ಲಿ. ಶಿಷ್ಯರಿಗೆ ಅದು ತಿಳಿಯಲಿಲ್ಲ; ಆದರೆ ಅವರು ನಂತರ ಕ್ರಿಸ್ತನ ಕಷ್ಟಾನುಭವಕ್ಕೆ ಸಾಕ್ಷಿಗಳಾದಾಗ, ಆತನ ಕ್ರೂಜೆಯ ಮರಣದ ಮತ್ತು ಪುನರುತ್ಥಾನದ ಮತ್ತು ಸ್ವರ್ಗಾರೋಹಣದ ನಂತರ, ಪವಿತ್ರಾತ್ಮನು ಪಂಚಾಶತ್ತಮ ದಿನದಂದು ಅವರ ಮೇಲೆ ನೆಲೆಗೊಂಡ ನಂತರ, ಅವರಿಗೆ ದೇವರ ಪ್ರೀತಿಯ ಸ್ಪಷ್ಟವಾದ ಮತ್ತು ಆ ಪ್ರೀತಿಯ ಸ್ವರೂಪ ಅದನ್ನು ತಾವು ಒಬ್ಬರಿಗೊಬ್ಬರು ತೋರಿಸಬೇಕು ಎಂಬ ತಿಳುವಳಿಕೆ ಉಂಟಾಯಿತು. ನಂತರ ಯೋಹಾನನು ತನ್ನ ಸಹ ಶಿಷ್ಯರಿಗೆ ಹೇಳಲು ಸಾಧ್ಯವಾಯಿತು, "ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣ ಕೊಟ್ಟದ್ದರಲ್ಲಿಯೇ ಪ್ರೀತಿ ಇಂಥದೆಂದು ನಮಗೆ ತಿಳಿದುಬಂದದೆ. ನಾವು ಸಹ ಸಹೋದರರಿಗೋಸ್ಕರ ನಮ್ಮ ಪ್ರಾಣಗಳನ್ನು ಕೊಡುವ ಹಂಗಿನಲ್ಲಿದ್ದೇವೆ."

ದೇವರು ತನ್ನ ಉದ್ದೇಶವನ್ನು ಪ್ರಗತಿಪಡಿಸಲು ಮನುಷ್ಯರ ಮೇಲೆ ಅವಲಂಬಿಸುವಾತನಲ್ಲ, ಆತನು

ದೇವದೂತರನ್ನು ತನ್ನ ಸತ್ಯದ ರಾಯಭಾರಿಗಳನ್ನಾಗಿ ಮಾಡಿರಬಹುದು. ಆತನು ಸಿನಾಯ ಬೆಟ್ಟದಿಂದ ತನ್ನ ಸ್ವಂತ ಧ್ವನಿಯಿಂದ ಪ್ರಕಟಿಸಿದಂತೆ ತನ್ನ ಸಂಕಲ್ಪವನ್ನು ತಿಳಿಯಪಡಿಸಿರಬಹುದು. ಆದರೆ ನಮ್ಮಲ್ಲಿ ದಯೆಯ ಆತ್ಮವನ್ನು ಬೆಳೆಸಿಕೊಳ್ಳ ಬೇಕಾದರೆ, ಆತನು ಮನುಷ್ಯರನ್ನು ಈ ಕಾರ್ಯವನ್ನು ಮಾಡುವುದಕ್ಕಾಗಿ ಆದುಕೊಂಡಿದ್ದಾನೆ.

ಇತರರ ಒಳ್ಳೇತನಕ್ಕಾಗಿ ಸ್ವ-ತ್ಯಾಗದ ಪ್ರತಿಯೊಂದು ಕ್ರಿಯೆ ದಯಾರ್ಧಮದ ಆತ್ಮವನ್ನು ಕೊಡುವಾತನ ಹೃದಯದಲ್ಲಿ ಬಲಪಡಿಸುತ್ತದೆ, ಲೋಕದ ವಿಮೋಚಕನ ಅತ್ಯಂತ ಸಮೀಪಕ್ಕೆ ಅವನನ್ನು ಜೊತೆಗೂಡಿಸುತ್ತದೆ. ಆತನು "ಐಶ್ವರ್ಯವಂತನಾಗಿದ್ದರು ನಮಗೋಸ್ಕರ ಬಡವನಾದನು, ನಾವು ಆತನ ಬಡತನದ ಮೂಲಕ ಐಶ್ವರ್ಯವಂತರಾಗಬೇಕೆಂದು." ನಾವು ನಮ್ಮ ಸೃಷ್ಟಿಯಲ್ಲಿ ಆತನ ದೈವೀಕ ಉದ್ದೇಶವನ್ನು ನೆರವೇರಿಸುವಾಗ ಮಾತ್ರ ಆ ಜೀವಿತ ನಮಗೆ ಆಶೀರ್ವಾದವನ್ನು ತರುತ್ತದೆ. ದೇವರಿಂದ ಮನುಷ್ಯರಿಗೆ ಬರುವ ಎಲ್ಲಾ ಒಳ್ಳೇ ದಾನಗಳು ಅವನು ಅವುಗಳನ್ನು ತನ್ನ ಸಹೋದರರರನ್ನು ಆಶೀರ್ವದಿಸಲು ಮತ್ತು ಭೂಮಿಯ ಮೇಲೆ ದೇವರ ಉದ್ದೇಶವನ್ನು ಮುನ್ನಡೆಸಲು ಉಪಯೋಗಿಸದೇ ಹೋಗುವಾಗ  ಕೇವಲ ಶಾಪವನ್ನು ಧೃಢಪಡಿಸುತ್ತವೆ.

(3) ಕ್ರಿಸ್ತನು ಆತನೊಂದಿಗೆ ನಮಗಿರುವ ಸಂಬಂಧದ ಸಾಕ್ಷಿಯನ್ನು ಲೋಕಕ್ಕೆ ಯಾವುದು ನೀಡುತ್ತದೆ ಎಂದು ಹೇಳಿದ್ದಾನೆ?

ನಿಮ್ಮೊಳಗೆ ಒಬ್ಬರ ಮೇಲೆ ಒಬ್ಬರಿಗೆ ಪ್ರೀತಿ ಇದ್ದರೆ ಎಲ್ಲರೂ ನಿಮ್ಮನ್ನು ತನ್ನ ಶಿಷ್ಯರೆಂದು ತಿಳಿದುಕೊಳ್ಳುವರು. (ಯೋಹಾನ 13:35)

ಶ್ರೇಷ್ಠ ಬೋಧಕನ ಹಿಂಬಾಲಕರು ತಮ್ಮ ಬೋಧಕನ ಗುಣಲಕ್ಷಣಗಳನ್ನು ಪ್ರತಿಬಿಂಬಿಸಬೇಕು. ಪ್ರೀತಿಯು ಯೇಸುವಿನ ಒಂದು ಪ್ರಾಮುಖ್ಯವಾದ ವಿಶೇಷಗುಣವಾಗಿದೆ. ಯೇಸುವಿನ ಜೀವಿತ ಕ್ರಿಯೆಯಲ್ಲಿರುವ ಪ್ರೀತಿಯ ಪ್ರಾಯೋಗಿಕ ಪ್ರದರ್ಶನವಾಗಿದೆ. ಯೇಸುವಿನ ಶಿಷ್ಯರಿಗೆ ತಮ್ಮ ಒಡೆಯನೊಂದಿಗೆ ಇರುವ ಸಂಬಂಧದ ಮತ್ತು ನಿಕಟ ಸಂಪರ್ಕದ ಸಾಕ್ಷಿ ಇಂಥದೇ ಪ್ರೀತಿಯ ಪ್ರಕಟನೆಯಿದೆ. ವೃತ್ತಿಗಿಂತ ಹೆಚ್ಚಾಗಿ ಪ್ರೀತಿ ಕ್ರೈಸ್ತರನ್ನು ಗುರುತಿಸುವದಾಗಿದೆ.

ಈ ಪ್ರೀತಿಯು ಅವರ ಶಿಷ್ಯತ್ವಕ್ಕೆ ಸಾಕ್ಷಿಯಾಗಿದೆ, “ಇದರಿಂದಾಗಿ ಎಲ್ಲಾ ಜನರೂ ನೀವು ನನ್ನ ಶಿಷ್ಯರೆಂದು ಗುರುತಿಸುತ್ತಾರೆ.” ಎಂದು ಯೇಸು ಹೇಳಿದ್ದಾನೆ. “ಒಂದುವೇಳೆ ನಿಮ್ಮಲ್ಲಿ ಒಬ್ಬರ ಮೇಲೆ ಒಬ್ಬರಿಗೆ ಪ್ರೀತಿ ಇದ್ದರೆ.” ಮನುಷ್ಯರು ಒಟ್ಟಾಗಿ ಸೇರಿಬರುವಾಗ ಒತ್ತಾಯದಿಂದಲ್ಲ ಅಥವಾ ಸ್ವ-

ಆಸಕ್ತಿಯಿಂದಲ್ಲ ಬದಲಾಗಿ ಪ್ರೀತಿಯಿಂದ, ಅವರು  ಮಾನವ ಪ್ರಭಾವಕ್ಕಿಂತ ಉನ್ನತವಾದ ಪ್ರಭಾವದಲ್ಲಿ ಕೆಲಸ ಮಾಡುತ್ತಾರೆ. ಎಲ್ಲಿ ಈ ಐಕ್ಯತೆಯಿರುತ್ತದೋ, ಅದು ದೇವರ ಸಾರೂಪ್ಯವು ಮಾನವನಲ್ಲಿ ಪುನಃಸ್ಥಾಪಿಸಲ್ಪಟ್ಟಿದೆ ಮತ್ತು ಜೀವಿತದಲ್ಲಿ ಹೊಸ ತತ್ವವನ್ನು ಸೇರಿಸಲಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ. ದೈವೀಕ ಸ್ವರೂಪದಲ್ಲಿ ಅಲೌಕಿಕವಾದ ಕೆಟ್ಟತನವನ್ನು ವಿರೋಧಿಸುವ  ಬಲವಿದೆ ಮತ್ತು ದೇವರ ಕೃಪೆ ಸ್ವಾಭಾವಿಕ ಹೃದಯದಲ್ಲಿ ಸ್ವಾಭಾವಿಕ ಸ್ವಾರ್ಥತೆಯನ್ನು ನಿಗ್ರಹಿಸುತ್ತದೆ.

ಪ್ರೀತಿಯ ಕೊರತೆಯಿದೆ ಎಂದು ಸಭೆಯ ಪ್ರಭಾವವನ್ನು ಬಲಹೀನಗೊಳಿಸುವದು ಏನೂ ಇಲ್ಲ. ಲೋಕದ ಜನರು ನಮ್ಮ ನಂಬಿಕೆ ನಮ್ಮ ನಡತೆಗೆ ಮತ್ತು ಜೀವಿತಕ್ಕೆ ಏನು ಮಾಡುತ್ತದೆ ಎಂಬುದನ್ನು ನೋಡಲು ನಮ್ಮ ಕಡೆಗೆ ನೋಡುತ್ತಾರೆ. ಅವರು ಅದು ನಮ್ಮ ಹೃದಯದ ಮೇಲೆ ಶುದ್ಧೀಕರಿಸುವ ಪರಿಣಾಮವನ್ನು ಹೊಂದಿದೆಯೋ . ನಾವು ಕ್ರಿಸ್ತನಂತೆ ಬದಲಾಗುತ್ತಿದ್ದೇವೋ ಎಂಬುದನ್ನು ನೋಡಲು ಕಾದಿರುತ್ತಾರೆ. ಅವರು ನಮ್ಮ ಜೀವಿತದಲ್ಲಿ ತಪ್ಪುಗಳನ್ನು, ನಮ್ಮ ಕ್ರಿಯೆಗಳಲ್ಲಿ ಪ್ರತಿಯೊಂದು ಅಸಂಬದ್ಧತೆಯನ್ನು ಹುಡುಕಲು ಸಿದ್ಧರಾಗಿರುತ್ತಾರೆ. ಅವರು ನಮ್ಮ

ನಂಬಿಕೆಯನ್ನು ಟೀಕಿಸಲು ನಾವು ಯಾವುದೇ ಸಂದರ್ಭವನ್ನು ಅವರಿಗೆ ನೀಡದಿರೋಣ. {TMK 153}

(4) ನಾವು ನಿಜವಾಗಿಯೂ ನಮ್ಮ ಮೇಲಿರುವ ದೇವರ ಪ್ರೀತಿಯನ್ನು ಅನುಭವಿಸುವಾಗ ನಾವು ಲೋಕಕ್ಕೆ ಏನನ್ನು ಪ್ರತಿಬಿಂಬಿಸಬೇಕು?

ಅದರಂತೆ ನಿಮ್ಮ ಬೆಳಕು ಜನರ ಮುಂದೆ ಪ್ರಕಾಶಿಸಲಿ, ಹೀಗಾದರೆ ಅವರು ನಿಮ್ಮ ಒಳ್ಳೇಕ್ರಿಯೆಗಳನ್ನು ನೋಡಿ ಪರಲೋಕದಲ್ಲಿರುವ ನಿಮ್ಮ ತಂದೆಯನ್ನು ಕೊಂಡಾಡುವರು. (ಮತ್ತಾಯ 5:16)

ದೇವರು ನಮ್ಮ ಮೇಲೆ ಸಮೃದ್ಧಿಯಾಗಿ ಸುರಿಸಿರುವ ಪ್ರೀತಿ ಮತ್ತು ಕೋಮಲತೆಯನ್ನು ಇತರರಿಗೆ ನೀಡುವಾಗ, ನಾವು ನಮ್ಮ ಬೆಳಕು ಪ್ರಕಾಶಿಸುವದಕ್ಕೆ ಅನುಮತಿಸಬೇಕು. ನಾವು ದೇವರು ಕೊಟ್ಟಿರುವ ಪ್ರತಿಯೊಂದು ವರವನ್ನು ಸಾಧ್ಯವಾದಷ್ಟು ಉತ್ತಮವಾಗಿ ಉಪಯೋಗಿಸಿಕೊಳ್ಳಬೇಕು, ಅದನ್ನು ಉತ್ತಮವಾದದ್ದನ್ನು ಉತ್ಪಾದಿಸುವಂತೆ ಮಾಡಬೇಕು. ಆತನದಲ್ಲದ್ದನ್ನು ದೇವರಿಗೆ ನಾವು ಏನೂ ಕೊಡಲಾರೆವು ಆದರೆ ನಾವು ನಮ್ಮ ಸುತ್ತಲೂ ಕಷ್ಟದಲ್ಲಿರುವವರಿಗೆ ಸಹಾಯಮಾಡಬೇಕು. ನಾವು ಅವರಿಗೆ ಈ

ಜೀವಿತದ ಅಗತ್ಯತೆಗಳನ್ನು ಪೂರೈಸಬೇಕು ಮತ್ತು ಅದೇ ಸಮಯದಲ್ಲಿ ಅವರೊಂದಿಗೆ ದೇವರ ಅದ್ಭುತವಾದ ಪ್ರೀತಿಯ ಕುರಿತು ಮಾತಾಡಬೇಕು.

ಯಾರು ಈ ರೀತಿಯಾಗಿ ದೇವರಲ್ಲಿ ನೆಲೆಗೊಳ್ಳುತ್ತಾರೋ ಅವರು ಪ್ರೀತಿಯಲ್ಲಿ ನೆಲೆಗೊಂಡಿದ್ದಾರೆ. ಯಾರು ನಿಜವಾಗಿಯೂ ಪ್ರಾಯೋಗಿಕ ಜ್ಞಾನದ  ಪರಿಚಯಹೊಂದಿದ್ದಾರೋ, ನಮ್ಮ ಪರಲೋಕದ ತಂದೆಯ ಪ್ರೀತಿ ಮತ್ತು ಕೋಮಲವಾದ ಅನುಕಂಪದೊಂದಿಗೆ ಅವರು ಎಲ್ಲಿರುತ್ತಾರೋ ಅಲ್ಲಿ ಬೆಳಕು ಮತ್ತು ಆನಂದವನ್ನು ನೀಡುತ್ತಾರೆ. ಅವರ ಸಾನಿಧ್ಯ ಮತ್ತು ಪ್ರಭಾವ ಅವರ ಜೊತೆಗಾರರಿಗೆ ಸುಂದರವಾದ ಹೂವಿನ ಪರಿಮಳದಂತೆ ಇರುತ್ತದೆ. ಯಾಕಂದರೆ ಅವರು ದೇವರೊಂದಿಗೆ ಮತ್ತು ಪರಲೋಕದೊಂದಿಗೆ ಸಂಬಂಧವನ್ನು ಹೊಂದಿರುತ್ತಾರೆ ಮತ್ತು ಪರಿಶುದ್ಧತೆ ಮತ್ತು ಸ್ತುತಿಗೆ ಯೋಗ್ಯವಾದ ಪರಲೋಕದ ಸೌಂದರ್ಯ ಅವರ ಮೂಲಕ ಅವರ ಪ್ರಭಾವಕ್ಕೆ ಒಳಗಾದವರಿಗೆ ನಿವೇದಿಸಲ್ಪಡುತ್ತದೆ. ಇದು ಅವರನ್ನು ಲೋಕದ ಬೆಳಕನ್ನಾಗಿ, ಭೂಮಿಗೆ ಉಪ್ಪನ್ನಾಗಿ ಮಾಡುತ್ತದೆ, ಅವರು ನಿಜವಾಗಿಯೂ ಜೀವಿತದಿಂದ ಜೀವಿತಕ್ಕೆ

ರುಚಿಕೊಡುವವರಾಗಿರುತ್ತಾರೆ, ಮರಣದಿಂದ ಮರಣಕ್ಕೆ ಅಲ್ಲ.

(5) ಕ್ರಿಸ್ತನು ತನ್ನ ಪ್ರತಿಯೊಬ್ಬ ಹಿಂಬಾಲಕರನ್ನು ಏನಾಗಿರಲು ಕರೆಯುತ್ತಾನೆ, ದೇವರಾತ್ಮನಿಂದ ಬರೆಯಲ್ಪಟ್ಟ, ವಾಕ್ಯವು ಲೋಕಕ್ಕೆ ಆತನ ಒಳ್ಳೇತನ ಮತ್ತು ಕರುಣೆಯನ್ನು ತೋರಿಸುವವರು ಎಂದು ಹೇಳುತ್ತದೆ ?

ನೀವೇ ನಮ್ಮ ಯೋಗ್ಯತಾಪತ್ರ; ಅದು ನಮ್ಮ ಹೃದಯಗಳಲ್ಲೇ ಬರೆದದೆ; ಆ ಪತ್ರ ವನ್ನು ಎಲ್ಲರೂ ಬಲ್ಲರು, ಎಲ್ಲರೂ ಓದುತ್ತಾರೆ. ಕ್ರಿಸ್ತನು ನಮ್ಮ ಕೈಯಿಂದ ಬರೆಸಿಕೊಟ್ಟ ಪತ್ರವಾಗಿದ್ದೀರೆಂಬದು ಪ್ರತ್ಯಕ್ಷವಾಗಿಯೇ ಇದೆ; ಅದು ಮಸಿಯಿಂದ ಬರೆದದ್ದಲ್ಲ; ಕಲ್ಲಿನ ಮೇಲೆಯಲ್ಲ, ಮನುಷ್ಯ ಹೃದಯಗಳೆಂಬ ಹಲಿಗೆಗಳ ಮೇಲೆ ಬರೆದದ್ದು. (2ಕೊರಿಂಥ 3:2-3)

ದೇವರ ಮಕ್ಕಳು ಕ್ರಿಸ್ತನ ಪ್ರತಿನಿಧಿ ಗಳಾಗಿರುವದಕ್ಕೆ ಕರೆಯಲ್ಪಟ್ಟಿದ್ದಾರೆ, ಕರ್ತನ ಒಳ್ಳೇತನ ಮತ್ತು ಕರುಣೆಯನ್ನು ತೋರಿಸಲು. ಯೇಸು ನಮಗೆ ತಂದೆಯ ನಿಜವಾಗಿ ಗುಣಲಕ್ಷಣಗಳನ್ನು ಪ್ರಕಟಿಸಿದ್ದಾನೆ, ಆದುದರಿಂದ ನಾವು ಕ್ರಿಸ್ತನನ್ನು ಆತನ ಕೋಮಲತೆ ಮತ್ತು ಅನುಕಂಪದಿಂದ ಕೂಡಿದ ಪ್ರೀತಿಯನ್ನು

ಲೋಕಕ್ಕೆ ಪ್ರಕಟಿಸಬೇಕು, “ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಂತೆ” ಎಂದು ಯೇಸು ಹೇಳುತ್ತಾನೆ. “ನಾನು ಇವರನ್ನು ಲೋಕಕ್ಕೆ ಕಳುಹಿಸಿಕೊಟ್ಟೆನು” “ನಾನಾ ಅವರಲ್ಲಿಯೂ ನೀನು ನನ್ನನ್ನಲ್ಲಿಯೂ .... ನೀನು ನನ್ನನ್ನು ಲೋಕಕ್ಕೆ ಕಳುಹಿಸಿಕೊಟ್ಟಿದ್ದೀ ಎಂದು ತಿಳಿದುಬರುವದು.” ಯೋಹಾನ 17:18, 23. ಅಪೋಸ್ತಲನಾದ ಪೌಲನು ಯೇಸುವಿನ ಶಿಷ್ಯರಿಗೆ ಹೇಳುತ್ತಾನೆ” ನೀವೇ ನಮ್ಮ ಯೋಗ್ಯತಾಪತ್ರ; ಅದು ನಮ್ಮ ಹೃದಯಗಳಲ್ಲಿ ಬರೆದದೆ, ಅದನ್ನು ಎಲ್ಲರೂ ಓದಬಲ್ಲರು” 2ಕೊರಿಂಥ 3:2, 3.

ಆತನ ಪ್ರತಿಯೊಬ್ಬ ಮಕ್ಕಳಲ್ಲಿ, ಯೇಸು ತನ್ನ ಪತ್ರವನ್ನು ಲೋಕಕ್ಕೆ ಕಳುಹಿಸುತ್ತಾನೆ. ನೀವು ಕ್ರಿಸ್ತನ ಹಿಂಬಾಲಕರಾಗಿದ್ದಲ್ಲಿ. ಆತನು ನಿಮ್ಮಲ್ಲಿ ನೀವು ವಾಸಿಸುವ ಕುಟುಂಬಕ್ಕೆ, ಗ್ರಾಮಕ್ಕೆ, ಓಣಿಗೆ ಒಂದು ಪತ್ರವನ್ನು ಕಳುಹಿಸುತ್ತಿದ್ದಾನೆ. ಯೇಸು ನಿಮ್ಮಲ್ಲಿ ವಾಸಿಸುತ್ತಾನೆ, ಯಾರು ತನಗೆ ಪರಿಚಯವಿಲ್ಲವೋ ಅವರ ಹೃದಯದೊಂದಿಗೆ ಮಾತಾಡಲು ಬಯಸುತ್ತಾನೆ, ಬಹುಶಃ ಅವರು ಸತ್ಯವೇದವನ್ನು ಓದಲಿಕ್ಕಿಲ್ಲ ಅಥವಾ ಆ ಪುಟಗಳಲ್ಲಿ ಅವರೊಟ್ಟಿಗೆ ಮಾತಾಡುವ ಆತನ ಧ್ವನಿಯನ್ನು ಆಲಿಸಿರಲಿಕ್ಕಿಲ್ಲ. ಅವರು ಆತನ ಕಾರ್ಯಗಳ ಮೂಲಕ ದೇವರ ಪ್ರೀತಿಯನ್ನು ನೋಡಿರಲಿಕ್ಕಿಲ್ಲ. ಆದರೆ ನೀವು ಯೇಸುವಿನ ನಿಜವಾದ

ಪ್ರತಿನಿಧಿಗಳಾಗಿದ್ದಲ್ಲಿ, ಅವರು ನಿಮ್ಮಿಂದ ಆತನ ಬಳಿಗೆ ನಡೆಸಲ್ಪಡುತ್ತಾರೆ ಮತ್ತು ಆತನ ಒಳ್ಳೇತನದ ಕುರಿತು ಸ್ವಲ್ಪವಾದರೂ ತಿಳಿದುಕೊಳ್ಳುತ್ತಾರೆ ಮತ್ತು ಆತನನ್ನು ಪ್ರೀತಿಸಲು ಮತ್ತು ಸೇವೆಮಾಡಲು ಗೆದ್ದುಕೊಳ್ಳಬಹುದು.

(6) ಇತರರೆಡೆಗೆ ಕ್ರಿಸ್ತನಂತ ಪ್ರೀತಿಯ ಕಾರ್ಯಗಳನ್ನು ಪ್ರದರ್ಶಿಸದಿರುವವರಿಗೆ ನಂಬಿಕೆಯ ಶರತ್ತು ಏನು?

ಹಾಗೆಯೇ ಕ್ರಿಯೆಗಳಿಲ್ಲದಿದ್ದರೆ ನಂಬಿಕೆಯು ತನ್ನಲ್ಲಿ ಜೀವವಿಲ್ಲದು. (ಯಾಕೋಬ 2:17).

ಇದು ಅತ್ಯಂತ ದೊಡ್ಡ ಒಬ್ಬ ಮನುಷ್ಯನು ಕ್ರಿಸ್ತನಂತ ಗುಣಲಕ್ಷಣಗಳನ್ನು ತನ್ನ ಸಹೋದರನೆಡೆಗೆ ಪ್ರೀತಿಯನ್ನು ಹೊಂದಿಕೊಳ್ಳದೇ ನಿತ್ಯತ್ವದ ವರೆಗೆ ನಂಬಿಕೆಯನ್ನು ಹೊಂದಿಕೊಳ್ಳಬಹುದು ಎಂಬ ಮತ್ತು ಅತ್ಯಂತ ಅಪಾಯಕಾರಿಯಾದ ಮೋಸವಾಗಿದೆ. ಯಾರು ತನ್ನ ದೇವರನ್ನು ಮತ್ತು ತನ್ನ ನೆರೆಯವನನ್ನು ಪ್ರೀತಿಸುತ್ತಾರೋ ಅವರು ದೇವರ ಬೆಳಕು ಮತ್ತು ಪ್ರೀತಿಯಿಂದ ತುಂಬಿರುತ್ತಾರೆ, ದೇವರು ಅವನಲ್ಲಿದ್ದಾನೆ, ಅವನ ಸುತ್ತಲೂ ಇದ್ದಾನೆ. ಕ್ರೈಸ್ತರು ತಮ್ಮ ಸುತ್ತಲೂ ಇರುವವವರನ್ನು ಕ್ರಿಸ್ತನು ಅವರಿಗಾಗಿ ಸತ್ತ ಅಮೂಲ್ಯ ಆತ್ಮಗಳು ಎಂದು

ಪ್ರೀತಿಸಬೇಕು . ಪ್ರೀತಿಯಿಲ್ಲದ ಕ್ರೈಸ್ತರು ಇಲ್ಲವೇ ಇಲ್ಲ. ಯಾಕಂದರೆ "ದೇವರು ಪ್ರೀತಿಸ್ವರೂಪಿ ಆಗಿದ್ದಾನೆ." ಮತ್ತು "ಇದರ ಮೂಲಕ ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವುದಾದರೆ ಆತನನ್ನು ತಿಳಿದಿದ್ದೇವೆ. ನಾನು ಆತನನ್ನು ತಿಳಿದಿದ್ದೇನೆ ಎಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಂಡು ನಡೆಯದವನು, ಸುಳ್ಳುಗಾರನಾಗಿದ್ದಾನೆ ಮತ್ತು ಸತ್ಯವೆಂಬುದು ಆತನಲಿಲ್ಲ.

ಇದು ನನ್ನ ಆಜ್ಞೆ "ನಾನು ನಿಮ್ಮನ್ನು ಪ್ರೀತಿಸಿದಂತೆ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ." ಈ ಫಲವನ್ನು ನಾವು ತಿರುಗಿ ದೇವರಿಗೆ ನೀಡಬೇಕಾಗಿದೆ.

(7) ಯಾರು ಕ್ರಿಸ್ತನ ಮಾದರಿಯನ್ನು ತಮ್ಮ ಆತ್ಮದಲ್ಲಿ ನೆಲೆಗೊಳ್ಳುವ ತತ್ವಗಳನ್ನು ಹೊಂದುವದರ ಮೂಲಕ ತೋರಿಸುವವರ ಮೇಲೆ ಯಾವ ಎರಡು ವಿಧದಲ್ಲಿ ದೇವರು ಆನಂದಿಸುತ್ತಾನೆ?

ನಿನ್ನ ದೇವರಾದ ಯೆಹೋವನು ನಿನ್ನ ಮಧ್ಯದಲ್ಲಿ ಶೂರನಾಗಿದ್ದಾನೆ, ನಿನ್ನನ್ನು ರಕ್ಷಿಸುವನು; ನಿನ್ನಲ್ಲಿ ಉಲ್ಲಾಸಿಸೇ ಉಲ್ಲಾಸಿಸುವೆನು ತನ್ನ ಪ್ರೀತಿಯಲ್ಲಿ ಮುಣುಗಿ ಮೌನವಾಗಿರುವನು; ನಿನ್ನಲ್ಲಿ ಆನಂದಿಸಿ ಹರ್ಷಧ್ವನಿಗೈಯುವನು ಎಂದು ಹೇಳೋಣವಾಗುವದು. (ಚೆಫನ್ಯ 3:17)

ದೇವರು ಯಾರನ್ನೂ ಪರಲೋಕಕ್ಕೆ ಕೊಂಡೊಯ್ಯುವದಿಲ್ಲ ಆದರೆ ಈ ಲೋಕದಲ್ಲಿ ಯಾರು ಕ್ರಿಸ್ತನ ಕೃಪೆಯಿಂದ ಮೊದಲು ಪವಿತ್ರ ಜೀವಿಗಳಾಗಿ ಮಾಡಲ್ಪಟ್ಟಿದ್ದಾರೋ, ಯಾರ ಜೀವಿತದಲ್ಲಿ ಕ್ರಿಸ್ತನು ಮಾದರಿಯಾಗಿರುವದನ್ನು ಕಾಣುತ್ತಾರೊ ಅವರನ್ನು ಮಾತ್ರ. ಕ್ರಿಸ್ತನ ಪ್ರೀತಿ ನಮ್ಮ ಆತ್ಮದಲ್ಲಿ ನೆಲೆಯಾಗಿರುವ ತತ್ವವಾಗಿರುತ್ತದೋ, ನಾವು ಕ್ರಿಸ್ತನಲ್ಲಿ ದೇವರಿಗೆ ಮರೆಯಾಗಿಡಲ್ಪಟ್ಟಿದ್ದೇವೆ ಎಂದು ತಿಳಿದುಕೊಳ್ಳುತ್ತೇವೆ.

ಪ್ರಾರ್ಥನೆ ಮತ್ತು ಕಾದಿರುವದು ಮತ್ತು ಪೀತಿಯಿಂದಾಗಿ ಇವರು ಕ್ರಿಸ್ತನು ಮಾಡಿದ ಕಾರ್ಯಗಳನ್ನು ಮಾಡುತ್ತಾರೆ, ದೇವರು ಇವರನ್ನು ನೋಡಿ ಆನಂದಿಸುತ್ತಾನೆ. ಕರ್ತನು ತನ್ನ ಪ್ರೀತಿಯ ಮಗನ ಗುಣಲಕ್ಷಣಗಳು ಸಂಪೂರ್ಣವಾಗಿ ತನ್ನ ಜನರಲ್ಲಿ ಪ್ರಕಟವಾಗಿರುವದನ್ನು ಕಾಣುವಾಗ, ಅವರಲ್ಲಿ ಆತನು ಅತೀ ಹೆಚ್ಚಾಗಿ ತೃಪ್ತಿ ಮತ್ತು ಆನಂದವನ್ನು ಹೊಂದುತ್ತಾನೆ. ದೇವರು ತಾನೇ ಮತ್ತು ಪರಲೋಕದ ದೂತಗಣಗಳು ಸಂಗೀತವನ್ನು ಹಾಡುವದರ ಮೂಲಕ ಅವನಲ್ಲಿ ಆನಂದಿಸುತ್ತವೆ.

(8) ಈ ವಚನದ ಕೊನೆಯಲ್ಲಿ ಕೇಳಿದ ಯಾವ ಪ್ರಶ್ನೆ ಅದು ಕ್ರಿಸ್ತನಂತ ಪ್ರೀತಿಯನ್ನು ತನ್ನ ಸಹೋದರರ ಮೇಲೆ ಹೊಂದಿಕೊಳ್ಳದೇ  ಒಬ್ಬ ಮನುಷ್ಯನು

ನಿತ್ಯಜೀವದ ವರೆಗೆ , ನಂಬಿಕೆಯನ್ನು ಹಿಡಿದುಕೊಳ್ಳುವದು ಅಪಾಯಕಾರಿಯಾದ ಮೋಸತನವಾಗಿದೆ ಎಂಬುದನ್ನು ಧೃಢಪಡಿಸುತ್ತದೆ?

ಈ ಲೋಕದ ಸಂಪತ್ತುಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೆ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದು ಉಂಟೆ? (1ಯೋಹಾನ 3:17).

ಶುದ್ದೀಕರಣ ವಿಶ್ವಾಸಿಗಳನ್ನು ಕ್ರಿಸ್ತನೊಂದಿಗೆ ಐಕ್ಯತೆಯಲ್ಲಿ ಇರಿಸುತ್ತದೆ ಮತ್ತು ಪರಸ್ಪರ ಕೋಮಲವಾದ ಕರುಣೆಯ ಬಂಧದಲ್ಲಿ ಇರಿಸುತ್ತದೆ. ಈ ಐಕ್ಯತೆ ಕ್ರಿಸ್ತನಂತ ಪ್ರೀತಿಯ ಸಮೃದ್ದಿಯಾದ ಬಲದೊಂದಿಗೆ ನಿರಂತರವಾಗಿ ನಮ್ಮ ಹೃದಯಗಳಿಂದ ಹರಿಯುತ್ತದೆ, ಅದು ತಿರುಗಿ ಪ್ರೀತಿಯಿಂದ ಪರಸ್ಪರರೆಡೆಗೆ ಹರಿಯುತ್ತದೆ.

ಎಲ್ಲರೂ ಅವಶ್ಯವಾಗಿ ಹೊಂದಿಕೊಳ್ಳಬೇಕಾದ ಗುಣಗಳು ಕ್ರಿಸ್ತನ ಗುಣಲಕ್ಷಣಗಳ ಪರಿಪೂರ್ಣತೆ – ಆತನ ಪ್ರೀತಿ. ಆತನ ತಾಳ್ಮೆ, ಆತನ ನಿಸ್ವಾರ್ಥತೆ ಮತ್ತು ಆತನ ಒಳ್ಳೇತನ. ಈ ವಿಶೇಷ ಗುಣಗಳನ್ನು ಕರುಣೆಯುಳ್ಳ ಹೃದಯದಿಂದ ಕರುಣೆಯುಳ್ಳ

ಕಾರ್ಯಗಳನ್ನು ಮಾಡುವದರ ಮೂಲಕ ಹೊಂದಿಕೊಳ್ಳಬಹುದು.

(9) ಯಾವ ಮಾದರಿ, ಸೌಭಾಗ್ಯ, ಮತ್ತು ನಿಯೋಜನೆಯನ್ನು ಕ್ರಿಸ್ತನು ತನ್ನನ್ನು ಪ್ರೀತಿಸುವವರೆಲ್ಲರಿಗೂ  ಆತ್ಮೀಕವಾಗಿ ತಪ್ಪಿಹೋದವರನ್ನು ರಕ್ಷಿಸುವದಕ್ಕೆ ನೀಡಿದ್ದಾನೆ?

ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ , ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ . ನೋಡಿರಿ, ನಾನು ಯುಗದ ಸಮಾಪ್ತಿಯ ವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು.  (ಮತ್ತಾಯ 28:19-20)

ಯೇಸು ಬಿದ್ದು ಹೋಗಿರುವ ಲೋಕದ ಸ್ಥಿತಿಯನ್ನು ಅಪರಿಮಿತವಾದ ಅನುಕಂಪದಿಂದ ನೋಡಿದನು. ಆತನು ಮಾನವೀಯತೆಯನ್ನು ತನ್ನ ಮೇಲೆ ತೆಗೆದುಕೊಂಡನು ಇದರಿಂದಾಗಿ ತಾನು ಮಾನವಕುಲವನ್ನು ಸ್ಪರ್ಶಿಸಿ ಉನ್ನತಿಗೆ ಏರಿಸುವದಕ್ಕಾಗಿ. ಆತನು ತಪ್ಪಿಹೋದವರನ್ನು ಹುಡುಕಿ ರಕ್ಷಿಸುವದಕ್ಕಾಗಿ ಬಂದನು. ಆತನು ಮಾನವನ ಆಳವಾದ ಸಂಕಟ ಮತ್ತು

ವಿಪತ್ತುಗಳನ್ನು ತಲುಪಿದನು, ದೂಷಿತಗೊಂಡ ಭ್ರಷ್ಟತೆ, ಮತ್ತು ಕೆಳವರ್ಗದ ದುರ್ವ್ಯಸನದಿಂದ, ನೀತಿ ಭ್ರಷ್ಟಗೊಂಡ ಪಾಪಗಳಿಂದ, ಧರ್ಮಭ್ರಷ್ಟತೆಯಲ್ಲಿ ಸೈತಾನನೊಂದಿಗೆ ಒಂದಾಗಿರುವ ಮತ್ತು ಅವನನ್ನು ಆತನ ಸಿಂಹಾಸನದ ಮೇಲಿನ ಸ್ಥಾನಕ್ಕೆ ಏರಿಸುವ ಮನುಷ್ಯನನ್ನು ಇದ್ದ ಹಾಗೆ ಸ್ವೀಕರಿಸುತ್ತಾನೆ. ಆದರೆ ಆತನ ಕುರಿತು ಹೀಗೆ ಬರೆಯಲ್ಪಟ್ಟಿದೆ "ಆತನು ಸೋತುಹೋಗುವದಿಲ್ಲ ಇಲ್ಲವೇ ಅಧೈರ್ಯಪಡುವದಿಲ್ಲ." ಮತ್ತು ಆತನು ಸ್ವ-ನಿರಾಕರಣೆಯ ಮತ್ತು ಸ್ವ-ಬಲಿದಾನದ ಮಾರ್ಗದಲ್ಲಿ ನಾವು ಆತನ ಹೆಜ್ಜೆ ಜಾಡಿನಲ್ಲಿ ನಡೆಯಲು ಮಾದರಿಯನ್ನು ತೋರಿಸುತ್ತಾ ಮುಂದೆಕ್ಕೆ ನಡೆದನು.

ನಾವು ಯೇಸು ಕಾರ್ಯ ಮಾಡಿದಂತೆ ಮಾಡಬೇಕು , ನಮ್ಮ ಸ್ವಂತ ಸುಖವನ್ನು ಬಿಟ್ಟುಬಿಟ್ಟು, ಸೈತಾನನ ಆಮಿಷಗಳಿಂದ ದೂರವಾಗಿ, ತೊಂದರೆಗಳನ್ನು ಕಡೆಗಣಿಸಿ, ಸ್ವಾರ್ಥತೆಯನ್ನು ಹೇವರಿಸಿ ನಾವು ತಪ್ಪಿಹೋದವರನ್ನು ಹುಡುಕಿ ರಕ್ಷಿಸುವುದಾದರೆ, ಆತ್ಮಗಳನ್ನು ಕತ್ತಲೆಯಿಂದ ಬೆಳಕಿನೆಡೆಗೆ, ದೇವರ ಪ್ರೀತಿಯ ಸೂರ್ಯಪ್ರಕಾಶದೆಡೆಗೆ ತರುವವರಾಗುದ್ದೇವೆ. ನಾವು ಮುಂದಕ್ಕೆ ಹೋಗಲು ಮತ್ತು ಪ್ರತಿಯೊಂದು ಜೀವಿಗೆ ಸುವಾರ್ತೆಯನ್ನು ಸಾರಲು ನಿಯೋಜಿಸಲ್ಪಟ್ಟಿದ್ದೇವೆ. ನಾವು

ತಪ್ಪಿಹೋದವರಿಗೆ ಕ್ರಿಸ್ತನು ಪಾಪಗಳನ್ನು ಕ್ಷಮಿಸಿರುವ ಶುಭ ಸಂದೇಶವನ್ನು ತರಬೇಕು ಸೃಷ್ಟಿಯನ್ನು ನವೀಕರಿಸಬೇಕು, ಆತ್ಮಕ್ಕೆ ಆತನ ನೀತಿವಂತಿಕೆಯ ವಸ್ತ್ರವನ್ನು ಹೊಂದಿಸಬೇಕು, ಪಾಪಿಯನ್ನು ಸರಿಯಾದ ಮನಸಾಕ್ಷಿಗೆ ತರಬೇಕು ಮತ್ತು ಅವನಿಗೆ ಬೋಧಿಸಬೇಕು ಮತ್ತು ದೇವರೊಂದಿಗೆ ಕೆಲಸ ಮಾಡಲು ಯೋಗ್ಯರನ್ನಾಗಿ ಮಾಡಬೇಕು

(10) ನಾವು ಕ್ರಿಸ್ತನಲ್ಲಿ ನೆಲೆಗೊಂಡಿರುವಾಗ, ಆತನು ಪವಿತ್ರಾತ್ಮನ ಮೂಲಕ ನಾವು ಇತರರಿಗಾಗಿ ಪ್ರೀತಿಯಿಂದ ಕೆಲಸಮಾಡುವಂತೆ ಬಲವನ್ನು ಕೊಡಲು ಏನು ಮಾಡುತ್ತಾನೆ?

ಆತನಲ್ಲಿ ನೆಲೆಗೊಂಡವನಾಗಿದ್ದೇನೆ ಎಂದು ಹೇಳುವವನು ಕ್ರಿಸ್ತನು ನಡೆದಂತೆಯೇ ತಾನೂ ನಡೆಯುವದಕ್ಕೆ ಬದ್ಧನಾಗಿದ್ದಾನೆ. (1ಯೋಹಾನ 2:6).

ಕ್ರೈಸ್ತರ ನಡೆತೆ ತಮ್ಮ ಕರ್ತನ ನಡೆತೆಯಂತಿರಬೇಕು. ಆತನು ಅಳತೆಗೋಲನ್ನು ಸ್ಥಾಪಿಸಿದ್ದಾನೆ.ನಾವು ಅದರ ಸುತ್ತಲೂ ಓಡುತ್ತೇವೋ ಇಲ್ಲವೋ ನಮಗೇ ಬಿಟ್ಟದ್ದು. ನಮ್ಮ ಕರ್ತನು ಮತ್ತು ರಕ್ಷಕನು ತನ್ನ ಸಾಮ್ರಾಜ್ಯವನ್ನು, ತನ್ನ ಐಶ್ವರ್ಯವನ್ನು ಬದಿಗಿಟ್ಟು , ನಮ್ಮನ್ನು ಸಂಕಟದಿಂದ ರಕ್ಷಿಸುವದಕ್ಕಾಗಿ ಮತ್ತು ನಮ್ಮನ್ನು ತನ್ನ

ಹಾಗೆ ಮಾಡುವದಕ್ಕಾಗಿ ನಮ್ಮನ್ನು ಹುಡುಕಿ ಬಂದನು. ಆತನು ತನ್ನನ್ನು ತಗ್ಗಿಸಿಕೊಂಡು ನಮ್ಮ ಸ್ವರೂಪವನ್ನು ತೆಗೆದುಕೊಂಡನು ಇದರಿಂದಾಗಿ ನಾವು ಆತನಿಂದ ಕಲಿಯಲು ಶಕ್ತರಾಗುವಂತೆ ಮತ್ತು ಆತನ ಕರುಣೆಯ ಮತ್ತು ಸ್ವ-ನಿರಾಕಣೆಯ ಜೀವಿತವನ್ನು ನಕಲು ಮಾಡಲಿಕ್ಕಾಗುವಂತೆ , ಹಂತ ಹಂತವಾಗಿ ಆತನನ್ನು ಪರಲೋಕಕ್ಕೆ ಹಿಂಬಾಲಿಸಲಿಕ್ಕಾಗುವಂತೆ. ನೀವು ನಕಲಿಗೆ ಸರಿಸಮಾನರಾಗಲಾರಿರಿ; ಆದರೆ ನೀವು ಅದನ್ನು ಹೋಲಬಹುದು ಅದರಂತೆ "ನೀವು ನಿಮ್ಮ ಕರ್ತನಾದ ದೇವರನ್ನು ನಿಮ್ಮ ಪೂರ್ಣ ಹೃದಯದಿಂದ, ಪೂರ್ಣ ಪ್ರಾಣದಿಂದ ಮತ್ತು ಪೂರ್ಣ ಶಕ್ತಿಯಿಂದ ಮತ್ತು ಪೂರ್ಣ ಮನಸ್ಸಿನಿಂದ ಪ್ರೀತಿಸಬೇಕು ; ಮತ್ತು ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು. ಇಂಥಹ ಪ್ರೀತಿ ನಿಮ್ಮ ಹೃದಯದಲ್ಲಿ ನೆಲೆಯಾಗಿರಬೇಕು , ನೀವು ಈ ಲೋಕದ ಸಂಪತ್ತು ಮತ್ತು ಗೌರವವನ್ನು ಕೊಡಲು ಸಿದ್ಧರಿರಬೇಕು ಇದರಿಂದಾಗಿ ನೀವು ಒಂದು ಆತ್ಮವನ್ನು ಕ್ರಿಸ್ತನ ಸೇವೆಯಲ್ಲಿ ತೊಡಗಿಸಿಕೊಳ್ಳಲು ಪ್ರಭಾವಬೀರುವಿರಿ.

ನಾನು ವೇದವಾಕ್ಯವನ್ನು ಓದುತ್ತಿರುವ ಹಾಗೆ, ಒಡೆಯನು ಮತ್ತು ಸೃಷ್ಟಿಕರ್ತನು ಆದ ಕ್ರಿಸ್ತನು ನಾನು ನಿತ್ಯತ್ವದ ಐಶ್ವರ್ಯವನ್ನು ಹೊಂದಿಕೊಳ್ಳುವಂತೆ ಆತನು ಬಡವನಾದನು; ನಾನು

ಜೀವವನ್ನು ಹೊಂದಬೇಕೆಂದು ಆತನು ಸತ್ತನು; ಆತನು ನನಗೆ ಸೌಭಾಗ್ಯವನ್ನು ಮತ್ತು ತನ್ನ ರಾಜ್ಯಕ್ಕಾಗಿ ಅಮೂಲ್ಯವಾದ ಆತ್ಮಗಳ ರಕ್ಷಣೆಯಲ್ಲಿ ನಂಬಿಕೆಯನ್ನು ಆತನು ನೀಡುತ್ತಾನೆ.

ದುಂಡು ಸುತ್ತಿರಿ: ಹೌದು   ನಿರ್ಧರಿಸಿಲ್ಲ

ನಾನು ಶ್ರೇಷ್ಠ ಗುರುವಾದ ಕ್ರಿಸ್ತನ ಪ್ರೀತಿಯ ಉದಾಹರಣೆಯಾಗಿ ಹಿಂಬಾಲಿಸುವದನ್ನು ಆಯ್ಕೆ ಮಾಡಿಕೊಳ್ಳುತ್ತೇನೆ ಮತ್ತು ಹೀಗೆ ಆತನ ಮಕ್ಕಳಿಗೆ ಕಾರ್ಯರೂಪದಲ್ಲಿ ಬರುವ ಪ್ರಾಯೋಗಿಕ ಪ್ರೀತಿಯು ಹೇಗೆ ಕಂಡುಬರುತ್ತದೆ ಎಂಬುದನ್ನು ಪ್ರದರ್ಶಿಸುತ್ತೇನೆ. ನಾನು ಆತನ ಪ್ರೀತಿಯ ಪತ್ರವಾಗಿರಲು ಮತ್ತು ಅದನ್ನು ಲೋಕಕ್ಕೆ ರವಾನಿಸಲು ಬಯಸುತ್ತೇನೆ.

ದುಂಡು ಸುತ್ತಿರಿ: ಹೌದು  ನಿರ್ಧರಿಸಿಲ್ಲ

ನಾನು ಪ್ರೀತಿಯ ಬಲವನ್ನು ಅರಿತು ಕೊಳ್ಳುತ್ತಿರುವ  ಮತ್ತು ಆತನ ಮಾದರಿಯನ್ನು ನೋಡುತ್ತಿರುವ ಹಾಗೆ , ಆತನು ಪ್ರೀತಿಸಿದಂತೆ ಇತರರನ್ನು ಪ್ರೀತಿಸುವದು ನನ್ನ ಹೃದಯದ ಬಯಕೆಯಾಗಿದೆ.  ಅದು ದೇವರು  ತನ್ನ ಉದ್ದೇಶವನ್ನು ಪ್ರಗತಿಯತ್ತ ನಡೆಸಲು ನನ್ನ ಮೇಲೆ ಅವಲಂಬಿತನಾಗಿದ್ದಾನೆ ಎಂದಲ್ಲ, ಆತನು ಈ ಸೌಭಾಗ್ಯವನ್ನು

ನನಗೆ ನೀಡಿದ್ದಾನೆ, ನನ್ನಲ್ಲಿ ಕರುಣೆಯ ಆತ್ಮವನ್ನು ಬೆಳೆಸುವದಕ್ಕಾಗಿ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ನಾನು ಕ್ರಿಸ್ತನಲ್ಲಿ ಪ್ರತಿನಿತ್ಯ ನೆಲೆಯಾಗಿರುವದನ್ನು ಬಯಸುತ್ತೇನೆ ಇದರಿಂದಾಗಿ ನಾನು ಆತನ ಪವಿತ್ರಾತ್ಮನಿಂದ ತುಂಬಲ್ಪಟ್ಟು ಮತ್ತು ಆತನ ಕೈ ಮತ್ತು ಕಾಲುಗಳಾಗಿ ತಪ್ಪಿ ಹೋದವರ ಮತ್ತು ದೈವಿಕರಾಗಿರುವ ಲೋಕದಲ್ಲಿ ನಿರಂತರವಾಗಿ ಸುವಾರ್ತೆಯನ್ನು ಕೊಂಡೊಯ್ಯುತ್ತೇನೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ




# ಪಾಠ 17
# ಪ್ರಾಯೋಗಿಕವಾಗಿರುವ ಪ್ರೀತಿ

ಕ್ರಿಸ್ತನಿಂದ ಆತನ ಹಿಂಬಾಲಕರಲ್ಲಿ ಯಾವ ಬಹುಮಾವನ್ನು ದೇವರು ನೋಡಲು ಬಯಸುತ್ತಾನೆ ಮತ್ತು ಅದು ಆತನ ದೃಷ್ಟಿಯಲ್ಲಿ ಅಮೂಲ್ಯವಾದ ಸಂಪತ್ತಾಗಿದೆ?
ಸಾತ್ವಿಕವಾದ ಶಾಂತಮನಸ್ಸು ಎಂಬ ಒಳಗಣ ಭೂಷಣವೇ ನಿಮ್ಮ ಅಲಂಕಾರವಾಗಿರಲಿ, ಇದು ಶಾಶ್ವತವಾದದ್ದೂ ದೇವರ ದೃಷ್ಟಿಗೆ ಬಹು ಬೆಲೆಯುಳ್ಳದ್ದು ಆಗಿದೆ. (1ಪೇತ್ರ 3:5)

ಸಾತ್ವಿಕ ಮತ್ತು ಶಾಂತ ಮನಸ್ಸು ಆಭರಣ ಕ್ರಿಸ್ತನ ಬಹುಮಾನ, ಇದು ಆತನಿಂದ ಅಧಿಕಾರಯುತವಾಗಿ

ಪ್ರಕಟಿಸಲ್ಪಟ್ಟಿದೆ ಶ್ರೇಷ್ಠ ಬೆಲೆಯನ್ನು ಹೊಂದಲು ಯಾರು ತಪ್ಪನ್ನು ಮಾಡುವದಿಲ್ಲವೋ ಅವರಿಗಾಗಿ. ನಮ್ಮಲ್ಲಿ ಪ್ರತಿಯೊಬ್ಬರು ನಮ್ಮಷ್ಟಕ್ಕೆ ನಾವೇ ಇದನ್ನು ದೇವರಿಂದ ಹುಡುಕುತ್ತ ಅದರ ಬೆಲೆಯನ್ನು ಕಂಡುಕೊಳ್ಳಬೇಕು. ಹ್ಯಾಗೂ, ಮನುಷ್ಯರು ನಮ್ಮನ್ನು ಅಂದಾಜು ಮಾಡಬಹುದು. ನಾವು ಈ ಆಭರಣವನ್ನು ಧರಿಸಿದರೆ ನಾವು ಕ್ರಿಸ್ತನೊಂದಿಗೆ ಆತನ ಶಿಷ್ಯರು ಎಂಬ ಹೆಸರನ್ನು ಧರಿಸಿಕೊಳ್ಳುತ್ತೇವೆ. ನಾವು ಉನ್ನತನಾದವನಿಂದ ಗೌರವಿಸ ಲ್ಪಟ್ಟಿದ್ದೇವೆ;  ನಾವು ಧರಿಸುವ ಆಭರಣವು ಆತನ ದೃಷ್ಟಿಯಲ್ಲಿ ಬಹು ಬೆಲೆಯುಳ್ಳದ್ದಾಗಿದೆ. ಈ ಅಮೂಲ್ಯವಾದ ಹರಳನ್ನು ನಾವು ಹುಡುಕಬೇಕು.

(2) ಇತರರರನ್ನು ಪ್ರೀತಿಸುವ ವಿಷಯಕ್ಕೆ ಬರುವಾಗ ಕರ್ತನು ನಮ್ಮ ತುಟಿಗಳ ಸೇವೆಯನ್ನು ಬಯಸುವದಿಲ್ಲ, ಆತನು ನಾವು ಹೇಗೆ ಜೀವಿಸಬೇಕು ಎಂದು ಹೇಳಿದ್ದೇನೆ ಎಂದು ಕೇಳುತ್ತಾನೆ? ಪ್ರಿಯರಾದ ಮಕ್ಕಳೇ, ನಾವು ಬರೀಮಾತಿನಿಂದಾಗಾಲಿ ಬಾಯುಪಚಾರದಿದಾಗಲಿ ಪ್ರೀತಿಸುವವರಾಗಿರಬಾರದು; ನಿಮ್ಮ ಪ್ರೀತಿಯು ಕೃತ್ಯದಲ್ಲಿಯೂ ಸತ್ಯದಲ್ಲಿಯೂ ತೋರಬೇಕು. (1ಯೋಹಾನ 3:18).

“ಬಾಯಿ ಮಾತಿನಿಂದ ಪ್ರೀತಿಸುವದು ಬೇಡ” ಅಪೋಸ್ತಲನು ಬರೆಯುತ್ತಾನೆ, “ಕ್ರಿಯೆಯಲ್ಲಿಯೂ ಸತ್ಯದಲ್ಲಿಯೂ” ಕ್ರಿಸ್ತೀಯ ಗುಣಲಕ್ಷಣದ ಪರಿಪೂರ್ಣತೆ ಯಾವಾಗ ಇತರರಿಗೆ ಸಹಾಯ ಮಾಡುವ ಮತ್ತು ಆಶೀರ್ವದಿಸುವ ಬಯಕೆ ನಮ್ಮೊಳಗಿಂದ ನಿರಂತರವಾಗಿ ಉಕ್ಕುತ್ತದೋ ಆಗ ಹೊಂದಿಕೊಳ್ಳಬಹುದು. ಪ್ರೀತಿಯ ಈ ವಾತಾವರಣ ವಿಶ್ವಾಸಿಗಳ ಆತ್ಮವನ್ನು ಸುತ್ತಿಕೊಳ್ಳುವಾಗ ಆತನನ್ನು ಜೀವಿತದಿಂದ ಜೀವಿತವನ್ನು ರಕ್ಷಿಸುವವನನ್ನಾಗಿ ಮಾಡುತ್ತದೆ ಮತ್ತು ದೇವರು ಅವನ ಈ ಕಾರ್ಯವನ್ನು ಆಶೀರ್ವದಿಸುವಂತೆ ಮಾಡುತ್ತದೆ. ದೇವರ ಶ್ರೇಷ್ಠವಾದ ಪ್ರೀತಿ ಮತ್ತು ಪರಸ್ಪರರಲ್ಲಿ ನಿಸ್ವಾರ್ಥವಾದ ಪ್ರೀತಿ- ನಮ್ಮ ಪರಲೋಕದ ತಂದೆಯು ನೀಡುವ ಉತ್ತಮವಾದ ಬಹುಮಾನವಾಗಿದೆ. ಈ ಪ್ರೀತಿಯು ಒಂದು ಬಯಕೆಯಲ್ಲ ಬದಲಾಗಿ ದೈವೀಕ ತತ್ವವಾಗಿದೆ, ಶಾಶ್ವತವಾದ ಬಲವಾಗಿದೆ. ಪ್ರತಿಷ್ಟೆಯಿಲ್ಲದ ಹೃದಯ ಇದನ್ನು ಹುಟ್ಟಿಸಲು ಅಥವಾ ಉತ್ಪಾದಿಸಲು ಸಾಧ್ಯವಿಲ್ಲ. ಯಾವ ಹೃದಯದಲ್ಲಿ ಯೇಸು ಆಳುತ್ತಾನೋ ಅಲ್ಲಿ ಮಾತ್ರ ಇದು ಕಂಡು ಬರುತ್ತದೆ. “ಆತನು ನಮ್ಮನ್ನು ಮೊದಲು ಪ್ರೀತಿಸಿದ್ದರಿಂದ ನಾವು ಆತನನ್ನು ಪ್ರೀತಿಸುತ್ತೇವೆ.” ದೈವೀಕ ಕೃಪೆಯಿಂದ ನವೀಕರಿಸಲ್ಪಟ್ಟ ಹೃದಯದಲ್ಲಿ

ಪ್ರೀತಿಯು ಕ್ರಿಯೆಯ ತತ್ವದಲ್ಲಿ ಪ್ರಾಮುಖ್ಯವಾಗಿದೆ. ಅದು ನಡೆತೆಯನ್ನು ಬದಲಾಯಿಸುತ್ತದೆ, ಬಯಕೆಗಳನ್ನು ನಿಯಂತ್ರಿಸುತ್ತದೆ, ದಾಹಗಳನ್ನು ನಿಯಂತ್ರಿಸುತ್ತದೆ ಮತ್ತು ಮಮತೆಯನ್ನು ಸಮರ್ಥಗೊಳಿಸುತ್ತದೆ. ಈ ಪ್ರೀತಿ ಆತ್ಮದಲ್ಲಿ ಆನಂದಿಸುವಾಗ, ಜೀವಿತವನ್ನು ರುಚಿಗೊಳಿಸುತ್ತದೆ ಮತ್ತು ಸುತ್ತಲೂ ನವೀಕರಿಸುವ ಪ್ರಭಾವವನ್ನು ಹರಡುತ್ತದೆ.

(3) ನಾವು ಲೋಕದಲ್ಲಿ ಕ್ರಿಸ್ತನ ಪ್ರೀತಿಯ ನಿಯೋಗವನ್ನು ಕೊಂಡೊಯ್ಯಲು ಸಂಕ್ಷಿಪ್ತವಾಗಿ ಈ ವಚನಗಳಲಿ ವರ್ಣಿಸಿದ ಎಂಟು ಪ್ರಾಯೋಗಿಕ ಮಾರ್ಗಗಳನ್ನು ವರ್ಣಿಸಿರಿ?

ಕೇಡಿನ ಬಂಧಗಳನ್ನು ಬಿಚ್ಚುವದು, ನೊಗದ ಕಣ್ಣಿಗಳನ್ನು ಕಳಚುವದು, ಜಜ್ಜಿಹೋದವರನ್ನು ಬಿಡುಗಡೆಮಾಡುವದು, ನೊಗಗಳನ್ನೆಲ್ಲಾ ಮುರಿಯುವದು, ಹಸಿದವರಿಗೆ ಅನ್ನವನ್ನು ಹಂಚುವದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವದು, ಬೆತ್ತಲೆಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖ ತಪ್ಪಿಸಿ ಕೊಳ್ಳದಿರುವದು, ಇವುಗಳೇ ನನಗೆ ಇಷ್ಟವಾದ ಉಪವಾಸ ವ್ರತವಲ್ಲವೇ? (ಯೆಶಾಯ 58:6-7).

ದೇವರು ನಾವೆಲ್ಲರೂ ಸ್ವ-ಬಲಿದಾನದ ಕೆಲಸಗಾರರು ಆಗಬೇಕೆಂದು ಬಯಸುತ್ತಾನೆ. ಪ್ರತಿಯೊಂದು ಸತ್ಯದ ಭಾಗ ನಮ್ಮ ಪ್ರತಿನಿತ್ಯದ ಜೀವಿತದಲ್ಲಿ ಪ್ರಾಯೋಗಿಕ ಅನ್ವಯಿಸುವಿಕೆಯನ್ನು ಹೊಂದಿರುತ್ತದೆ. ಕರ್ತನ ವಾಕ್ಯವನ್ನು ಆಲಿಸುವವರು ಮತ್ತು ಅದರಂತೆ ನಡೆಯುವವರು ಧನ್ಯರು. ಆಲಿಸುವದು ಮಾತ್ರ ಸಾಲುವದಿಲ್ಲ ನಾವು ಕಾರ್ಯರೂಪದಲ್ಲಿ ತರಬೇಕು, ನಾವು ಕೆಲಸ ಮಾಡಬೇಕು. ಆಜ್ಞೆಗಳನ್ನು ಅನುಸರಿಸಿ ನಡೆಯುವದರಲ್ಲಿ ದೊಡ್ಡ ಬಹುಮಾನವಿದೆ.  ಯಾರು ಬಡವರಿಗೆ, ಕಷ್ಟದಲ್ಲಿರುವವರಿಗೆ ಮತ್ತು ದುರ್ದೈವಿಗಳಿಗೆ,ಕೇವಲ ಕಷ್ಟದಿಂದ ಬಿಡುಗಡೆಗೊಳಿಸುವದಲ್ಲ ಬದಲಾಗಿ ಅವರ ಸ್ವಂತ ಸಂತೋಷಕ್ಕಾಗಿ ಕೊಡುಗೆಯನ್ನು ನೀಡುತ್ತಾರೋ ಮತ್ತು ಆತ್ಮ ಮತ್ತು ದೇಹದ ಆರೋಗ್ಯವನ್ನು ಕಾಪಾಡುವದರಲ್ಲಿ ನಿರತರಾಗಿದ್ದಾರೋ ತಮ್ಮ ಪರೋಪಕಾರವನ್ನು ಕರುಣೆ ಮತ್ತು ಅನುಕಂಪದ ಕ್ರಿಯೆಗಳಿಂದ ಪ್ರಾಯೋಗಿಕ ಪ್ರದರ್ಶನವನ್ನು ನೀಡುತ್ತಾರೆ. ಯೆಶಾಯನು  ದೇವರು ಸ್ವೀಕರಿಸುವ ಮತ್ತು  ಇದನ್ನು ಮಾಡುವಾಗ ತನ್ನ ಜನರನ್ನು ಆಶೀರ್ವದಿಸುವದನ್ನು ಹೀಗೆ ಸರಳವಾಗಿ ವರ್ಣಿಸಿದ್ದಾನೆ.

(4) ನಾವು ಪ್ರೀತಿಯಿಂದ ಮತ್ತು ಕ್ರಿಸ್ತನ ಆತ್ಮದಿಂದ ತುಂಬಲ್ಪಟ್ಟಿದ್ದರೆ ಪ್ರೀತಿಯ

ಯಾವ ಗುಣಲಕ್ಷಣಗಳನ್ನು ಇತರ ವಿಶ್ವಾಸಿಗಳೊಂದಿಗೆ ನಮ್ಮ ಸಂಬಂಧದಲ್ಲಿ ನಾವು ಪ್ರದರ್ಶಿಸುತ್ತೇವೆ?

***ಐಕ್ಯಮತ್ಯವುಳ್ಳವರಾಗಿದ್ದು ನನ್ನ ಸಂತೋಷವನ್ನು ಪರಿಪೂರ್ಣ ಮಾಡಿರಿ. ನಿಮ್ಮೆಲ್ಲರಲ್ಲಿ ಒಂದೇ ಪ್ರೀತಿಯಿರಲಿ; ಅನ್ಯೋನ್ಯ ಭಾವವುಳ್ಳವರೂ ಒಂದೇ ಗುರಿಯಿಟ್ಟುಕೊಂಡವರೂ ಆಗಿರಿ. (ಫಿಲಿಪ್ಪಿ 2:2).***

ಕ್ರಿಸ್ತನನ್ನು ಹಿಂಬಾಲಿಸುತ್ತೇನೆ ಎಂದು ಹೇಳಿಕೊಳ್ಳುವ ಪ್ರತಿಯೊಬ್ಬನು ಇತರರನ್ನು ತನಗಿಂತ ಶ್ರೇಷ್ಠರೆಂದು ಎಣಿಸಲಿ. ಒಟ್ಟಾಗಿ ಮುನ್ನಡೆಯಿರಿ ಐಕ್ಯತೆಯಲ್ಲಿ ಬಲವಿದೆ ಮತ್ತು ಜಯವಿದೆ; ವೈಷಮ್ಯ ಮತ್ತು ವಿಭಾಗಳಾಗಲ್ಲಿ ಬಲಹೀನತೆ ಮತ್ತು ಸೋಲಿದೆ. ಈ ಮಾತುಗಳು ನನಗೆ ಪರಲೋಕದಿಂದ ತಿಳಿಸಲ್ಪಟ್ಟಿವೆ ... ಪ್ರತಿಯೊಬ್ಬರೂ ಕ್ರಿಸ್ತನ ಪ್ರಾರ್ಥನೆಗೆ ಉತ್ತರವನ್ನು ಹುಡುಕೋಣ. ಅವರೆಲ್ಲರೂ ಒಂದಾಗಿರಬೇಕೆಂತಲೂ ತಂದೆಯೇ, ನೀನು ನನ್ನಲ್ಲಿಯೂ ನಾನು ನಿನ್ನಲ್ಲಿಯೂ ಇರುವ ಪ್ರಕಾರ ಅವರೂ ನಮ್ಮಲ್ಲಿ ಇರಬೇಕೆಂತಲೂ ಕೇಳಿಕೊಳ್ಳುತ್ತೇನೆ." ಓ ಎಂಥ ಐಕ್ಯತೆ ಇದಾಗಿದೆ! ಮತ್ತು ಕ್ರಿಸ್ತನು ಹೇಳುತ್ತಾನೆ. "ಇದರಿಂದಾಗಿ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು."

(5) ನಾವು ಕ್ರಿಸ್ತನ ಪ್ರೀತಿಯಲ್ಲಿ ನೆಲೆಗೊಳ್ಳುವಾಗ ಮತ್ತು ಆತನ ಪ್ರೀತಿ ನಮ್ಮನ್ನು ಅನುಸರಿಸುವಾಗ, ನಾವು ಇತರರರನ್ನು ಹೇಗೆ ನಡೆಸಿಕೊಳ್ಳುತ್ತೇವೆ?

**ನಿಮ್ಮ ಪ್ರೀತಿಯು ನಿಷ್ಕಪಟವಾಗಿರಲಿ, ಕೆಟ್ಟತನಕ್ಕೆ ಹೇಸಿಕೊಂಡು ಒಳ್ಳೇದನ್ನು ಬಿಗಿಯಾಗಿ ಹಿಡಿದುಕೊಳ್ಳಿರಿ. ಕ್ರೈಸ್ತಸಹೋದರರು ಅಣ್ಣತಮ್ಮಂದಿರೆಂದು ಒಬ್ಬರನ್ನೊಬ್ಬರು ಪ್ರೀತಿಸಿರಿ. ಮಾನ ಮರ್ಯಾದೆಯನ್ನು ಕೊಡುವದರಲ್ಲಿ ಒಬ್ಬರಿಗಿಂತ ಒಬ್ಬರು ಮುಂದಾಗಿರಿ. (ರೋಮ 12:9-10)**

ಶೋಧನೆಗೆ ಒಳಗಾದವರಿಗೆ ಮತ್ತು ತಪ್ಪುಮಾಡುವವರಿಗೆ ರಕ್ಷಕನ ಮಾದರಿ ನಮ್ಮೆಡೆಗೆ ಪ್ರಕಟಿಸಿದ ಅದೇ ಆಸಕ್ತಿ ಮತ್ತು ಕೋಮಲತೆ ಮತ್ತು ದೀರ್ಘಶಾಂತಿ ನಮ್ಮ ಸೇವೆಯ ಅಳತೆಗೋಲಾಗಿರಬೇಕು. “ನಾನು ನಿಮ್ಮನ್ನು ಪ್ರೀತಿಸಿದಂತೆ” ಆತನು ಹೇಳುತ್ತಾನೆ, “ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ” ಯೋಹಾನ *13:34*. ಒಂದುವೇಳೆ ಕ್ರಿಸ್ತನು ನಮ್ಮೊಳಗೆ ವಾಸಿಸುತ್ತಿದ್ದಲ್ಲಿ, ನಾವು ಆತನ ನಿಸ್ವಾರ್ಥ ಪ್ರೀತಿಯನ್ನು ಯಾರಿಗೆ ತೋರಿಸಬೇಕೋ ಅವರಿಗೆ ಪ್ರಕಟಿಸುತ್ತೇವೆ. ನಾವು ಅನುಕಂಪ ಮತ್ತು ಸಹಾಯದ ಅಗತ್ಯತೆಯಿರುವ

ಪುರುಷರು ಮತ್ತು ಸ್ತ್ರೀಯರನ್ನು ನೋಡುವಾಗ ನಾವು "ಅವರು ಯೋಗ್ಯರೋ? " ಎಂದು ಕೇಳುವದಿಲ್ಲ ಬದಲಾಗಿ "ನಾನು ಅವರಿಗೆ ಹೇಗೆ ಸಹಾಯ ಮಾಡಲಿ?" ಎಂದು ಕೇಳುತ್ತೇವೆ.

ಭೂಲೋಕದ  ಪ್ರತಿಯೊಂದು ಆಶೀರ್ವಾದ ನಮಗೆ ಅಪರಿಮಿತ ಬೆಲೆಯನ್ನು ನಮ್ಮ ಪರವಾಗಿ ತೆತ್ತಿರುವದರಿಂದ ದೊರೆತಿದೆ. ಅದು ಮನುಷ್ಯನು ನಾಶವಾಗಬಾರದು ನಿತ್ಯಜೀವವನ್ನು ಪಡೆಯಬೇಕೆಂದು ಅವನನ್ನು ವಿಮೋಚಿಸುವದಕ್ಕೆ ಇಷ್ಟು ದೊಡ್ಡ ಬೆಲೆಯನ್ನು ತೆತ್ತಿರುವುದಾದರೆ, ಆತನು ತನ್ನ ಅಮೂಲ್ಯ ಪ್ರಾಣವನ್ನು ಯಾರನ್ನು ರಕ್ಷಿಸುವದಕ್ಕಾಗಿ ನೀಡಿದ್ದಾನೋ ಅವರನ್ನು ರಕ್ಷಿಸುವದಕ್ಕಾಗಿ  ನಾವು ಕ್ರಿಸ್ತನ ಸಹ ಕೆಲಸಗಾರಾಗಿರುವದು  ನಮ್ಮ ಸೌಭಾಗ್ಯವಾಗಿದೆ  ಎಂದು ನಾವು ಆನಂದಿಸುವದು ಹೇಗೆ! ಕರ್ತನಾದ ಯೇಸು ಯಾರಿಗಾಗಿ ಇಂಥ ದೊಡ್ಡ ಬಲಿದಾನವನ್ನು ನೀಡಿದ್ದಾನೋ ಅವರನ್ನು ಪ್ರೀತಿಸುತ್ತಾನೆ. ಆತನು ತನ್ನ ಸ್ವಂತ ಅತ್ಯಂತ ಅಮೂಲ್ಯವಾದ ಜೀವವನ್ನು ಯಾರು ಆತನನ್ನು ನಂಬುತ್ತಾರೋ  ಅವರಿಗೆ ಜೀವವನ್ನು ಮತ್ತು ಅಮರತ್ವವನ್ನು  ಬೆಳಕಿಗೆ ತರಲು ನೀಡಿದನು. "ಒಬ್ಬನೇ ಸತ್ಯದೇವರಾಗಿರುವ ನಿನ್ನನ್ನೂ ನೀನು ಕಳುಹಿಸಿಕೊಟ್ಟ

ಯೇಸು ಕ್ರಿಸ್ತನನ್ನೂ ತಿಳಿಯುವದೇ ನಿತ್ಯಜೀವವು." (ಯೋಹಾನ 17:3). ಯಾರು ಕ್ರಿಸ್ತನನ್ನು ಸ್ವೀಕರಿಸುತ್ತಾರೋ ಅವರು ಆತನೊಂದಿಗೆ ಸಹಭಾಗಿತ್ವದಲ್ಲಿದ್ದಾರೆ ಮತ್ತು ಅವರು ತಮ್ಮ ಜೀವಿತಕಾರ್ಯದಲ್ಲಿ ತಪ್ಪುಮಾಡುವದಿಲ್ಲ. ಅವರು ಕ್ರಿಸ್ತನು ಮಾತಾಡಿದ ಮಾತುಗಳಿಗೆ ಲಕ್ಷಕೊಡುತ್ತಾರೆ. ಅವರು ಪವಿತ್ರಾತ್ಮನಿಂದ ನಡೆಸಲ್ಪಡುತ್ತಾರೆ ಮತ್ತು ಕ್ರಿಸ್ತನ ಜೀವಿತದಲ್ಲಿ ಪ್ರಕಟವಾದ ಪ್ರೀತಿ ಮತ್ತು ಕೃಪೆಯನ್ನು ಪುಟಿಸುತ್ತಾರೆ. ಅವರು ಪವಿತ್ರಾತ್ಮನಿಂದ ನಡೆಸಲ್ಪಡುತ್ತಾರೆ ಮತ್ತು ದೇವರ ಅಗತ್ಯತೆಗಳಿಗೆ ಹೆಚ್ಚು ಹೆಚ್ಚು ಜ್ಞಾನಿಗಳಾಗುತ್ತಾರೆ ಮತ್ತು ಕ್ರಿಸ್ತನು ತನ್ನ ಸಂಪರ್ಕದಲ್ಲಿ ಬಂದಂಥವರಿಗೆ ಪ್ರೀತಿಯನ್ನು ಮತ್ತು ಕೃಪೆಯನ್ನು ಪ್ರಕಟಿಸಿದಂತೆ ಅವರೂ ಸಹ ಪ್ರಕಟಿಸುತ್ತಾರೆ.

(6) ನಾವು ಕ್ರಿಸ್ತನು ತಂದೆಯೊಂದಿಗೆ ಐಕ್ಯತೆಯಲ್ಲಿರುವಂತೆ ಕ್ರಿಸ್ತನೊಂದಿಗೆ ಐಕ್ಯತೆಯಲ್ಲಿರುವಾಗ ಈ ಶಿಷ್ಯತ್ವವು ಲೋಕಕ್ಕೆ ಹೇಗೆ ಪ್ರಕಟವಾಗುತ್ತದೆ?

*ನಿಮ್ಮೊಳಗೆ ಒಬ್ಬರ ಮೇಲೊಬ್ಬರಿಗೆ ಪ್ರೀತಿಯಿದ್ದರೆ ಎಲ್ಲರೂ ನಿಮ್ಮನ್ನು ನನ್ನ ಶಿಷ್ಯರೆಂದು ತಿಳುಕೊಳ್ಳುವರು ಅಂದನು* (ಯೋಹಾನ 13:35)

ಕ್ರಿಸ್ತನು ಮತ್ತು ಆತನ ಜನರ
ಮಧ್ಯದಲ್ಲಿರುವ ಅನ್ಯೋನ್ಯತೆ ಅದು
ಜೀವಿಸುವ, ಸತ್ಯವಾದ ಮತ್ತು ಬಿದ್ದು
ಹೋಗದ ತಂದೆ ಮತ್ತು ಮಗನ
ಮಧ್ಯದಲ್ಲಿರುವ ಪ್ರೀತಿಯನ್ನು
ಹೋಲುವಂತ ಐಕ್ಯತೆಯಾಗಿದೆ. ಈ
ಐಕ್ಯತೆಯು ನಮ್ಮೊಳಗೆ ವಾಸಿಸುವ
ಪವಿತ್ರಾತ್ಮನ ಫಲವಾಗಿದೆ. ದೇವರ
ನಿಜವಾದ ಎಲ್ಲಾ ಮಕ್ಕಳೂ
ಕ್ರಿಸ್ತನೊಂದಿಗೆ ಮತ್ತು ತಮ್ಮ
ಸಹೋದರರೊಂದಿಗೆ ತಮ್ಮ
ಅನ್ಯೋನ್ಯತೆಯನ್ನು ಪ್ರಕಟಿಸುತ್ತಾರೆ.
ಯಾರ ಹೃದಯದಲ್ಲಿ ಕ್ರಿಸ್ತನು
ವಾಸಿಸುತ್ತಾನೋ ಅವರು ಸಹೋದರ
ಪ್ರೀತಿಯ ಫಲವನ್ನು ಕೊಡುತ್ತಾರೆ.
ಅವರು ದೇವರ ಕುಟುಂಬದ ಸದಸ್ಯರಾಗಿ
ಅವರು ಹೃದಯದಲ್ಲಿ
ಇಟ್ಟುಕೊಳ್ಳುತ್ತಾರೆ ಮತ್ತು ಕ್ರಿಸ್ತೀಯ
ಪ್ರೀತಿಯನ್ನು ಮತ್ತು
ಅನ್ಯೋನ್ಯತೆಯನ್ನು ಆತ್ಮದಲ್ಲಿ,
ಮಾತಿನಲ್ಲಿ ಮತ್ತು ಕ್ರಿಯೆಯಲ್ಲಿ
ಶಾಶ್ವತಪಡಿಸಲು ಪ್ರತಿಷ್ಟಿಸಿಕೊಳ್ಳುತ್ತಾರೆ.

ದೇವರ ಮಕ್ಕಳಾಗಿರಲು,
ರಾಜವಂಶಸ್ಥರಾಗಿರುವದು ಎಂದರೆ
ಅನೇಕ ಕಲ್ಪನೆಗಳಿಗಿಂತ ಹೆಚ್ಚಾಗಿದೆ.
ಯಾರು ದೇವರಿಂದ ಮಕ್ಕಳೆಂದು
ಪರಿಗಣಿಸಲ್ಪಟ್ಟಿದ್ದಾರೋ ಅವರು
ಕ್ರಿಸ್ತನಂತ ಪ್ರೀತಿಯನ್ನು
ಒಬ್ಬರಿಗೊಬ್ಬರು ಪ್ರಕಟಿಸುತ್ತಾರೆ.
ಅವರು ಒಂದು ಉದ್ದೇಶ ಮತ್ತು

ಕಾರ್ಯಕ್ಕಾಗಿ ಜೀವಿಸುತ್ತಾರೆ—ಲೋಕದಲ್ಲಿ ಕ್ರಿಸ್ತನ ಸರಿಯಾದ ಪ್ರತಿನಿಧಿತ್ವ, ತಮ್ಮ ಪ್ರೀತಿ ಮತ್ತು ಐಕ್ಯತೆಯ ಮೂಲಕ ಅವರು ಲೋಕಕ್ಕೆ ತಾವು ದೈವೀಕ ಅರ್ಹತೆಗಳನ್ನು ಹೊಂದಿದವರು ಎಂದು ತೋರಿಸುತ್ತಾರೆ. ತಮ್ಮ ಪ್ರೀತಿಯ ಘನತೆ ಮತ್ತು ಸ್ವ-ನಿರಾಕರಣೆಯಿಂದಾಗಿ ಅವರು ತಮ್ಮ ಸುತ್ತಲೂ ಇರುವವರಿಗೆ ಅವರು ತಾವು ರಕ್ಷಕನ ನಿಜವಾದ ಹಿಂಬಾಲಕರು ಎಂದು ತೋರಿಸುತ್ತಾರೆ. “ನಿಮಗೆ ಒಬ್ಬರ ಮೇಲೆ ಒಬ್ಬರಿಗೆ ಪ್ರೀತಿ ಇದ್ದರೆ, ಇದರ ಮೂಲಕ ಎಲ್ಲಾ ಮನುಷ್ಯರು  ನೀವು ನನ್ನ ಶಿಷ್ಯರು ಎಂದು ತಿಳಿದುಕೊಳ್ಳುವರು.”

(7) ಕ್ರಿಸ್ತನಂತ ಪ್ರೀತಿಯಲ್ಲಿ ನಾವು, ದಯೆಯ ಕಾರ್ಯಗಳನ್ನು ತೋರಿಸುವುದಾದರೆ ಮತ್ತು ಇತರರಿಗೆ ಪ್ರೋತ್ಸಾಹದ ಮಾತುಗಳನ್ನು ಮಾತಾಡಿದರೆ ಅದನ್ನು ಯಾವುದಕ್ಕೆ ಹೋಲಿಸಲಾಗಿದೆ?

ಸಮಯೋಚಿತವಾದ ಮಾತುಗಳು ಬೆಳ್ಳಿಯ ನಕಾಸಿಯಲ್ಲಿ ಖಚಿತವಾದ ಬಂಗಾರದ ಹಣ್ಣುಗಳಿಗೆ ಸಮಾನವಾಗಿವೆ. (ಜ್ಞಾನೋಕ್ತಿ 25:1)

ಕ್ರಿಸ್ತನು ಪ್ರೀತಿಸಿದಂತೆ ಪ್ರೀತಿಸಬೇಕು ಎಂದರೆ ಎಲ್ಲಾ ಸಮಯದಲ್ಲಿ ಮತ್ತು ಎಲ್ಲಾ ಸ್ಥಳಗಳಲ್ಲಿ ನಿಸ್ವಾರ್ಥವನ್ನು

ಪ್ರಕಟಿಸಬೇಕು, ಕರುಣೆಯ ಪದಗಳು ಮತ್ತು ಮಧುರವಾದ ನೋಟದ ಮೂಲಕ ಇದನ್ನು ನೀಡುವವರು ಯಾವ ಬೆಲೆಯನ್ನೂ ನೀಡಬೇಕಾಗಿಲ್ಲ ಆದರೆ ಅವರು ಆತ್ಮವನ್ನು ಮುತ್ತಿಕೊಳ್ಳುವ ಸುವಾಸನೆಯನ್ನು ಬಿಟ್ಟುಹೋಗುತ್ತಾರೆ. ಅದರ ಪರಿಣಾಮವನ್ನು ಎಂದಿಗೂ ಅಂದಾಜುಮಾಡಲು ಆಗುವದಿಲ್ಲ. ಅವು ಹೊಂದಿಕೊಳ್ಳುವವನಿಗೆ ಮಾತ್ರವಲ್ಲ ಕೊಡುವವನಿಗೆ ಸಹ ಆಶೀರ್ವಾದವಾಗಿರುತ್ತವೆ; ಯಾಕಂದರೆ ಅವು ಆತನ ಮೇಲೆ ಪ್ರತಿಕ್ರಿಯಿಸುತ್ತವೆ. ಯಥಾರ್ಥವಾದ ಪ್ರೀತಿ ಪರಲೋಕ ಮೂಲದ ಅಮೂಲ್ಯವಾದ ವಿಶೇಷ ಗುಣವಾಗಿದೆ. ಇತರರಿಗೆ ನೀಡುವ ಅಳತೆಯ ಆಧಾರದ ಮೇಲೆ ಅದರ ಪರಿಮಳ ಹೆಚ್ಚಾಗುತ್ತದೆ.

ಕ್ರಿಸ್ತನ ಪ್ರೀತಿ ಆಳವಾದದ್ದು ಮತ್ತು ತೀವ್ರವಾದದ್ದು, ಅದನ್ನು ಹೊಂದಿಕೊಳ್ಳುವವರಿಗೆ ಅದುಮಿಟ್ಟುಕೊಳ್ಳಲಾರದ ತೊರೆಯಂತೆ ಹರಿಯುತ್ತದೆ. ಆತನ ಪ್ರೀತಿಯಲ್ಲಿ ಸ್ವಾರ್ಥವಿಲ್ಲ. ಒಂದುವೇಳೆ ಈ ಪರಲೋಕದಲ್ಲಿ-ಜನಿಸಿದ ಪ್ರೀತಿ ಹೃದಯದಲ್ಲಿ ನೆಲೆಯಾಗಿರುವ ತತ್ವವಾಗಿದ್ದಲ್ಲಿ, ಅದು ತನ್ನನ್ನು ತಾನೇ ತಿಳಿಯಪಡಿಸುತ್ತದೆ. ನಾವು ಅತ್ಯಂತ ಪ್ರೀತಿಯ ಸಂಬಂಧದಲ್ಲಿ ಹಿಡಿದಿಟ್ಟುಕೊಳ್ಳುವವರಿಗೆ ಮಾತ್ರವಲ್ಲ

ನಾವು ಸಂಪರ್ಕದಲ್ಲಿ ಬರುವ
ಎಲ್ಲರಿಗೂ, ಅದು ನಮ್ಮನ್ನು
ಗಮನವನ್ನು ನೀಡುವ ಚಿಕ್ಕ
ಕಾರ್ಯಗಳನ್ನು ಮಾಡುವತ್ತ
ನಡೆಸುತ್ತದೆ. ರಿಯಾಯತಿ ನೀಡುವದು,
ದಯೆಯ ಕಾರ್ಯಗಳನ್ನು ಮಾಡುವದು
ಮೃದುವಾಗಿ, ಸತ್ಯವನ್ನು ಮತ್ತು
ಪ್ರೋತ್ಸಾಹದಾಯಕವಾದ
ಮಾತುಗಳನ್ನು ಮಾತಾಡುವತ್ತ
ನಡೆಸುತ್ತದೆ. ಯಾರ ಹೃದಯಗಳು
ಅನುಕಂಪಕ್ಕಾಗಿ ಹಸಿದಿವೆಯೋ
ಅವುಗಳಿಗೆ ಅನುಕಂಪವನ್ನು
ತೋರಿಸುವತ್ತ ನಡೆಸುತ್ತದೆ.

(8) ಸಂಕ್ಷಿಪ್ತವಾಗಿ ಪ್ರೀತಿಯ 16
ಪ್ರಾಯೋಗಿಕ ಗುಣಲಕ್ಷಣಗಳನ್ನು
ಮತ್ತು ಈ ಪರ್ಯಗಳಲ್ಲಿ ಕಂಡು ಬರುವ
ದೇವರ ಗುಣಗಳನ್ನು ಪಟ್ಟಿ ಮಾಡಿರಿ?

ಪ್ರೀತಿ ಬಹು ತಾಳ್ಮೆಯುಳ್ಳದ್ದು, ಪ್ರೀತಿ
ದಯೆ ತೋರಿಸುವದು. ಪ್ರೀತಿಯು
ಹೊಟ್ಟೆಕಿಚ್ಚುಪಡುವದಿಲ್ಲ,
ಹೊಗಳಿಕೊಳ್ಳುವದಿಲ್ಲ,
ಉಬ್ಬಿಕೊಳ್ಳುವದಿಲ್ಲ; ಮರ್ಯಾದೆಗೆಟ್ಟು
ನಡೆಯುವದಿಲ್ಲ. ಸ್ವಪ್ರಯೋಜನವನ್ನು
ಚಿಂತಿಸುವದಿಲ್ಲ, ಸಿಟ್ಟುಗೊಳ್ಳುವದಿಲ್ಲ,
ಅಪಕಾರವನ್ನು ಮನಸ್ಸಿನಲ್ಲಿ
ಇಟ್ಟುಕೊಳ್ಳುವದಿಲ್ಲ; ಅನ್ಯಾಯವನ್ನು
ನೋಡಿ ಸಂತೋಷಪಡದೇ ಸತ್ಯಕ್ಕೆ
ಜಯವಾಗುವಲ್ಲಿ ಸಂತೋಷಪಡುತ್ತದೆ;
ಎಲ್ಲವನ್ನೂ ಅಡಗಿಸಿಕೊಳ್ಳುತ್ತದೆ,

ಎಲ್ಲವನ್ನೂ ನಂಬುತ್ತದೆ ಎಲ್ಲವನ್ನು ನೀರಿಕ್ಷಿಸುತ್ತದೆ, ಎಲ್ಲವನ್ನೂ ಸಹಿಸಿಕೊಳ್ಳುತ್ತದೆ. ಪ್ರೀತಿಯು ಎಂದಿಗೂ ಬಿದ್ದು ಹೋಗುವದಿಲ್ಲ. ಪ್ರವಾದನೆಗಳಾದರೋ ಇಲ್ಲದಂತಾಗುವವು; ವಾಣಿಗಳೋ ನಿಂತುಹೋಗುವವು; ವಿದ್ಯೆಯೋ ಇಲ್ಲದಂತಾಗುವದು. (1ಕೊರಿಂಥ 13:4-8)

ಒಬ್ಬ ಮನುಷ್ಯನು ತನ್ನ ಕೈಗಳನ್ನು ಉಪಯೋಗಿಸದಿದ್ದರೆ ಅದು ಬಲಹೀನವಾಗುತ್ತದೆ ಮತ್ತು ಮಾಂಸ ಖಂಡಗಳ ಬಲದ ಕೊರತೆಯನ್ನು ಅನುಭವಿಸುತ್ತದೆ. ಕ್ರೈಸ್ತರು ತಮ್ಮ ಆತ್ಮೀಕ ವರಗಳನ್ನು ಅಭ್ಯಾಸಿಸದಿದ್ದಲ್ಲಿ, ಅವನು ಗುಣಲಕ್ಷಣಗಳಲ್ಲಿ ಬಲವನ್ನು, ನೈತೀಕವಾದ ಸತ್ವವನ್ನು ಹೊಂದಿಕೊಳ್ಳುವದಿಲ್ಲ. ಪ್ರೀತಿಯು ಬಹಳ ಅಮೂಲ್ಯವಾದ ಸಸ್ಯವಿದ್ದಂತೆ ಅದು ಅಭಿವೃದ್ಧಿ ಹೊಂದುವಂತೆ ಸಾಗುವಳಿ ಮಾಡಬೇಕು. ಪ್ರೀತಿಯು ಅಮೂಲ್ಯವಾದ ಸಸ್ಯವಾಗಿದೆ ಅದನ್ನು ಕೋಮಲತೆಯಿಂದ ನೋಡಿಕೊಳ್ಳಬೇಕು ಮತ್ತು ಆಗ ಅದು ಬಲವಾಗಿ ಮತ್ತು ಸತ್ವಯುತವಾಗಿ ಮತ್ತು ಫಲಕೊಡುವದರಲ್ಲಿ ಸಮೃಧ್ಧಿಯಾಗಿ ಬೆಳೆಯುತ್ತದೆ, ಮತ್ತು ಸಂಪೂರ್ಣ ನಡೆತೆಗೆ ಮುಖಭಂಗಿಯನ್ನು ನೀಡುತ್ತದೆ. ಕ್ರಿಸ್ತನಂತ ಸ್ವರೂಪ ಸ್ವಾರ್ಥದಿಂದ ಕೂಡಿದ್ದಲ್ಲ, ದಯೆಯಿಲ್ಲದ್ದಲ್ಲ ಮತ್ತು ಸೈತಾನ ಶೋಧನೆಯಲ್ಲಿ

ಹೋರಾಡುತ್ತಿರುವ ಆತ್ಮಕ್ಕೆ ನೋವನ್ನು ಉಂಟುಮಾಡುವಂಥದಲ್ಲ. ಅದು ಯಾರು ಶೋಧನೆಗೆ ಒಳಗಾಗುತ್ತಾರೋ ಅವರ ಭಾವನೆಗಳನ್ನು ಪ್ರವೇಶಿಸುತ್ತದೆ ಮತ್ತು ತಾಪತ್ರಯ ಮತ್ತು ಶೋಧನೆಗಳು ಯಾವ ರೀತಿಯಲ್ಲಿ ನಿರ್ವಹಿಸಲಾಗುತ್ತದೆಂದರೆ ಅವು ಕಲ್ಮಷವನ್ನೆಲ್ಲಾ ಕಬಳಿಸಿ ಬಂಗಾರವನ್ನು ಹೊರತರುತ್ತವೆ. ಈ ಅಭ್ಯಾಸವನ್ನು ದೇವರು ಎಲ್ಲರಿಗೂ ನಿಯೋಜಿಸುತ್ತಾನೆ. ಕ್ರಿಸ್ತನ ಈ ಶಾಲೆಯಲ್ಲಿ ಎಲ್ಲರೂ ಪ್ರತಿದಿನ ತಮ್ಮ ಪಾಠಗಳನ್ನು ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ತಾಳ್ಮೆಯಿಂದಿರುವದು, ದೀನತೆ, ಧಾರಾಳತೆ, ಉದಾತ್ತ ಧ್ಯೇಯಗಳನ್ನು ಕಲಿಯುತ್ತಾರೆ. ನೀವೆಲ್ಲರೂ ಜೀವಿಸುವ ನಂಬಿಕೆಯಿಂದ ಬರೆತುಕೊಂಡ  ಪ್ರಾರ್ಥನೆಯ ಮೂಲಕ ಅತ್ಯಂತ ಶ್ರದ್ಧೆಯಿಂದ ದೇವರನ್ನು ಹುಡುಕಬೇಕು  ಮತ್ತು ರೂಪಿಸುವ ದೇವರ ಕೈಗಳು ತನ್ನ ಸ್ವಂತ ಸ್ವರೂಪವನ್ನು ನಮ್ಮ ಗುಣಲಕ್ಷಣಗಳಲ್ಲಿ ತರುತ್ತದೆ.

ನಮಗೆ ಸಮೃದ್ಧಿಯಾದ ದೇವರ ಕೃಪೆಯ ಅಗತ್ಯತೆ ಪ್ರತಿಗಳಿಗೆಯಲ್ಲಿ ಇರುತ್ತದೆ, ಆಗ ನಮಗೆ, ದೇವರು ಪ್ರೀತಿ ಸ್ವರೂಪಿ ಆಗಿದ್ದಾನೆ ಎಂಬ ಸಮೃದ್ಧಿಯಿಂದ ಕೂಡಿದ ಪ್ರಾಯೋಗಿಕ ಅನುಭವ ದೊರೆಯುತ್ತದೆ. ಪ್ರೀತಿಯಲ್ಲಿ ನೆಲೆಗೊಂಡವನು ದೇವರಲ್ಲಿ ನೆಲೆಗೊಂಡಿದ್ದಾನೆ. ಯಾರಿಗೆ ಪ್ರೀತಿಯ

ಅವಶ್ಯಕತೆ ಬಹಳವಾಗಿದೆಯೋ ಅವರಿಗೆ ಅದನ್ನು ಕೊಡಿರಿ. ಅತ್ಯಂತ ದುರ್ವ್ಯಕ್ತಿಗಳು, ಯಾರಿಗೆ ಅತ್ಯಂತ ಅಪ್ರಿಯವಾದ ಪ್ರಕೃತಿ ಸ್ವಭಾವಗಳು ಇರುತ್ತವೋ ಅವರಿಗೆ ನಮ್ಮ ಪ್ರೀತಿಯ, ನಮ್ಮ ಕೋಮಲತೆಯ, ನಮ್ಮ ಅನುಕಂಪದ ಅಗತ್ಯತೆಯಿದೆ, ಯಾರು ನಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಾರೋ ಅವರಿಗೆ ಅತ್ಯಂತ ಹೆಚ್ಚಿನ ಪ್ರೀತಿಯ ಅಗತ್ಯತೆಯಿದೆ.

(9) ದೇವರ ದೈವೀಕ ಪ್ರೀತಿಯು ನಮ್ಮ ಹೃದಯದಲ್ಲಿ ನೆಲೆಗೊಳ್ಳುವಾಗ, ಕ್ರಿಸ್ತನಂತ ಯಾವ ಗುಣಲಕ್ಷಣಗಳು ಅಗತ್ಯತೆಯಲ್ಲಿರುವವರಿಗೆ ತಡೆಹಿಡಿಯಲ್ಪಡುವದಿಲ್ಲ?

ಈ ಲೋಕದ ಸಂಪತ್ತುಳ್ಳ ಯಾವನಾದರೂ ಕೊರತೆಯಲ್ಲಿ ಬಿದ್ದಿರುವ ತನ್ನ ಸಹೋದರನನ್ನು ನೋಡಿ ಕರುಣಿಸದೇ ಬಿಟ್ಟರೆ ದೇವರ ಪ್ರೀತಿಯು ಅವನಲ್ಲಿ ನೆಲೆಗೊಂಡಿರುವದುಂಟೆ? (1ಯೋಹಾನ 3:17).

ಕ್ರಿಸ್ತನ ಜೀವಿತವು ದೇವರ ದೈವೀಕ ಪ್ರೀತಿಯ ಸಂದೇಶದಿಂದ ತುಂಬಿದ ಜೀವಿತವಾಗಿದೆ, ಆತನು ಇದನ್ನು ಸಮೃಧಿಯಾದ ಅಳತೆಯಲ್ಲಿ ಇತರರಿಗೆ ಪಾಲುಕೊಡಲು ಹಂಬಲಿಸುತ್ತಾನೆ. ಆತನ ಸಾನಿಧ್ಯದಿಂದ ಹರಿದು ಬರುವ

ಅನುಕಂಪ ಮತ್ತು ಕೃಪೆ, ದೀನತೆ, ಸತ್ಯ ಮತ್ತು ಪ್ರೀತಿಯಿಂದ ವರ್ಗೀಕರಿಸಲ್ಪಟ್ಟ ಆತನ ನಡತೆ. ಆತನ ಸಭೆಯ ಸೈನ್ಯದ ಪ್ರತಿಯೊಬ್ಬ ಸದಸ್ಯನು ಒಂದುವೇಳೆ ಅವನು ಸಭೆಯ ಜಯದಲ್ಲಿ ಭಾಗಿಯಾಗಬೇಕಾದಲ್ಲಿ ಇವೇ ಗುಣಗಳನ್ನು ಪ್ರಕಟಿಸಬೇಕು. ಕ್ರಿಸ್ತನ ಪ್ರೀತಿಯು ಬಹಳ ವಿಶಾಲವಾಗಿದೆ, ಬಹಳ ಮಹಿಮೆಯಿಂದ ಕೂಡಿದೆ, ಅದಕ್ಕೆ ಹೋಲಿಸುವುದಾದರೆ ಮನುಷ್ಯನು ದೊಡ್ಡದೆಂದು ಅಂದಾಜುಮಾಡುವ ಪ್ರತಿಯೊಂದು , ವಿಶಿಷ್ಟತೆಯನ್ನು ಕಳೆದುಕೊಂಡು ಮಂಕಾಗುತ್ತದೆ. ಅದರ ಒಂದು ದೃಶ್ಯವನ್ನು ನೋಡುವಾಗ ನಾವು ಉದ್ಗರಿಸುತ್ತೇವೆ, ಓ ದೇವರು ಮನುಷ್ಯನ ಮೇಲೆ ಸುರಿಸಿದ ಪ್ರೀತಿಯ ಐಶ್ವರ್ಯದ ಆಳ, ತನ್ನ ಒಬ್ಬನೇ ಮಗನ ಬಹುಮಾನ!

ದೈವೀಕ ಪ್ರೀತಿ ತನ್ನ ಅತ್ಯಂತ ಹೃದಯಸ್ಪರ್ಶಿ ನಿವೇದನೆಯನ್ನು ಮಾಡುವಾಗ ಅದು ನಮಗೆ ಕ್ರಿಸ್ತನು ಪ್ರಕಟಿಸಿದ ಕೋಮಲತೆಯಿಂದ ಕೂಡಿದ ಇದೇ ಅನುಕಂಪವನ್ನು ಪ್ರಕಟಿಸಲು ಕರೆನೀಡುತ್ತದೆ. ಯಾವ ಮನುಷ್ಯನಲ್ಲಿ ತನ್ನ ಸಹೋದರನೆಡೆಗೆ ಕೇವಲ ನಿಸ್ವಾರ್ಥ ಪ್ರೀತಿ ಇರುತ್ತದೋ ಅವನಿಗೆ ದೇವರೆಡೆಗೆ ನಿಜವಾದ ಪ್ರೀತಿ ಇರುತ್ತದೆ. ನಿಜವಾದ ಕ್ರೈಸ್ತನು ತನ್ನ ಆತ್ಮವನ್ನು ನಾಶನಕ್ಕೆ ನಡೆಸಲು ಮತ್ತು ಎಚ್ಚರಿಕೆಯಿಲ್ಲದೇ ನಡೆಯಲು,

ಗಮನಿಸದೇ ಇರಲು ಅನುಮತಿಸುವದಿಲ್ಲ, ಅವನು ತಪ್ಪುಮಾಡುವದರಿಂದ ತನ್ನನ್ನು ತಾನೆ ಬೇರ್ಪಡಿಸಿಕೊಳ್ಳುವದಿಲ್ಲ, ಅವರನ್ನು ಅಸಂತೋಷದಲ್ಲಿ ಮತ್ತು ಅಧೈರ್ಯದಲ್ಲಿ  ಮುಳುಗಿಹೋಗಲು ಅಥವಾ ಸೈತಾನ ಯುದ್ಧರಂಗದಲ್ಲಿ ಬೀಳಲು ಅನುಮತಿಸುವದಿಲ್ಲ.

(10) ಪವಿತ್ರಾತ್ಮನ ಬಲದಿಂದ, ಆತ್ಮದ ಶುದ್ದೀಕರಣವನ್ನು ತರುವ ಮತ್ತು ಪ್ರಾಮಾಣಿಕವಾಗಿ ಒಬ್ಬರನ್ನೊಬ್ಬರು ಅತ್ಯಾಸಕ್ತಿಯಿಂದ ಪ್ರೀತಿಸಲು ಸಹಾಯಮಾಡುವ ಯಾವುದಕ್ಕೆ ನಾವು ವಿಧೇಯರಾಗಬೇಕು ?

ನೀವು ಸತ್ಯೋಪದೇಶಕ್ಕೆ ವಿಧೇಯರಾಗಿದ್ದು ನಿಮ್ಮ ಆತ್ಮಗಳನ್ನು ಶುದ್ಧಿಮಾಡಿಕೊಂಡದ್ದರಿಂದ ನಿಷ್ಕಪಟವಾದ ಸಹೋದರ ಸ್ನೇಹವುಳ್ಳವರಾಗಿರತಕ್ಕದ್ದು. ಹೀಗಿರಲಾಗಿ ಒಬ್ಬರನ್ನೊಬ್ಬರು ಹೃದಯ ಪೂರ್ವಕವಾಗಿಯೂ ಯಥಾರ್ಥವಾಗಿಯೂ ಪ್ರೀತಿಸಿರಿ, (1ಪೇತ್ರ 1:22).

ನಿಮ್ಮ ಹೃದಯದಲ್ಲಿ ಸತ್ಯವೆಂಬ ಹುಳಿಹಿಟ್ಟನ್ನು ಸ್ವೀಕರಿಸಿದ್ದೀರಿ ಅದು ನಿಮ್ಮ ಬಯಕೆಗಳನ್ನು ಕ್ರಮಪಡಿಸುತ್ತದೆ, ನಿಮ್ಮ ಆಲೋಚನೆಗಳನ್ನು ಶುದ್ದೀಕರಿಸುತ್ತದೆ

ಮತ್ತು ಪ್ರಕೃತಿಯನ್ನು ರುಚಿಗೊಳಿಸುತ್ತದೆ. ಅದು ನಮ್ಮ ಮನಸ್ಸಿನ ಸಹನ ಶಕ್ತಿಯನ್ನು ಮತ್ತು ಆತ್ಮದ ಬಲಗಳನ್ನು ಚುರುಕುಗೊಳಿಸುತ್ತದೆ. ಅದು ಭಾವನೆಗಳಿಗೆ, ಪ್ರೀತಿಸುವದಕ್ಕೆ ನಮ್ಮ ಸಾಮರ್ಥ್ಯವನ್ನು ವಿಸ್ತರಿಸುತ್ತದೆ.

ದೇವರ ವಾಕ್ಯ ಮಾನವ ಕುಟುಂಬದ ಪ್ರತಿಯೊಬ್ಬ ಸದಸ್ಯರೊಂದಿಗೆ ನಮ್ಮ ಒಡನಾಟದ ಮೇಲೆ ಶುದ್ಧೀಕರಣದ ಪರಿಣಾಮವನ್ನು ಬೀರುತ್ತದೆ. ಸತ್ಯದ ಹುಳಿಹಿಟ್ಟು ವೈರತ್ವದ ಆತ್ಮವನ್ನು ಉತ್ಪಾದಿಸುವದಿಲ್ಲ, ಗುರಿಯನ್ನು ಹೊಂದಿದ ಪ್ರೀತಿ, ಪ್ರಥಮ ಸ್ಥಾನದಲ್ಲಿರುವ ಬಯಕೆಯನ್ನು ನೀಡುತ್ತದೆ. ಪರಲೋಕದಿಂದ ಹುಟ್ಟಿದ ನಿಜವಾದ ಪ್ರೀತಿ ಸ್ವಾರ್ಥತೆಯಿಂದ ಕೂಡಿದ್ದಲ್ಲ ಮತ್ತು ಬದಲಾಗುವದಿಲ್ಲ. ಅದು ಮಾನವನ ಹೊಗಳಿಕೆಯನ್ನು ಅವಲಂಬಿಸಿರುವದಿಲ್ಲ, ದೇವರ ಕೃಪೆಯನ್ನು ಸ್ವೀಕರಿಸಿರುವ ಹೃದಯ ದೇವರೆಡೆಗೆ ಪ್ರೀತಿ ಮತ್ತು ಕ್ರಿಸ್ತನು ಯಾರಿಗಾಗಿ ಸತ್ತನೋ ಅವರೆಡೆಗೆ ಪ್ರೀತಿಯಿಂದ ಉಕ್ಕಿಹರಿಯುತ್ತದೆ. ಸ್ವಾರ್ಥವು ಮಾನ್ಯತೆಗಾಗಿ ಹೋರಾಡುವದಿಲ್ಲ. ಅವನು ಇತರರನ್ನು ಅವರು ತನ್ನನ್ನು ಪ್ರೀತಿಸುತ್ತಾರೆ ಮತ್ತು ಮೆಚ್ಚಿಕೊಳ್ಳುತ್ತಾರೆ ಮತ್ತು ತನ್ನ ಒಳ್ಳೇತನವನ್ನು ಪ್ರಶಂಶಿಸುತ್ತಾರೆ ಎಂದು ಪ್ರೀತಿಸುವದಿಲ್ಲ

ಬದಲಾಗಿ ಅವರು ಕ್ರಿಸ್ತನು
ಕೊಂಡುಕೊಂಡ
ಸ್ವಾಸ್ತ್ಯವಾಗಿದ್ದಾರೆಂದು ಪ್ರೀತಿಸುತ್ತಾನೆ.
ಒಂದುವೇಳೆ ಅವನ
ಉದ್ದೇಶ,ಮಾತುಗಳು ಅಥವಾ ಕ್ರಿಯೆಗಳು
ತಪ್ಪಾಗಿ ತಿಳಿಯಲ್ಪಟ್ಟಿದ್ದರೆ ಅಥವಾ
ತಪ್ಪಾಗಿ ಪ್ರತಿನಿಧಿಸಲ್ಪಟ್ಟಿದ್ದರೆ, ಅವನು
ಅಪರಾಧವನ್ನು ಪರಿಗಣಿಸುವದಿಲ್ಲ
ಬದಲಾಗಿ ತನ್ನ ಮಾರ್ಗಗಳನ್ನು
ಗತಿವಿಧಿಗಳನ್ನು ಪರೀಕ್ಷಿಸಿಕೊಳ್ಳುತ್ತಾನೆ.
ಅವನು ತನ್ನ ಅಭಿಪ್ರಾಯಗಳಲ್ಲಿ
ಕರುಣೆಯುಳ್ಳವನು, ವಿಚಾರಶೀಲನು,
ದೀನನು ಆಗಿರುತ್ತಾನೆ, ಆದಾಗ್ಯೂ
ನಿರೀಕ್ಷೆಯಿಂದ ತುಂಬಿದವನಾಗಿರುತ್ತಾನೆ
ಯಾವಾಗಲು ದೇವರ ಕರುಣೆ ಮತ್ತು
ಪ್ರೀತಿಯಲ್ಲಿ ವಿಶ್ವಾಸ
ಇಡುವವನಾಗಿದ್ದಾನೆ.

ಮುಖಭಾವ ಬದಲಾಗುತ್ತದೆ. ಕ್ರಿಸ್ತನು
ಹೃದಯದಲ್ಲಿ ನೆಲೆಯಾಗಿರುವದು
ಆತನನ್ನು ಪ್ರೀತಿಸುವವರ ಮತ್ತು
ಆತನ ಆಜ್ಞೆಗಳನ್ನು ಕೈಕೊಂಡು
ನಡೆಯುವವರ  ಮುಖದಲ್ಲಿ
ಪ್ರಕಾಶಿಸುತ್ತದೆ. ಸತ್ಯವು ಅಲ್ಲಿ
ಬರೆಯಲ್ಪಟ್ಟಿರುತ್ತದೆ. ಪರಲೋಕದ
ಮಧುರ ಸಮಾಧಾನ ಅಲ್ಲಿ
ಪ್ರಕಟವಾಗುತ್ತದೆ. ಅಲ್ಲಿ ಮಾನವ
ಪ್ರೀತಿಗಿಂತ ಹೆಚ್ಚಾದ
ಸ್ವಾಭಾವಿಕವಾದ ಸಾತ್ವಿಕತ್ವ
ವ್ಯಕ್ತವಾಗುತ್ತದೆ.

(11)) ನಾವು ನಮ್ಮ ಆಲೋಚನೆಗಳನ್ನು ಸ್ವಾರ್ಥದಿಂದ ದೂರಕ್ಕೆ ಸರಿಸಲು ಮತ್ತು ಇತರರೆಡೆಗೆ ಪ್ರಾಯೋಗಿಕವಾದ ಪ್ರೀತಿಯ ಕರ್ತನ ನಿಯೋಗವನ್ನು ಹಿಂಬಾಲಿಸಲು ಆಯ್ದುಕೊಳ್ಳುವಾಗ ಯಾವ ಆಶೀರ್ವಾದ ನಮಗೆ ಹಿಂದಕ್ಕೆ ದೊರೆಯುತ್ತದೆ?

ಹಸಿದವರಿಗೆ ಅನ್ನವನ್ನು ಹಂಚುವದು, ಅಲೆಯುತ್ತಿರುವ ಬಡವರನ್ನು ಮನೆಗೆ ಬರಮಾಡಿಕೊಳ್ಳುವದು, ಬೆತ್ತಲೆ ಯವರನ್ನು ಕಂಡಾಗೆಲ್ಲಾ ಅವರಿಗೆ ಹೊದಿಸುವದು, ನಿನ್ನಂತೆ ನರನಾಗಿರುವ ಯಾವನಿಗೇ ಆಗಲಿ ಮುಖ ತಿರುಗಿಸಿ ಕೊಳ್ಳದಿರುವದು ಇವುಗಳೇ ನಿನಗೆ ಇಷ್ಟವಾದ ಉಪವಾಸ ವ್ರತವಲ್ಲವೇ ಇದನ್ನು ಆಚರಿಸುವಾಗ ಬೆಳಕು ಉದಯದಂತೆ ಭೇದಿಸಿಕೊಂಡು ಬರುವದು, ನಿಮ್ಮ ಕ್ಷೇಮವು ಬೇಗನೇ ವಿಕಸಿಸುವದು; ನಿಮ್ಮ ಧರ್ಮವು ನಿಮಗೆ ಮುಂಬಲವಾಗಿ ಮುಂದುವರಿಯುವದು. ಯೇಹೋವನ ಮಹಿಮೆಯು ನಿಮಗೆ ಹಿಂಬಲವಾಗಿರುವದು. (ಯೆಶಾಯ 58:7-8).

ಮನಸ್ಸನ್ನು ಶಿಸ್ತಿಗೆ ಒಳಪಡಿಸುವದು ಆನಂದದಾಯಕವಾದ ವಿಷಯಗಳ ಮೇಲೆ ನೆಲೆಗೊಳಿಸುವದು  ಧಾರ್ಮಿಕ ಕರ್ತವ್ಯ ಎಂದು ಭಾವಿಸದೇ ಇರುವವರು  ಸಾಮಾನ್ಯವಾಗಿ ಎರಡರಲ್ಲಿ ಒಂದು ಅತಿರೇಕವನ್ನು

ಕಂಡುಕೊಳ್ಳುತ್ತಾರೆ ಅವರು ಸತತವಾಗಿ ಆಸಕ್ತಿ ತರುವ ಮೋಜುಗಳಲ್ಲಿ ಹರ್ಷಭರಿತರಾಗಿರುತ್ತಾರೆ, ಕ್ಷುಲಕ ಸಂಭಾಷಣೆ, ನಗುವದು ಮತ್ತು ಹಾಸ್ಯದಲ್ಲಿ ತೊಡಗಿಸಿಕೊಳ್ಳುತ್ತಾರೆ ಅಥವಾ ಅವರು ಖಿನ್ನತೆಗೆ ಒಳಗಾಗುತ್ತಾರೆ, ದೊಡ್ಡ ಶೋಧನೆಗಳು ಮತ್ತು ಮಾನಸಿಕ ಸಂಘರ್ಷಕ್ಕೆ ಒಳಗಾಗುತ್ತಾರೆ ಅವರು ಇದನ್ನು ಕೆಲವರೇ ಅನುಭವಿಸುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ ಎಂದು ಯೋಚಿಸುತ್ತಾರೆ. ಸರಿಯಾದ ಶ್ರಮ ಅವರಿಗಿರುವ ಎಲ್ಲಾ ಬಲಗಳ ಆರೋಗ್ಯದಾಯಕ ಅಭ್ಯಾಸ ಅವರಿಂದ ಅವರ ಯೋಚನೆಗಳನ್ನು ತಮ್ಮಷ್ಟಕ್ಕೆ ತಾವೇ ತೆಗೆದು ಹಾಕಬಹುದು. ಕೈಗಳನ್ನು ಮತ್ತು ಮನಸ್ಸನ್ನು ಪ್ರಯೋಜನಕರ ವಾದ ಕಾರ್ಯದಲ್ಲಿ ತೊಡಗಿಸಿ ಕೊಳ್ಳಬೇಕು, ಇತರರ ಭಾರವನ್ನು ಹಗುರ ಮಾಡುವದು ; ಯಾರು ಈ ರೀತಿಯಾಗಿ ಕಾರ್ಯ ಮಾಡುವದರಲ್ಲಿ ತೊಡಗಿಸಿ ಕೊಳ್ಳುತ್ತಾರೋ ಅವರು ತಮಗೆ ತಾವೇ ಪ್ರಯೋಜನವನ್ನು ಹೊಂದುತ್ತಾರೆ ... ಮನಸ್ಸು ಸ್ವಾರ್ಥದಿಂದ ದೂರಕ್ಕೆ ಹೋಗಬೇಕು; ಅದರ ಬಲವನ್ನು ಇತರರನ್ನು ಸಂತೋಷವಾಗಿ ಮತ್ತು ಉತ್ತಮವಾಗಿ ಇರಿಸುವತ್ತ ಉಪಯೋಗಿಸುವ ಯೋಜನೆಯನ್ನು ಮಾಡಿಕೊಳ್ಳಬೇಕು. "ಸಂಕಟದಲ್ಲಿ ಬಿದ್ದ ದಿಕ್ಕಿಲ್ಲದವರನ್ನೂ ವಿಧವೆಯರನ್ನೂ ಪರಾಂಬರಿಸಿ ತನಗೆ ಪ್ರಪಂಚದ

ದೋಷವು ಹತ್ತದಂತೆ ನೋಡಿಕೊಂಡಿರುವದೇ ತಂದೆಯಾದ ದೇವರ ಸನ್ನಿಧಾನದಲ್ಲಿ ಶುದ್ಧವೂ ನಿರ್ಮಲವೂ ಆಗಿರುವ ಭಕ್ತಿ. (ಯಾಕೋಬ 1:27).

ನಾನು ದೇವರ ವಾಕ್ಯದಲ್ಲಿ ಕ್ರಿಸ್ತನ ಜೀವಿತವನ್ನು ಓದುತ್ತಿರುವ ಹಾಗೆ ನಾನು "ಸಾತ್ವಿಕವಾದ ಮತ್ತು ಶಾಂತ ಮನಸ್ಸಿನ" ಸೌಂದರ್ಯವನ್ನು ನೋಡುತ್ತೇನೆ. ದೇವರ ದೃಷ್ಟಿಯಲ್ಲಿ ಅಮೂಲ್ಯವಾದ ಈ ಗುಣಲಕ್ಷಣಗಳು ನನ್ನ ಜೀವಿತದಲ್ಲಿ ಪ್ರಕಟವಾಗಲಿ ಎಂದು ನನ್ನ ಪ್ರಾರ್ಥನೆಯಾಗಿದೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ನಾನು ದೇವರ ಶ್ರೇಷ್ಠ ಪ್ರೀತಿಯ ಮತ್ತು ಇತರರೆಡೆಗೆ ನಿಸ್ವಾರ್ಥ ಪ್ರೀತಿಯ ವರವನ್ನು ಬಯಸುತ್ತೇನೆ ಅದನ್ನು ದೇವರು ಮಾತ್ರ ನೀಡಲು ಸಾಧ್ಯ. ಅದು ನನ್ನ ನಡೆತೆಯನ್ನು ನವೀಕರಿಸಲಿ, ನನ್ನ ಬಯಕೆಗಳನ್ನು ನಿಯಂತ್ರಿಸಲಿ, ನನ್ನ ದಾಹಗಳನ್ನು ನಿಯಂತ್ರಿಸಲಿ ಮತ್ತು ನನ್ನ ಮಮತೆಯನ್ನು ಆತನ ಮಹಿಮೆಗಾಗಿ ಶಕ್ತಗೊಳಿಸಲಿ

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ಆತನು ನನ್ನ ಜೀವಿತದಲ್ಲಿ ಕ್ರಿಸ್ತನ ಪ್ರೀತಿ ಮತ್ತು ಪ್ರೀತಿಯನ್ನು ಪ್ರದರ್ಶಿಸಲು

ನಾನು ಆತನನ್ನು ಅನುಮತಿಸಲು ಆಯ್ಕೆ ಮಾಡಿಕೊಂಡಿರುವದರಿಂದ ನಾನು ಕ್ರಿಸ್ತನ ಹಿಂಬಾಲಕನಾಗಿದ್ದೇನೆ ಎಂದು ಲೋಕವು ನೋಡಲಿ ಎಂದು ನನ್ನ ಪ್ರಾರ್ಥನೆಯಾಗಿದೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನಾನು ನನ್ನ ಹೃದಯದಲ್ಲಿ ಸತ್ಯವೆಂಬ ಹುಳಿಹಿಟ್ಟನ್ನು ಸ್ವೀಕರಿಸುವಂತಾಗಲಿ ಅದು ನನ್ನ ಬಯಕೆಗಳನ್ನು ಕ್ರಮಪಡಿಸಲಿ, ನನ್ನ ಆಲೋಚನೆಗಳನ್ನು ಶುದ್ಧೀಕರಿಸಲಿ ಮತ್ತು ನನ್ನ ಪ್ರವೃತ್ತಿಯನ್ನು ಮಧುರಗೊಳಿಸಲಿ ನಾನು ಕ್ರಿಸ್ತನ ನಿಯೋಗವನ್ನು ಕೊಂಡೊಯ್ಯಲು ಆತನ ಕೈಗಳು ಮತ್ತು ಕಾಲುಗಳು ಆಗಲಿ ಎಂದು ನಾನು ದೇವರನ್ನು ಬೇಡಿಕೊಳ್ಳುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ



ಪಾಠ 18
ನಿಮ್ಮ ವೈರಿಗಳನ್ನು ಪ್ರೀತಿಸಿರಿ

(1) ನಾವು ನಮ್ಮ ವೈರಿಗಳನ್ನು ಹೇಗೆ ನಡೆಸಿಕೊಳ್ಳಬೇಕು ಎಂಬುದರ ಸಾರಾಂಶವನ್ನು ತಿಳಿಸುವ ಮೂರು ಪದಗಳು ಯಾವವು?

ಆದರೆ ನಾನು ನಿಮಗೆ ಹೇಳುವದೇನಂದರೆ – ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಮಾಡುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. (ಮತ್ತಾಯ 5:44).

ಯಾರಿಗೆ ಪ್ರೀತಿಯ ಅಗತ್ಯತೆ ಹೆಚ್ಚಾಗಿದೆಯೋ ಅವರಿಗೆ ಪ್ರೀತಿಯನ್ನು ನೀಡಿರಿ. ಅತ್ಯಂತ ದುರ್ದೈವಿಗಳು, ಯಾರು ಹೆಚ್ಚು ಅಪ್ರಿಯವಾದ ಪ್ರಕೃತಿ ಸ್ವಭಾವವನ್ನು ಹೊಂದಿದ್ದಾರೋ ಅವರಿಗೆ ಪ್ರೀತಿಯ ನಮ್ಮ ಕೋಮಲತೆ,

ನಮ್ಮ ಅನುಕಂಪದ ಅವಶ್ಯಕತೆಯಿದೆ. ಯಾರು ನಮ್ಮ ತಾಳ್ಮೆಯನ್ನು ಪರೀಕ್ಷಿಸುತ್ತಾರೋ ಅವರಿಗೆ ನಮ್ಮ ಪ್ರೀತಿಯ ಅವಶ್ಯಕತೆ ಹೆಚ್ಚಾಗಿದೆ. ನಾವು ಈ ಲೋಕದಲ್ಲಿ ಒಮ್ಮೆ ಮಾತ್ರ ಹಾದುಹೋಗುತ್ತೇವೆ; ನಾವು ಏನಾದರೂ ಒಳ್ಳೇಯ ಕಾರ್ಯವನ್ನು ಮಾಡಬೇಕಾದರೆ ನಾವು ಹೆಚ್ಚು ಅತ್ಯಾಸಕ್ತಿಯಿಂದ, ಆಯಾಸಗೊಳ್ಳದೇ, ಕ್ರಿಸ್ತನು ತನ್ನ ಕಾರ್ಯದಲ್ಲಿ ತೋರಿದ ಅದೇ ಉತ್ಸಾಹದಿಂದ ಕೆಲಸವನ್ನು ಮಾಡಬೇಕು. ಆತನು ವಿಫಲ ನಾಗುವದಿಲ್ಲ ಇಲ್ಲವೇ ಅಧೈರ್ಯ ಪಡುವದಿಲ್ಲ. ಒರಟಾದ, ಮೊಂಡ, ಉರಿಮೊಗದ ಮನೋಧರ್ಮವುಳ್ಳವರಿಗೆ ಸಹಾಯದ ಅಗತ್ಯತೆ ಹೆಚ್ಚಾಗಿದೆ. ಅವರಿಗೆ ಹೇಗೆ ಸಹಾಯ ಮಾಡಬೇಕು? ಕ್ರಿಸ್ತನು ಬಿದ್ದುಹೋದ ಮನುಷ್ಯರೊಂದಿಗೆ ವ್ಯವಹರಿಸುವಾಗ ಪ್ರಕಟಿಸಿದ  ಅದೇ ಪ್ರೀತಿಯ ಮೂಲಕ ಮಾತ್ರ ಸಾಧ್ಯ. ಅವರು ಅರ್ಹರಾಗಿರುವಂತೆ ನೀವು ಅವರನ್ನು ನಡೆಸಿಕೊಳ್ಳಿರಿ. ಒಂದುವೇಳೆ ಕ್ರಿಸ್ತನು ನಮ್ಮನ್ನು ಅದೇ ರೀತಿಯಲ್ಲಿ ನಡೆಸಿಕೊಂಡಿದ್ದಲ್ಲಿ ಏನಾಗುತಿತ್ತು? ಅರ್ಹತೆಯಿಲ್ಲದ ನಮ್ಮನ್ನು ಆತನು ನಾವು ಅರ್ಹತೆಯಿರುವವರಂತೆ ನಡೆಸಿಕೊಂಡಿದ್ದಾನೆ.

ಆದಾಗ್ಯೂ ಕ್ರಿಸ್ತನು ನಮ್ಮನ್ನು ಕೃಪೆ ಮತ್ತು ಪ್ರೀತಿಯಿಂದ ನಾವು

ಅರ್ಹರಾಗಿಲ್ಲದಿದ್ದಾಗಲೂ. ಆತನ ಅರ್ಹತೆಗೆ ಅನುಗುಣವಾಗಿ ನಮ್ಮನ್ನು ನಡೆಸಿಕೊಂಡಿದ್ದಾನೆ. ಕೆಲವು ಪಾತ್ರುಗಳನ್ನು ಅವರು ಬಹಳವಾಗಿ ಅರ್ಹರಾಗಿದ್ದಾರೆ ಎಂಬಂತೆ ನಡೆಸಿಕೊಳ್ಳಿರಿ ಮತ್ತು ನೀವು ಅವರಿಂದ ನಿರೀಕ್ಷೆಯೆಂಬ ದಾರದ ಕೊನೆಯ ಹಂತವನ್ನು ಮುರಿದುಕೊಳ್ಳುವಿರಿ, ನೀವು ನಿಮ್ಮ ಪ್ರಭಾವವನ್ನು ಕೆಡಿಸಿಕೊಳ್ಳುವಿರಿ ಮತ್ತು ಆತ್ಮವನ್ನು ನಷ್ಟಪಡಿಸಿ ಕೊಳ್ಳುವಿರಿ. ಅದು ಸಂದಾಯ ಮಾಡುತ್ತದೋ? ಇಲ್ಲ, ಇಲ್ಲ ಎಂದು ನಾನು ಹೇಳುತ್ತೇನೆ ನೂರು ಸಾರಿ ನಾನು ಹೇಳುತ್ತೇನೆ ಇಲ್ಲ. ಎಲ್ಲಾ ಸಹಾಯದ ಅಗತ್ಯತೆಯಿರುವ ಈ ಆತ್ಮಗಳನ್ನು ಕಟ್ಟಿರಿ ಅವರಿಗೆ ಪ್ರೀತಿಯ, ಸಹಾನುಭೂತಿಯ, ಅನುಕಂಪದ ಹೃದಯ, ಕ್ರಿಸ್ತನಂತ ಪ್ರೀತಿಯಿಂದ ಉಕ್ಕುವ ಹೃದಯದಿಂದ ಕಟ್ಟಿರಿ. ಅದು ಆತ್ಮಗಳನ್ನು ಮರಣದಿಂದ ರಕ್ಷಿಸುತ್ತದೆ ಮತ್ತು ಅಸಂಖ್ಯಾತ ಪಾಪಗಳನ್ನು ಮುಚ್ಚಿಹಾಕುತ್ತದೆ. ನಾವು ಪ್ರೀತಿಯ ಪ್ರಕ್ರಿಯೆಯನ್ನು ಪ್ರಯತ್ನಿಸುವದು ಉತ್ತಮವಲ್ಲವೇ?

ಇಲ್ಲಿ ತೋರಿಸಲಾಗಿರುವ ತತ್ವಗಳನ್ನು ಅನೇಕಾವರ್ತಿ ಉದಾಸೀನ ಮಾಡಿಲ್ಲವೇ? ದೂರವಿರಿಸಬೇಕಾದ ಕೆಟ್ಟತನದ ಮೊತ್ತವನ್ನು ಇವುಗಳನ್ನು ಅನುಸರಿಸುವದರಿಂದ ಮಾಡುವದು ಯಾವುದೇ ರೀತಿಯಲ್ಲಿ ಸಣ್ಣದಲ್ಲ:

ಕೆಲವೊಂದು ಸಮಯ ಹಿಂಸೆಯನ್ನು ಮಾಡುವವರ ಹೃದಯ ದೈವಿಕ ಪ್ರಭಾವಕ್ಕೆ ಪರಿಣಾಮಕಾರಿಯಾಗಿದೆ, ಪರಿವರ್ತನೆಗೆ ಪೂರ್ವದಲ್ಲಿ ಅಪೋಸ್ತಲನಾದ ಪೌಲನ ಹೃದಯವು ಇದ್ದಂತೆ. ದೇವರು ನಿರ್ಧಿಷ್ಟಪಡಿಸಿದಂತೆ ಆತನ ಸಂಪೂರ್ಣ ಚಿತ್ತವನ್ನು ಕೊಂಡೊಯ್ಯುವ ಸಾಹಸವನ್ನು ಮಾಡುವದು ಯಾವಾಗಲೂ ಉತ್ತಮ. ಫಲಿತಾಂಶವನ್ನು ಆತನು ನೋಡಿಕೊಳ್ಳುತ್ತಾನೆ.

(2) ಕ್ರಿಸ್ತನು ನಮಗೆ ನಮ್ಮ ವೈರಿಗಳನ್ನು ಪ್ರೀತಿಸಬೇಕು ಎಂದು ಹೇಳಿದ ನಂತರ ಆತನು ಯಾವು ವಿಶಿಷ್ಟವಾದ ಮೂರು ವಿಧಾನಗಳನ್ನು ವರ್ಣಿಸಿದ್ದಾನೆ?

ಆದರೆ ನಾನು ನಿಮಗೆ ಹೇಳುವದೇನಂದರೆ – ನಿಮ್ಮ ವೈರಿಗಳನ್ನು ಪ್ರೀತಿಸಿರಿ; ನಿಮ್ಮನ್ನು ಹಿಂಸೆ ಮಾಡುವವರಿಗೋಸ್ಕರ ದೇವರನ್ನು ಪ್ರಾರ್ಥಿಸಿರಿ ಹೀಗೆ ಮಾಡಿದರೆ ನೀವು ಪರಲೋಕದಲ್ಲಿರುವ ನಿಮ್ಮ ತಂದೆಗೆ ಮಕ್ಕಳಾಗುವಿರಿ. (ಮತ್ತಾಯ 5:44).

ಈ ಬೇಡಿಕೆಯನ್ನು ಮಾಡಿಕೊಳ್ಳುವ ಪೂರ್ವದಲ್ಲಿ , ರಕ್ಷಕನು ತನ್ನ ಶಿಷ್ಯರಿಗೆ, "ನಿಮ್ಮ ವೈರಿಗಳನ್ನು ಪ್ರೀತಿಸಿರಿ ಅವರನ್ನು ಶಪಿಸದೇ ಆಶೀರ್ವದಿಸಿರಿ." ಕ್ರಿಸ್ತನು ತನ್ನ ವೈರಿಗಳಿಗೆ ಅವರನ್ನು

ರಕ್ಷಿಸಲು ತನ್ನನ್ನೇ ಕೊಡುವದರ ಮೂಲಕ ತೋರಿಸಿದ ಪ್ರೀತಿಯಂತೆಯೇ ನಾವು ನಮ್ಮ ವೈರಿಗಳನ್ನು ಪ್ರೀತಿಸಬೇಕು. ಅನೇಕರು  ಹೇಳುತ್ತಾರೆ, "ಇದು ಕಠಿಣವಾದ ಆಜ್ಞೆ ನಾನು ನನ್ನ ವೈರಿಗಳನ್ನು ನನಗೆ ಸಾಧ್ಯವಾದಷ್ಟು ದೂರವಿರಲು ಬಯಸುತ್ತೇನೆ. ನೀವು ನಿಮ್ಮ ಸ್ವಂತ ಒಲವಿಗೆ ಅನುಸಾರವಾಗಿ ವರ್ತಿಸುವದರಿಂದ ನೀವು ರಕ್ಷನು ನೀಡಿದ ತತ್ವಗಳನ್ನು ನಡೆಸುವದಿಲ್ಲ. "ಒಳ್ಳೇದನ್ನು ಮಾಡಿರಿ" ಆತನು ಹೇಳುತ್ತಾನೆ, "ನಿಮ್ಮನ್ನು ಹಗೆ ಮಾಡುವವರಿಗೋಸ್ಕರ ಮತ್ತು ಯಾರು ನಿಮ್ಮನ್ನು ತಿರಸ್ಕಾರದಿಂದ ಉಪಯೋಗಿಸಿಕೊಳ್ಳುತ್ತಾರೋ ಅವರಿಗಾಗಿ ಮತ್ತು ನಿಮ್ಮನ್ನು ಹಿಂಸೆಪಡಿಸುವವರಿಗಾಗಿ; ಒಳ್ಳೇದನ್ನು ಮಾಡಿರಿ. ಅವರೂ ಸಹ ಪರಲೋಕದಲ್ಲಿರುವ ನಿಮ್ಮ ತಂದೆಯ ಮಕ್ಕಳಾಗಿದ್ದಾರೆ: ಆತನು  ಕೆಟ್ಟವರ ಮೇಲೆಯೂ ಒಳ್ಳೆಯವರ ಮೇಲೆಯೂ ತನ್ನ ಸೂರ್ಯನು ಮೂಡುವಂತೆ ಮಾಡುತ್ತಾನೆ. ನೀತಿವಂತರ ಮೇಲೆಯೂ ಅನೀತಿವಂತರ ಮೇಲೆಯೂ ಮಳೆಸುರಿಸುವಂತೆ ಮಾಡುತ್ತಾನೆ." ಈ ವೇದಭಾಗವು ಕ್ರಿಸ್ತೀಯ ಜೀವಿತದ ಪರಿಪೂರ್ಣತೆಯ ಒಂದು ಭಾಗವನ್ನು ಸ್ಪಷ್ಟೀಕರಿಸುತ್ತದೆ. ನಾವು ದೇವರಿಗೆ ಇನ್ನೂ ವೈರಿಗಳಾಗಿದ್ದಾಗಲೇ, ಕ್ರಿಸ್ತನು

ನಮಗೋಸ್ಕರ ತನ್ನ ಜೀವವನ್ನೇ ಕೊಟ್ಟನು. ನಾವು ಆತನ ಮಾದರಿಯನ್ನು ಅನುಸರಿಸಬೇಕು.

ಕ್ರಿಸ್ತನ ಶ್ರೇಷ್ಠ ಪ್ರೀತಿಯನ್ನು ಕ್ರಿಸ್ತನು ಪ್ರೀತಿಸಿದಂತೆ ವೈರಿಗಳನ್ನು ಪ್ರೀತಿಸುವದರ ಮೂಲಕ ತೋರಿಸಬೇಕು. ಹೀಗೆ ನಾವು ಕ್ರಿಸ್ತನ ಪ್ರೀತಿಯನ್ನು ಪ್ರತಿನಿಧಿಸುವುದಾದರೆ ದ್ವೇಷದ ಬಲವಾದ ಭಾವನೆಗಳು ಮುರಿಯಲ್ಪಡುತ್ತವೆ ಮತ್ತು ಅನೇಕ ಹೃದಯಗಳಲ್ಲಿ ಯಥಾರ್ಥವಾದ ಪ್ರೀತಿಯನ್ನು ತರಬಹುದು. ನಾವು ಈಗ ನೋಡುವದಕ್ಕಿಂತ ಹೆಚ್ಚಾದ ಪರಿವರ್ತನೆಗಳನ್ನು ನಾವು ಕಾಣಬಹುದು. {MM 253-254}

(3) ನಾವು ನಮ್ಮ ವೈರಿಗಳಿಗೆ ಆಹಾರ ಮತ್ತು ಪಾನೀಯವನ್ನು ನೀಡಿ ಕೆಟ್ಟದ್ದಕ್ಕೆ ಬದಲಾಗಿ ಒಳ್ಳೇಯದನ್ನು ಮಾಡುವಾಗ ಅದು ಅವರ ಮನಸಾಕ್ಷಿಯ ಮೇಲೆ ಯಾವ ಪರಿಣಾಮ ಬೀರುತ್ತದೆ?

ಹಾಗಾದರೆ ನಿನ್ನ ವೈರಿ ಹಸಿದಿದ್ದರೆ ಅವನಿಗೆ ಊಟಕ್ಕೆ ಬಡಿಸು; ಬಾಯಾರಿದ್ದರೆ ಕುಡಿಯುವದಕ್ಕೆ ಕೊಡು. ಹೀಗೆ ಮಾಡುವದರಿಂದ ಅವನ ತಲೆಯ ಮೇಲೆ ಕೆಂಡಗಳನ್ನು ಕೂಡಿಸಿಟ್ಟಂತೆ ಆಗುವದು, ಕೆಟ್ಟತನಕ್ಕೆ ಸೋತು ಹೋಗದೆ ಒಳ್ಳೇತನದಿಂದ

ಕೆಟ್ಟತನವನ್ನು ಸೋಲಿಸು. (ರೋಮಾ. 12:20) .

ಸಾಮರಸ್ಯವಿಲ್ಲದ, ಅನುಚಿತವಾದ, ಯೋಗ್ಯರಲ್ಲದವರಿಗೆ  ದಯೆಯ ಪರಾಸಕ್ತಿಯುಳ್ಳ ಕಾರ್ಯಗಳ ಪ್ರಭಾವವನ್ನು, ನಾವು ನ್ಯಾಯತೀರ್ಪಿನ ವರೆಗೆ ಎಂದಿಗೂ ತಿಳಿದುಕೊಳ್ಳಲಾರೆವು. ಒಂದುವೇಳೆ ಅವರ ಕಡೆಯಿಂದ ಏನಾದರೂ ಪ್ರಚೋದಿಸುವ ಅನ್ಯಾಯವಾದರೆ ನೀವು ಅವರನ್ನು ಒಬ್ಬ ಮುಗ್ಧ ವ್ಯಕ್ತಿಯೆಂದು ನಡೆಸಿಕೊಳ್ಳಿರಿ, ನೀವು ಅವರಿಗೆ ವಿಶೇಷವಾದ ದಯೆಯ ಕಾರ್ಯಗಳನ್ನು ಮಾಡಲು ನೀವು ಕ್ರೈಸ್ತರೊಂದಿಗೆ ವರ್ತಿಸುವದಕ್ಕಿಂತ ಹೆಚ್ಚಾದ  ಶ್ರಮ ತೆಗೆದುಕೊಳ್ಳಬೇಕು. ಆಗ ಅವರು ಆಶ್ಚರ್ಯಪಡುತ್ತಾರೆ ಮತ್ತು ನಾಚಿಕೆಪಟ್ಟುಕೊಳ್ಳುತ್ತಾರೆ ಮತ್ತು ಅವರು ತಮ್ಮ ಕ್ರಿಯೆಗಳನ್ನು ಮತ್ತು ನೀವು ಅವರ ಕೆಣುಕುವ ಕ್ರಿಯೆಗಳನ್ನು ಮತ್ತು ಕ್ಷುಲಕತನವನ್ನು ತೆಗಳುವದಕ್ಕೆ ಸರಳವಾಗಿ ಹೇಳಿದರೂ ಮೊದಲಿಗಿಂತ ಹೆಚ್ಚು ಸ್ಪಷ್ಟವಾಗಿ ನೋಡುತ್ತಾರೆ.

ಒಂದುವೇಳೆ ಅವರು ತಮ್ಮ ತಪ್ಪಾದ ಕಾರ್ಯವಿಧಾನವನ್ನು ಅವರ ಮುಂದೆ ಇರಿಸಿದ್ದಲ್ಲಿ, ಅವರು ತಮ್ಮನ್ನು ತಾವು ಮೊಂಡತನದಲ್ಲಿ ಮತ್ತು ಪ್ರತಿಭಟನೆಯಲ್ಲಿ ವ್ಯಕ್ತಪಡಿಸುತ್ತಾರೆ. ಆದರೆ ಕೋಮಲತೆಯಿಂದ ಮತ್ತು

ಗೌರವ ಪರಿಗಣನೆಯೊಂದಿಗೆ ನಡೆಸಿಕೊಳ್ಳುವಾಗ ಅವರು ಹೆಚ್ಚು ಆಳವಾಗಿ ತಮ್ಮ ಕ್ರಿಯೆಗಳನ್ನು ತಿಳಿದುಕೊಳ್ಳುತ್ತಾರೆ ಮತ್ತು ಅದನ್ನು ನಿಮ್ಮದರೊಂದಿಗೆ ಹೋಲಿಸುತ್ತಾರೆ. ಆಗ ... ನೀವು ಅನುಕೂಲ ಭೂಮಿಕೆಯನ್ನು ವ್ಯಾಪಿಸಿಕೊಳ್ಳುವಿರಿ.ನೀವು ಅವರ ಆತ್ಮಗಳಿಗೆ ನಿಮ್ಮ ಕಾಳಜಿಗಾಗಿ ಅವರು ನೀವು ಕಪಟಿಗಳಲ್ಲ ಎಂದು ನೀವು ಹೇಳಿದ ಪ್ರತಿಯೊಂದು ಪದವನ್ನು ಪೂರ್ಣ ಮನಸ್ಸಿನಿಂದ ಹೇಳಿದ್ದೀರಿ ಎಂದು ತಿಳಿದುಕೊಳ್ಳುತ್ತಾರೆ.

(4) ಕ್ರಿಸ್ತನು ತನ್ನನ್ನು ಕೆಟ್ಟದ್ದಾಗಿ ನಡೆಸಿಕೊಂಡ ತನ್ನ ವೈರಿಗಳಿಗೆ ಹೇಗೆ ಪ್ರತಿಕ್ರಿಯಿಸಿದನು?

ಬೈಯುವವರನ್ನು ಅವನು ಪ್ರತಿಯಾಗಿ ಬೈಯಲಿಲ್ಲ; ಆತನು ಬಾಧೆಯನ್ನು ಅನುಭವಿಸಿದಾಗ  ಯಾರನ್ನೂ ಬೆದರಿಸದೆ ನ್ಯಾಯವಾಗಿ ತೀರ್ಪು ಮಾಡುವಾತನಿಗೆ ತನ್ನನ್ನು ಒಪ್ಪಿಸಿದನು. (1ಪೇತ್ರ 2:23).

ಯೇಸುವಿನ ಸಂಪೂರ್ಣ ಜೀವಿತ ಈ ತತ್ವದ ಪ್ರಕಟನೆಯಾಗಿದೆ. ತನ್ನ ವೈರಿಗಳಿಗೆ ಜೀವದ ರೊಟ್ಟಿಯನ್ನು ತರುವದಾಗಿತ್ತು, ಅದಕ್ಕಾಗಿ ನಮ್ಮ ರಕ್ಷಕನು ಪರಲೋಕದಲ್ಲಿರುವ ತನ್ನ ಮನೆಯನ್ನು ಬಿಟ್ಟು ಬಂದನು. ಅಪನಿಂದೆ ಮತ್ತು ಹಿಂಸೆ

ತೊಟ್ಟಿಲಿನಿಂದ ಸಮಾಧಿಯವರೆಗೆ ಆತನ ಮೇಲೆ ಬಿದ್ದರೂ , ಆತನು ಕೇವಲ ಕ್ಷಮಾಪಣೆಯ ಪ್ರೀತಿಯನ್ನು ವ್ಯಕ್ತಪಡಿಸಿದನು. ಪ್ರವಾದಿಯಾದ ಯೆಶಾಯನ ಮೂಲಕ ಆತನು ಹೇಳುತ್ತಾನೆ, "ನಾನು ಹೊಡೆಯುವವರಿಗೆ ಬೆನ್ನು ಕೊಟ್ಟು ಕೂದಲು ಕೀಳುವವರಿಗೆ ಗಡ್ಡವನ್ನು ಒಡ್ಡಿದೆನು; ಉಗುಳಿಸಿಕೊಳ್ಳುವ ಅವಮಾನಕ್ಕೆ ನನ್ನ ಮುಖವನ್ನು ಕಗ್ಗಲ್ಲಿನಂತೆ ಗಟ್ಟಿ ಮಾಡಿಕೊಂಡಿದ್ದೇನೆ; " "ಅವನು ಬಾಧೆಗೆ ಒಳಗಾಗಿ ತನ್ನನ್ನು ತಗ್ಗಿಸಿಕೊಂಡನು, ಬಾಯಿ ತೆರೆಯಲಿಲ್ಲ; ವಧ್ಯಸ್ಥಾನಕ್ಕೆ ಒಯ್ಯಲ್ಪಡುವ ಕುರಿಯಂತೆಯೂ ಉಣ್ಣೆ ಕತ್ತರಿಸುವವರ ಮುಂದೆ ಮೌನವಾಗಿರುವ ಕುರಿಯ ಹಾಗೂ ಇದ್ದನು ಬಾಯಿ ತೆರೆಯಲೇ ಇಲ್ಲ. ಯೆಶಾಯ 50: 6; 53: 7

(5) ದೇವರ ಮಕ್ಕಳ ಯಾವ ಕಾರ್ಯ ಪರಲೋಕದ ಲಾಂಛನಗಳು ಲೋಕಕ್ಕೆ ದೇವರ ಕುಟುಂಬದ ಭಾಗಿಗಳಾಗಿದ್ದೇವೆ ಎಂಬುದನ್ನು ತಿಳಿಸುವದಕ್ಕೆ ನೀಡುವ ಸಾಕ್ಷಿಗಳಾಗಿವೆ?

ನೀವಾದರೋ ನಿಮ್ಮ ವೈರಿಗಳನ್ನು ಪ್ರೀತಿಸಿ ಅವರಿಗೆ ಉಪಕಾರ ಮಾಡಿರಿ, ಧೈರ್ಯವನ್ನು ಬಿಡದೆ ಸಾಲಕೊಡಿರಿ; ಹೀಗೆ ಮಾಡಿದರೆ, ನಿಮಗೆ ಬಹಳ ಫಲಸಿಕ್ಕುವದು, ಮತ್ತು ನೀವು ಪರಾತ್ಪರನ ಮಕ್ಕಳಾಗುವಿರಿ.

ಆತನಂತೂ ಉಪಕಾರ ನೆನಸದವರಿಗೂ ಕೆಟ್ಟವರಿಗೂ ಉಪಕಾರಿಯಾಗಿದ್ದಾನೆ. (ಲೂಕ 6:35)

ಆತನ ಸ್ವರೂಪದಲ್ಲಿ ಪಾಲು ತೆಗೆದುಕೊಳ್ಳುವವರು ದೇವರ ಮಕ್ಕಳು ಇದು ಇಹಲೋಕದ ದರ್ಜೆಯಲ್ಲ, ಜನ್ಮದಿಂದ ಬಂದದ್ದಲ್ಲ, ರಾಷ್ಟ್ರೀಯತೆಯಿಂದ ಅಲ್ಲ ಅಥವಾ ಧಾರ್ಮಿಕ ಸೌಭಾಗ್ಯವಲ್ಲ, ಇವು ನಾವು ದೇವರ ಕುಟುಂಬದ ಸದಸ್ಯರೆಂದು ತೋರಿಸುವದಿಲ್ಲ; ಇದು ಪ್ರೀತಿ, ಈಡೀ ಮಾನವಕುಲವನ್ನು ಅಪ್ಪಿಕೊಳ್ಳುವ ಪ್ರೀತಿ, ಪಾಪಿಗಳ ಹೃದಯಗಳು ಸಹ ದಯೆಗೆ ಪ್ರತಿಕ್ರಿಯಿಸಲು ದೇವರ ಆತ್ಮನಿಗೆ ಒಟ್ಟಾರೆ ಮುಚ್ಚಲ್ಪಡುವದಿಲ್ಲ; ಅವರು ಹಗೆತನಕ್ಕೆ ಪ್ರತಿಯಾಗಿ ಹಗೆತನವನ್ನು ನೀಡುವುದಾದರೆ ಅವರು ಪ್ರೀತಿಗೆ ಬದಲಾಗಿ ಪ್ರೀತಿಯನ್ನು ನೀಡುತ್ತಾರೆ. ಆದರೆ ದೇವರ ಆತ್ಮನು ಮಾತ್ರ ಹಗೆತನಕ್ಕೆ ಬದಲಾಗಿ ಪ್ರೀತಿಯನ್ನು ನೀಡುತ್ತಾನೆ. ಕೃತಘ್ನತೆಯಿಲ್ಲದವನಿಗೆ  ಮತ್ತು ದುಷ್ಟನಿಗೆ ದಯೆ ತೋರಿಸಲು, ಏನನ್ನೂ ನಿರೀಕ್ಷಿಸದೇ ಒಳ್ಳೆಯದನ್ನು ಮಾಡುವದು ಪರಲೋಕದ ರಾಜಪದವಿಯ ಲಾಂಛಾನವಾಗಿದೆ, ಈ ಖಚಿತವಾದ  ಗುರುತಿನ ಮೂಲಕ ಉನ್ನತನಾದವ ಮಕ್ಕಳು ತಮ್ಮ ಉನ್ನತವಾದ ಅವಸ್ಥೆಯನ್ನು ಪ್ರಕಟಿಸುತ್ತಾರೆ.

(6) ವೈರತ್ವ, ಸ್ವಾರ್ಥ ಮತ್ತು ಅಹಂಕಾರ ಇದ್ದಲ್ಲಿ ಯಾವುದು ಇರುತ್ತದೆ ಮತ್ತು ಕ್ರಿಸ್ತನೊಂದಿಗೆ ಪ್ರೀತಿಯ ಆತ್ಮನ ಐಕ್ಯತೆಯಲ್ಲಿ ಸೇರುವ ನಮ್ಮ ಸಾಮರ್ಥ್ಯಕ್ಕೆ ಅಡೆತಡೆಯಾಗಿದೆ?

ಮತ್ಸರವೂ ಪಕ್ಷಭೇದವೂ ಇರುವ ಕಡೆ ಗಲಿಬಿಲಿಯೂ ಸಕಲವಿಧ ನೀಚಕೃತ್ಯಗಳು ಇರುವವು. (ಯಾಕೋಬ 3:16).

ಸ್ವಾರ್ಥ ಮತ್ತು ಅಹಂಕಾರ ನಮ್ಮನ್ನು ಕ್ರಿಸ್ತನೊಂದಿಗೆ ಐಕ್ಯತೆಯಲ್ಲಿ ಸೇರಿಸುವ ಪರಿಶುದ್ಧವಾದ ಪ್ರೀತಿಯನ್ನು ಅಡ್ಡಿಪಡಿಸುತ್ತವೆ. ಈ ಪ್ರೀತಿಯನ್ನು ನಿಜವಾಗಿ ಬೆಳೆಸಿಕೊಂಡಿದ್ದಲ್ಲಿ ಮಿತಿಯುಳ್ಳದ್ದು ಮಿತಿಯುಳ್ಳದ್ದರಲ್ಲಿ ಬೆರೆತು ಮತ್ತು ಎಲ್ಲವೂ ಮಿತಿಯಿಲ್ಲದ್ದರಲ್ಲಿ ಕೇಂದ್ರಿಕೃತ ವಾಗುತ್ತವೆ. ಮಾನವತೆಯು ಮಾನವತೆಯೊಂದಿಗೆ ಐಕ್ಯವಾಗುತ್ತದೆ ಮತ್ತು ಎಲ್ಲವೂ ಒಂದಾಗಿ ಮೇರಿಯಿಲ್ಲದ ಪ್ರೀತಿಯ ಹೃದಯದಲ್ಲಿ ಕಟ್ಟಲ್ಪಡುತ್ತವೆ. ಒಬ್ಬರ ಮೇಲೆ ಒಬ್ಬರಿಗೆ ಇರುವ ಶುದ್ದೀಕರಿಸಲ್ಪಟ್ಟ ಪ್ರೀತಿ ಪವಿತ್ರವಾದದ್ದು. ಈ ಶ್ರೇಷ್ಠ ಕಾರ್ಯದಲ್ಲಿ ಕ್ರೈಸ್ತರಿಗೆ ಒಬ್ಬರ ಮೇಲೆ ಒಬ್ಬರಿಗೆ ಇರುವ  ಪ್ರೀತಿ ಕಂಡುಬರುವದಕ್ಕಿಂತ ಅತೀ ಉನ್ನತವಾದದ್ದು ಹೆಚ್ಚು ಸ್ಥಿರವಾದದ್ದು ಹೆಚ್ಚು ವಿನಯಶೀಲವಾದದ್ದು, ಹೆಚ್ಚು

ನಿಸ್ವಾರ್ಥವಾದದ್ದು. ಆಗಿರುತ್ತದೆ – ಕ್ರೈಸ್ತರನ್ನು ಕೋಮಲತೆ, ಕ್ರಿಸ್ತೀಯ ಪರೋಪಕಾರ ಮತ್ತು ಸಭ್ಯತೆ ಮತ್ತು ದೇವರನ್ನು ಅಪ್ಪಿಕೊಳ್ಳುವಲ್ಲಿ ಸಹೋದರತ್ವವನ್ನು ಆಲಂಗಿಸುತ್ತದೆ. ದೇವರು ಯಾವ ಗೌರವದೊಂದಿಗೆ ಮಾನವನ ಹಕ್ಕುಗಳನ್ನು ತೊಡಗಿಸಿದ್ದಾನೆ ಎಂಬುದನ್ನು ಒಪ್ಪಿಕೊಳ್ಳುವದು . ಕ್ರೈಸ್ತರು ದೇವರ ಗೌರವ ಮತ್ತು ಮಹಿಮೆಗಾಗಿ ಯಾವಾಗಲು ಬೆಳೆಸಿಕೊಳ್ಳುವ ಗೌರವ ಇದಾಗಿದೆ.

(7) ಕ್ರಿಸ್ತನು ಸರಳವಾದ ಪ್ರಾಯೋಗಿಕ ಅಂಶಗಳಲ್ಲಿ ಇತರರನ್ನು ಪ್ರೀತಿಸುವದು ಹೇಗೆ ಎಂದು ಸಂಕ್ಷಿಪ್ತವಾಗಿ ಹೇಳುತ್ತಾನೆ?

ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ. ಇದೇ ಧರ್ಮಶಾಸ್ತ್ರದ ಮತ್ತು ಪ್ರವಾದಿಗಳ ತಾತ್ಪರ್ಯ (ಮತ್ತಾಯ 7:12).

“ಅಂತು ಜನರು ನಿಮಗೆ ಏನೇನು ಮಾಡಬೇಕೆಂದು ಅಪೇಕ್ಷಿಸುತ್ತೀರೋ ಅದನ್ನೇ ನೀವು ಅವರಿಗೆ ಮಾಡಿರಿ.” ಇಂಥ ಕಾರ್ಯಗಳಲ್ಲಿ ಆಶೀರ್ವಾದದಾಯಕ ವಾದ ಫಲಿತಾಂಶಗಳು ಕಂಡು ಬರುತ್ತವೆ. ನೀವು ಯಾವ ಅಳತೆಯಿಂದ ಅಳೆಯುತ್ತೀರೋ ಅದೇ ಅಳತೆಯಿಂದ ನಿಮಗೂ

ಅಳೆಯುವರು.” ಇಲ್ಲಿ ನಮ್ಮನ್ನು ಪರಿಶುದ್ಧವಾದ ಹೃದಯದಿಂದ , ಅತ್ಯಾಸಕ್ತಿಯಿಂದ ಪ್ರೀತಿಸಲು ಒತ್ತಾಯಪಡಿಸುವದಕ್ಕೆ ಬಲವಾದ ಉದ್ದೇಶಗಳಿವೆ, ಕ್ರಿಸ್ತನು ನಮ್ಮ ಮಾದರಿಯಾಗಿದ್ದಾನೆ. ಆತನು ಒಳ್ಳೆಯದನ್ನು ಮಾಡುತ್ತಾ ಸಂಚರಿಸಿದನು. ಆತನು ಇತರರನ್ನು ಆಶೀರ್ವದಿಸಲು ಜೀವಿಸಿದನು. ಆತನ ಎಲ್ಲಾ ಕ್ರಿಯೆಗಳನ್ನು ಪ್ರೀತಿಯು ಸುಂದರವಾಗಿಸಿತು ಮತ್ತು ಘನತೆಯನ್ನು ನೀಡಿತು. ನಾವು ಇತರರು ನಮಗೇನು ಮಾಡಬೇಕೆಂದು ನಾವು ಬಯಸುತ್ತೇವೋ ಅದನ್ನೇ ನಾವು ನಮ್ಮಷ್ಟಕ್ಕೆ ನಾವೇ ಮಾಡಲು ಅಪ್ಪಣೆಯನ್ನು ಹೊಂದಿಲ್ಲ; ನಾವು ಇತರರಿಗೆ ನಾವು ಏನನ್ನು ಬಯಸುತ್ತೇವೋ ಅದನ್ನು ಅಂಥದ್ದೇ ಪರಿಸ್ಥಿತಿಯಲ್ಲಿ ಮಾಡಬೇಕು. ನಾವು ಯಾವ ಅಳತೆಯಲ್ಲಿ ಅಳೆಯುತ್ತೇವೋ ಅದೇ ಅಳತೆಯಲ್ಲಿ ಯಾವಾಗಲೂ ನಮ್ಮನ್ನು ಅಳೆಯುತ್ತಾರೆ.

ಪರಿಶುದ್ಧವಾದ ಪ್ರೀತಿಯು ಕಾರ್ಯನಿರ್ವಹಣೆಯಲ್ಲಿ ಸರಳವಾಗಿದೆ ಮತ್ತು ಅದು ಬೇರೆ ಯಾವುದೋ ತತ್ವಗಳಿಗಿಂತ ಸರಳವಾಗಿದೆ. ಪ್ರೀತಿಯ ಪ್ರಭಾವ ಮತ್ತು ಇತರರ ಗೌರವದ ಬಯಕೆ ಉತ್ತಮವಾದ ಕ್ರಮಬದ್ಧವಾದ ಜೀವಿತವನ್ನು ಉತ್ಪಾದಿಸಬಹುದು ಮತ್ತು ಮೇಲಿಂದ ಮೇಲೆ

ದೋಷರಹಿತವಾದ ಸಂಭಾಷಣೆಯನ್ನು. ಸ್ವ-ಗೌರವ ನಮ್ಮನ್ನು ಕೆಟ್ಟತನದ ತೋರಿಕೆಯಿಂದ ದೂರವಿರಿಸುತ್ತದೆ. ಸ್ವಾರ್ಥವಾದ ದಯ ಧಾರಾಳವಾದ ಕ್ರಿಯೆಗಳನ್ನು ಪ್ರದರ್ಶಿಸಬಹುದು, ಪ್ರಸ್ತುತ ಸತ್ಯವನ್ನು ಒಪ್ಪಿಕೊಳ್ಳಿರಿ ಮತ್ತು ದೀನತೆಯನ್ನು ಮತ್ತು ಹೊರಗೆ ತೋರಿಬರುವಂತ ಮಮತೆಯನ್ನು ವ್ಯಕ್ತಪಡಿಸಿರಿ, ಆದಾಗ್ಯೂ ಉದ್ದೇಶಗಳು ಮೋಸದಿಂದ  ಮತ್ತು ಅಶುದ್ಧತೆಯಿಂದ ಕೂಡಿರಬಹುದು., ಇಂಥ ಹೃದಯದಿಂದ ಹರಿಯುವ ಕ್ರಿಯೆಗಳು ಜೀವಿತದ ವಿಶೇಷಗುಣಕ್ಕೆ ನಿರಾಧಾರ ವಾಗಿರಬಹುದು ಮತ್ತು ನಿಜವಾದ ಪರಿಶುದ್ಧತೆಯ ಫಲಗಳು ಪರಿಶುದ್ಧ ಪ್ರೀತಿಯ ತತ್ವಗಳಿಗೆ ನಿರಾಧಾರ ವಾಗಿರಬಹುದು. ಪ್ರೀತಿಯನ್ನು ಪೋಷಿಸಬೇಕು ಮತ್ತು ಬೆಳೆಸಿಕೊಳ್ಳಬೇಕು, ಅದರ ಪ್ರಭಾವ ದೈವೀಕವಾದದ್ದಾಗಿದೆ.

(8) ಸ್ವೀಕರಿಸುವವರಾಗಿ ಮತ್ತು ಉತ್ತಮ ಕೃಪೆಯ ವರದ ಮೇಲ್ವಿಚಾರಕರಾಗಿ ನಮ್ಮ ವೈರಿಗಳಿಗೆ ಮಾತ್ರವಲ್ಲ ಎಲ್ಲಾ ದೇವ ಮಕ್ಕಳಿಗೆ ನಮ್ಮ ನಿಯೋಗವೇನು?

ನೀವೆಲ್ಲರೂ ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೇ ಮನೆವಾರ್ತೆ ಯವರಾಗಿದ್ದು ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ (1ಪೇತ್ರ 4:10).

ವಿಮೋಚನೆಯ ಯೋಜನೆಯು ಪ್ರಾರಂಭವಾಗುತ್ತಿದ್ದ ಹಾಗೆ ಹೇಗೆ ಬಹುಮಾನದೊಂದಿಗೆ ಮುಕ್ತಾಯ ವಾಗುತ್ತದೆ, ಆದುದರಿಂದ ಅದನ್ನು ಮುಂದಕ್ಕೆ ಒಯ್ಯಬೇಕು. ರಕ್ಷಣೆಯನ್ನು ಕೊಂಡುಕೊಂಡ ಅದೇ ಬಲಿದಾನ ಯಾರು ಆ ಪರಲೋಕದ ಬಹುಮಾನದಲ್ಲಿ ಭಾಗಿಗಳಾಗುತ್ತಾರೋ ಅವರ ಹೃದಯಗಳಲ್ಲಿ ವಾಸಿಸುತ್ತದೆ. ಅಪೋಸ್ತಲನಾದ ಪೇತ್ರನು ಹೇಳುತ್ತಾನೆ, "ನೀವೆಲ್ಲರೂ ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೆಯ ಮನೆವಾರ್ತೆಯವರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ ಕೃಪಾ ವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ." ಯೇಸು ತನ್ನ ಶಿಷ್ಯರನ್ನು ಕಳುಹಿಸಿಕೊಡುವಾಗ ಅವರಿಗೆ ಹೇಳಿದ್ದು, "ಉಚಿತವಾಗಿ ಹೊಂದಿದ್ದೀರಿ ಉಚಿತವಾಗಿ ಕೊಡಿರಿ." ಯಾರು ಕ್ರಿಸ್ತನೊಂದಿಗೆ ಸಂಪೂರ್ಣ ಸಹಾನುಭೂತಿಯಲ್ಲಿದ್ದಾರೋ ಅಲ್ಲಿ ಯಾವುದೇ ರೀತಿಯ ಸ್ವಾರ್ಥತೆ ಅಥವಾ ಸೇರಿಕೊಳ್ಳದ ಯಾವುದೂ ಇರುವದಿಲ್ಲ. ಯಾರು ಜೀವಕರವಾದ ನೀರನ್ನು ಕುಡಿಯುತ್ತಾರೋ ಅವರು "ತಮ್ಮೊಳಗೆ ಜೀವಕರವಾದ ನೀರಿನ ಬುಗ್ಗೆ ಹರಿಯುವದನ್ನು ಕಾಣುತ್ತಾರೆ." ಅವರೊಳಗೆ ಇರುವ ಕ್ರಿಸ್ತನ ಆತ್ಮ ಮರಭೂಮಿಯಲ್ಲಿ ಇರುವ ನೀರಿನ ಬುಗ್ಗೆಯಿದ್ದಂತೆ, ಎಲ್ಲರನ್ನೂ ಚೈತನ್ಯಗೊಳಿಸಲು ಹರಿಯುತ್ತದೆ ಮತ್ತು

ನಾಶವಾಗುವದಕ್ಕೆ ಸಿದ್ಧರಾಗಿರುವವರು, ಜೀವ ಕೊಡುವ ನೀರನ್ನು ಕುಡಿಯಲು ತವಕಪಡುವಂತೆ ಮಾಡುತ್ತದೆ.

ಕ್ರಿಸ್ತನ ಕ್ರೂಜೆಯ ತತ್ವ ನಂಬುವ ಎಲ್ಲರನ್ನೂ ಭಾರವಾದ ಹಂಗಿನಲ್ಲಿ ನಡೆಸುತ್ತದೆ ಸ್ವಾರ್ಥವನ್ನು ನಿರಾಕರಿಸುವದು, ಇತರರಿಗೆ ಬೆಳಕನ್ನು ನೀಡುವದು ಮತ್ತು ಬೆಳಕನ್ನು ವಿಸ್ತರಿಸಲು ತಮಗಿರುವದನ್ನು ನೀಡಲು ಪ್ರೇರೆಪಿಸುತ್ತದೆ. ಅವರು ಪರಲೋಕದೊಂದಿಗೆ ಸಂಬಂಧವನ್ನು ಹೊಂದಿದ್ದರೆ  ಅವರು ದೇವದೂತರೊಂದಿಗೆ ಸಾಮರಸ್ಯದಲ್ಲಿ ಕೆಲಸದಲ್ಲಿ ತೊಡಗಿಸಿಕೊಳ್ಳುತ್ತಾರೆ.

(9) ಪ್ರೀತಿ ಸ್ವರೂಪಿಯಾದ ದೇವರ ಅದರಂತೆ ಆತನ ಮಕ್ಕಳ ಐದು ಗುಣಲಕ್ಷಣಗಳು ಯಾವವು?

ಕಡೆಗೆ ನೀವೆಲ್ಲರೂ ಏಕಮನಸ್ಸುಳ್ಳವರಾಗಿರಿ; ಪರರ ಸುಖದುಃಖಗಳಲ್ಲಿ ಸೇರುವವರಾಗಿರಿ. ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ. (1ಪೇತ್ರ 3:8).

ಯೇಸು ಕ್ರಿಸ್ತನ ಧರ್ಮ ನಿಜವಾದ ಪರಲೋಕದ ಸಭ್ಯತೆ ಮತ್ತು ಕೋಮಲತೆಯ ಭಾವನೆಯ ಹವ್ಯಾಸ ದ ಪ್ರಾಯೋಗಿಕ ಪ್ರದರ್ಶನದ ವ್ಯವಸ್ಥೆ, ದಯೆಯ ವರ್ತನೆಗೆ ನಡೆಸುತ್ತದೆ.

ಯಾರು ದೈವೀಕತೆಯನ್ನು ಹೊಂದಿ ಕೊಂಡಿದ್ದಾರೋ ಅವರಿಗೆ ಈ ಕೃಪೆಯು ಸಹ ಸೇರಿಸಲ್ಪಡುತ್ತದೆ, ನಿಚ್ಚಣಿಕೆಯ ಮೇಲೆ ಇನ್ನೊಂದು ಹೆಜ್ಜೆ ಮೇಲಕ್ಕೆ ತೆಗೆದುಕೊಳ್ಳಲು. ಅವನು ನಿಚ್ಚಣಿಕೆಯ ಮೇಲೆ ಮೇಲಕ್ಕೆ ಏರುತ್ತಿರುವ ಹಾಗೆ ದೇವರ ವಾಕ್ಯವು ತನ್ನ ಪ್ರತಿಯೊಂದು ಮಕ್ಕಳಿಗೆ ಅಪ್ಪಣೆ ಮಾಡುತ್ತದೆ: "ಕಡೆಗೆ ನೀವೆಲ್ಲರೂ ಏಕಮನಸ್ಸುಳ್ಳವರಾಗಿರಿ; ಪರರ ಸುಖದುಃಖಗಳಲ್ಲಿ ಸೇರುವವರಾಗಿರಿ. ಅಣ್ಣತಮ್ಮಂದಿರಂತೆ ಒಬ್ಬರನ್ನೊಬ್ಬರು ಪ್ರೀತಿಸಿರಿ." 1ಪೇತ್ರ 3:8.ತಾಳ್ಮೆಗೆ ದೈವೀಕತೆಯನ್ನು ಸೇರಿಸದಿದ್ದಲ್ಲಿ ಮನುಷ್ಯನು ಸಹೋದರ ದಯೆಯನ್ನು ತೋರಿಸಲಾರನು. ಲೋಕಕ್ಕೆ ಆತನ ನಿಯೋಗದಲ್ಲಿ, ಕ್ರಿಸ್ತನು ಮನುಷ್ಯರಿಗೆ ದೇವರ ಆತ್ಮನ ಕೃಪೆಯನ್ನು ತೋರಿಸಿದ್ದಾನೆ, ಅದನ್ನು ಸ್ವೀಕರಿಸುವಾಗ , ಸಂಪೂರ್ಣ ಮನುಷ್ಯನನ್ನು ಒಂದುರೀತಿಯಲ್ಲಿ ರೂಪಿಸುತ್ತದೆ,  ಹೊರಗೆ ಮತ್ತು ಒಳಗೆ ಸಹ, ಅವನ ಅಹಂಕಾರವನ್ನು ಕಡೆಗಣಿಸಿ ಮತ್ತು ಅವನು ತನ್ನನ್ನು ತಾನು ಶ್ರೇಷ್ಠನೆಂದೆಣಿಸದೇ ತನ್ನ ಸಹೋದರರರನ್ನು ದೇವರ ದೃಷ್ಟಿಯಲ್ಲಿ ಅಮೂಲ್ಯರೆಂದು ಎಣಿಸುವಂತೆ ಮಾಡುತ್ತದೆ. ಯಾಕಂದರೆ ಕ್ರಿಸ್ತನು ಅಪರಿಮಿತವಾದ ಬೆಲೆಯನ್ನು ಅವನ ಆತ್ಮಕ್ಕೆ ತೆತ್ತಿದ್ದಾನೆ. ಮನುಷ್ಯನು  ದೇವರ ಸೊತ್ತೆಂದು ಗೌರವಿಸಿದಾಗ. ನಾವು ಕರುಣೆಯುಳ್ಳವರೂ  ವಿನಯಶೀಲರು

ಅವನೆಡೆಗೆ ಅನುಗ್ರಹ ತೋರುವವರು ಆಗುತ್ತೇವೆ.

ದೇವರ ಕೃಪೆ ಅವನ ಜೀವಿತದಲ್ಲಿ ಹೆಚ್ಚಾಗಿ ಪ್ರಕಟವಾಗುತ್ತದೆ, ಅವನ ಭಾವನೆಗಳು ಅವನ ತತ್ವಗಳು, ಅವನ ಕಲಿಯುವಿಕೆ ದೇವರೊಂದಿಗೆ ಅವನ ಸ್ವೀಕರಿಸುವಿಕೆಯಲ್ಲಿ ಯಾವಾಗಲೂ ಕಲಿಯುವ ಅಂಶಗಳು  ಮತ್ತು ಪರಲೋಕದಲ್ಲಿ ಸ್ವಾಸ್ತ್ಯವನ್ನು ಹೊಂದಿಕೊಳ್ಳುವ ಏಕೈಕ ಮಾರ್ಗವೆಂದರೆ ಗುಣ ಲಕ್ಷಣಗಳಲ್ಲಿ ಕ್ರಿಸ್ತನಂತೆ ಆಗುವದು. ಕರುಣೆಯ ಸಂಪೂರ್ಣ ಯೋಜನೆ ಪ್ರವೃತ್ತಿಯಲ್ಲಿ ಯಾವದು ಕಠಿಣವಾಗಿದೆಯೋ ಅದನ್ನು ಮೃದುಗೊಳಿಸುವದು ಮತ್ತು ಈ ರೀತಿಯಲ್ಲಿ ಯಾವುದು ಒರಟಾಗಿದೆಯೋ ಅದನ್ನು ನವೀಕರಿಸುವದು. ಆಂತರಿಕ ಬದಲಾವಣೆ ಬಾಹ್ಯದ ಕ್ರಿಯೆಗಳಲ್ಲಿ ಪ್ರಕಟವಾಗುತ್ತದೆ. ದೇವರ ಕೃಪೆಯ ಆತ್ಮ ಗುಣಲಕ್ಷಣಗಳ ಪರಿವರ್ತನೆಯಲ್ಲಿ ಮರೆಯಾಗಿರುವ ಬಲದ ಮೂಲಕ ಕಾರ್ಯ ಮಾಡುತ್ತದೆ.  ಕ್ರಿಸ್ತನ ಧರ್ಮ ಹುಳಿತ, ಒರಟಾದ ಮತ್ತು ಗೌರವ ಇಲ್ಲದ ಕ್ರಿಯೆಗಳನ್ನು ಯಾವಾಗಲೂ ಪ್ರಕಟಿಸುವದಿಲ್ಲ. ಸೌಜನ್ಯತೆ ಸತ್ಯವೇದದ ಮೌಲ್ಯವಾಗಿದೆ. ಸಹೋದರ ದಯೆಯ ಕೃಪೆಯ ಮೌಲ್ಯವು ಕ್ರಿಸ್ತನ ಜೀವಿತವನ್ನು ವರ್ಗೀಕರಿಸುತ್ತದೆ. ಇಂಥಹ

ಸೌಜನ್ಯತೆಯನ್ನು ಭೂಮಿಯ ಮೇಲೆ ಕ್ರಿಸ್ತನು ಪ್ರಕಟಿಸಿದಂತೆ ಎಂದಿಗೂ ಪ್ರದರ್ಶಿಸಿರಲಿಲ್ಲ ಮತ್ತು ನಾವು ಇದರ ಬೆಲೆಯನ್ನು ಅಲ್ಲಗಳೆಯಲಾಗುವದಿಲ್ಲ.

(10) ನಾವು ನಮಗಿಂತ ಹೆಚ್ಚಾದ ಗೌರವವನ್ನು ಯಾರಿಗೆ ತೋರಿಸಬೇಕು ಮತ್ತು ನಾವು ಯಾರ ಹಿತವನ್ನು ಗಮನಿಸಬೇಕು?

ಪಕ್ಷಪಾತದಿಂದಾಗಲಿ ಒಣ ಹೆಮ್ಮೆಯಿಂದಾಗಲಿ ಯಾವದನ್ನೂ ಮಾಡದೆ ಪ್ರತಿಯೊಬ್ಬನು ದೀನಭಾವದಿಂದ ಮತ್ತೊಬ್ಬರನ್ನು ತನಗಿಂತಲೂ ಶ್ರೇಷ್ಠರೆಂದು ಎಣಿಸಲಿ. ನಿಮ್ಮಲ್ಲಿ ಪ್ರತಿಯೊಬ್ಬನು ಸ್ವಹಿತವನ್ನು ಮಾತ್ರ ನೋಡದೆ ಪರಹಿತವನ್ನು ಸಹ ನೋಡಲಿ (ಫಿಲಿಪ್ಪಿ 2:3,4).

ಒಂದುವೇಳೆ ಪರಲೋಕದ  ಘನತೆ ಮನುಷ್ಯನಿಗೆ ತನ್ನ ಪ್ರೀತಿಯನ್ನು ತೋರಿಸಲು  ಹೀಗೆ ಮಾಡುವುದಾದರೆ, ಒಬ್ಬರಿಗೊಬ್ಬರು ಕತ್ತಲೆಯ ಕೂಪದಿಂದ ಮತ್ತು ಕಷ್ಟದಿಂದ ಹೊರತರಲು ಸಹಾಯ ಮಾಡಲು ಮನುಷ್ಯನು ಇನ್ನೆಷ್ಟು ಮಾಡಬಹುದು! ಕ್ರಿಸ್ತನು ಹೇಳುತ್ತಾನೆ  “ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ” ಅದಕ್ಕಿಂತ ಹೆಚ್ಚಿನ ಪ್ರೀತಿಯಿಂದಲ್ಲ.ಯಾಕಂದರೆ ”ತನ್ನ ಸ್ನೇಹಿತನಿಗೋಸ್ಕರ ಪ್ರಾಣವನ್ನು

ನೀಡುವ ಪ್ರೀತಿಗಿಂತ ಹೆಚ್ಚಿನ ಪ್ರೀತಿ ಇಲ್ಲ." ನಮ್ಮ ಪ್ರೀತಿಯು ಮೇಲಿಂದ ಮೇಲೆ ಸ್ವಾರ್ಥದಿಂದ ತುಂಬಿರುತ್ತದೆ, ನಾವು ಅದನ್ನು ಗೊತ್ತುಮಾಡಿದ ಮಿತಿಗೆ ಸೀಮಿತಗೊಳಿಸುತ್ತೇವೆ. ನಾವು ಕ್ರಿಸ್ತನೊಂದಿಗೆ ನಿಕಟವಾದ ಅನ್ಯೋನ್ಯತೆಯಲ್ಲಿ ಬರುವಾಗ, ನಮ್ಮ ಪ್ರೀತಿ ಮತ್ತು ಸಹಾನುಭೂತಿ ಮತ್ತು ನಮ್ಮ ಪರೋಪಕಾರದ ಕಾರ್ಯಗಳು ಆಳವನ್ನು ತಲುಪತ್ತವೆ ಮತ್ತು ಚಟುವಟಿಕೆಯೊಂದಿಗೆ ನಮ್ಮ ಬಲವನ್ನು ವಿಶಾಲಗೊಳಿಸುತ್ತವೆ.

ಕ್ರಿಸ್ತನ ಹಿಂಬಾಲಕರ ಪ್ರೀತಿ ಮತ್ತು ಆಸಕ್ತಿ ಲೋಕದಷ್ಟು ವಿಶಾಲವಾಗಿದೆ. ಯಾರು "ನಾನು ಮತ್ತು ನನ್ನ" ಎಂದು ಜೀವಿಸುತ್ತಾರೋ" ಅವರು ಪರಲೋಕವನ್ನು ಹೊಂದುವದಿಲ್ಲ. ನೀವು ಕುಟುಂಬವಾಗಿ ಪ್ರೀತಿಯನ್ನು ಬೆಳೆಸಬೇಕೆಂದು ದೇವರು ಬಯಸುತ್ತಾನೆ. ನಮಗಾಗಿ ಕಡಿಮೆ ಆಸಕ್ತಿಯನ್ನು ಮತ್ತು ಇತರರ ವೇದನೆ ಮತ್ತು ಸಂಕಟಗಳ ಕುರಿತು ಹೆಚ್ಚಿನ ಆಸಕ್ತಿಯನ್ನು ಹೊಂದಿದವರಾಗಿರೋಣ. ನಿಮ್ಮ ಜೀವಿತದುದ್ದಕ್ಕೂ ನೀವು ಪೋಷಿಸಿದ ಈ ಸ್ವಾರ್ಥತೆಯ ಆತ್ಮವು ಸರಿಯಾಗಿ ಇನ್ನೊಂದು ಬದಿಯಲ್ಲಿದ್ದ ದುರ್ದೈವಿಯನ್ನು ದಾಟಿಹೋದ ಯಾಜಕ ಮತ್ತು ಲೇವಿಯನ್ನು ಪ್ರತಿನಿಧಿಸುತ್ತದೆ. ಅವನಿಗೆ ಸಹಾಯದ ಅಗತ್ಯವಿದೆ ಎಂದು ನೋಡಿದಾಗ್ಯೂ

ಉದ್ದೇಶ ಪೂರ್ವಕವಾಗಿ ಅವನಿಂದ ದೂರ ಇದ್ದರು.

(11) ಇತರರ ಆಶೀರ್ವಾದಕ್ಕಾಗಿ ದೇವರು ನಮ್ಮ ಮೇಲೆ  ಒಂದಲ್ಲ ಒಂದು ವಿಧದಲ್ಲಿ ಏನನ್ನು ಸುರಿಸಿದ್ದಾನೆ?

ಅವನು ಒಬ್ಬನಿಗೆ ಐದು ತಲಾಂತು ಒಬ್ಬನಿಗೆ ಎರಡು, ಒಬ್ಬನಿಗೆ ಒಂದು ಹೀಗೆ ಅವನವನ ಸಾಮರ್ಥ್ಯದ ಪ್ರಕಾರ ಕೊಟ್ಟು ಬೇರೊಂದು ದೇಶಕ್ಕೆ ಹೋದನು. (ಮತ್ತಾಯ 25:15).

ರಕ್ಷಣೆಯ ಸತ್ಯದ ಜ್ಞಾನಕ್ಕೆ ತರುವ ಅನೇಕ ಆತ್ಮಗಳಿವೆ. ತಪ್ಪಿಹೋದ ಮಗನು ತನ್ನ ತಂದೆಯ ಮನೆಯಿಂದ ಬಹಳ ದೂರವಿದ್ದನು, ಹಸಿವಿನಿಂದ ಸಾಯುತ್ತಿದ್ದನು. ಅವನು ನಮ್ಮ ಅನುಕಂಪದ ವಿಷಯವಾಗಿದ್ದಾನೆ. ನೀವು “ದೇವರು ತಮ್ಮ ಪಾಪದಲ್ಲಿ ನಾಶವಾಗುತ್ತಿರುವವರಿಗೆ ದೇವರು ಹೇಗೆ ಗೌರವ ತೋರಿಸುತ್ತಾನೆ? ಎಂದು ಕೇಳುತ್ತೀರೋ? ನಾನು ನಿಮಗೆ ಕಲ್ವಾರಿಯನ್ನು ಸೂಚಿಸುತ್ತೇನೆ. ದೇವರು “ತನ್ನ ಒಬ್ಬನೇ ಮಗನನ್ನು ಕೊಟ್ಟನು ಆತನನ್ನು ನಂಬುವ ಒಬ್ಬನಾದರೂ ನಾಶವಾಗದೇ ನಿತ್ಯಜೀವವನ್ನು ಪಡೆಯಬೇಕೆಂದು ಆತನನ್ನು ಕೊಟ್ಟನು.” ಯೋಹಾನ 3: 16. ರಕ್ಷಕನ ಅದ್ವಿತೀಯ ಪ್ರೀತಿಯನ್ನು ಯೋಚಿಸಿರಿ, ನಾವು ಇನ್ನೂ ಪಾಪಿಗಳಾಗಿದ್ದಾಗಲೇ

ಕ್ರಿಸ್ತನು ನಮ್ಮನ್ನು ನಿತ್ಯವಾದ ಮರಣದಿಂದ ರಕ್ಷಿಸಲು ಸತ್ತನು.

ಕ್ರಿಸ್ತನು ನಿಮ್ಮನ್ನು ಪ್ರೀತಿಸಿದ ಅಪಾವಾದ ಪ್ರೀತಿಗೆ ಬದಲಾಗಿ ಏನು ಕೊಡುವಿರಿ. ನೀವು ಆತನಿಗೆ ನಿಮ್ಮ ಕೃತಜ್ಞತಾಸ್ತುತಿ ಕಾಣಿಕೆಗಳನ್ನು ತರಬೇಕು. ನಿಮ್ಮನ್ನು ನೀವೇ ಕೃತಜ್ಞತಾ ಕಾಣಿಕೆಯಾಗಿ ಸಮರ್ಪಿಸಬೇಕು. ನಿಮ್ಮ ಸಮಯ, ನಿಮ್ಮ ತಲಾಂತು, ನಿಮ್ಮ ಸಂಪಾದನೆ – ಎಲ್ಲವೂ ಪ್ರೀತಿಯ ಬಂಧನದಲ್ಲಿ ತಪ್ಪಿಹೋದವರನ್ನು ರಕ್ಷಿಸಲು ಲೋಕದೆಡೆಗೆ ಹರಿಯಬೇಕು. ಯೇಸುವು ನಿಮಗೆ ಆತನ ಪ್ರೀತಿಯನ್ನು ಸ್ವೀಕರಿಸುವಂತೆ ಮಾಡಿದ್ದಾನೆ ಮತ್ತು ಸಂತೋಷದ ಸಹಕಾರದಲ್ಲಿ ಆತನೊಂದಿಗೆ ಅದರ ಪರಿಮಳದ ಪ್ರಭಾವದಲ್ಲಿ ಕೆಲಸಮಾಡುವಂತೆ ಮಾಡಿದ್ದಾನೆ. ಆತನು ನಿಮ್ಮ ಸ್ವಾಸ್ಥ್ಯವನ್ನು ನಿಸ್ವಾರ್ಥವಾದ ಸೇವೆಯಲ್ಲಿ ಉಪಯೋಗಿಸುವದನ್ನು ಬಯಸುತ್ತಾನೆ, ಆತ್ಮಗಳ ರಕ್ಷಣೆಯ ಆತನ ಯೋಜನೆ ಬಲದಿಂದ ಮುನ್ನಡೆಸಬೇಕು. ಆತನು ನೀವು ಅವಿಭಾಜಿತ ಶಕ್ತಿಯನ್ನು ಆತನ ಕಾರ್ಯಗಳಿಗೆ ನೀಡಬೇಕು ಎಂದು ಅಪೇಕ್ಷಿಸುತ್ತಾನೆ.

(12) ಕ್ರಿಸ್ತನ ಮೇಲಣ ಪ್ರೀತಿಯಿಂದಾಗಿ ತಮ್ಮ ತಲಾಂತುಗಳನ್ನು ಇತರರನ್ನು ಪ್ರೀತಿಸಲು ಮತ್ತು ಆಶೀರ್ವದಿಸಲು

ಉಪಯೋಗಿಸಿದವರು  ಯಾವ ಅದ್ಭುತವಾದ ಮಾತುಗಳನ್ನು ಆಲಿಸುವರು?

ಅವನ ದಣಿಯು ಅವನಿಗೆ – ಭಲಾ ನಂಬಿಗಸ್ತನಾದ ಒಳ್ಳೇ ಆಳು ನೀನು: ಸ್ವಲ್ಪ ಕೆಲಸದಲ್ಲಿ ನಂಬಿಗಸ್ತನಾಗಿದ್ದಿ, ದೊಡ್ಡ ಕೆಲಸದಲ್ಲಿ ನಿನ್ನನ್ನು ಇಡುತ್ತೇನೆ; ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು ಅಂದನು. (ಮತ್ತಾಯ 25:23).

ಕರ್ತನು ನಮಗೆ ವಹಿಸಿಕೊಟ್ಟಿರುವ ನಮ್ಮ ತಲಾಂತುಗಳನ್ನು ಉಪಯೋಗಿಸಿದ ರೀತಿಯನ್ನು ಸಂಶೋಧಿಸುತ್ತಾನೆ, ಆತನು ತನ್ನ ಸ್ವಂತ ರಕ್ತದಿಂದ ಮತ್ತು ತನ್ನ ಸ್ವ-ನಿರಾಕರಣೆಯಿಂದ ಮತ್ತು ತ್ಯಾಗ ಮತ್ತು ಕಷ್ಟಾನುಭವದಿಂದ  ವೇತನವನ್ನು ಸಂದಾಯಮಾಡಿದ್ದಾನೆ, ಪ್ರತಿಯೊಂದು ಆತ್ಮನ ಸ್ವ-ಇಚ್ಛೆಯ ಸೇವೆಯನ್ನು ದೇವರೊಂದಿಗೆ ಮಾಡಿದ ಪರಿಶ್ರಮವೆಂದು ಪರಿಗಣಿಸಿದ್ದಾನೆ. ಒಂದುವೇಳೆ ಎಲ್ಲರೂ ದೇವರಿಗೆ ತಮ್ಮ ಉತ್ತರದಾಯಿತ್ವವನ್ನು  ಪರಿಗಣಿಸಿದ್ದಲ್ಲಿ ಮತ್ತು ಜಾಣತನದಿಂದ ತಮಗೆ ವಹಿಸಿಕೊಟ್ಟ ವರಗಳನ್ನು ತಲಾಂತುಗಳನ್ನು ಯೇಸುಕ್ರಿಸ್ತನ ಮೂಲಕ ಎಂಥ ಆದಾಯವನ್ನು ತರುತ್ತದೆ. ಒಂದು ತಲಾಂತು ಉಪಯೋಗಿಸುವದರ ಮೂಲಕ

ಹೆಚ್ಚಾಗಬಹುದು. ಅತ್ಯಂತ ಸಣ್ಣ ವರ, ದೀನ ಸೇವೆ ಮನಸ್ಸುಗಳನ್ನು ತಲುಪಿ ಯಾರು ವಿಶಾಲವಾದ ತಲಾಂತುಗಳನ್ನು ಹೊಂದಿದ್ದಾರೋ ಅವರು ತಲುಪಲಾರದ ಮನಸ್ಸುಗಳನ್ನು ತಲುಪಬಹುದು.

ಈಗ ಕೆಲಸಮಾಡಲು ನಿಮ್ಮ ಅತ್ಯಂತ ಅನುಕೂಲಕರ ಸಮಯ. ವಯಕ್ತಿಕ ಬೆಟ್ಟಿಗೆ ದೊಡ್ಡ ಬೆಲೆಯಿದೆ. ಯೇಸು ಕ್ರಿಸ್ತನಲ್ಲಿರುವ ಪ್ರೀತಿ ಮತ್ತು ಮಾನವ ಆತ್ಮಗಳ ಮೇಲಿರುವ ಪ್ರೀತಿಯ ಸತ್ಯವನ್ನು ಪ್ರತಿಯೊಂದು ಕುಟುಂಬಕ್ಕೆ ಕೊಂಡೊಯ್ಯಬೇಕು, ಪ್ರತಿಯೊಂದು ಒಲೆಯ ಹತ್ತಿರ ಮಾತಾಡಬೇಕು ಅದು ನಿಮಗೆ ಮಾರ್ಗವನ್ನು ಕಂಡುಕೊಳ್ಳಲು.... ಪವಿತ್ರಾತ್ಮನು ಕೆಲಸಗಾರನಾಗಿದ್ದಾನೆ  ಎಂಬುದನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಿರಿ. ದೇವರಿಗಾಗಿ ಕೆಲಸ ಮಾಡುತ್ತಿರುವ ಮಾನವ ದೂತನು ಏಕಾಂಗಿಯಲ್ಲ.

ಧೃಡಪ್ರಯತ್ನದಿಂದ, ಹೃದಯದ ಕೋಮಲತೆಯಿಂದ. ಅನುಕಂಪದಿಂದ, ಪ್ರಾರ್ಥನಾಪೂರ್ವಕವಾಗಿ ಮತ್ತು ಪ್ರೀತಿಯಿಂದ ಮಾಡುವ ಕೆಲಸವು ಪ್ರಸಂಗಗಳಿಗಿಂತ ಹೆಚ್ಚಿನದನ್ನು ಮಾಡುತ್ತದೆ. ಕರ್ತನಾದ ಯೇಸು ತನ್ನ ಜೀವಿತವನ್ನು ಲೋಕವನ್ನು ಪಾಪದ ಶಾಪದಿಂದ ರಕ್ಷಿಸಲು  ನೀಡುವಾಗ , ನಮ್ಮ ಕಣ್ಣುಗಳು ಇನ್ನೂ ನೋಡದ

ಮಹತ್ತರ ಸಂಗತಿಗಳನ್ನು ಉದ್ದೇಶಿಸಿತ್ತು. ಪವಿತ್ರಾತ್ಮನು ಯಾರ ಮೂಲಕ ಕಾರ್ಯವನ್ನು ನಿರ್ವಹಿಸಬೇಕು ಎಂದು ಮಾರ್ಗಗಳನ್ನು ಹುಡುಕುತ್ತಿದ್ದಾನೆ. ಸೈತಾನನು ಯಾವಾಗಲೂ ಜಯವನ್ನು ಹೊಂದುವದಿಲ್ಲ. ದೇವರಾತ್ಮನು ಪಾತ್ರೆಗಳು ಸ್ವೀಕರಿಸಲು ಸಿದ್ದವಾದ ತಕ್ಷಣ ಸಭೆಯ ಮೇಲೆ ಸುರಿಸಲ್ಪಡುತ್ತಾನೆ.

ಯಾರನ್ನು ದಣಿವಿಲ್ಲದ ಪ್ರಯತ್ನಗಳಿಂದ ನಡೆಸಿಕೊಳ್ಳಬೇಕು ಎಂದು ನಾನು ಈಗ ತಿಳಿದುಕೊಂಡಿದ್ದೇನೆ ಮತ್ತು ಕರುಣೆಗೆ ಅರ್ಹರಾಗಿರುವವರು ಅತ್ಯಲ್ಪವಾಗಿದ್ದಾರೆ. ನಾನು ಕ್ರಿಸ್ತನನ್ನು ಆತನ ಸಹಾನುಭೂತಿ, ಅನುಕಂಪ, ಹೃದಯ ತುಂಬಿದ ಪ್ರೀತಿಯಿಂದ ತುಂಬುವಂತೆ ಕೇಳಿಕೊಳ್ಳುತ್ತೇನೆ. ನಾನು ಅದನ್ನು ಈ ವ್ಯಕ್ತಿಗಳಿಗೆ ಮತ್ತು ನನ್ನ ಸಂಪರ್ಕದಲ್ಲಿ ಬರುವ ಎಲ್ಲರಿಗೂ ಪ್ರತಿಬಿಂಬಿಸಲು ಬಯಸುತ್ತೇನೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ನಾನು ದೇವರಾತ್ಮನು ನನ್ನಲ್ಲಿ ನೆಲೆಸುವಂತೆ ಪ್ರಾರ್ಥಿಸುತ್ತೇನೆ, ನಾನು ಆತನಿಗಾಗಿ ಹಿಂಸೆಗೆ ಒಳಗಾಗುವಾಗ ನಾನು ಹಗೆತನಕ್ಕೆ ಬದಲಾಗಿ ಪ್ರೀತಿಯನ್ನು ಮತ್ತು ಕೆಟ್ಟತನಕ್ಕೆ ಬದಲಾಗಿ ಒಳ್ಳೆಯದನ್ನು ನೀಡಲು

ಬಯಸುತ್ತೇನೆ. ನಾನು ಕ್ರೂಜೆಯ ಮೇಲೆ ಕ್ರಿಸ್ತನು ಪ್ರದರ್ಶಿಸಿದ ಅದೇ ಕ್ಷಮಾಪಣೆಯ ಆತ್ಮವನ್ನು ಬಯಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ವಿಮೋಚನೆಯ ಯೋಜನೆಯು ಹೇಗೆ ಪ್ರಾರಂಭವಾಗಿದೆ ಮತ್ತು ಬಹುಮಾನದೊಂದಿಗೆ ಮುಕ್ತಾಯವಾಗಿದೆ ಎಂದು ನಾನು ನೋಡಿದ್ದೇನೆ ಮತ್ತು ಅದನ್ನು ಇತರರ ರಕ್ಷಣೆಗಾಗಿ ಮುನ್ನಡೆಸುವದು ನನ್ನ ಸೌಭಾಗ್ಯವಾಗಿದೆ, ನಾನು ದೇವರ ಆತ್ಮನು ನನ್ನನ್ನು ಈ ಸೌಭಾಗ್ಯದ ನಂಬಿಗಸ್ತ ಮೇಲ್ವಿಚಾರಕನಾಗಿರಲು ಮತ್ತು ಇತರರ ಆಶೀರ್ವಾದಕ್ಕಾಗಿ ಆತನು ನನಗೆ ನೀಡಿರುವ ತಲಾಂತುಗಳನ್ನು ಮತ್ತು ಸಂಪನ್ಮೂಲಗಳನ್ನು ಬಲಪಡಿಸುವಂತೆ ಪ್ರಾರ್ಥಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ನನಗೆ ತಂದೆಯ ಬಾಯಿಂದ ಆ ಆಶೀರ್ವಾದದಾಯಕವಾದ ಮಾತುಗಳನ್ನು ಆಲಿಸುವದು ನನ್ನ ಹೃದಯದ ಬಯಕೆಯಾಗಿದೆ “ಭಲಾ ನಂಬಿಗಸ್ತನಾದ ಒಳ್ಳೆಯ ಆಳು, ನಿನ್ನ ದಣಿಯ ಸೌಭಾಗ್ಯದಲ್ಲಿ ಸೇರು.” ಮತ್ತು ನಾನು ನನ್ನ ಕಿರೀಟವನ್ನು

ಸಂತೋಷದಿಂದ ಆತನ ಪಾದಗಳ ಬಳಿಯಲ್ಲಿ ಇರಿಸಿ ಮಹಿಮೆಯನ್ನು ಆತನಿಗೇ ಸಲ್ಲಿಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ



ಪಾಠ 19

ಪ್ರೀತಿಯ ಪರಿಣಾಮ

(1) “ಬೆಳಕಿನಲ್ಲಿ ನೆಲೆಯಾಗಿರುವದು” ಅಂದರೇನು ಮತ್ತು ಅದನ್ನು ನಮ್ಮ ಜೀವಿತಗಳಿಗೆ ಅನ್ವಯಿಸಿಕೊಂಡರೆ ಅದರ ಫಲಿತಾಂಶವೇನು?

ತನ್ನ ಸಹೋದರನನ್ನು ಪ್ರೀತಿಸುವವನು ಬೆಳಕಿನಲ್ಲಿ ನೆಲೆಗೊಂಡಿದ್ದಾನೆ ಮತ್ತು ಅವನಲ್ಲಿ ವಿಘ್ನಕರವಾದದ್ದು ಏನೂ ಇಲ್ಲ’” (1ಯೋಹಾನ 2:10).

ಆತನು ಬೆಳಕಾಗಿದ್ದಾನೆ. ದೇವರು ತನ್ನಿಂದಲೇ ಪ್ರಕಾಶಿಸುವ ಬೆಳಕಿನ ಪ್ರಕಾಶದಿಂದಾಗಿ ನಿರಂತರವಾಗಿ ಬೆಳಕಿನಿಂದ ಸುತ್ತುವರೆದಿದ್ದಾನೆ. ಕ್ರೈಸ್ತರಿಗೆ ಉತ್ತಮವಾದ ಮಾರ್ಗವೆಂದರೆ ದೇವರಿಂದ ಪ್ರಕಾಶಿಸುವ ಬೆಳಕಿನ ಕಿರಣಗಳಲ್ಲಿ ನಡೆಯುವದಾಗಿದೆ. ಕತ್ತಲೆಯಿಂದ ತುಂಬಿದ ಅಪರಿಚಿತವಾದ ಮಾರ್ಗದಲ್ಲಿ ಬೆಳಕಿನ ಮಾರ್ಗದರ್ಶನದಲ್ಲಿ ನಡೆಯುವ

ಪ್ರಯಾಣಿಕನಂತೆ. ದೇವರ ಮಕ್ಕಳು ಜೀವಿತದ ಮಾರ್ಗದಲ್ಲಿ ದೇವರ ಬೆಳಕನ್ನು ಹಿಂಬಾಲಿಸಿ ನಡೆಯುತ್ತಾರೆ (2ಕೊರಿಂಥ 4:6; ಎಫೆಸ 5:8).

ನಾವು ಬೆಳಕಿನಲ್ಲಿ ನಡೆಯುವವರಾದರೆ ನಾವು ಬೆಳಕು ಪ್ರಕಾಶಿಸುವ ದೇವರೊಂದಿಗೆ ನಡೆಯುತ್ತೇವೆ ಮತ್ತು ಆತನೊಂದಿಗೆ ಅನ್ಯೋನ್ಯತೆಯನ್ನು ಹೊಂದುವದು ಮಾತ್ರವಲ್ಲ ಬದಲಾಗಿ ಕರ್ತನನ್ನು ಹಿಂಬಾಲಿಸುವ ಎಲ್ಲರೊಂದಿಗೆ ಅನ್ಯೋನ್ಯತೆಯನ್ನು ಹೊಂದುತ್ತೇವೆ. ಒಂದೇ ದೇವರ ಸೇವೆಯನ್ನು ಮಾಡುವದು, ಒಂದೇರೀತಿಯ ಸತ್ಯಗಳನ್ನು ನಂಬುವದು ಜೀವಿತದ ಹಾದಿಯಲ್ಲಿ ಒಂದೇ ರೀತಿಯ ಸೂಚನೆಗಳನ್ನು ಅನುಸರಿಸುವಾಗ ನಾವು ಜೀವಿತದಲ್ಲಿ ಐಕ್ಯತೆಯಿಂದ ಇರುವದರಲ್ಲಿ ವಿಫಲರಾಗುವದಿಲ್ಲ. ನಮ್ಮ ಮತ್ತು ನಮ್ಮ ಸಹೋದರರ ಮಧ್ಯದಲ್ಲಿರುವ ಚಿಕ್ಕ ತಪ್ಪಾದ ವಿಚಾರ  ನಮ್ಮನ್ನು ನಮ್ಮ ನಡತೆಯನ್ನು ಪುನಃ ಪರಿಶೀಲಿಸಲು ನಡೆಸುತ್ತದೆ, ನಾವು ಜೀವಿತದ ಬೆಳಕಿನ ಮಾರ್ಗದಿಂದ ಮನಸ್ಸನ್ನು ತಿರುಗಿಸುವದಿಲ್ಲ,

ದೇವರು ಪ್ರೀತಿಸ್ವರೂಪಿಯಾಗಿದ್ದಾನೆ (4:8), ದೇವರು ಬೆಳಕಾಗಿದ್ದಾನೆ (1:5) ಯಾರು ತನ್ನ ಸಹೋದರನನ್ನು ಹಗೆತನವನ್ನು ಸೃಷ್ಟಿಸುವ ಪರಿಸ್ಥಿತಿಗಳಿಗೆ

ವಿರೋಧವಾಗಿ ಪ್ರೀತಿಸುತ್ತಾನೋ ಅವನು ದೇವರೊಂದಿಗೆ ಜೀವಿಸುವವನಾಗಿದ್ದಾನೆ ಮತ್ತು ಆತನ ಬೆಳಕಿನಲ್ಲಿ ವಾಸಿಸುವವನಾಗಿದ್ದಾನೆ.

ಯಾರು ಹಗೆಮಾಡುತ್ತಾರೋ. ಆತನು ಪ್ರೀತಿಸುವವನಿಗಿಂತ  ಸಂಪೂರ್ಣವಾಗಿ ವ್ಯತ್ಯಾಸವಾಗಿದ್ದಾನೆ (ವ 10). ಜೀವಕೊಡುವ ದೇವರ ಬೆಳಕಿನಲ್ಲಿ ನೆಲೆಗೊಳ್ಳುವದು ಅಥವಾ ವಾಸಿಸುವದಕ್ಕೆ ಬದಲಾಗಿ  ಅವನು ಆತ್ಮೀಕ ಕತ್ತಲೆಯಲ್ಲಿ ವಾಸಿಸುವವನಾಗಿದ್ದಾನೆ.

(2) ನಾವು ಇತರರನ್ನು ಅತ್ಯಾಸಕ್ತಿಯಿಂದ ಅವರು ನಮ್ಮನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂದು ಪರಿಗಣಿಸದೇ ಪ್ರೀತಿಸಿದರೆ, ಇದು ಅವರೊಂದಿಗೆ ನಮ್ಮ ಸಂಬಂಧದಲ್ಲಿ ಏನನ್ನು ನೆರವೇರಿಸುತ್ತದೆ?

ಮೊಟ್ಟ ಮೊದಲು ನಿಮ್ಮ ನಿಮ್ಮೊಳಗೆ ಯಥಾರ್ಥ ಪ್ರೀತಿಯಿರಲಿ;  ಪ್ರೀತಿಯು ಬಹು ಪಾಪಗಳ ಮುಚ್ಚುತ್ತದೆ ಗುಣಗುಟ್ಟದೆ ಒಬ್ಬರಿಗೊಬ್ಬರು ಅತಿಥಿ ಸತ್ಕಾರ ಮಾಡಿರಿ. (1ಪೇತ್ರ 4:8).

ದೀರ್ಘಕಾಲ ಕಷ್ಟಾನುಭವಕ್ಕೆ ಒಳಗಾಗಿರುವ ಪ್ರೀತಿ ದಯೆಯುಳ್ಳದ್ದಾಗಿದ್ದರು ಅದು ಕ್ಷಮಿಸಲಾರದ ಅಪರಾಧವನ್ನು

ಯುಕ್ತಾಯುಕ್ತ ಪರಿ ಜ್ಞಾನ ವಿಲ್ಲದೇ ದೊಡ್ಡದಾಗಿ ಮಾಡುವದಿಲ್ಲ, ಇಲ್ಲವೇ ಇತರರ ತಪ್ಪುಗಳನ್ನು ದೊಡ್ಡದು ಮಾಡುವದಿಲ್ಲ. ವೇದವಾಕ್ಯವು ಸರಳವಾಗಿ ಬೋಧಿಸುತ್ತದೆ ತಪ್ಪು ಮಾಡುವವರನ್ನು ಸಹನೆಯಿಂದ ನಡೆಸಿಕೊಳ್ಳಬೇಕು ಮತ್ತು ಪರಿಗಣಿಸಬೇಕು. ಒಂದುವೇಳೆ ಸರಿಯಾದ ಪಥವನ್ನು ಅನುಸರಿಸಿದ್ದಲ್ಲಿ ನಿಜವಾಗಿಯೂ ಮೊಂಡುತನದ ಹೃದಯವನ್ನು ಕ್ರಿಸ್ತನಿಗಾಗಿ ಗೆದ್ದುಕೊಳ್ಳಬಹುದು. ಯೇಸುವಿನ ಪ್ರೀತಿ ಅಸಂಖ್ಯಾತ ಪಾಪಗಳನ್ನು ಮುಚ್ಚುತ್ತದೆ. ಆತನ ಕೃಪೆ ಇನ್ನೊಬ್ಬರ ತಪ್ಪುಗಳನ್ನು ಸಕಾರಾತ್ಮಕವಾದ ಅಗತ್ಯತೆಯಿಲ್ಲದೇ ಬಹಿರಂಗಪಡಿಸುವತ್ತ ನಡೆಸುವದಿಲ್ಲ.

(3) ನಾವು ನಿಜವಾಗಿಯೂ ಕರ್ತನನ್ನು ನಮ್ಮ ಪೂರ್ಣ ಹೃದಯ, ಪ್ರಾಣ, ಬುದ್ಧಿ ಮತ್ತು ಶಕ್ತಿಯಿಂದ ಪ್ರೀತಿಸುವಾಗ ನಾವು ನಮ್ಮ ನೆರೆಯವರನ್ನು ಹೇಗೆ ನಡೆಸಿಕೊಳ್ಳುತ್ತೇವೆ?

ನಿನ್ನ ನೆರೆಯವನನ್ನು ನಿನ್ನಂತೆಯೇ ಪ್ರೀತಿಸಬೇಕು ಎಂಬದೇ ಎರಡನೆಯ ಆಜ್ಞೆ ಇವುಗಳಿಗಿಂತ ಹೆಚ್ಚಿನ ಆಜ್ಞೆ ಮತ್ತೊಂದಿಲ್ಲ. (ಮಾರ್ಕ 12:31).

ಇದು ಅತ್ಯಂತ ಶ್ರೇಷ್ಠವಾದ ಮತ್ತು ಅತ್ಯಂತ ಅಪಾಯಕಾರಿಯಾದ ಮೋಸತನವಾಗಿದೆ ಮನುಷ್ಯನು ತನ್ನ

ಸಹೋದರನ ಮೇಲೆ ಕ್ರಿಸ್ತನಂತ ಪ್ರೀತಿಯನ್ನು ಹೊಂದದೇ ತನ್ನ ನಿತ್ಯತ್ವದ ವರೆಗೆ ನಂಬಿಕೆಯನ್ನು ಹೊಂದಿರಬಹುದು. ಯಾರು ದೇವರನ್ನು ಮತ್ತು ನೆರೆಯವರನ್ನು ಪ್ರೀತಿಸುತ್ತಾರೋ ಅವರು ಬೆಳಕಿನಿಂದ ಮತ್ತು ಪ್ರೀತಿಯಿಂದ ತುಂಬಿರುತ್ತಾರೆ. ದೇವರು ಅವನಲ್ಲಿರುತ್ತಾನೆ ಮತ್ತು ಅವನ ಸುತ್ತಲೂ ಇರುತ್ತಾನೆ. ಕ್ರೈಸ್ತರು ತಮ್ಮ ಸುತ್ತಲೂ ಇರುವ ಆತ್ಮಗಳನ್ನು ಕ್ರಿಸ್ತನು ಅವರಿಗಾಗಿ ಸತ್ತನು ಎಂದು ಅವರನ್ನು ಪ್ರೀತಿಸುತ್ತಾರೆ. ಪ್ರೀತಿಯಿಲ್ಲದ ಕ್ರೈಸ್ತರು ಅನ್ನುವದು ಇಲ್ಲವೇ ಇಲ್ಲ ಯಾಕಂದರೆ "ದೇವರು ಪ್ರೀತಿಸ್ವರೂಪಿಯಾಗಿದ್ದಾನೆ" ಮತ್ತು "ಇದರಿಂದಾಗಿ ನಾವು ಆತನ ಆಜ್ಞೆಗಳನ್ನು ಕೈಕೊಂಡು ನಡೆದರೆ ನಾವು ಆತನನ್ನು ತಿಳಿದಿದ್ದೇವೆ ಎಂದು ಬಲ್ಲವರಾಗಿದ್ದೇವೆ." ಆತನನ್ನು ತಿಳಿದಿದ್ದೇನೆ ಎಂದು ಹೇಳಿ ಆತನ ಆಜ್ಞೆಗಳನ್ನು ಕೈಕೊಂಡು ನಡೆಯದಿದ್ದಲ್ಲಿ , ಅವನು ಮೋಸಗಾರನಾಗಿದ್ದಾನೆ ಮತ್ತು ಸತ್ಯವೆಂಬುದು ಅವನಲಿಲ್ಲ." ನಾನು ನಿಮ್ಮನ್ನು ಪ್ರೀತಿಸಿದಂತೆ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ." ಈ ಫಲವನ್ನು ನಾವು ತಿರುಗಿ ದೇವರಿಗೆ ಕೊಡಬೇಕಾಗಿದೆ.

(4) ದೇವರ ಧರ್ಮಶಾಸ್ತ್ರದ ಸ್ವಾತಂತ್ರ ಮತ್ತು ಪ್ರೀತಿಯ ಸೌಂದರ್ಯವನ್ನು ದೃಷ್ಟಿಸಿದ ನಂತರ ಕ್ರೈಸ್ತರು ತಮ್ಮ

ಗುಣಲಕ್ಷಣಕ್ಕೆ ಆಶೀರ್ವಾದವನ್ನು ಮತ್ತು ಬಲವನ್ನು ತರುವಂಥ ಏನನ್ನು ಮಾಡಬೇಕು?

ಆದರೆ ಬಿಡುಗಡೆಯನ್ನುಂಟುಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷಕೊಟ್ಟು ನೋಡಿ ಇನ್ನೂ ನೋಡುತ್ತಲೆ ಇರುವವನು ವಾಕ್ಯವನ್ನು ಕೇಳಿ ಮರೆತುಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು. (ಯಾಕೋಬ 1:25).

ಒಬ್ಬ ಮನುಷ್ಯನು ತನ್ನ ಕೈಗಳನ್ನು ಉಪಯೋಗಿಸದಿದ್ದರೆ, ಅದು ಬಲಹೀನ ಮತ್ತು ಮಾಂಸಖಂಡಗಳ ಬಲದ ಕೊರತೆಯಿಂದ ನರಳುತ್ತದೆ.  ಕ್ರೈಸ್ತರು ತಮ್ಮ ಆತ್ಮೀಕ ಬಲವನ್ನು ಉಪಯೋಗಿಸದಿದ್ದರೆ ಅವನು ತನ್ನ ಗುಣಲಕ್ಷಣದಲ್ಲಿ ಯಾವ ಬಲವನ್ನೂ ಹೊಂದಿಕೊಳ್ಳುವದಿಲ್ಲ, ನೈತೀಕ ಬಲವು ಇರುವದಿಲ್ಲ. ಪ್ರೀತಿಯು ಬಹಳ ಅಮೂಲ್ಯವಾದ ಸಸ್ಯವಾಗಿದೆ ಅದು ಅಭಿವೃದ್ಧಿ ಹೊಂದಬೇಕಾದರೆ ಅದನ್ನು ಬೆಳೆಸಬೇಕು. ಅಮೂಲ್ಯವಾದ ಪ್ರೀತಿಯ ಸಸ್ಯವನ್ನು ಕೋಮಲತೆಯಿಂದ (ಅಭ್ಯಾಸಿಸುವಾಗ), ಮತ್ತು ಅದು ಬಲವಾಗಿ ಮತ್ತು ಸತ್ವಯುತವಾಗಿ ಮತ್ತು ಫಲಕೊಡುವದರಲ್ಲಿ ಸಮೃದ್ಧಿಯಾಗಿರುತ್ತದೆ ಮತ್ತು ಸಂಪೂರ್ಣ ನಡತೆಗೆ ಶೈಲಿಯನ್ನು

ನೀಡುತ್ತದೆ. ಕ್ರಿಸ್ತನಂತ ಸ್ವರೂಪ ನಿಸ್ವಾರ್ಥ, ದಯೆಯಿಲ್ಲದ ಮತ್ತು ಸೈತಾನನ ಶೋಧನೆಯಿಂದ ಹೋರಾಡುತ್ತಿರುವವರಿಗೆ ನೋವನ್ನುಂಟು ಮಾಡುವದಿಲ್ಲ. ಅದು ಯಾರು ತಾಪತ್ರಯ ಮತ್ತು ಶೋಧನೆಗಳು ಒಳಗಾಗಿರುತ್ತಾರೋ ಅವರ ಭಾವನೆಗಳನ್ನು ಪ್ರವೇಶಿಸಿ ಕಲ್ಮಶವನ್ನು ತೆಗೆದು ಹಾಕಿ ಬಂಗಾರವನ್ನು ಹೊರತೆಗೆಯಬೇಕೆಂದು ಬಯಸುತ್ತಾರೆ.

ಈ ಅಭ್ಯಾಸವನ್ನು ದೇವರು ಎಲ್ಲರಿಗೂ ನಿಯೋಜಿಸಿದ್ದಾನೆ. ಕ್ರಿಸ್ತನ ಈ ಶಾಲೆಯಲ್ಲಿ, ಎಲ್ಲರೂ ಪ್ರತಿನಿತ್ಯ ತಮ್ಮ ಪಾಠಗಳನ್ನು ಕಲಿಯಬಹುದು, ಶಿಕ್ಷಕರು ಮತ್ತು ವಿದ್ಯಾರ್ಥಿಗಳು, ತಾಳ್ಮೆ, ದೀನತೆ, ಉದಾರತೆ, ಘನತೆಯನ್ನು ಕಲಿಯಬಹುದು. ನೀವು ಪ್ರಾರ್ಥನೆಯಲ್ಲಿ ಜೀವಿಸುವ ನಂಬಿಕೆಯನ್ನು ಬೆರೆಸಿ ದೇವರನ್ನು ಅತ್ಯಂತ ಆಸಕ್ತಿಯಿಂದ ಹುಡುಕಬೇಕು ಮತ್ತು ರೂಪಿಸುವ ದೇವರ ಕೈಗಳು ನಿಮ್ಮ ಗುಣಲಕ್ಷಣಗಳಲ್ಲಿ ಆತನ ಸ್ವರೂಪವನ್ನು ಹೊರತರುತ್ತವೆ, ಶೋಧನೆಗಳು ಬರುತ್ತವೆ, ಆದರೆ ಜಯಿಸುವದಿಲ್ಲ. ತಟ್ಟುವದು ಮತ್ತು ಯೇಸುವಿನ ಧ್ವನಿಗೆ ಹೃದಯವನ್ನು ತೆರೆಯುವಾಗ ಕೃಪೆಯು ದೊರೆಯುತ್ತದೆ. ಕ್ರೈಸ್ತ ಗುಣಲಕ್ಷಣ ಮತ್ತು ಅನುಭವ ಹೆಚ್ಚು ಹೆಚ್ಚು ಸೌಂದರ್ಯದಿಂದ

ಮತ್ತು ಪರಲೋಕದವುಗಳಾಗಿ ಬೆಳೆಯುತ್ತವೆ.

ನಾವು ತನನ್ನೇ ನೀಡುವ ಅಪರಿಮಿತವಾದ ಬೆಲೆಯ ಮೂಲಕ ಕ್ರಿಸ್ತನು ಕೊಂಡುಕೊಂಡ ಆತ್ಮಗಳೊಂದಿಗೆ ವ್ಯವಹರಿಸುತ್ತಿದ್ದೇವೆ ಎಂಬುದನ್ನು ಜ್ಞಾಪಿಸಿಕೊಳ್ಳೋಣ. ಓ ತಪ್ಪು ಮಾಡುವವರಿಗೆ ಹೇಳಿರಿ, ದೇವರು ನಿಮ್ಮನ್ನು ಪ್ರೀತಿಸುತ್ತಾನೆ, ದೇವರು ನಿಮಗಾಗಿ ಸತ್ತಿದ್ದಾನೆ. ಅವರಿಗಾಗಿ ಅಳಿರಿ, ಅವರೊಂದಿಗೆ ಪ್ರಾರ್ಥಿಸಿರಿ, ಅವರಿಗಾಗಿ ಕಣ್ಣೀರಿಡಿರಿ, ಅವರ ಮೇಲೆ ಕೋಪಗೊಳ್ಳ ಬೇಡಿರಿ. ಅವರು ಕ್ರಿಸ್ತನಿಂದ ಕೊಂಡುಕೊಂಡ ಸ್ವಾಸ್ತ್ಯವಾಗಿದ್ದಾರೆ. ಪ್ರತಿಯೊಬ್ಬರೂ ಪ್ರೀತಿಯನ್ನು ವ್ಯಕ್ತಪಡಿಸುವ ಗುಣಲಕ್ಷಣವನ್ನು ಈ ಎಲ್ಲಾ ಕ್ರಿಯೆಗಳಲ್ಲಿ ಹುಡುಕಿರಿ. “ಈ ಚಿಕ್ಕವರಲ್ಲಿ ಒಬ್ಬನಿಗೆ ಯಾವನಾದರೂ ಅಡ್ಡಿಯಾದರೆ ಅಂಥವನ ಕೊರಳಿಗೆ ಬೀಸುವ ಕಲ್ಲನ್ನು ಕಟ್ಟಿ ಅವನನ್ನು ಆಳವಾದ ಸಮುದ್ರದಲ್ಲಿ ಮುಣುಗಿಸಿಬಿಡುವದು ಅವನಿಗೆ ಹಿತವಾಗುವದು. ” ಕ್ರಿಸ್ತನು ಆತನ ಗುಣಲಕ್ಷಣದಲ್ಲಿ ಪ್ರಕಟಿಸಿದ ಮತ್ತು ತನ್ನ ಮಕ್ಕಳಿಗೆ ಅಪ್ಪಣೆ ಮಾಡಿದ ಆತನ ಪ್ರೀತಿಯನ್ನು ಶೂನ್ಯತೆಯಲ್ಲಿ ತಂದು ಜೀವಿಸುವದಕ್ಕಿಂತ ದಿನದಿಂದ ದಿನಕ್ಕೆ ನಿರ್ಗಮಿಸುವದು ಉತ್ತಮ. “ನಾನು ನಿಮ್ಮನ್ನು ಪ್ರೀತಿಸಿದಂತೆ ನೀವು

ಒಬ್ಬರನ್ನೊಬ್ಬರು ಪ್ರೀತಿಸಿರಿ” ಎಂದು ಕ್ರಿಸ್ತನು ಹೇಳಿದ್ದಾನೆ. ನಾವು ಕಠಿಣ, ಭಾವನಾರಹಿತ, ಉದಾರತೆಯಿಲ್ಲದ ಲೋಕದಲ್ಲಿ ಜೀವಿಸುತ್ತಿದ್ದೇವೆ. ಸೈತಾನ ಮತ್ತು ಆತನ ಒಳಸಂಚು ಕ್ರಿಸ್ತನು ತನ್ನ ಅಮೂಲ್ಯ ಜೀವವನ್ನು ನೀಡಿದ ಆತ್ಮಗಳನ್ನು ದುರ್ಮಾರ್ಗಕ್ಕೆ ಎಳೆಯಲು ತನ್ನ ಪ್ರತಿಯೊಂದು ಕಲೆಯನ್ನು ಎಡೆಬಿಡದೆ ಪ್ರಯತ್ನಿಸುತ್ತಿದೆ. ದೇವರನ್ನು ಪ್ರೀತಿಸುವ ಪ್ರತಿಯೊಬ್ಬರೂ ಪ್ರಾಮಾಣಿಕತೆಯಿಂದ ಮತ್ತು ಸತ್ಯದಿಂದ, ಕ್ರಿಸ್ತನು ತನ್ನ ಪ್ರಾಣವನ್ನು ನೀಡಿರುವ ಆತ್ಮಗಳನ್ನು  ಪ್ರೀತಿಸಬೇಕು.

(5) ಕ್ರಿಸ್ತನಂತ ಪ್ರೀತಿಯೊಂದಿಗೆ ನಾವು ಇತರರಿಗೆ ಪರೋಪಕಾರದ ವರವನ್ನು ನೀಡುವುದಾದರೆ ಅದರ ಫಲಿತಾಂಶವೇನು?

ಕೊಡಿರಿ, ಆಗ ನಿಮಗೂ ಕೊಡುವರು; ಜಡಿದು ಅಲ್ಲಾಡಿಸಿ ಹೊರಚೆಲ್ಲುವ ಹಾಗೆ ತುಂಬಾ ಅಳತೆಯನ್ನು ಅಳೆದು ನಿಮ್ಮ ಸೆರಗಿಗೆ ಹಾಕುವರು, ನೀವು ಅಳೆಯುವ ಅಳತೆಯಿಂದಲೇ ನಿಮಗೂ ಅಳೆಯುವರು ಅಂದನು. (ಲೂಕ 6:38).

ನಾವು ಬಹುಮಾನವನ್ನು ಯೋಚಿಸುವವರಲ್ಲ, ಆದರೆ ಸೇವೆ ಮಾಡುವವರು; ಆದರೆ ಈ ಉತ್ಸಾಹದಲ್ಲಿ ತೋರಿಸಿದ ಕರುಣೆ ಬಹುಮಾನವಿಲ್ಲದೇ ಹೋಗುವದಿಲ್ಲ.

“ಅಂತರಂಗದಲ್ಲಿ ನಡೆಯುವದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು” ದೇವರು ತಾನೇ ದೊಡ್ಡ ಬಹುಮಾನವಾಗಿದ್ದಾನೆ ಎಂಬುದು ನಿಜವಾಗಿರುವಾಗ, ಅದು ಇತರ ಎಲ್ಲವನ್ನೂ ಅಪ್ಪಿಕೊಳ್ಳುತ್ತದೆ, ಆತ್ಮವು ಆತನನ್ನು ಸ್ವೀಕರಿಸುತ್ತದೆ ಮತ್ತು ಅದು ಗುಣಲಕ್ಷಣದಲ್ಲಿ ತದ್ರೂಪವಾದಾಗ ಆತನಲ್ಲಿ ಮಾತ್ರ ಅನಂದಿಸುತ್ತದೆ. ಒಂದೇ ರೀತಿಯಲ್ಲಿರುವದು ತನ್ನಂತೇ ಇರುವದನ್ನು ಪ್ರಶಂಶಿಸುತ್ತದೆ. ನಾವು ಮಾನವತೆಯ ಸೇವೆಗಾಗಿ ನಮ್ಮನ್ನೇ ನೀಡುವಾಗ ಆತನು ತನ್ನನ್ನೇ ನಮಗೆ ನೀಡುತ್ತಾನೆ.

ಆ ಸಮೃದ್ಧಿಯಾದ ಬಹುಮಾನವನ್ನು ತನ್ನಲ್ಲಿಯೇ ಸ್ವೀಕರಿಸಿಕೊಳ್ಳುವವರೆಗೆ ಯಾರೂ ತನ್ನ ಸ್ವಂತ ಹೃದಯದಲ್ಲಿ ಮತ್ತು ಜೀವಿತದಲ್ಲಿ ದೇವರ ಆಶೀರ್ವಾದದ ತೊರೆಗಳು ಇತರೆಡೆಗೆ ಹರಿಯಲು ಸ್ಥಳವನ್ನು ಕೊಡಲಾರರು. ಬೆಟ್ಟಗುಡ್ಡಗಳು ಮತ್ತು ಸಮತಟ್ಟಾದ ಪ್ರದೇಶಗಳು ಬೆಟ್ಟಗಳ ತೊರೆಗಳಿಗೆಸಮುದ್ರವನ್ನು ತಲುಪಲು ಸಹಾಯ ಮಾಡುವದರಿಂದ ಯಾವುದೇ ನಷ್ಟವನ್ನು ಅನುಭವಿಸುವದಿಲ್ಲ, ಅವರು ಕೊಡುವದಕ್ಕೆ ನೂರು ಪಟ್ಟು ಹೆಚ್ಚಾಗಿ ಕೊಡಲ್ಪಡುತ್ತದೆ. ಯಾಕಂದರೆ ತನ್ನ ಮಾರ್ಗದಲ್ಲಿ ಹಾಡುತ್ತ ಹೋಗುವ ತೊರೆ ತನ್ನ ಹಿಂದೆ ಹಸಿರನ್ನು ಮತ್ತು

ಫಲದಾಯಕತೆಯನ್ನು ಬಿಟ್ಟು ಹೋಗುತ್ತದೆ, ಹೂವುಗಳು ಸಮೃದ್ಧಿಯಾಗಿರುತ್ತವೆ.

ಬೇಸಿಗೆಯಲ್ಲಿ ಭೂಮಿಯು ಬರುಡಾಗಿಯೂ ಮತ್ತು ಒಣಗಿಯೂ ಇರುವಾಗ ಸುಡುವ ಬಿಸಿಲು, ಹಸಿರಿನ ಒಂದು ಸಾಲು ನದಿ ಹತ್ತಿರವಿದೆ ಎಂದು ತಿಳಿಸುತ್ತದೆ; ಮತ್ತು ಸಮತ್ತಟ್ಟಾದ ಬೆಟ್ಟದ ಸಂಪತ್ತನ್ನು ಸಮುದ್ರಕ್ಕೆ ಸೇರಿಸಲು ತನ್ನ ಎದೆಯನ್ನು ತೆರೆದಿರುವಾಗ  ತಾಜಾತನವನ್ನು ಮತ್ತು ಸೌಂದರ್ಯವನ್ನು ಧರಿಸಿರುತ್ತದೆ, ಯಾರು ತಮ್ಮನ್ನು ತಾವೇ  ಅದು ಲೋಕದಲ್ಲಿ ಹರಿಯಲು ಸಾಧನವಾದ ದೇವರ ಕೃಪೆಯಲ್ಲಿ ಪಾಲನ್ನು ಕೊಡಲು ನೀಡುತ್ತೇವೋ ಅವು ಈ  ಪರಿಹಾರಕ್ಕೆ ಸಾಕ್ಷಿಯಾಗಿರುತ್ತವೆ. {MB 81-82}

(6) ಆಶೀರ್ವಾದದಾಯಕವಾದ ವಿಮೋಚನೆಯ  ವರಗಳನ್ನು ಸ್ವೀಕರಿಸಿದವರಾದ ನಾವು ಅದರೊಂದಿಗೆ ಇತರರಿಗೆ ಮಾಡುವ ಸೌಭಾಗ್ಯ ಮತ್ತು ಉನ್ನತವಾದ ಕರೆ ಯಾವುದು?

ನೀವೆಲ್ಲರೂ ದೇವರ ವಿವಿಧ ಕೃಪೆಯ ವಿಷಯದಲ್ಲಿಒಳ್ಳೇ ಮನೆವಾರ್ತೆಯವರಾಗಿದ್ದು ಪ್ರತಿಯೊಬ್ಬನು ತಾನು ಹೊಂದಿದ್ದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ. (1ಪೇತ್ರ 4:10).

ವಿಮೋಚನೆಯ ಯೋಜನೆ ಪ್ರಾರಂಭವಾಗುವ ಮತ್ತು ಬಹುಮಾನದೊಂದಿಗೆ ಮುಕ್ತಾಯವಾಗುತ್ತಿರುವ ಹಾಗೆ, ಅದನ್ನು ಮುಂದುವರೆಸಿಕೊಂಡು ಹೋಗಬೇಕು. ನಮಗಾಗಿ ರಕ್ಷಣೆಯನ್ನು ಕೊಂಡುಕೊಳ್ಳಲು ನೀಡಿದ ಬಲಿದಾನದ ಅದೇ ಉತ್ಸಾಹ ಯಾರು ಪರಲೋಕದ ಬಹುಮಾನದಲ್ಲಿ ಪಾಲುಗಾರ ರಾಗಿರುತ್ತಾರೋ ಅವರ ಹೃದಯದಲ್ಲಿ ನೆಲೆಯಾಗಿರುತ್ತದೆ. ಅಪೋಸ್ತಲನಾದ ಪೇತ್ರನು ಹೇಳುತ್ತಾನೆ: "ನೀವೆಲ್ಲರೂ ದೇವರ ವಿವಿಧ ಕೃಪೆಯ ವಿಷಯದಲ್ಲಿ ಒಳ್ಳೆ ಮನೆವಾರ್ತೆಯವರಾಗಿದ್ದು ಪ್ರತಿಯೊಬ್ಬನೂ ತಾನು ಹೊಂದಿದ ಕೃಪಾವರವನ್ನು ಎಲ್ಲರ ಸೇವೆಯಲ್ಲಿ ಉಪಯೋಗಿಸಲಿ." ಯೇಸು ತನ್ನ ಶಿಷ್ಯರನ್ನು ಕಳುಹಿಸುವಾಗ ಹೇಳುತ್ತಾನೆ, "ಉಚಿತವಾಗಿ ಹೊಂದಿದ್ದೀರಿ ಉಚಿತವಾಗಿ ಕೊಡಿರಿ."

ಕ್ರಿಸ್ತನೊಂದಿಗೆ ಯಾರು ಸಂಪೂರ್ಣವಾಗಿ ಸಹಾನುಭೂತಿಯಲ್ಲಿ ಇರುತ್ತಾರೋ ಅಲ್ಲಿ ಯಾವುದೇ ರೀತಿಯ ಸ್ವಾರ್ಥ ಅಥವಾ ತೆಗೆದುಹಾಕುವಂಥದ್ದು ಇರುವದಿಲ್ಲ. ಯಾರು ಜೀವ ಕೊಡುವ ನೀರನ್ನು ಕುಡಿಯುತ್ತಾರೋ ಅದು "ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯಜೀವವನ್ನು ಉಂಟು ಮಾಡುವದು." ಕ್ರಿಸ್ತನ ಆತ್ಮವು ಆತನೊಳಗೆ  ಮರಭೂಮಿಯಲ್ಲಿರುವ

ಒರತೆಯಂತೆ, ಎಲ್ಲವನ್ನೂ ಚೈತನ್ಯಗೊಳಿಸಲು  ಮತ್ತು ನಾಶನಕ್ಕೆ ಸಿದ್ಧರಾದವರು ಜೀವ ಕೊಡುವ ನೀರನ್ನು ಕುಡಿಯಲು ತವಕ ಪಡುತ್ತಾರೆ. ಇದು ಅದೇ ಪ್ರೀತಿಯ ಮತ್ತು ಕ್ರಿಸ್ತನಲ್ಲಿ ನೆಲೆಗೊಂಡ ಅಪೋಸ್ತಲನಾದ ಪೌಲನನ್ನು ನಾನಾ ವಿಧವಾದ ಕಠಿಣ ಕೆಲಸಕ್ಕೆ ನಡೆಸಿದ ಆತ್ಮ. “ನಾನು ಸಾಲಗಾರನಾಗಿದ್ದೇನೆ" ಆತನು ಹೇಳುತ್ತಾನೆ “ಗ್ರೀಕರಿಗೆ  ಮತ್ತು ಅನ್ಯರಿಗೆ; ಜ್ಞಾನಿಗಳಿಗೆ ಮತ್ತು ಅಜ್ಞಾನಿಗಳಿಗೆ.” “ನಾನು ಕ್ರಿಸ್ತನ ಅಪ್ರಮೇಯವಾದ ಐಶ್ವರ್ಯದ ವಿಷಯವಾದ ಶುಭಸಮಾಚಾರವನ್ನು ಅನ್ಯಜನರಿಗೆ ಪ್ರಸಿದ್ಧಿಪಡಿಸುವ ಹಾಗೆಯೂ ದೇವಜನರೊಳಗೆ ಅತ್ಯಲ್ಪನಾದ ನನಗೆ ಅನುಗ್ರಹಿಸೋಣವಾಯಿತು.”

ಆತನ ಸಭೆಯು ಲೋಕಕ್ಕೆ ಆತನಲ್ಲಿ ನಾವು ಕಂಡುಕೊಂಡ ಸಂಪೂರ್ಣ ಸಂತೃಪ್ತಿಯನ್ನು ಲೋಕದಲ್ಲಿ ಪ್ರತಿಬಿಂಬಿಸಬೇಕು. ನಾವು ನಿರಂತರವಾಗಿ ದೇವರಿಂದ ಧಾರಾಳವಾಗಿ ಹೊಂದಿಕೊಂಡಿದ್ದೇವೆ ಮತ್ತು ಅದನ್ನೇ ಲೋಕದಲ್ಲಿ ನೀಡುವದರ ಮೂಲಕ ಕ್ರಿಸ್ತನ ಪ್ರೀತಿಯನ್ನು ಮತ್ತು ದಯೆಯನ್ನು ಪ್ರತಿನಿಧಿಸುತ್ತೇವೆ. ಸಂಪೂರ್ಣ ಪರಲೋಕವು ಎಚ್ಚರವಾಗಿ, ಭೂಮಿಯ ಎಲ್ಲಾ ಭಾಗಗಳಿಗೆ

ವಿಮೋಚನೆಯ ಕಾರ್ಯವನ್ನು ಮುಂದಕ್ಕೆ ತೆಗೆದುಕೊಂಡು ಹೋಗಲು ಸಂದೇಶವಾಹಕರನ್ನು ರವಾನಿಸುತ್ತಿರುವಾಗ, ಜೀವಿಸುವ ದೇವರ ಸಭೆ ಸಹ ಕ್ರಿಸ್ತನಲ್ಲಿ ಸಹ-ಕೆಲಸಗಾರರಾಗಿದ್ದೇವೆ. ನಾವು ಆತನ ರಹಸ್ಯಾರ್ಥವುಳ್ಳ ದೇಹದ ಸದಸ್ಯರಾಗಿದ್ದೇವೆ . ಆತನು ತಲೆಯಾಗಿದ್ದಾನೆ ದೇಹದ ಎಲ್ಲಾ ಸದಸ್ಯರನ್ನು ನಿಯಂತ್ರಿಸುತ್ತಾನೆ. ಯೇಸು ತಾನೇ ತನ್ನ ಅಪರಿಮಿತವಾದ ಕರುಣೆಯಲ್ಲಿ, ಮನುಷ್ಯರ ಹೃದಯಗಳಲ್ಲಿ ಕಾರ್ಯಮಾಡುತ್ತಾನೆ ಅದ್ಭುತವಾದ ಆತ್ಮೀಕ ಪರಿವರ್ತನೆಯನ್ನು  ತರುತ್ತಿದ್ದಾನೆ ದೇವದೂತರು ಅದನ್ನು ಆಶ್ಚರ್ಯ ಮತ್ತು ಸಂತೋಷದಿಂದ ನೋಡುತ್ತಾರೆ. ಅದೇ ನಿಸ್ವಾರ್ಥವಾದ ಪ್ರೀತಿ ಆತನ ನಿಜವಾದ ಹಿಂಬಾಲಕರಲ್ಲಿ ಗುಣಲಕ್ಷಣಗಳಲ್ಲಿ ಮತ್ತು ಜೀವಿತದಲ್ಲಿ ಕಂಡು ಬರುವದರ ಮೂಲಕ ಒಡೆಯನ ಗುಣಲಕ್ಷಣಗಳನ್ನು ವಿವರಿಸುತ್ತವೆ.  ಕ್ರಿಸ್ತನು ಮನುಷ್ಯರು ತಾನು ಈ ಲೋಕದಲ್ಲಿದ್ದಾಗ ಹೊಂದಿದ ದೈವೀಕ ಸ್ವರೂಪದಲ್ಲಿ ಪಾಲುಗಾರರಾಗಬೇಕು ಎಂದು ಅಪೇಕ್ಷಿಸುತ್ತಾನೆ. ಈ ಮೂಲಕ ದೇವರ ಸ್ತುತಿಗಾಗಿ ಆತನ ಮಹಿಮೆಯನ್ನು ಪ್ರತಿಬಿಂಬಿಸುವದು ಮಾತ್ರವಲ್ಲ ಬದಲಾಗಿ ಲೋಕದ ಕತ್ತಲಿನಲ್ಲಿ

ಪರಲೋಕದ ಪ್ರಕಾಶವನ್ನು ಬೆಳಗಿಸುತ್ತದೆ. ಹೀಗೆ “ನೀವು ಲೋಕಕ್ಕೆ ಬೆಳಕಾಗಿದ್ದೀರಿ” ಎಂಬ ಕ್ರಿಸ್ತನ ವಾಕ್ಯ ನೆರವೇರುತ್ತದೆ.

(7) ನಾವು ಹೃದಯದಿಂದ  ಕನಿಷ್ಠರ ಅಗತ್ಯತೆಗಳಿಗೆ ಸೇವೆಯನ್ನು ಮಾಡುವದನ್ನು ಪ್ರೀತಿಯನ್ನು ಅಭ್ಯಾಸಿಸಿದಾಗ ಪರಲೋಕದ ದೃಷ್ಟಿಯಲ್ಲಿ ನಾವು ಯಾರ ಸೇವೆಯನ್ನು ಮಾಡಿದ ಹಾಗೆ?

ಅದಕ್ಕೆ ಅರಸನು -ಈ ನನ್ನ ಸಹೋದರರಲ್ಲಿ ಅಲ್ಪನಾದವ ನೊಬ್ಬನಿಗೆ  ಏನೇನು ಮಾಡಿದೆರೋ ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೇನೆ ಅನ್ನುವನು. (ಮತ್ತಾಯ 25:40).

ಪ್ರತಿಯೊಂದು ಕ್ರಿಯೆ, ನ್ಯಾಯದ ಮತ್ತು ಕರುಣೆಯ ಮತ್ತು ಪರೋಪಕಾರದ ಪ್ರತಿಯೊಂದು ಕೆಲಸ, ಪರಲೋಕದಲ್ಲಿ ಸಂತೋಷವನ್ನು ಉಂಟುಮಾಡುತ್ತದೆ. ತಂದೆಯು ತನ್ನ ಸಿಂಹಾಸನದಿಂದ ದೃಷ್ಟಿಸುತ್ತಾನೆ ಮತ್ತು ತನ್ನ ಅಮೂಲ್ಯವಾದ ಖಜಾನೆಯಿಂದ ಅವುಗಳನ್ನು ನಡೆಸುವವನನ್ನು ಎಣಿಸುತ್ತಾನೆ. “ನಾನು ಅವರನ್ನು ನನ್ನ ಆಭರಣವನ್ನಾಗಿ ಮಾಡಿಕೊಳ್ಳುವಾಗ

ಅವರು ನನ್ನವರು, ಎಂದು ದೂತಗಣಗಳ ಕರ್ತನು ಹೇಳುತ್ತಾನೆ.”

ಅಗತ್ಯತೆಯಲ್ಲಿರುವವರಿಗೆ ಮತ್ತು ಕಷ್ಟದಲ್ಲಿರುವವರಿಗೆ ಮಾಡುವ ಪ್ರತಿಯೊಂದು ಕರುಣೆಯ ಕಾರ್ಯ ಅದು ಯೇಸುವಿಗೆ ಮಾಡಿದಂತೆ. ಯಾರು ಬಡವರಿಗೆ ಸಹಾಯಮಾಡುತ್ತಾರೋ ಅಥವಾ ವೇದನೆಯಲ್ಲಿ ಮತ್ತು ಹಿಂಸೆಯಲ್ಲಿ ಇರುವವರಿಗೆ ಸಹಾನುಭೂತಿಯನ್ನು ತೋರಿಸುತ್ತಾರೋ, ಯಾರು ಅನಾಥರಿಗೆ ಸ್ನೇಹಿತರಾಗಿರುತ್ತಾರೋ ಅವರು ತಮ್ಮನ್ನು ತಾವು ಯೇಸುವಿನ ನಿಕಟ ಸಂಬಂಧದಲ್ಲಿ ತರುತ್ತಾರೆ.

(8) ಇತರರಿಗೆ ನಮ್ಮ ಅನ್ಯಾಯದ ಕ್ರಿಯೆಗಳಿಗೆ ಬದಲಾಗಿ, ಅಂತಿಮ ನ್ಯಾಯತೀರ್ಪಿನಲ್ಲಿ ನಾವು ನಮ್ಮ ಹೃದಯದಂತಾರಾಳದ ಪ್ರೀತಿಯ ಯಾವ ಕೆಲವು ಕಾರ್ಯಗಳಿಂದ ತೀರ್ಪನ್ನು ಹೊಂದುತ್ತೇವೆ?

ನಾನು ಹಸಿದಿದ್ದೆನು ನನಗೆ ಊಟಕ್ಕೆ ಕೊಟ್ಟಿರಿ; ನಾನು ಬಾಯಾರಿದ್ದೆನು ನನಗೆ ಕುಡಿಯುವದಕ್ಕೆ ಕೊಟ್ಟಿರಿ; ಪರದೇಶಿಯಾಗಿದ್ದೆನು ನನ್ನನ್ನು ಸೇರಿಸಿಕೊಂಡಿರಿ; ಬಟ್ಟೆಯಿಲ್ಲದವನಾಗಿದ್ದೆನು ನನಗೆ ಉಡುವದಕ್ಕೆ ಕೊಟ್ಟಿರಿ; ರೋಗದಲ್ಲಿ ಬಿದ್ದಿದ್ದೆನು ನನ್ನನ್ನು ಆರೈಕೆ

ಮಾಡುವದಕ್ಕೆ ಬಂದಿರಿ; ಸೆರೆಮನೆಯಲ್ಲಿದ್ದೆನು ನನ್ನನ್ನು ನೋಡುವದಕ್ಕೆ ಬಂದಿರಿ ಎಂದು ಹೇಳುವನು. (ಮತ್ತಾಯ 25:35-36).

ಪ್ರಾರ್ಥನೆ, ಎಚ್ಚರಿಸುವದು ಮತ್ತು ಮಾತಾಡುವದು ಕಳಪೆ ಫಲಗಳಾಗಿವೆ ಅನೇಕಾವರ್ತಿ ಅವುಗಳನ್ನು ಕಟ್ಟಿಕೊಳ್ಳಲಾಗುತ್ತದೆ ಆದರೆ ಉತ್ತಮವಾದ ಕಾರ್ಯಗಳಲ್ಲಿ ಪ್ರಕಟವಾಗಿರುವ ಫಲಗಳು ಅಗತ್ಯತೆಯಲ್ಲಿರುವವರ, ತಂದೆಯಿಲ್ಲದವರ ಮತ್ತು ವಿಧವೆಗಳ ಕಾಳಜಿವಹಿಸುವದು ಇವು ಯಥಾರ್ಥವಾದ ಫಲಗಳಾಗಿವೆ, ಮತ್ತು ಸ್ವಾಭಾವಿಕವಾಗಿ ಉತ್ತಮವಾದ ಮರಗಳಲ್ಲಿ ಬೆಳೆಯುತ್ತವೆ. ಹೃದಯವು ಅಧೈರ್ಯದ ಭಾರ ಮತ್ತು ವೇದನೆಯಿಂದ ಹೃದಯದೊಂದಿಗೆ ಸಹಾನುಭೂತಿಯನ್ನು ತೋರಿಸುವಾಗ, ಅಗತ್ಯತೆಗಳಲ್ಲಿರುವವರಿಗೆ ಸಹಾಯಮಾಡಲು ಕೈಗಳು ಮುಂದೆ ಬರುವಾಗ, ಬೆತ್ತಲೆಯಿರುವವರಿಗೆ ಬಟ್ಟೆಗಳನ್ನು ನೀಡುವಾಗ, ಒಬ್ಬ ಅಪರಿಚಿತನಿಗೆ ನಿಮ್ಮ ಒಲೆಯ ಬಳಿ ಸ್ವಾಗತಿಸುವಾಗ ಮತ್ತು ನಿಮ್ಮ ಹೃದಯದಲ್ಲಿ ಸ್ಥಳವನ್ನು ನೀಡುವಾಗ ದೇವದೂತರು ನಿಮ್ಮ ಸಮೀಪಕ್ಕೆ ಬರುತ್ತಾರೆ, ಮತ್ತು ಉತ್ತರಿಸುವ ಧ್ವನಿ ಪರಲೋಕದಲ್ಲಿ ಕೇಳಿಬರುತ್ತದೆ. ಪ್ರತಿಯೊಂದು ಕ್ರಿಯೆ, ನ್ಯಾಯ ಮತ್ತು

ಕರುಣೆಯ ಮತ್ತು ಪರೋಪಕಾರದ ಪ್ರತಿಯೊಂದು ಕೆಲಸ ಪರಲೋಕದಲ್ಲಿ ಮಧುರವಾದ ಸಂಗೀತ ಕೇಳಿ ಬರುವಂತೆ ಮಾಡುತ್ತದೆ.

ನಮ್ಮ ಪರಲೋಕದ ತಂದೆಯು ನಮ್ಮ ಮಾರ್ಗದಲ್ಲಿ ಮರೆಮಾಡಿಟ್ಟ ಆಶೀರ್ವಾದಗಳನ್ನು, ಕೆಲವರು ಭಯದಿಂದಾಗಿ ಸ್ಪರ್ಶಿಸುವದಿಲ್ಲ ಅವರು ತಮ್ಮ ಸಂತೋಷದಿಂದ ವಂಚಿತರಾಗುತ್ತಾರೆ. ದೇವದೂತರು ನಾವು ಒಳ್ಳೇಯದನ್ನು ಮಾಡಲು ನಮ್ಮ ವ್ಯಾಪ್ತಿಯಲ್ಲಿ ಬರುವ ಅವಕಾಶಗಳನ್ನು ನಾವು ಅಪ್ಪಿಕೊಳ್ಳುತ್ತೇವೋ ಏನೋ ನೋಡುತ್ತಾರೆ – ನಾವು ಇತರರನ್ನು ಆಶೀರ್ವದಿಸುತ್ತೇವೋ ಏನೋ ನೋಡಲು ಮತ್ತು ತಾವು ಅದಕ್ಕೆ ಬದಲಾಗಿ ನಮ್ಮನ್ನು ಆಶೀರ್ವದಿಸಲು ಕಾದಿರುತ್ತಾರೆ. ಕರ್ತನು ತಾನೆ ನಮ್ಮನ್ನು ವ್ಯತ್ಯಾಸವುಳ್ಳವರನ್ನಾಗಿ ಮಾಡಿದ್ದಾನೆ – ಕೆಲವರು ಬಡವರು, ಕೆಲವರು ಶ್ರೀಮಂತರು, ಕೆಲವರು ವೇದನೆಯಲ್ಲಿರುವವರು- ಎಲ್ಲರಿಗೂ ತಮ್ಮ ಗುಣಲಕ್ಷಣಗಳನ್ನು ಬೆಳೆಸಿಕೊಳ್ಳಲು ಅವಕಾಶ ಇರಬೇಕು. ಬಡವರನ್ನು ಉದ್ದೇಶಪೂರ್ವಕವಾಗಿ ಹೀಗೆ ನಾವು ಪರೀಕ್ಷೆಗೆ ಒಳಪಟ್ಟು ಧೃಢಪಡಿಸುವದಕ್ಕಾಗಿ ಮತ್ತು ನಮ್ಮ ಹೃದಯಗಳಲ್ಲಿ ಏನಿದೆಯೋ ಅದನ್ನು ಬೆಳೆಸಿಕೊಳ್ಳಲು ದೇವರು ಅನುಮತಿಸುತ್ತಾನೆ.

(9) ದೊಡ್ಡ ನ್ಯಾಯತೀರ್ಪಿನಲ್ಲಿ ನಾವು ನಿಜವಾಗಿಯೂ ದೇವರನ್ನು ಪ್ರೀತಿಸಿದ್ದರೆ ಮತ್ತು ಪರಲೋಕಕ್ಕೆ ಯೋಗ್ಯರಾಗಿದ್ದರೆ ನಮ್ಮ ಅಳತೆಗೋಲು ಯಾವುದು?

ನಾನು ನಿಮ್ಮನ್ನು ಪ್ರೀತಿಸಿದ ಮೇರೆಗೆ ನೀವು ಒಬ್ಬರನ್ನೊಬ್ಬರು ಪ್ರೀತಿಸಬೇಕೆಂಬದೇ ನಾನು ಕೊಡುವ ಆಜ್ಞೆಯಾಗಿದೆ, (ಯೋಹಾನ 15: 12)

ಮನುಷ್ಯನ ಪ್ರೀತಿ ಲೋಕದೆಡೆಗೆ ಪ್ರಕಟಗೊಂಡ ದೇವರ ಪ್ರೀತಿ, ಈ ಪ್ರೀತಿ ನಮ್ಮನ್ನು ಒಂದು ಕುಟುಂಬದ ಮಕ್ಕಳನ್ನಾಗಿ ಮಾಡುತ್ತದೆ, ಮಹಿಮೆಯ ರಾಜನು ನಮ್ಮೊಂದಿಗೆ ಒಂದಾದ್ದು. ಆತನು ಬಿಳ್ಕೊಡುವಾಗ ಹೇಳಿದ ಮಾತುಗಳು ನೆರವೇರಿದವು, “ನಾನು ನಿಮ್ಮನ್ನು ಪ್ರೀತಿಸಿದ ಹಾಗೆ ನೀವೂ ಸಹ ಒಬ್ಬರನ್ನೊಬ್ಬರು ಪ್ರೀತಿಸಿರಿ” (ಯೋಹಾನ 15:12); ನೀವು ಲೋಕವನ್ನು ಆತನು ಪ್ರೀತಿಸಿದ ಹಾಗೆ ಪ್ರೀತಿಸಿದ್ದಲ್ಲಿ, ಆತನ ನಿಯೋಗವು ನೆರವೇರುತ್ತದೆ. ನಾವು ಪರಲೋಕಕ್ಕೆ ಅರ್ಹರಾಗುತ್ತೇವೆ; ಮತ್ತು ನಮ್ಮ ಹೃದಯದಲ್ಲಿ ಪರಲೋಕವಿರುತ್ತದೆ.

ಕರ್ತನು ಒಳ್ಳೆಯವನು, ಆತನು ಕರುಣೆಯುಳ್ಳವನು ಮತ್ತು ಕೋಮಲ ಹೃದಯವುಳ್ಳವನು. ಆತನಿಗೆ ತನ್ನ ಪ್ರತಿಯೊಬ್ಬ ಮಗುವಿನ  ಪರಿಚಯವಿದೆ. ಆತನು ನಮ್ಮಲ್ಲಿ ಪ್ರತಿಯೊಬ್ಬರೂ ಏನು

ಮಾಡುತ್ತಿದ್ದೇವೆ ಎಂಬುದನ್ನು ಬಲ್ಲವನಾಗಿದ್ದಾನೆ. ಪ್ರತಿಯೊಬ್ಬರಿಗೆ ಎಷ್ಟು ಖ್ಯಾತಿಯನ್ನು ಕೊಡಬೇಕು ಎಂದು ತಿಳಿದವನಾಗಿದ್ದಾನೆ, ನೀವು ನಿಮ್ಮ ಖ್ಯಾತಿಯ ಮತ್ತು ದಂಡನೆಯ ಪಟ್ಟಿಯನ್ನು ಆತನ ಮುಂದೆ ಇಟ್ಟು ದೇವರಿಗೆ ತನ್ನ ಕಾರ್ಯವನ್ನು ಮಾಡಲು ಬಿಡುವದಿಲ್ಲವೋ? ನೀವು ದೇವರು ನಿಮಗೆ ವಹಿಸಿಕೊಟ್ಟ ಕಾರ್ಯವನ್ನು ಮಾಡುವುದಾದರೆ ನಿಮಗೆ ಮಹಿಮೆಯ ಕೀರಿಟವು ಕೊಡಲ್ಪಡುತ್ತದೆ.

(10) ನ್ಯಾಯ ತೀರ್ಪಿನ ಆ ಮಹಾ ದಿನದಲ್ಲಿ, ಲೋಕದಲ್ಲಿರುವವರನ್ನು ಕ್ರಿಸ್ತನು ಪ್ರೀತಿಸಿದ ಹಾಗೆ ಪ್ರೀತಿಸಿವವರು ಯಾವ ಆಶೀರ್ವಾದದಾಯಕವಾದ ಮಾತನ್ನು ಆಲಿಸುತ್ತಾರೆ?
ನನ್ನ ತಂದೆಯ ಆಶೀರ್ವಾದವನ್ನು ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ. (ಮತ್ತಾಯ 25:34)

ನ್ಯಾಯತೀರ್ಪಿನ  ದಿನದಲ್ಲಿ, ತಮ್ಮ ಪ್ರತಿನಿತ್ಯದ ಜೀವಿತದಲ್ಲಿ ಯಾರು ನಂಬಿಗಸ್ತರಾಗಿರುತ್ತಾರೋ, ಯಾರು ಯಾವುದೇ ಸ್ತುತಿ ಅಥವಾ ಲಾಭದ ಅಪೇಕ್ಷೆಯಿಲ್ಲದೆ ತಮ್ಮ ಕೆಲಸವನ್ನು ಬೇಗನೇ ನೋಡಿ ಮಾಡಿ ಮುಗಿಸುತ್ತಾರೋ  ಅವರು "ನನ್ನ

ತಂದೆಯ ಆಶೀರ್ವಾದವನ್ನು ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ." ಕ್ರಿಸ್ತನು ಅವರನ್ನು ಅವರು ಮಾಡಿದ ವಾಕ್ಚಾತುರ್ಯದ ಸಂದೇಶವನ್ನು, ಅವರು ಪ್ರದರ್ಶಿಸಿದ ಭೌದಿಕ ಬಲವನ್ನು ಅಥವಾ ಅವರು ನೀಡಿದ ಉದಾರವಾದ ದೇಣಿಗೆಯನ್ನು ಹೊಗಳಲಿಲ್ಲ. ಸಾಮಾನ್ಯವಾಗಿ ನಿರ್ಲಕ್ಷಿಸುವ ಸಣ್ಣ ಕಾರ್ಯಗಳನ್ನು ಮಾಡಿದ್ದಕ್ಕಾಗಿ ಅವರಿಗೆ ಬಹುಮಾನ ಕೊಡಲ್ಪಟ್ಟಿತು, "ನಾನು ಹಸಿದಿದ್ದೆನು, ನನಗೆ ನೀವು ನನಗೆ ಮಾಂಸವನ್ನು ಕೊಟ್ಟಿರಿ," ಅವನು ಹೇಳುತ್ತಾನೆ "ಈ ನನ್ನ ಸಹೋದರರಲ್ಲಿ ಕೇವಲ ಅಲ್ಪನಾದವನೊಬ್ಬನಿಗೆ ಏನೇನು ಮಾಡಿದಿರೋ  ಅದನ್ನು ನನಗೂ ಮಾಡಿದ ಹಾಗಾಯಿತು ಎಂದು ನಿಮಗೆ ಸತ್ಯವಾಗಿ ಹೇಳುತ್ತೆನೆ ಅಂದನು."

ದೇವರ ಮುಂದೆ ಎಲ್ಲಾ ಸಂಗತಿಗಳು ಪುನರ್ ಪರಿಶೀಲನೆಗೆ ಬರುವಾಗ, ಪ್ರಶ್ನೆ, ಅವರು ಏನನ್ನು ಪ್ರವಾದಿಸಿದರು? ಅದನ್ನು ಎಂದಿಗೂ ಕೇಳುವದಿಲ್ಲ ಆದರೆ, ಅವರು ಏನು ಮಾಡಿದರು? ಅವರು ತಮಗಾಗಿ ಜೀವಿಸಿದರೋ? ಅಥವಾ ಅವರು ಪರೋಪಕಾರದ ಕಾರ್ಯಗಳಲ್ಲಿ, ಕರುಣೆಯ ಕೆಲಸಗಳಲ್ಲಿ ಪ್ರೀತಿಯಿಂದ ಇತರರಿಗೆ ಪ್ರಾಮುಖ್ಯತೆಯನ್ನು ನೀಡಿ ಮತ್ತು

ತಾವು ಇತರರನ್ನು ಆಶೀರ್ವದಿಸಲಿಕ್ಕಾಗುವಂತೆ ತಮ್ಮನ್ನು ತಾವು ನಿರಾಕರಿಸಿಕೊಂಡರೋ? ಒಂದುವೇಳೆ ದಾಖಲೆಗಳು ಇದು ಅವರ ಜೀವಿತವಾಗಿದೆ ಎಂದು ತೋರಿಸಿದ್ದಲ್ಲಿ , ಇದು ಅವರ ಗುಣಲಕ್ಷಣಗಳು ಕೋಮಲತೆ, ಸ್ವ-ನಿರಾಕರಣೆ ಮತ್ತು ಪರೋಪಕಾರದ ಕಾರ್ಯಗಳಿಂದ ಗುರುತಿಸಿದ್ದಲ್ಲಿ ಅವರು ಕ್ರಿಸ್ತನಿಂದ ಆಶೀರ್ವಾದದಾಯಕವಾದ ಭರವಸೆ ಮತ್ತು ಅವರು "ನನ್ನ ತಂದೆಯ ಆಶೀರ್ವಾದವನ್ನು ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ." ಎಂಬ ಆಶೀರ್ವಾದವನ್ನು ಹೊಂದುವರು.

ಪ್ರಯಾಣಿಕನು ಕತ್ತಲೆಯಿಂದ ಕೂಡಿದ ಮತ್ತು ಅಪರಿಚಿತ ದಾರಿಯಲ್ಲಿ ಮಾರ್ಗದರ್ಶಕನ ಸಹಾಯದಿಂದ ನಡೆಯುವಂತೆ ದೇವರಿಂದ ಉದ್ಭವಿಸುವ ಬೆಳಕಿನ ಕಿರಣಗಳಲ್ಲಿ ನಡೆಯುವದು ನನ್ನ ಹೃದಯದ ಬಯಕೆಯಾಗಿದೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ

ಈ ಬೆಳಕು ಪ್ರೀತಿಯಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ ಮತ್ತು ನನ್ನ ಮೂಲಕ ದೇವರ ಪ್ರೀತಿ ಬೆಳಕಿನ

ಸಾಧನವಾಗಿ ಇತರರೆಡೆಗೆ ಹರಿಯಬೇಕೆಂದು ನಾನು ಬಯಸುತ್ತೇನೆ ಇದರಿಂದಾಗಿ ನಾನು ಪರಲೋಕ ರಾಜ್ಯದ ಕ್ರಿಸ್ತನ ಸಹಕೆಲಸಗಾರನಾಗಲು ಬಯಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಪ್ರೀತಿ ಕೇವಲ ಒಂದು ಭಾವನೆಯಲ್ಲ ಎಂದು ನಾನು ಅರಿತುಕೊಂಡಿದ್ದೇನೆ. ನನ್ನ ಬಯಕೆ ಆತ್ಮೀಕ ಬಲವಾದ ಪ್ರೀತಿಯು ನನ್ನ ಜೀವಿತದಲ್ಲಿ ದೊಡ್ಡ ಬಲವಾಗಿರಬೇಕು ಅದು ಇತರರೆಡೆಗೆ ದೊಡ್ಡ ಒರತೆಯಾಗಿ ಹರಿಯಬೇಕು ಎಂದು ನಾನು ಬಯಸುತ್ತೇನೆ. .

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ಇತರರೆಡೆಗೆ ಪ್ರೀತಿಯನ್ನು ಅಭ್ಯಾಸಿಸುವದು ಅವರಿಗೆ ಮರಭೂಮಿಯಲ್ಲಿರುವ ಉಕ್ಕುವ ಒರತೆ ಮಾತ್ರವಲ್ಲ ಬದಲಾಗಿ ಅದು ಕೊಡುವವನೆಡೆಗೆ ತಿರುಗಿ ಹರಿದು ಆತ್ಮೀಕ ಅಭಿವೃದ್ಧಿಯನ್ನು ತರುತ್ತದೆ. ಇದನ್ನು ನಾನು ನನ್ನ ಜೀವಿತದಲ್ಲಿ ಬಯಸುತ್ತೇನೆ.

ದುಂಡು ಸುತ್ತಿರಿ: ಹೌದು ನಿರ್ಧರಿಸಿಲ್ಲ

ತಂದೆಯಿಂದ “ಭಲಾ ನಂಬಿಗಸ್ತನಾದ ಒಳ್ಳೇ ಆಳು ನಿನ್ನ ಧಣಿಯ

ಸೌಭಾಗ್ಯದಲ್ಲಿ ಸೇರು" ಎಂಬ ಆಶೀರ್ವಾದಕರವಾದ ಮಾತುಗಳನ್ನು ಆಲಿಸುವದು ನನ್ನ ಬಯಕೆಯಾಗಿದೆ.

ದುಂಡು ಸುತ್ತಿರಿ: ಹೌದು     ನಿರ್ಧರಿಸಿಲ್ಲ